"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

(156ನೇ ಅಧಿವೇಶನ)

ಮಂಗಳವಾರ, 12ನೇ ಆಗಸ್ಟ್ 2025

ವಿಷಯಾನುಕ್ರಮಣಿಕೆ (INDEX)

01. ಮಾನ್ಯ ಸಹಕಾರ ಸಚಿವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿರುವ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೋರಿ ಚರ್ಚೆ

- ಶ್ರೀ ಸಿ.ಟಿ.ರವಿ
- ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಐವನ್ ಡಿ'ಸೋಜಾ

02. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

367 – ಬಳ್ಳಾರಿ ಬುಡಾದಿಂದ ಸೈಟ್ ಖರೀದಿಸಿದವರಿಗೆ ಮೂಲಸೌಲಭ್ಯ ನೀಡದಿರುವ ಬಗ್ಗೆ.

- ಶ್ರೀ ವೈ.ಎಂ.ಸತೀಶ್
- ಶ್ರೀ ಬಿ.ಎಸ್.ಸುರೇಶ್. (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

282 – ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಕುರಿತು

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

239 – ಸಿಂದನೂರು ನಗರಕ್ಕೆ ಕುಡಿಯುವ ನೀರು ಒದಗಿಸುವ ಬಗ್ಗೆ

- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಬಿ.ಎಸ್.ಸುರೇಶ್. (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

255 – ಬಾಗಲಕೋಟೆ ಜಿಲ್ಲೆಯ ರೈತರಿಗೆ ವಿಶೇಷ ಪ್ಯಾಕೇಜ್ ಮತ್ತು ಬೆಳೆಗಳ ಶೇಖರಣೆಗೆ ಶೈತ್ಯಾಗಾರ ನಿರ್ಮಿಸುವ ಬಗ್ಗೆ

- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ ಹಾಗೂ
- ತೋಟಗಾರಿಕೆ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

261 – ಮೆ: ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯು ರೈತರಿಂದ ಕೃಷಿ ಜಮೀನು ಖರೀದಿಸಿ ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವ ಕುರಿತು

– ಡಾ: ತಳವಾರ್ ಸಾಬಣ್ಣ
– ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

253 – ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರುಗಳ ಗೌರವಧನ ಹೆಚ್ಚಳ ಕುರಿತು

– ಶ್ರೀ ಸುನೀಲ್‌ಗೌಡ ಪಾಟೀಲ್
– ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು)

297 – ಭೂ-ಸ್ವಾಧೀನ ಪ್ರಮಾಣ ಪತ್ರ ನೀಡುವ ಬಗ್ಗೆ

– ಡಾ: ಉಮಾಶ್ರೀ
– ಶ್ರೀ ರಹೀಂ ಖಾನ್ (ಪೌರಾಡಳಿತ, ಹಾಗೂ ಹಜ್ ಸಚಿವರು)

267 – ಹಾಪ್‌ಕಾಮ್ಸ್ ಮಳಿಗೆಗಳು ಮುಚ್ಚಿರುವ ಬಗ್ಗೆ

– ಶ್ರೀ ಗೋವಿಂದ ರಾಜು
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

272 – ರಾಜ್ಯದ ನೇಕಾರರಿಗೆ ರೂಪಿಸಿರುವ ಯೋಜನೆಗಳ ಕುರಿತು

– ಶ್ರೀ ಕೇಶವ ಪ್ರಸಾದ್ ಎಸ್.
– ಶ್ರೀ ಶಿವಾನಂದ ಎಸ್. ಪಾಟೀಲ್(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

217 – ಚಿಕ್ಕಮಗಳೂರು ನಗರಸಭೆಗೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು)

284 – ರಾಜ್ಯದಲ್ಲಿರುವ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಬದಲಾವಣೆ ಮಾಡುವ ಬಗ್ಗೆ

– ಶ್ರೀ ಕೆ.ಎಸ್.ನವೀನ್
– ಶ್ರೀ ಬಿ.ಎಸ್. ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

169 – ರಾಜ್ಯದಲ್ಲಿ ಟ್ರೇಡ್ ಲೈಸೆನ್ಸ್ ನೀತಿಯ ಬಗ್ಗೆ

– ಶ್ರೀ ಡಿ.ಎಸ್.ಅರುಣ್
– ಶ್ರೀ ಸುರೇಶ್ ಬಿ.ಎಸ್. (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

172 – ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನಗಳ ವಿವರಗಳ ಬಗ್ಗೆ

– ಶ್ರೀ ಹೆಚ್.ಪಿ.ಸುಧಾಮ್‌ದಾಸ್
– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

252 – ಸಹಕಾರ ಸಂಘಗಳು ಉತ್ಪಾದಿಸುವ ವಸ್ತುಗಳ ಮಾರಾಟ ಮತ್ತು ಸರಬರಾಜು ಕುರಿತು

– ಶ್ರೀಮತಿ ಬಲ್ಕೀಸ್ ಬಾನು
– ಶ್ರೀ ಶರಣ ಬಸಪ್ಪ ದರ್ಶನಾಪೂರ (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು)(ಸಹಕಾರ ಸಚಿವರ ಪರವಾಗಿ)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

03, ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

ಅ) ರಾಜ್ಯದಲ್ಲಿ ಕಳೆದ 30 ವರ್ಷಗಳಲ್ಲಿ 98 ಕಾರ್ಮಿಕರು ಶೌಚ ಗುಂಡಿಗೆ ಬಿದ್ದು ಸಾವನ್ನಪ್ಪಿರುವ ಬಗ್ಗೆ

– ಶ್ರೀ ತಿಪ್ಪಣ್ಣಪ್ಪ ಕಮಕನೂರು
– ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು)

ಆ) ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಪ್ರವೇಶ ದರ. ವಿಶ್ವವಿಖ್ಯಾತ ಕೃಷ್ಣರಾಜ ಸಾಗರ (ಕೆ.ಆರ್.ಎಸ್) ಬೃಂದಾವನ ಪ್ರವೇಶ ದರ, ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದ ಪ್ರವೇಶ ದರ ಹಾಗೂ ಬೋಟಿಂಗ್ ದರಗಳನ್ನು ಹೆಚ್ಚು ಮಾಡಿರುವ ಕುರಿತು

– ಶ್ರೀ ಸಿ.ಎನ್.ಮಂಜೇಗೌಡ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಇ) "ಕಳೆಗುಂದಿದ ಸಂಸ್ಕೃತ ವಿ.ವಿ. ಹೊಸ ಕ್ಯಾಂಪಸ್", ಮರಡಿಗುಡ್ಡೆಯ 100 ಎಕರೆಯಲ್ಲಿ ಕಟ್ಟಡ ನಿರ್ಮಾಣಗೊಂಡರೂ ಉದ್ಘಾಟನೆಯ ಭಾಗ್ಯವಿಲ್ಲದೇ ವಿದ್ಯಾರ್ಥಿಗಳು ಅತಂತ್ರಗೊಂಡಿರುವ ಬಗ್ಗೆ.

– ಶ್ರೀ ಪಿ.ಹೆಚ್.ಪೂಜಾರ್
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಈ) "ಹೊಸ ವಿದ್ಯುತ್ ಸಂಪರ್ಕಕ್ಕೆ ಒಸಿ ಬಿಸಿ" ಕುರಿತು

– ಡಾ: ಧನಂಜಯ ಸರ್ಜಿ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಉ) ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ (ಸಿ.ಎಸ್.ಆರ್.ಅನುದಾನದಡಿ) ಬೆಂಗಳೂರು ನಗರ ಜಿಲ್ಲೆ, ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಸರ್ಕಾರಿ ಶಾಲೆಗಳನ್ನು ತುರ್ತಾಗಿ ದುರಸ್ಥಿ ಪಡಿಸುವ ಬಗ್ಗೆ.

– ಶ್ರೀ ಟಿ.ಎನ್.ಜವರಾಯಿಗೌಡ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಊ) ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕೊಂಕನಹಳ್ಳಿ ಅಂಬಿಗರ ಚೌಡಯ್ಯರವರ ಧ್ವಜದ ಕಟ್ಟೆ ಕುರಿತು.

– ಡಾ: ತಳವಾರ ಸಾಬಣ್ಣಾ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಋ) ರಾಜ್ಯದ ಎಲ್ಲಾ ಮಲ್ಟಿಪ್ಲೆಕ್ಸ್ ಮತ್ತು ಚಿತ್ರ ಮಂದಿರಗಳಲ್ಲಿ ಏಕರೂಪದ ದರ ಜಾರಿಗೊಳಿಸಿ ಸರ್ಕಾರ ಆದೇಶಿಸಿದ್ದರೂ, ಕೆಲವು ಮಲ್ಟಿಪ್ಲೆಕ್ಸ್‌ಗಳಲ್ಲಿ ಸರ್ಕಾರ ಆದೇಶಕ್ಕೆ ಕಿಮ್ಮತ್ತು ನೀಡದೇ ತಮಗೆ ಇಷ್ಟ ಬಂದಂತೆ ಹಾಗೆ ದರ ನಿಗಧಿಪಡಿಸಿರುವ ಕುರಿತು

- ಶ್ರೀ ರಾಮೋಜಿಗೌಡ
- ಶ್ರೀ ಶಿವರಾಜ್ ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಎ) ಭೂ ಪರಿವರ್ತಿತ ಜಮೀನಿನ ಏಕವಿನ್ಯಾಸ ನಕ್ಷೆಗಾಗಿ ಜಿಲ್ಲಾ ಕೇಂದ್ರಕ್ಕೆ ಪ್ರಯಾಣ ಬೆಳೆಸುವ ಸರ್ಕಾರಿ ಆದೇಶವು ಗ್ರಾಮೀಣ ಜನರನ್ನು ಹೈರಾಣುಗೊಳಿಸಿರುವ ಬಗ್ಗೆ.

- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಏ) ಕೇಂದ್ರ ಸರ್ಕಾರವು ಸಾಕಷ್ಟು ಯೂರಿಯಾ ಮತ್ತು ಡಿ.ಎ.ಪಿ. ರಸಗೊಬ್ಬರವನ್ನು ಪೂರೈಸಿದ್ದು, ರಾಜ್ಯ ಸರ್ಕಾರವು ರೈತರಿಗೆ ಸಮರ್ಪಕವಾಗಿ ಪೂರೈಸುವ ಬಗ್ಗೆ.

- ಶ್ರೀ ಹನುಮಂತ ರುದ್ರಪ್ಪ ನಿರಾಣಿ
- ಶ್ರೀ ಎನ್. ಚೆಲುವರಾಯಸ್ವಾಮಿ (ಕೃಷಿ ಸಚಿವರು)

ಐ) ಕೋಲಾರ ಜಿಲ್ಲೆ, ಕೆ.ಜಿ.ಎಫ್ ನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ವಿತರಿಸಲು ತಂದಿದ್ದ ಪರಿಕರಗಳು ಕಳಪೆ ಗುಣಮಟ್ಟದಿಂದ ಕೂಡಿದೆಯೆಂದು ರೈತರು ಸ್ವೀಕರಿಸಲು ನಿರಾಕರಿಸಿರುವ ಬಗ್ಗೆ.

- ಶ್ರೀ ಗೋವಿಂದರಾಜು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಒ) ನೆಲಮಂಗಲದ "ಅರಶಿನಕುಂಟೆ ಮತ್ತು ಬಿನ್ನಮಂಗಲದ ಕೆರೆಗಳ"ಕಾಯಕಲ್ಪ ಕುರಿತು

- ಶ್ರೀ ಎಂ.ನಾಗರಾಜು
- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಓ) ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಅಪೂರ್ಣಗೊಂಡಿರುವ ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಕುರಿತು.

- ಶ್ರೀ ಟಿ.ಎ.ಶರವಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಔ) ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವ ಕುರಿತು

- ಶ್ರೀ ಕಿಶೋರ್ ಕುಮಾರ್ ಪುತ್ತೂರು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

ಅಂ) ರಾಜ್ಯದ ವಿವಿಧ ಭಾಗಗಳಲ್ಲಿ ಹಸುಗಳ ಹತ್ಯೆ, ಕತ್ತು ಕೊಯ್ಯುವುದು, ಕೆಚ್ಚಲು ಕತ್ತರಿಸುವಂತಹ ಅಮಾನುಷ ಕೃತ್ಯಗಳು ನಡೆದಿರುವ ಕುರಿತು

- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

04. ಮಾನ್ಯ ಸಹಕಾರ ಸಚಿವರನ್ನು ಸಚಿವ ಸಂಪುಟ ಸ್ಥಾನದಿಂದ ವಜಾಗೊಳಿಸಿರುವ ಬಗ್ಗೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

- ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)
- ಶ್ರೀ ಎಂ.ಬಿ.ಪಾಟೀಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರು)
- ಶ್ರೀ ಅಡಗೂರ್ ಹೆಚ್.ವಿಶ್ವನಾಥ್
- ಶ್ರೀ ಕೆ.ಎಸ್.ನವೀನ್
- ಶ್ರೀ ಪುಟ್ಟಣ್ಣ

05. ನಿಯಮ 330ರ ಮೇರೆ ಸಾರ್ವಜನಿಕ ಮಹತ್ವ ಜರೂರು ವಿಷಯದ ಮೇರೆಗೆ ಚರ್ಚೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ವಶಪಡಿಸಿಕೊಳ್ಳಲಾದ ಜಮೀನುಗಳಿಗೆ ಭೂ ಪರಿಹಾರ ವಾವತಿಯನ್ನು ಬಟವಾಡೆ ಮಾಡುವಾಗ ಉಂಟಾಗಿರುವ ಲೋಪದೋಷಗಳ ಬಗ್ಗೆ.

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು)

06. ಗಮನ ಸೆಳೆಯುವ ಸೂಚನೆಗಳು

ಅ) ವಿಷಯ: ರಾಜ್ಯದಲ್ಲಿ ಪದವಿ ಮತ್ತು ಉನ್ನತ ವ್ಯಾಸಂಗ ಕೋರ್ಸ್‌ಗಳ ಪಠ್ಯ ಕ್ರಮಗಳನ್ನು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅದರಲ್ಲೂ ಕೇಂದ್ರ ಸರ್ಕಾರದ ಯು.ಪಿ.ಎಸ್.ಸಿ ಮತ್ತು ಎಸ್.ಎಸ್.ಸಿ. ಹಾಗೂ ಇತರೆ ನೇಮಕಾತಿಗಳಿಗೆ ಅನುಕೂಲವಾಗುವಂತೆ ಪರಿಷ್ಕೃತಗೊಳಿಸುವ ಕುರಿತು.

- ಡಾ: ಧನಂಜಯ ಸರ್ಜಿ
- ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ ಸಚಿವರು)
- ಶ್ರೀ ಪುಟ್ಟಣ್ಣ

ಆ) ವಿಷಯ:- ಬಳ್ಳಾರಿ ನಗರದಲ್ಲಿರುವ ತಾರಾನಾಥ ಆಯುರ್ವೇದ ಕಾಲೇಜಿನಲ್ಲಿ ಬೋಧಕ ಹುದ್ದೆಗಳು ಖಾಲಿ ಇರುವುದರಿಂದ ಭಾರತೀಯ ವೈದ್ಯಕೀಯ ರಾಷ್ಟ್ರೀಯ ಆಯೋಗವು ವಿದ್ಯಾರ್ಥಿಗಳ ಪ್ರವೇಶವನ್ನು ಕಡಿಮೆ ಮಾಡಲು ಶಿಫಾರಸ್ಸು ಮಾಡಿರುವ ಬಗ್ಗೆ.

- ಶ್ರೀ ವೈ.ಎಂ.ಸತೀಶ್
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

07. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ

ಬೆಂಗಳೂರಿನ ಕಾಡುಗೋಡಿ ಪ್ಲಾಂಟೇಷನ್ ಪ್ರದೇಶದಲ್ಲಿರುವ ಕೃಷಿ ಭೂಮಿಯನ್ನು ಅರಣ್ಯ ಭೂಮಿಯೆಂದು ಗುರುತಿಸಿರುವ ಬಗ್ಗೆ.

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)
- ಶ್ರೀ ಎಂ.ಬಿ.ಪಾಟೀಲ್ (ಭಾರಿ ಮತ್ತು ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವರು)

  ಶ್ರೀ ಸಿ.ಟಿ.ರವಿ
- ಶ್ರೀ ಕೇಶವ ಪ್ರಸಾದ್.ಎಸ್

\- - -

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(629) 12.08.2025 11-00 ಎಸ್‌ವಿ-ಕೆಎಸ್

ಕರ್ನಾಟಕ ವಿಧಾನ ಪರಿಷತ್ತು

ಮಂಗಳವಾರ, 12ನೇ ಆಗಸ್ಟ್ 2025

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಾದರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

01. ಮಾನ್ಯ ಸಹಕಾರ ಸಚಿವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿರುವ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೋರಿ ಚರ್ಚೆ

***

ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದವರಿಗೆ ಸದನ ನಡೆಸುವ ಇಚ್ಛೆ ಇಲ್ಲ ಎಂಬುದು ಆಡಳಿತ ಪಕ್ಷದವರ ಹಾಜರಾತಿಯನ್ನು ನೋಡಿದರೆ ಅರ್ಥವಾಗುತ್ತದೆ.

ಸಭಾಪತಿಯವರು:- ಈಗ ಪ್ರಶ್ನೋತ್ತರಗಳು. ಮಾನ್ಯ ಬಲ್ಕಿಸ್ ಬಾನು ಅವರೆ, ತಮ್ಮ ಪ್ರಶ್ನೆ ಕೇಳಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಒಂದು ತುರ್ತು ವಿಷಯ ಇದೆ. ನಿನ್ನೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರಾದ ಶ್ರೀ ಪ್ರಭುಶಂಕರ್ ಅವರು ಒಂದು ಪತ್ರವನ್ನು ಬರೆದಿದ್ದಾರೆ. The relevant portion of the letter reads as follows: ¨I am directed to forward herewith the original…¨

ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು ಬರೆದ ಪತ್ರವನ್ನು ವಿಧಾನ ಪರಿಷತ್ತಿನಲ್ಲಿ ಓದಬೇಕು ಎಂದು ಇದೆಯೇ? ಏಕೆ ಅದನ್ನು ಓದಬೇಕು?

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಆಯಿತು.. ನಾನು ಆ ಪತ್ರವನ್ನು ಓದುವುದಿಲ್ಲ.

(ಗೊಂದಲ)

ಸಭಾಪತಿಯವರು:- ಆಯಿತು. ಪ್ರಶ್ನೋತ್ತರ ಮುಗಿದ ಮೇಲೆ ಚರ್ಚೆ ಮಾಡೋಣ.

(ಗೊಂದಲ)

ಸಭಾಪತಿಯವರು:- ಒಂದು ನಿಮಿಷ.. ಕೇಳಿ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಸಹಕಾರ ಸಚಿವರಾದ ಮಾನ್ಯ ಕೆ.ಎನ್. ರಾಜಣ್ಣ ಅವರು ರಾಜೀನಾಮೆಯನ್ನು ಕೊಟ್ಟಿದ್ದರೆ ನಾವು ಕೇಳುವುದಿಲ್ಲ. ನಮಗೆ ಅವಶ್ಯಕತೆ ಇಲ್ಲ. ಅದು ಅವರ ಸರ್ಕಾರದ ವಿಚಾರ.

ಸಭಾಪತಿಯವರು:- ಇಲ್ಲ, ನಾನು allow ಮಾಡುವುದಿಲ್ಲ. ಪ್ರಶ್ನೋತ್ತರ ಮುಗಿದ ಮೇಲೆ ಅವಕಾಶ ಕೊಡುತ್ತೇನೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್.ರವಿಕುಮಾರ್:- ಮಾನ್ಯ ಸಭಾಪತಿಯವರೆ, ಮಾನ್ಯ ರಾಜಣ್ಣ ಅವರು ವಜಾಗೊಳಿಸುವಂಥ ತಪ್ಪನ್ನೇನು ಮಾಡಿದ್ದರು?

(ಗೊಂದಲ)

ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):- ನಿಮಗೆ ಯಾವಾಗಿನಿಂದ ಅವರ ಮೇಲೆ ಪ್ರೀತಿ ಬಂದಿತು?

(ಗೊಂದಲ)

ಶ್ರೀ ಸಿ.ಟಿ.ರವಿ:- ಮಾನ್ಯ ಕೆ.ಎನ್. ರಾಜಣ್ಣ ಅವರನ್ನು ಯಾವ ಕಾರಣಕ್ಕಾಗಿ ಸಚಿವ ಸಂಪುಟದಿಂದ ವಜಾ ಮಾಡಲಾಗಿದೆ ಎಂಬುದನ್ನು ನಾವು ತಿಳಿಯಬೇಕು.

(ಗೊಂದಲ)

ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):- ಮಾನ್ಯ ಕೆ.ಎನ್.ರಾಜಣ್ಣ ಅವರನ್ನು ವಜಾಗೊಳಿಸುವಂತಹ ತಪ್ಪನ್ನು ಏನು ಮಾಡಿದ್ದರು?

(ಗೊಂದಲ)

ಸಭಾಪತಿಯವರು:- ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

(ಬೆಳಗ್ಗೆ 11 ಗಂಟೆ 07 ನಿಮಿಷಗಳಿಗೆ ಸದನವು 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)

(630) 12-08-2025/11.20/ಎಂವಿ-ಎಂಡಿ (ಕೆಎಸ್) (ಸಭಾಪತಿಯವರ ಉಪಸ್ಥಿತಿ)

(ಬೆಳಗ್ಗೆ 11 ಗಂಟೆ 7 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಬೆಳಗ್ಗೆ 11 ಗಂಟೆ 22 ನಿಮಿಷಗಳಿಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಸಚಿವರಾಗಿದ್ದಂತಹ ಶ್ರೀ ಕ್ಯಾತ್ಸಂದ ಎನ್. ರಾಜಣ್ಣನವರನ್ನು ವಜಾಗೊಳಿಸಲಾಗಿದೆ ಎಂದು ಎಲ್ಲಾ ದಿನಪತ್ರಿಕೆಗಳಲ್ಲಿ ವರದಿಯಾಗಿದೆ.

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ತಾವು ಮೊದಲು ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಿ. ಇಲ್ಲಿ ಅದನ್ನು ಓದುವುದಕ್ಕೆ ಅವಕಾಶವಿಲ್ಲ. ಈಗ ಮಾನ್ಯ ರಾಜ್ಯಪಾಲರ ಪಿ.ಎ.ರವರು ಪತ್ರ ಬರೆದರೆ ಅದನ್ನು Legislative Council ನಲ್ಲಿ ಓದುವುದೇ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ನಾನು ಹೇಳುವವರೆಗೂ ನನ್ನನ್ನು ಬಿಡಿ. ನಾನು ಹೇಳಿದಂತೆ ಇದನ್ನು ಪ್ರಶ್ನೋತ್ತರ ವೇಳೆ ಮುಗಿದ ನಂತರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ನನಗೆ ನಿಮ್ಮ ವಿಷಯ ಗೊತ್ತಾಗಿದೆ. ಈಗ ಸಭಾನಾಯಕರು ಬಂದ ನಂತರ ಉತ್ತರ ಕೊಡಿಸುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಈ ವಿಚಾರ ಗಂಭೀರವಾಗಿದೆ. ಹಿಂದೆ ಈ ರೀತಿ ಆಗಿಲ್ಲವೆಂದು ಇಲ್ಲ. ಈ ಹಿಂದೆ ಆಗಿರತಕ್ಕಂತಹ ಕಂಬಾಲಪಲ್ಲಿ ಗಲಾಟೆಯ murder case ಗೆ ಸಂಬಂಧಪಟ್ಟಂತೆ ಎರಡೂ ಸದನಗಳಲ್ಲಿ ಚರ್ಚೆಗೆ ತೆಗೆದುಕೊಂಡು ಅದರ ಬಗ್ಗೆ ಚರ್ಚೆ ಮಾಡಿದ ಮೇಲೆ ಮಾಡಿರುವುದು.

ಸಭಾಪತಿಯವರು:– ಇದು ಯಾವುದೂ ಕಡತಕ್ಕೆ ಹೋಗಬಾರದು.

(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಸದನದ ಈ ಹಂತದಲ್ಲಿನ ನಡವಳಿಯನ್ನು ದಾಖಲಿಸಿರುವುದಿಲ್ಲ)

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆ ಆದಮೇಲೆ ತೆಗೆದುಕೊಳ್ಳುವುದು ಎಂದು ನಿಯಮ ಇರಬಹುದು.

ಸಭಾಪತಿಯವರು:– ನೀವು ಸಭಾಪತಿಯವರ ಮಾತನ್ನು ಕೇಳುವುದಿಲ್ಲವೆಂದರೆ, ಅದು ನನಗೆ ಆಗುವುದಿಲ್ಲ. ನಾನು ತಮಗೆ ಒಂದು ಬಾರಿ ಹೇಳಿದ್ದೇನೆ.

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಾವು ನಿಮ್ಮ ಮಾತನ್ನು ಕೇಳುವುದಿಲ್ಲವೆಂದು ಹೇಳುವುದಿಲ್ಲ. ಇದು ಗಂಭೀರವಾಗಿರತಕ್ಕಂತಹ ಪ್ರಶ್ನೆ. ಇದು ಸುಮಾರು ಏಳು ಕೋಟಿ ಜನರಿಗೆ ಸೇರಿರುವಂತಹ ವಿಚಾರವಾಗಿರುವುದರಿಂದ ಇದಕ್ಕೆ importance ಕೊಡಬೇಕೆಂಬುದು ನಮ್ಮ ಮನವಿ.

ಸಭಾಪತಿಯವರು:– ಈಗ ಪ್ರಶ್ನೋತ್ತರ ವೇಳೆ ಆಗುವವರೆಗೆ ಯಾವುದೂ ಆಗುವುದಿಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಗಿಂತ ಇದು important ಇದೆ. ಇದು ಹೇಗೆ ಪ್ರಮುಖವಾಗಿದೆ ಎಂದು ಕೇಳಿದರೆ, ನಾವು ಹೇಳುತ್ತೇವೆ.

(ಗೊಂದಲ)

ಸಭಾಪತಿಯವರು:– ನಾನು ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಇದು ಹೇಗೆ ಮಹತ್ವ ಎಂಬುದನ್ನು we will explain it. ಇದು question hour ಗಿಂತ important ಇದೆ. ನಾವು ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ನೀಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅದರ ತೀರ್ಮಾನ ತಮ್ಮದು. ನಾವು ಏನು ಇದೇ ರೀತಿ ಮಾಡಿ ಎಂದು ಒತ್ತಾಯ ಮಾಡುತ್ತಿಲ್ಲ. ದಯವಿಟ್ಟು ಈಗ ಮಾನ್ಯ ಮುಖ್ಯಮಂತ್ರಿಗಳಿಂದಾಗಲಿ ಅಥವಾ ಮಾನ್ಯ ಸಭಾನಾಯಕರಿಂದಾಗಲಿ ನಮಗೆ ಇದಕ್ಕೆ ಕಾರಣ ಏನು ಎಂಬುದರ ಬಗ್ಗೆ ಹೇಳಿಸಬೇಕು. ಈಗ ಅವರನ್ನು ವಜಾಗೊಳಿಸುವುದಕ್ಕೆ ಕಾರಣವೇನು? ಅವರು ಏನು ಅನ್ಯಾಯ ಮಾಡಿದ್ದರು? ಅವರು ಏನಾದರೂ ತಪ್ಪು ಮಾಡಿದ್ದಾರೆಯೇ? ಅವರು ಏನಾದರೂ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ? ಅವರನ್ನು ವಜಾ ಮಾಡುವುದಕ್ಕೆ ಅವರು ಏನಾದರೂ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆಯೇ? ಅವರು ಭ್ರಷ್ಟಾಚಾರದಲ್ಲಿ ಇದ್ದರೆ, ಅವರನ್ನು ಏಕೆ ಇನ್ನು ಅರೆಸ್ಟ್ ಮಾಡಿಲ್ಲ? ಏನು ಕಾರಣ ಎನ್ನುವುದನ್ನು ಜನರಿಗೆ ತಿಳಿಸಬೇಕಲ್ಲವೇ?

(ಗೊಂದಲ)

ಶ್ರೀ ಐವನ್ ಡಿ'ಸೋಜಾ:– ಮಾನ್ಯ ಸಭಾಪತಿಯವರೇ, ಅವರನ್ನು ವಜಾಗೊಳಿಸಿರುವುದನ್ನು ಹೇಳಿದ್ದು ಯಾರು? ಅವರು ಇಲ್ಲಿ ಪಿ.ಎ. ಪತ್ರವನ್ನು ಓದುತ್ತಾರೆ.

(ಗೊಂದಲ)

ಸಭಾಪತಿಯವರು:– ಒಂದು ನಿಮಿಷ, ತಾವುಗಳು ನನ್ನ ಮಾತನ್ನೇ ಕೇಳುವುದಿಲ್ಲವೆಂದರೆ, ನಾನು ಹೇಗೆ ಸದನವನ್ನು ನಡೆಸುವುದು? ಪ್ರಶ್ನೋತ್ತರ ವೇಳೆ ಆದಮೇಲೆ ಮಾತನಾಡುವುದಕ್ಕೆ ಅವಕಾಶ ನೀಡುತ್ತೇನೆಂದು ಹೇಳಿದ್ದೇನೆ. ಮಾನ್ಯ ಸಭಾನಾಯಕರು ಬಂದ ಮೇಲೆ ಉತ್ತರ ಕೊಡಿಸುತ್ತೇನೆಂದು ಸಹ ಹೇಳಿದ್ದೇನೆ. ಮತ್ತೆ ನಾನು ಇನ್ನೇನು ಮಾಡಬೇಕೆಂದು ಹೇಳುತ್ತೀರಿ?

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಆಯಿತು, ಮಾನ್ಯ ಸಭಾನಾಯಕರು ಬಂದ ಮೇಲೆ ನಮಗೆ ಉತ್ತರ ಕೊಡಿಸಿ.

ಸಭಾಪತಿಯವರು:– ಆಯಿತು. ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸದಸ್ಯರು ಕೇವಲ ಐದೈದು ನಿಮಿಷ ಮಾತ್ರ ಮಾತನಾಡಬೇಕು. ಹೆಚ್ಚಿನ ಸಮಯ ತೆಗೆದುಕೊಳ್ಳುವಂತಿಲ್ಲ. ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆಯಲ್ಲಿ ಮುಕ್ತಾಯಗೊಳಿಸುತ್ತೇನೆ. ಈಗ ಸಮಯ 11 ಗಂಟೆ 25 ನಿಮಿಷವಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

02. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ: 367

ಬಳ್ಳಾರಿ ಬುಡಾದಿಂದ ಸೈಟ್ ಖರೀದಿಸಿದವರಿಗೆ ಮೂಲಸೌಲಭ್ಯ ನೀಡದಿರುವ ಬಗ್ಗೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಅನುಮೋದಿತ ಬಡಾವಣೆಗಳಿಗೆ ಅನುಮತಿ ನೀಡಲು ವಿಳಂಬ ಮಾಡುತ್ತಿರುವುದರಿಂದಾಗಿ ಅನುಮೋದಿತ ನಿವೇಶನಗಳ ಖರೀದಿದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	• ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4(A) ರಂತೆ ಘೋಷಿಸಲಾದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ವಿನ್ಯಾಸ ಅನುಮೋದನೆ ಪಡೆಯಲು ಇಚ್ಛಿಸುವ ಭೂ ಮಾಲೀಕರು/ಬಡಾವಣೆ ಅಭಿವೃದ್ಧಿದಾರರು (Layout Developers) ನಿಯಮಾನುಸಾರವಾಗಿ ಕಾಯ್ದಿರಿಸಲಾದ ರಸ್ತೆ, ನಿವೇಶನ, ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ಕ್ಷೇತ್ರಗಳನ್ನು ಒಳಗೊಂಡ ವಿನ್ಯಾಸ ನಕ್ಷೆಯನ್ನು ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(1)**ರಂತೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. • ಭೂ ಮಾಲೀಕರು ಪ್ರಾಧಿಕಾರಕ್ಕೆ ಸಲ್ಲಿಸಿರುವ ವಿನ್ಯಾಸ ನಕ್ಷೆಯು ಯೋಜನಾ ಬದ್ಧವಾಗಿರುವುದು ಕಂಡುಬಂದಲ್ಲಿ, ಸದರಿ ವಿನ್ಯಾಸ ನಕ್ಷೆಯಂತೆ, ಪ್ರಾಧಿಕಾರವು ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(2)** ರಡಿಯಲ್ಲಿ, ನಿಗಧಿತ ಅವಧಿಯಲ್ಲಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬೇಕಾಗಿರುತ್ತದೆ. ಹಾಗೂ ಪ್ರಾಧಿಕಾರದ ವ್ಯಾಪ್ತಿಗೆ ಮಹಾಯೋಜನೆ ಅನುಮೋದನೆ ಆಗದೇ ಇರುವ ಜಮೀನುಗಳ ವಿನ್ಯಾಸಗಳಿಗೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾದ ಮಾರ್ಗದರ್ಶನದಂತೆ ಪ್ರಾಧಿಕಾರವು ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬೇಕಿರುತ್ತದೆ. • ಪ್ರಾಧಿಕಾರವು ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಕಲಂ 17(2) ರಡಿಯಲ್ಲಿ, ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ತೀರ್ಮಾನಿಸಿದ್ದಲ್ಲಿ, ವಿನ್ಯಾಸವನ್ನು ನೆಲದಲ್ಲಿ ಗಡಿ ಗುರುತಿಸುವ ಸಂಬಂಧ (Demarcation purpose) ಹಾಗೂ ಅಭಿವೃದ್ಧಿಪಡಿಸುವ ಸಂಬಂಧ ವಿನ್ಯಾಸ ನಕ್ಷೆಗಳಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(2-A)** ರಡಿಯಲ್ಲಿ, ತಾತ್ಕಾಲಿಕವಾಗಿ ಅನುಮೋದನೆ ನೀಡಿ, ಆದೇಶ ಹೊರಡಿಸಬೇಕಿರುತ್ತದೆ. • ಅನುಮೋದಿತ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಳಾದ ವಿದ್ಯುತ್ಚ್ಛಕ್ತಿ, ಒಳಚರಂಡಿ, ನೀರು ಸರಬರಾಜು ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಭೂ ಮಾಲೀಕರು / ಬಡಾವಣೆ ಅಭಿವೃದ್ಧಿದಾರರು(Layout Developers) ಸಂಬಂಧಪಟ್ಟ ಇಲಾಖೆಗಳ ಮೇಲುಸ್ತುವಾರಿಯಲ್ಲಿ, ಪೂರ್ಣಗೊಳಿಸಬೇಕಿರುತ್ತದೆ. • ನಂತರ ವಿನ್ಯಾಸದಲ್ಲಿನ ಉದ್ಯಾನವನ, ಹಾಗೂ ರಸ್ತೆ ಕ್ಷೇತ್ರಗಳನ್ನು/ಜಾಗವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ನಾಗರೀಕ ಸೌಲಭ್ಯ ನಿವೇಶನವನ್ನು ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪುಕ್ಕಟ್ಟೆಯಾಗಿ ಭೂ ಮಾಲೀಕರು / ಬಡಾವಣೆ ಅಭಿವೃದ್ಧಿದಾರರು(Layout Developers) ಹಸ್ತಾಂತರಿಸಿಬೇಕಿರುತ್ತದೆ. • ವಿನ್ಯಾಸದಲ್ಲಿ ಅಭಿವೃದ್ಧಿ ಕಾಮಗಾರಿಗಳು ಮುಕ್ತಾಯಗೊಂಡಿರುವ ಕುರಿತು ಪ್ರಾಧಿಕಾರವು ಸಂಬಂಧಪಟ್ಟ ಇಲಾಖೆಗಳ ಮೇಲ್ವಿಚಾರಣೆಯಲ್ಲಿ ವಿನ್ಯಾಸವನ್ನು ಪರಿಶೀಲಿಸಿ, ನಿರಾಕ್ಷೇಪಣಾ ಪತ್ರಗಳನ್ನು ಸದರಿ ಸಂಬಂಧಪಟ್ಟ ಇಲಾಖೆಗಳಿಂದ ಪಡೆದು ಈ ಕುರಿತು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ, ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(2-B)** ರಡಿಯಲ್ಲಿ, ನಿಯಮಾನುಸಾರ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಬೇಕಿರುತ್ತದೆ. • ಭೂ ಮಾಲೀಕರು ಬಡಾವಣೆ ಅಭಿವೃದ್ಧಿದಾರರು(Layout Developers) ಕೋರಿಕೆಯ ಮೇರೆಗೆ, ಪ್ರಾಧಿಕಾರವು ವಿನ್ಯಾಸದಲ್ಲಿನ ನಿವೇಶನಗಳನ್ನು ಕೆ.ಟಿ.ಸಿ.ಪಿ. ಕಾಯ್ದೆ, 1961 ರ **ಕಲಂ 17(2-C)** ರಡಿಯಲ್ಲಿ, ಎರಡು ಹಂತದಲ್ಲಿಯೂ ಸಹ ಬಿಡುಗಡೆಗೊಳಿಸಬಹುದಾಗಿರುತ್ತದೆ. ಮೊದಲನೆ ಹಂತದಲ್ಲಿ ಶೇ . 40 ರಷ್ಟು ನಿವೇಶನಗಳನ್ನು ಹಾಗೂ ಉಳಿದ ಶೇ. 60 ರಷ್ಟು ನಿವೇಶನಗಳನ್ನು ಎರಡನೇ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಹಂತದಲ್ಲಿ ನಿಯಮಾನುಸಾರವಾಗಿ ಬಿಡುಗಡೆಗೊಳಿಸಬಹುದಾಗಿರುತ್ತದೆ. ಸದರಿ ವಿಧಾನದಲ್ಲಿ, ಪ್ರಾಧಿಕಾರವು ಈ ಕೆಳಕಂಡಂತೆ ಕ್ರಮ ವಹಿಸಬೇಕಿರುತ್ತದೆ; (ಅ) ಪ್ರಾಧಿಕಾರವು ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡಿದ ನಂತರ, ಭೂ ಮಾಲೀಕರಿಂದ ನೋಂದಾಯಿತ ಪರಿತ್ಯಜನಾ ಪತ್ರ, ವಿನ್ಯಾಸದಲ್ಲಿನ ಮೂಲೆ ನಿವೇಶನಗಳ ಕುರಿತಂತೆ ನೋಂದಾಯಿತ ಅಡಮಾನ ಒಪ್ಪಂದ (mortgage agreement) ಪಡೆದು, ಸದರಿ ವಿನ್ಯಾಸವು Real Estate (Regulation & Development) Act, 2016 (Central Act 16 of 2016) ರಡಿಯಲ್ಲಿ ನೋಂದಣಿಯಾಗಿರುವ ಕುರಿತು ಖಚಿತಪಡಿಸಕೊಳ್ಳಬೇಕಿರುತ್ತದೆ. (ಆ) ನಂತರದಲ್ಲಿ, ಪ್ರಾಧಿಕಾರವು ಸದರಿ ದಾಖಲೆಗಳನ್ನು ಪಡೆದು, ವಿನ್ಯಾಸದಲ್ಲಿನ ಶೇ. 40ರಷ್ಟು ನಿವೇಶನಗಳನ್ನು (ಚದುರಿದಂತೆ) ಪ್ರಾಧಿಕಾರವು ಬಿಡುಗಡೆಗೊಳಿಸಿ, ಪ್ರಾಧಿಕಾರವು ತಾತ್ಕಾಲಿಕ ಅನುಮೋದನೆ ನೀಡಿದ ವಿನ್ಯಾಸ ನಕ್ಷೆಯ ಒಂದು ಪ್ರತಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಸದರಿ ನಿವೇಶಗಳ ನೋಂದಣಿ ತೆರೆಯುವ ಸಂಬಂಧ ಕಳುಹಿಸಬೇಕಿರುತ್ತದೆ. (ಇ) ಪ್ರಾಧಿಕಾರವು ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡಿದ ಮೂರು ವರ್ಷಗಳ ಅವಧಿಯೊಳಗೆ ಕೆ.ಟಿ.ಸಿ.ಪಿ. ಕಾಯ್ದೆ, 1961 ರ ಕಲಂ 17(2-A)ರಲ್ಲಿ ತಿಳಿಸಿರುವಂತೆ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಕುರಿತು ಪ್ರಾಧಿಕಾರವು ಸ್ಥಳ ಪರಿಶೀಲನೆ ಕೈಗೊಂಡು ಖಚಿತಪಡಿಸಕೊಳ್ಳಬೇಕಿರುತ್ತದೆ. ಒಂದು ವೇಳೆ, ಪ್ರಾಧಿಕಾರದಿಂದ ಅನುಮೋದನೆ ನೀಡಲಾದ ತಾತ್ಕಾಲಿಕ ವಿನ್ಯಾಸದ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಯಲ್ಲಿ ವಿನ್ಯಾಸದಲ್ಲಿನ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳಿಸಬೇಕಾಗಿರುತ್ತದೆ. (ಈ) ಪ್ರಾಧಿಕಾರವು ನಿಗಧಿಪಡಿಸಲಾದ ಅವಧಿಯಲ್ಲಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ನಂತರ, ಸಂಬಂಧಿತ ಇಲಾಖೆಗಳಿಂದ ಪ್ರಾಧಿಕಾರವು ನಿರಾಕ್ಷೇಪಣಾ ಪತ್ರಗಳನ್ನು ಪಡೆದು, ಸದರಿ ವಿಷಯದ ಕುರಿತು ಪ್ರಾಧಿಕಾರದ ಸಭೆಯಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಚರ್ಚಿಸಿ, ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಉಳಿದ ಶೇ. 60ರಷ್ಟು ನಿವೇಶನಗಳನ್ನು (mortgage agreement ಮಾಡಿಕೊಳ್ಳಲಾದ ಮೂಲೆ ನಿವೇಶನಗಳ ಸೇರಿಸಿ) ಬಿಡುಗಡೆಗೊಳಿಸಲಾಗುತ್ತದೆ. ಸದರಿ ಅಂತಿಮ ಅನುಮೋದನೆ ನೀಡಲಾದ ವಿನ್ಯಾಸ ನಕ್ಷೆಯ ಒಂದು ಪ್ರತಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಸದರಿ ನಿವೇಶಗಳ ನೋಂದಣಿ ತೆರೆಯುವ ಸಂಬಂಧ ಕಳುಹಿಸಲಾಗುತ್ತದೆ. ಮೇಲ್ಕಂಡಂತೆ ಎಲ್ಲಾ ವಿಧಾನಗಳನ್ನು ವಿನ್ಯಾಸ ಅನುಮೋದನೆ ನೀಡಲು ಸಂಬಂಧಪಟ್ಟ ಪ್ರಾಧಿಕಾರಗಳು ಅನುಸರಿಸಬೇಕಾಗುತ್ತದೆ. ಇದೇ ವಿಧಾನಗಳನ್ನು ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲೂ ಸಹ ಅಳವಡಿಸಿಕೊಂಡು ಅನುಸರಿಸುತ್ತಿರುವುದರಿಂದ ಅನುಮೋದಿತ ಬಡಾವಣೆಗಳಿಗೆ ಅನುಮತಿ ನೀಡುವಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ವಿಳಂಬ ಆಗುತ್ತಿರುವುದಿಲ್ಲ.
ಆ)	ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಬಡಾವಣೆಗಳ ಅನುಮೋದನೆಗೆ ಸಂಬಂಧಿಸಿದಂತೆ ತೆರಿಗೆಯನ್ನು ಸಂಗ್ರಹಿಸಿದ ನಂತರವೂ ಕೂಡ ಖರೀದಿದಾರರು ನೀರು, ವಿದ್ಯುತ್ ಮತ್ತು ಒಳಚರಂಡಿ ಸಂಪರ್ಕಗಳನ್ನು ಪಡೆಯಲು ತೊಂದರೆ ಅನುಭವಿಸುತ್ತಿರುವುದು ನಿಜವೇ;	ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿ ಅಗತ್ಯ ಮೂಲಭೂತ ಸೌಕರ್ಯಗಳು ಅಭಿವೃದ್ಧಿಗೊಂಡ ಬಗ್ಗೆ ಖಚಿತಪಡಿಸಿಕೊಂಡ ನಂತರವೇ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲಾಗಿದ್ದು, ಸದರಿ ವಸತಿ ವಿನ್ಯಾಸಗಳಲ್ಲಿ ಪಾಲಿಕೆಯಿಂದ ನೀರು ಮತ್ತು ಒಳಚರಂಡಿ ಸಂಪರ್ಕಗಳಿಗೆ ಅರ್ಜಿದಾರರಿಂದ ನಿಗಧಿತ ಶುಲ್ಕ ಭರಿಸಿಕೊಂಡು ನಿಯಮಾನುಸಾರ ಅನುಮತಿ ನೀಡಲಾಗುತ್ತಿದೆ.
ಇ)	ಜೆಸ್ಕಾಂ/ನಿಗಮದ ಕೇಬಲ್‌ಗಳ ಸಣ್ಣ ಪುಟ್ಟ ದುರಸ್ತಿ ಮಾಡಲು ಸಹ ತರಬೇತಿ ಪಡೆದ ಸಿಬ್ಬಂದಿಗಳೇ ಇಲ್ಲದೆ ಸಂಬಂಧಪಟ್ಟ ಸಿಬ್ಬಂದಿಗಳ ಬಳಿ ಈ ಕೇಬಲ್‌ಗಳಿಗೆ ಸಂಬಂಧಿಸಿದ ತೀರಾ ಅಗತ್ಯವಿರುವ ಬಿಡಿ ಭಾಗಗಳೂ ಸಹ ಇರುವುದಿಲ್ಲ. ಹಾಗಾಗಿ ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ;	ಜೆಸ್ಕಾಂನ ಕಲಬುರಗಿ ಮತ್ತು ಬಳ್ಳಾರಿ ವಲಯ ವ್ಯಾಪ್ತಿಯಲ್ಲಿ ಕೇಬಲ್‌ಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ಅತ್ಯಾಧುನಿಕ ಸುಸಜ್ಜಿತ ಕೇಬಲ್ ಪಾಲ್ ಡಿಟೆಕ್ಟರ್‌ನ ಪ್ರತ್ಯೇಕವಾದ 2 ವಾಹನಗಳ ವ್ಯವಸ್ಥೆ ಮಾಡಲಾಗಿರುತ್ತದೆ. ಅಲ್ಲದೇ ಸದರಿ ಕೇಬಲ್ ದುರಸ್ತಿ ಕೆಲಸಕ್ಕೆ ಪ್ರತ್ಯೇಕವಾಗಿ ತರಬೇತಿ ಪಡೆದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಹಾಗೂ ಕೇಬಲ್ ನಿರ್ವಹಣೆಗಾಗಿ ಬಿಡಿ ಭಾಗಗಳು ಲಭ್ಯವಿದ್ದು, ಅವಶ್ಯವಿರುವ ಹೆಚ್ಚುವರಿ ಬಿಡಿಭಾಗಗಳನ್ನು ಪಡೆದುಕೊಳ್ಳಲು ಸಂಬಂಧಿತ ವಿಭಾಗಾಧಿಕಾರಿಯವರಿಗೆ ಪ್ರತ್ಯಾಯೋಜನೆ ನೀಡಲಾಗಿದೆ.
ಈ)	ಆರ್.ಎಸ್., ಜಮೀನುಗಳು ಮತ್ತು ಎನ್.ಎ., ಜಮೀನುಗಳಲ್ಲಿನ ಅನಧಿಕೃತ ಬಡಾವಣೆಗಳಲ್ಲಿರುವ ನಿವೇಶನಗಳಿಗೆ 'ಬಿ'	ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (BUDA) ಅನುಮೋದಿತ ವಸತಿ ವಿನ್ಯಾಸಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳು ಅಭಿವೃದ್ಧಿಗೊಂಡ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ಖಾತಾ ಮತ್ತು ನೀರು, ವಿದ್ಯುತ್ ಮತ್ತು ಒಳಚರಂಡಿ ಸಂಪರ್ಕಗಳೊಂದಿಗೆ ನಿವೇಶನದ ನಕ್ಷೆಯನ್ನು ನೀಡಲಾಗುತ್ತಿದೆ. ಅದರೆ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಅನುಮೋದಿತ ಬಡಾವಣೆಗಳಲ್ಲಿನ ನಿವೇಶನಗಳಿಗೆ ಮೂಲಭೂತ ಸೌಕರ್ಯಗಳಿಲ್ಲದಿರುವ ಕಾರಣಗಳೇನು; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ?	ಖಚಿತಪಡಿಸಿಕೊಂಡ ನಂತರವೇ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ. ದಿನಾಂಕ:01.11.2023 ರಿಂದ ಇಲ್ಲಿಯವರೆಗೂ ಒಟ್ಟು 32 ಲೇಔಟಗಳನ್ನು ಪಾಲಿಕೆಗೆ ಹಸ್ತಾಂತರಿಸಲಾಗಿದೆ. • ಕುಡಿಯುವ ನೀರು ಮತ್ತು ಒಳಚರಂಡ ವ್ಯವಸ್ಥೆಯ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಳ್ಳಾರಿ ರವರಿಂದ ಕೈಗೊಂಡು ತೃಪ್ತಿಕರವಾಗಿ ಪೂರೈಸಿದ ನಂತರ ನಕ್ಷೆಯೊಂದಿಗೆ ಜಂಟಿ ತಪಾಸಣೆ ಕೈಗೊಂಡ ನಂತರವೇ ಹಸ್ತಾಂತರಿಸಿಕೊಳ್ಳಲಾಗುತ್ತಿದೆ. • ವಿದ್ಯುತ್ ಸಂಬಂಧಿಸಿದ ಕಾಮಗಾರಿಗಳನ್ನು ಹಾಗೂ ನಿರ್ವಹಣೆಯನ್ನು ಜೆಸ್ಕಾಂ ಇಲಾಖೆಯಿಂದ ಕೈಗೊಳ್ಳಲಾಗುತ್ತಿದೆ. • ಈಗಾಗಲೇ ಬಳ್ಳಾರಿ ಮಹಾನಗರ ಪಾಲಿಕೆಗೆ ಹಸ್ತಾಂತರಗೊಂಡ BUDA ಅನುಮೋದಿತ ವಸತಿ ವಿನ್ಯಾಸಗಳಲ್ಲಿ ವಸತಿ ಕಟ್ಟಡಗಳು ನಿರ್ಮಾಣಗೊಂಡ ನಂತರ ನೀರು ಮತ್ತು ಒಳಚರಂಡಿ ಸಂಪರ್ಕಗಳನ್ನು ನೀಡಲಾಗುತ್ತಿದೆ. ಮತ್ತು ಕಾಲಕಾಲಕ್ಕೆ ಅಗತ್ಯತೆಯ ಮೇರೆಗೆ ನಿರ್ವಹಣೆ ಕೈಗೊಳ್ಳಲಾಗುತ್ತಿದೆ. • ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿರುವ ಬಗ್ಗೆ ಸಂಬಂಧಿಸಿದ ಇಲಾಖೆಗಳಿಂದ ದೃಢೀಕರಣ ಪತ್ರ ಪಡೆದು BUDA ದಿಂದ ಸದರಿ ಬಡಾವಣೆಗಳನ್ನು ಪಾಲಿಕೆಗೆ ಹಸ್ತಾಂತರಿಸುತ್ತಾರೆ. ಹಸ್ತಾಂತರಿಸಿಕೊಳ್ಳುವಾಗ ಈವರೆಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವ ಸನ್ನಿವೇಶಗಳು ಕಂಡುಬಂದಿರುವುದಿಲ್ಲ.

ಸಂಖ್ಯೆ : ನಅಇ 152 ಗುಅಪ್ರಾ 2025

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಮೊದಲಿಗೆ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ನಾನು ಬಜೆಟ್ ಅಧಿವೇಶನದಲ್ಲಿ BUDA (Bellary Urban Development Authority) ಬಗ್ಗೆ ಹೇಳಿದ ಮೇಲೆ ಮಾನ್ಯ ಸಚಿವರು ಒಂದು ಸಭೆಯನ್ನು ಮಾಡಿದ್ದಾರೆ. ಆದರೆ, ಅದೇ ರೀತಿಯಲ್ಲಿ ಈಗ ಉತ್ತರವನ್ನು ನೀಡಿದ್ದಾರೆ. ಈಗ ಚೈನೀಸ್‌ನಲ್ಲಿ "The Art of war" by Sun Tzu ಎಂದು ಒಂದು ಪುಸ್ತಕವಿದೆ. ನಗರಾಭಿವೃದ್ಧಿ ಇಲಾಖೆಯವರು art of confusion ಎಂದು ಮಾಡಿದ್ದಾರೆ. ನಾನು ಕೇಳಿದ ಪ್ರಶ್ನೆಗೆ ಇದರಲ್ಲಿ ಏನೂ ಉತ್ತರವೇ ಇಲ್ಲ. ಅವರು ಬೇರೆ ರೀತಿಯ ಉತ್ತರವನ್ನು ನೀಡಿದ್ದಾರೆ. ಅದು ಏಕೆ ಎಂದು ಮಾನ್ಯ ಸಚಿವರನ್ನು ಕೇಳಬೇಕಾಗಿದೆ. ಅದರ ಉಪ ಪ್ರಶ್ನೆಯಲ್ಲಿಯೇ ನೋಡಿ.

ಸಭಾಪತಿಯವರು:- ತಾವು ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿ.

ಶ್ರೀ ವೈ.ಎಂ.ಸತೀಶ್:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನನ್ನ ಪ್ರಶ್ನೆ ಏನೆಂದರೆ, ಈಗ ಬಳ್ಳಾರಿ ಜಿಲ್ಲೆಯಲ್ಲಿ ಏನು BUDA Layout ಗಳು ಆಗಿವೆ. ಅವುಗಳಿಗೆ power, water and sewage connections ಕೊಡುತ್ತಿಲ್ಲ. ಅದಕ್ಕೆ ಮಾನ್ಯ ಸಚಿವರು ಏನು ಉತ್ತರ ನೀಡಿದ್ದಾರೆಂದರೆ, ದಿನಾಂಕ 01.11.2023ಕ್ಕಿಂತ ಮುಂಚೆ ಎಲ್ಲವೂ ಸಹ Corporation ಗೆ handover ಆಗಿದೆ ಮತ್ತೆ ಅಲ್ಲಿಗೆ ಮೂಲಭೂತ ಸೌಕರ್ಯಗಳನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ. ಆದರೆ, 2023 ಆದಮೇಲೆ approval ಗೆ ಇನ್ನು ಎಷ್ಟು ಲೇಔಟ್‌ಗಳು ಬಾಕಿ ಇದೆ ಎಂಬ list ಅನ್ನು share ಮಾಡಿದರೆ, ಅಲ್ಲಿರುವಂತಹ ಬಳ್ಳಾರಿಯವರಿಗೆ ಗೊತ್ತಾಗುತ್ತದೆ. ಅಂದರೆ, ಯಾವ್ಯಾವ ಲೇಔಟ್‌ಗಳು approval ಆಗಿಲ್ಲವೆಂದು. ಈಗ ಬಹಳ ಜನರು approve ಆಗಿದೆ ಎಂದು ಸೈಟ್‌ಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಅವರ ಸಮಸ್ಯೆ ಎಷ್ಟಾಗಿದೆ ಎಂದರೆ, ಅವರು ಅಲ್ಲಿ ದುಡ್ಡು ಹಾಕಿದ್ದಾರೆ. ಆದರೆ, ಅಲ್ಲಿ ಲೇಔಟ್ approval ಆಗಿಲ್ಲವೆಂದು ಹೇಳುತ್ತಾರೆ. ಈಗ 'ಬಿ' ಖಾತಾವನ್ನು ಕೊಡುತ್ತಿದ್ದಾರೆ. ಈ 'ಬಿ' ಖಾತಾದಲ್ಲಿ ಏನಾಗುತ್ತಿದೆ ಎಂದರೆ, unauthorized layout ಗಳಲ್ಲಿ ಎಲ್ಲರೂ 'ಬಿ' ಖಾತಾಗಳಲ್ಲಿ ಸೈಟ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅವರು tax purpose ಗೆ ಎಂದು tax ಕಟ್ಟಿ 'ಬಿ' ಖಾತಾಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ approved layout ನ developer ಗಳು ಅದಕ್ಕೆಲ್ಲಾ ತೆರಿಗೆಯನ್ನು ಕಟ್ಟಿದರೂ ಸಹ BUDA ಅವರು approval ಕೊಡುವವರೆಗೂ ಸಹ corporation ನವರಿಗೆ handover ಆಗುವುದಿಲ್ಲ. ಇದೇ ರೀತಿ ಗ್ರಾಮಪಂಚಾಯಿತಿಯಲ್ಲೂ ಸಹ handover ಆಗುತ್ತಿಲ್ಲ.

ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):- ಮಾನ್ಯ ಸಭಾಪತಿಯವರೇ, ಅನುಮೋದಿತ ಬಡಾವಣೆಗಳಿಗೆ ವಿಳಂಬವಾಗುತ್ತಿರುವುದಕ್ಕೆ ಸರ್ಕಾರ ಏನು ಕ್ರಮಕೈಗೊಂಡಿದೆ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ ಕಲಂ ಪ್ರಕಾರ ಯಾರು ಲೇಔಟ್‌ಗಳನ್ನು ನಿರ್ಮಾಣ ಮಾಡುತ್ತಾರೆ, ಅವರು ನಿಗದಿತ ಸಮಯದ ಒಳಗಡೆ ಅವುಗಳಿಗೆಲ್ಲಾ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಾಖಲೆಗಳನ್ನು ಕೊಡಬೇಕಾಗುತ್ತದೆ. ಅಂದರೆ, sale deed, ಖಾತೆ ಇನ್ನೊಂದು ಮತ್ತೊಂದು ಕೊಡಬೇಕಾಗುತ್ತದೆ. ಸರ್ಕಾರದ ಅಭಿವೃದ್ಧಿ ಪ್ರಾಧಿಕಾರದ rules ನಲ್ಲಿ ಏನೇನು ಇದೆ, ಆ rules ಪ್ರಕಾರ ಅವರು documents submit ಮಾಡಿದ ಮೇಲೆ ಅದನ್ನು ನಾವು ಸ್ಥಳೀಯ ಪ್ರಾಧಿಕಾರದಲ್ಲಿ ಇಡುತ್ತೇವೆ. ಅಲ್ಲಿ ಇಲಾಖೆಯ ಇಂಜಿನಿಯರ್, ಅಧ್ಯಕ್ಷರು ಮತ್ತು ಆಯುಕ್ತರು ಇರುತ್ತಾರೆ. ಅವರು ಇದು ಅನುಮೋದಿತವಾಗಿದೆ ಎಂದು ಅದಕ್ಕೆ preliminary ಆಗಿ permission ಕೊಡುತ್ತಾರೆ. ಅದಾದ ಮೇಲೆ ಅವರು ರೇರಾ ರಿಜಿಸ್ಟ್ರೇಷನ್ ಮಾಡಿಸಬೇಕಾಗುತ್ತದೆ. ರೇರಾ ರಿಜಿಸ್ಟ್ರೇಷನ್ ಆದಮೇಲೆ ಮೊದಲ ಹಂತದಲ್ಲಿ ಲೇಔಟ್‌ನಲ್ಲಿ ಶೇಕಡಾ 40ರಷ್ಟನ್ನು ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಅದಾದನಂತರ ಇಲಾಖೆಯ ಅಧಿಕಾರಿಗಳು inspection ಮಾಡಿ, ಇನ್ನೇನಾದರೂ ದಾಖಲೆಗಳು ಬಾಕಿ ಇದ್ದರೆ, ಬೇರೆ ಬೇರೆ ಇಲಾಖೆಗಳಾದ Fire Force & Water Board ನಿಂದ ಎಲ್ಲಾ ನಿರಾಕ್ಷೇಪಣಾ ಪತ್ರ ಕೊಟ್ಟ ಮೇಲೆ ಉಳಿದಿರುವ ಶೇಕಡಾ 60ರಷ್ಟು sites release ಮಾಡುತ್ತೇವೆ. ಮೊದಲು ಶೇಕಡಾ 40ರಷ್ಟು ಅನ್ನು ಕೊಡುತ್ತೇವೆ. ಶೇಕಡ 40% ಆದಮೇಲೆ ಉಳಿದಿರುವುದಕ್ಕೆ ಏನಾದರೂ fulfil ಮಾಡಬೇಕಾದ ಅವಶ್ಯಕತೆ ಇದ್ದಂತಹ ಪಕ್ಷದಲ್ಲಿ ಅವರು ಎಲ್ಲಾ conditions ಅನ್ನು fulfil ಮಾಡಿದ ಮೇಲೆ ಶೇಕಡಾ 100ರಷ್ಟು release ಮಾಡುತ್ತೇವೆ.. ಇದರಲ್ಲಿ ಯಾವುದೇ ವಿಳಂಬವಾಗುತ್ತಿಲ್ಲ. ಇದು ಮಾನ್ಯ ಸದಸ್ಯರ ಮೊದಲನೇ ಪ್ರಶ್ನೆಗೆ ಉತ್ತರವಾಗಿದೆ.

(ಮುಂದು)

(631) 12.08.2025 11.30 LL-MD(KS) (ಸಭಾಪತಿಯವರ ಉಪಸ್ಥಿತಿ)

ಶ್ರೀ ಬಿ.ಎಸ್. ಸುರೇಶ(ಮುಂದು)

ಯಾವ್ಯಾವ ಹಂತದಲ್ಲಿ, documentation ಗೆ ಏನೇನು ಕೊಡಬೇಕೆಂಬ ಬಗ್ಗೆ ಬಹಳ ಸುದೀರ್ಘವಾಗಿ ನಾನು ಉತ್ತರ ಕೊಟ್ಟಿದ್ದೇನೆ. ಎರಡನೆಯದಾಗಿ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಬಡಾವಣೆಗಳ ಅನುಮೋದನೆಗೆ ಸಂಬಂಧಿಸಿದಂತೆ, ತೆರಿಗೆಯನ್ನು ಸಂಗ್ರಹಿಸಿದ ನಂತರ ಖರೀದಿದಾರರಿಗೆ ನೀರು, ವಿದ್ಯುತ್ ಮತ್ತು ಒಳಚರಂಡಿ ಸಂಪರ್ಕಗಳನ್ನು ಆಯಾ ಬಡಾವಣೆಗಳ ಮಾಲೀಕರು ಕೊಡಬೇಕಾಗಿರುತ್ತದೆ. ಸುಮಾರು ಎರಡರಿಂದ ಮೂರು ಸಾವಿರ ರೂಪಾಯಿ ಹಣ ಕೊಟ್ಟು ನಿವೇಶನಗಳನ್ನು ಖರೀದಿಸಿದಂತಹವರಿಗೆ ಬಡಾವಣೆ ನಿರ್ಮಿಸಿದಂತಹವರು ಕುಡಿಯುವ ನೀರು ಹಾಗೂ UGD (Underground Drainage) ಕೊಟ್ಟಿಲ್ಲವೆಂದರೆ, ಅದನ್ನು ಸರ್ಕಾರ ಹೇಗೆ ಕೊಡುವುದಕ್ಕೆ ಬರುತ್ತದೆ. ಏಕೆಂದರೆ, ಅದು ಖಾಸಗಿ ಬಡಾವಣೆಯಾಗಿರುತ್ತದೆ. ನಾವು ಬಡಾವಣೆ ನಿರ್ಮಿಸಿದರೆ ಕುಡಿಯುವ ನೀರು ಹಾಗೂ ಯುಜಿಡಿ ಸಂಪರ್ಕ ಕೊಡುತ್ತೇವೆ. ಆದರೆ, ಯಾವುದೋ ಒಬ್ಬ ಖಾಸಗಿ ವ್ಯಕ್ತಿ ಬಡಾವಣೆ ನಿರ್ಮಿಸಿ ಕೋಟಿ ಕೋಟಿ ಹಣ ಸಂಪಾದನೆ ಮಾಡುವ ವ್ಯಕ್ತಿ ಆ ಬಡಾವಣೆಗೆ ಕುಡಿಯುವ ನೀರು, ವಿದ್ಯುತ್ ಹಾಗೂ ವಿದ್ಯುತ್ ಪರಿಕರಗಳನ್ನು ಹಾಗೂ ಯುಜಿಡಿ ಕೊಡಬೇಕು. ಅದಕ್ಕೆ ಸಂಬಂಧಿಸಿದಂತೆ, ನಮ್ಮ ಇಲಾಖೆಯಲ್ಲಿ ಬೇರೆ ಬೇರೆ ವಿಭಾಗಗಳಿವೆ, ಅವುಗಳಿಗೆ ದುಡ್ಡು ಕಟ್ಟಿದರೆ, ಅದಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಿಸಿದಂತೆ ಅವರು ಸೇವೆಯನ್ನು ನೀಡುತ್ತಾರೆ. ಅದರಂತೆ, ಯುಜಿಡಿ ಸಂಪರ್ಕಕ್ಕೆ ನಾವು ಖಾಸಗಿ ವ್ಯಕ್ತಿಗೆ ಗುತ್ತಿಗೆ ನೀಡುತ್ತೇವೆ, ಅದರಂತೆ ಅವರು ಕೆಲಸ ಮಾಡಿ ಸರ್ಟಿಫಿಕೇಟ್ ಕೊಟ್ಟರೆ, ನಾವು ಅದನ್ನು ಅನುಮೋದನೆ ಮಾಡಿಕೊಡುತ್ತೇವೆ. ಆದರೆ, ಆ ಕೆಲಸ ಸರ್ಕಾರದ ಕೆಲಸವಾಗಿರುವುದಿಲ್ಲ. ಅದನ್ನು ಬಡಾವಣೆ ನಿರ್ಮಿಸಿದಂತಹ ಖಾಸಗಿ ವ್ಯಕ್ತಿಗಳು ಮಾಡಬೇಕಾಗಿರುತ್ತದೆ. ಒಂದು ವೇಳೆ ಸರ್ಕಾರದಿಂದ ಬಡಾವಣೆ ನಿರ್ಮಿಸಿದರೆ ಮಾತ್ರ ನಾವು ಕೊಡುತ್ತೇವೆ. ಆದುದರಿಂದ, ಮಾನ್ಯ ಶಾಸಕರಿಗೆ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುವುದೇನೆಂದರೆ, ಅನುಮೋದನೆ ಆಗಿರುವಂತಹ ಬಡಾವಣೆಗಳಗೂ ಸಹ, ಕುಡಿಯುವ ನೀರು, ಯುಜಿಡಿ, ವಿದ್ಯುತ್ ಸಂಪರ್ಕ ಕೊಡುವುದು ಆಯಾ ಬಡಾವಣೆ ಮಾಲೀಕರ ಕರ್ತವ್ಯವಾಗಿರುತ್ತದೆ. ಇದಾದ ನಂತರ, ಜೆಸ್ಕಾಂ/ನಿಗಮದ ಕೇಬಲ್‌ಗಳ ಸಣ್ಣಪುಟ್ಟ ದುರಸ್ಥಿ ಮಾಡುವುದು ಸಹ ಖಾಸಗಿ ಬಡಾವಣೆ ಮಾಲೀಕರಿಗೆ ಸಂಬಂಧಿಸಿದರುತ್ತದೆ. ಅದರಂತೆ, ಜೆಸ್ಕಾಂ ನಲ್ಲಿ ಎರಡು ವಾಹನಗಳಿದ್ದು, ಖಾಸಗಿ ಬಡಾವಣೆ ಮಾಲೀಕರು ಜೆಸ್ಕಾಂ ನಿಗಮಕ್ಕೆ ದುಡ್ಡು ಕಟ್ಟಿದರೆ, ಅವರು ಕೇಬಲ್ ಹಾಕಿಕೊಡುತ್ತಾರೆ ಮತ್ತು ದುರಸ್ಥಿ ಕೆಲಸವನ್ನು ಸಹ ಅವರೇ ಮಾಡಿಕೊಡುತ್ತಾರೆ. ಅದನ್ನು ನಾವು ಮಾಡುವುದಕ್ಕೆ ಬರುವುದಿಲ್ಲ. ಅದಾದ ನಂತರ, ಮಾನ್ಯ ಸದಸ್ಯರಿಗೆ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಕುಡಿಯುವ ನೀರಿನ ಸಂಪರ್ಕವನ್ನು ನಾವು ಯಾವಾಗ ನೀಡುತ್ತೇವೆಂದರೆ, ಯಾವ ಖಾಸಗಿ ಬಡಾವಣೆಯು ನಮ್ಮ ಕಾರ್ಪೋರೇಷನ್ ಲಿಮಿಟ್ಸ್‌ಗೆ ಬರುತ್ತದೆ, ಆ ಬಡಾವಣೆಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡಿಕೊಡುವುದು ನಮಗೆ ಇರುವಂತಹ ಅಧಿಕಾರವಾಗಿರುತ್ತದೆ. ಖಾಸಗಿ ಬಡಾವಣೆಗಳು ಯಾವಾಗ ಕಾರ್ಪೋರೇಷನ್ ವ್ಯಾಪ್ತಿಗೆ ಒಳಪಡುತ್ತದೆ, ಆ ಸಮಯದಲ್ಲಿ ಸದರಿ ಬಡಾವಣೆಗಳ ನಿರ್ವಹಣೆಯನ್ನು ನಾವು ಮಾಡಿಕೊಡುತ್ತೇವೆ. ಈ ರೀತಿಯ ಖಾಸಗಿ ಬಡಾವಣೆಗಳು ಸಂಪೂರ್ಣವಾಗಿ ಅಭಿವೃದ್ಧಿ ಮಾಡಿ ನಂತರ ಅದನ್ನು ಕಾರ್ಪೋರೇಷನ್‌ಗೆ ಹಸ್ತಾಂತರ ಮಾಡಿದರೆ ಮಾತ್ರ, ನಾವು ಅದನ್ನು ನಿರ್ವಹಣೆ ಮಾಡುವುದಕ್ಕೆ ಬರುತ್ತದೆ.

ಶ್ರೀ ವೈ.ಎಂ. ಸತೀಶ್:- ಮಾನ್ಯ ಸಭಾಪತಿಯವರೇ, ಎರಡು ವಿಷಯಗಳ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟೀಕರಣ ಬೇಕಾಗಿರುತ್ತದೆ. ಅದೇನೆಂದರೆ, in principle ಶೇಕಡ 40 ರಷ್ಟು ನಿವೇಶನಗಳನ್ನು ಬಡಾವಣೆ ಅಭಿವೃದ್ಧಿ ಆಗುವ ಹಂತದಲ್ಲಿ ಮಾರಾಟ ಮಾಡುವುದಕ್ಕೆ ಅನುಮೋದನೆ ಮಾಡುತ್ತಾರೆ. ತದನಂತರ, in principle ಶೇಕಡ 60 ರಷ್ಟು ನಿವೇಶನಗಳನ್ನು ಬಡಾವಣೆ ಸಂಪೂರ್ಣವಾಗಿ ಅಭಿವೃದ್ಧಿಯಾದ ನಂತರ ಮಾರಾಟ ಮಾಡುವುದಕ್ಕೆ ಅನುಮೋದನೆ ನೀಡುತ್ತಾರೆಂದು ಹೇಳಿರುತ್ತಾರೆ. ಆದರೆ, ಬಡಾವಣೆ ಅಭಿವೃದ್ಧಿ ಹಂತದಲ್ಲಿ ಶೇಕಡ 40 ರಷ್ಟು ನಿವೇಶನಗಳನ್ನು ಏನು ಮಾರಾಟ ಮಾಡಿರುತ್ತಾರೆ, ಉಳಿದ ಶೇಕಡ 60 ರಷ್ಟು ನಿವೇಶನಗಳನ್ನು ಮಾರಾಟ ಮಾಡುವುದಕ್ಕೆ ಅನುಮೋದನೆ ನೀಡದೇ ಇದ್ದರೆ ಅಥವಾ ratification ಇಲ್ಲವೆಂದರೆ ಆ ಬಡಾವಣೆ ಮಾಲೀಕರಿಗೆ ಸಮಸ್ಯೆಯಾಗುತ್ತದೆ. ಎರಡನೆಯದಾಗಿ, ನಾನು ಹೇಳಿರುವುದೇನೆಂದರೆ, ಖಾಸಗಿ ಬಡಾವಣೆಗಳಿಗೆ ಕುಡಿಯುವ ನೀರು ಮತ್ತು ಯುಜಿಡಿ ಸಂಪರ್ಕವನ್ನು ಆಯಾ ಬಡಾವಣೆ ಮಾಲೀಕರೇ ಅಭಿವೃದ್ಧಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುತ್ತಾರೆ. ಆದರೆ, ಆ ಬಡಾವಣೆಗಳಿಗೆ ಕಾರ್ಪೋರೇಷನ್‌ನಿಂದ ಮೇನ್‌ಲೈನ್‌ಗೆ ಸಂಪರ್ಕ ಕೊಡುತ್ತಿಲ್ಲ. ಇದು ಸಮಸ್ಯೆಯಾಗಿರುತ್ತದೆ. ಅಲ್ಲದೇ, ಸದರಿ ಬಡಾವಣೆಗಳಲ್ಲಿ ಕುಡಿಯುವ ನೀರಿನ ಪೈಪ್‌ಲೈನ್, ಯುಜಿಡಿ ಸಂಪರ್ಕ ಕೇಬಲ್‌ಗಳನ್ನು ಈಗಾಗಲೇ ಅಳವಡಿಸಲಾಗಿರುತ್ತದೆ. ಆದರೆ, ಸದರಿ ಬಡಾವಣೆಗಳ ಮೇನ್‌ಲೈನ್‌ಗೆ ಕಾರ್ಪೋರೇಷನ್‌ನಿಂದ ಸಂಪರ್ಕ ಕೊಡುತ್ತಿಲ್ಲ. ಆ ಸಮಸ್ಯೆ ಇರುತ್ತದೆ.

ಶ್ರೀ ಬಿ.ಎಸ್. ಸುರೇಶ:- ಮಾನ್ಯ ಸಭಾಪತಿಯವರೇ, ಬಳ್ಳಾರಿ ನಗರದಿಂದ ಸುಮಾರು ಹತ್ತು ಅಥವಾ ಹದಿನೈದು ಕಿಲೋಮೀಟರ್ ದೂರದಲ್ಲ ಒಂದು ಖಾಸಗಿ ಬಡಾವಣೆ ನಿರ್ಮಾಣವಾದರೆ, ಅಲ್ಲಿಗೆ ಕಾರ್ಪೋರೇಷನ್ ನೀರಿನ ಸಂಪರ್ಕ ಕೊಡುವುದಕ್ಕೆ ಸಾಧ್ಯವಾಗುತ್ತದೆ? ಒಂದು ವೇಳೆ ಆ ಬಡಾವಣೆಗಳು ನಗರ ಪ್ರದೇಶದಿಂದ ಹತ್ತಿರವಿದ್ದು, ಸ್ಥಳೀಯ ಮಹಾನಗರ ಪಾಲಿಕೆಗೆ ದುಡ್ಡು ಕಟ್ಟಿದರೆ ಮಾತ್ರ ಆ ಬಡಾವಣೆಗಳಿಗೆ ಕುಡಿಯುವ ನೀರು ಹಾಗೂ ಯುಜಿಡಿ ಸಂಪರ್ಕ ಕೊಡುತ್ತಾರೆ. ಬದಲಾಗಿ, ನಾವು ನೀರು ಕೊಡುವಂಥ ವ್ಯವಸ್ಥೆ ನಮ್ಮ ಇಲಾಖೆಗೆ ಇರುವುದಿಲ್ಲ. ಆದುದರಿಂದ, ಕಾರ್ಪೋರೇಷನ್ ವ್ಯಾಪ್ತಿಯಿಂದ ಹತ್ತಿರ ಇರುವಂತಹ ಖಾಸಗಿ ಬಡಾವಣೆಗಳು ಸ್ಥಳೀಯ ಮಹಾನಗರ ಪಾಲಿಕೆಗಳಿಗೆ ದುಡ್ಡು ಕಟ್ಟಿದರೆ ಮಾತ್ರ ಯುಜಿಡಿ ಮತ್ತು ಕುಡಿಯುವ ನೀರಿನ ಸಂಪರ್ಕ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಸದಸ್ಯರು, 'ಎ' ಮತ್ತು 'ಬಿ' ಖಾತೆ ಬಗ್ಗೆ ಹೇಳಿರುತ್ತಾರೆ. 'ಬಿ' ಖಾತೆ ಎನ್ನುವುದು ತೆರಿಗೆ ಉದ್ದೇಶಕ್ಕೆ ಮಾಡಿರುವಂಥದ್ದಾಗಿದೆ. ಅಂದರೆ, ಇಡೀ ರಾಜ್ಯದಲ್ಲಿರುವ ಎಲ್ಲಾ ನಿವೇಶನಗಳ ಬಳಕೆದಾರರು ಸರ್ಕಾರದ ಮೂಲಭೂತ ಸೌಕರ್ಯಗಳನ್ನು ಉಪಯೋಗಿಸುವುದರಿಂದ ಅವರಿಗೆ ಯಾವುದೇ ರೀತಿಯ ಖಾತೆ ಇರಲಿಲ್ಲ. ಹಾಗಾಗಿ, ಅವರಿಂದ ತೆರಿಗೆ ಸಂಗ್ರಹಿಸುವ ಉದ್ದೇಶಕ್ಕಾಗಿ ಮತ್ತು ಅವರಿಗೆ ಯಾವುದಾದರೊಂದ ದಾಖಲೆ ನೀಡಬೇಕೆಂಬ ಉದ್ದೇಶದಿಂದ ಅವರಿಗೆ 'ಬಿ' ಖಾತೆಯನ್ನು ಹೊಸದಾಗಿ ಪರಿಚಯಿಸಿರುತ್ತೇವೆ. ಈ 'ಬಿ' ಖಾತೆ ಬಗ್ಗೆ ಕಳೆದ ಬಾರಿ ನಾನು ಹೇಳಿರುತ್ತೇನೆ. ಅದೇನೆಂದರೆ, ಈ 'ಬಿ' ಖಾತೆ ನಿವೇಶನಗಳಿಗೆ 'ಎ' ಖಾತೆ ಮಾಡುವುದಕ್ಕೆ ಹೊರಟಿದ್ದೇವೆ. ಆ ರೀತಿ 'ಎ' ಖಾತೆ ಕೊಟ್ಟಾಗ ಮಾತ್ರ ಆ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಕಟ್ಟಡ ನಕ್ಷೆಗೆ ಅನುಮೋದನೆ ನೀಡುವಂತಹ ಅಧಿಕಾರ ನಮಗೆ ಇರುತ್ತದೆ. 'ಬಿ' ಖಾತೆ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಅವಕಾಶ ನೀಡುವಂತಹ ಪ್ರಶ್ನೆ ಸರ್ಕಾರದ ಮುಂದೆ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ:282

ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಕುರಿತು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 02 ವರ್ಷದಲ್ಲಿ ರಾಜ್ಯದಲ್ಲಿರುವ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಭಿವೃದ್ಧಿಗಾಗಿ ಸರ್ಕಾರವು ಬಿಡುಗಡೆ ಮಾಡಿದ ಒಟ್ಟು ಅನುದಾನ ಎಷ್ಟು: ಇಲ್ಲದಿದ್ದಲ್ಲಿ ಯಾವ ಕಾರಣಕ್ಕಾಗಿ ಬಿಡುಗಡೆ ಮಾಡಿರುವುದಿಲ್ಲ ಮಾಹಿತಿಯೊಂದಿಗೆ ವರದಿ ನೀಡುವುದು ಯಾವ ಕಾಲಮಿತಿಯೊಳಗೆ ಅನುದಾನ ಬಿಡುಗಡೆ ಮಾಡಲಾಗುವುದು; (ಕಾಮಗಾರಿವಾರು ಮಾಹಿತಿ ನೀಡುವುದು)</td><td>ಕಳೆದ 2 ವರ್ಷದಲ್ಲಿ ಅಂದರೆ 2023-24 ಮತ್ತು 2024-25 ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೊಳಪಡುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ ಅಭಿವೃದ್ಧಿ ಕಾಮಗಾರಿಗಳಿಗಾಗಿ NABARD RIDF Tranche-27, 03 ಕಾಮಗಾರಿಗಳಿಗೆ ರೂ. 4,365.00 ಲಕ್ಷಗಳು ಮತ್ತು NABARD RIDF Tranche-29ರ 01 ಕಾಮಗಾರಿಗೆ ರೂ. 800.00 ಲಕ್ಷಗಳು ಮಂಜೂರಾಗಿದೆ. ಈ ಪೈಕಿ ಕಳೆದ 02 ವರ್ಷಗಳಲ್ಲಿ ಅಂದರೆ 2023-24 ನೇ ಸಾಲಿನಲ್ಲಿ ರೂ. 2,275.00 ಲಕ್ಷಗಳು ಮತ್ತು 2024-25ನೇ ಸಾಲಿನಲ್ಲಿ ರೂ. 381.38 ಲಕ್ಷಗಳು ಒಟ್ಟು ರೂ. 2,656.38 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ವಿವರ ಕೆಳಗಿನಂತಿದೆ.
(ರೂ. ಲಕ್ಷಗಳಲ್ಲಿ)
<table>
<tr><th rowspan="2">ಕ್ರ ಸಂ</th><th rowspan="2">ಕಾಮಗಾರಿಗಳು</th><th rowspan="2">ಮಂಜೂರಾದ ಅನುದಾನ</th><th colspan="2">ಬಿಡುಗಡೆಯಾದ ಅನುದಾನ</th><th rowspan="2">ಒಟ್ಟು</th></tr>
<tr><th>2023-24</th><th>2024-25</th></tr>
<tr><td>1</td><td>2</td><td>3</td><td>4</td><td>5</td><td>6</td></tr>
<tr><td colspan="6">Tranche-27</td></tr>
<tr><td>1</td><td>ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಮೂಲಭೂತ ಸೌಕರ್ಯಗಳ ನಿರ್ಮಾಣ ತೋ.ವಿ.ವಿ ಬಾಗಲಕೋಟ</td><td>940.00</td><td>600.00</td><td>150.00</td><td>750.00</td></tr>
<tr><td>2</td><td>ಮೈಸೂರು ಜಿಲ್ಲೆಯ ತೋಟಗಾರಿಕೆ ಮಹಾವಿದ್ಯಾಲಯಕ್ಕೆ ಮೂಲಭೂತ ಸೌಕರ್ಯಗಳು</td><td>502.00</td><td>450.00</td><td>50.00</td><td>500.00</td></tr>
<tr><td>3</td><td>ಹಾವೇರಿಯ ದೇವಿಹೊಸೂರಿನಲ್ಲಿ ತೋಟಗಾರಿಕೆ ಮಹಾವಿದ್ಯಾಲಯಕ್ಕೆಮೂಲಭೂತ ಸೌಕರ್ಯಗಳು</td><td>2923.00</td><td>1225.00</td><td>151.38</td><td>1376.38</td></tr>
</table>
</td></tr>
</table>

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Tranche-29					
4	ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ವಸತಿ ನಿಲಯಗಳ ಮೂಲಭೂತ ಸೌಕರ್ಯಗಳ ನಿರ್ಮಾಣ	800.00	00.00	30.00	30.00
	Total	**5165.00**	**2275.00**	**381.38**	**2656.38**

ಅಲ್ಲದೆ ಬಾಗಲಕೋಟೆಯಲ್ಲಿ ಕಿಸಾನ್ ಮಾಲ್ ಸ್ಥಾಪನೆಗಾಗಿ ರೂ. 15 ಲಕ್ಷ, ಅಲಮೇಲದಲ್ಲಿ ತೋಟಗಾರಿಕೆ ಕಾಲೇಜು, ಆಡಳಿತ & ಶೈಕ್ಷಣಿಕ ಭವನಕ್ಕಾಗಿ ರೂ. 3995.00 ಲಕ್ಷಗಳು, ದೇಸಿಬೀಜ ತಳಿಗಳ ಬ್ಯಾಂಕ್ ಸ್ಥಾಪನೆಗೆ ರೂ. 150.00 ಲಕ್ಷ, ತೋಟಗಾರಿಕೆ ಬೆಳೆಗಳ ಪ್ರಚಲಿತ ವಾಸ್ತವಿಕ ವಿಸ್ತೀರ್ಣ, ಉತ್ಪಾದನೆ, ಆರೋಗ್ಯ ಹಾಗೂ ಮಾರುಕಟ್ಟೆ ಮಾಹಿತಿ ಜ್ಞಾನ ಕೇಂದ್ರ ಸ್ಥಾಪನೆಗೆ ರೂ.489.00 ಲಕ್ಷ, ಬ್ಯಾಡಗಿ ಮೆಣಸಿನಕಾಯಿ ತಳಿಯ ಸಂರಕ್ಷಣೆ ಮತ್ತು ಎಲೆ ಮುರುಟು ರೋಗ, ಕ್ರಿಪ್ಸ್ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲು ರೂ. 75.00ಲಕ್ಷ ಮಂಜೂರು ಮಾಡಲಾಗಿದೆ. ಮುಂದುವರೆದು, ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗಕ್ಕೆ ಅಡಿಕೆ ಬೆಳೆ ಎಲೆ ಚುಕ್ಕೆ ರೋಗ ಸಂಶೋದನೆಗೆ ರೂ.43.61ಲಕ್ಷ ಮಂಜೂರು ಮಾಡಲಾಗಿದೆ.

In the past 2 years, i.e., during 2023-24 and 2024-25, for the development works under the jurisdiction of the Department of Horticulture at the University of Horticultural Sciences, Bagalkot, a total of 3 works were approved under the NABARD RIDF Tranche-27 (2021-22) at a cost of ₹4,365.00 lakhs, and 01 work was approved under the NABARD RIDF Tranche-29 (2023-24) at a cost of ₹800.00 lakhs.

Out of this, over the last 2 years i.e., ₹2,275.00 lakhs in the financial year 2023-24, and ₹381.38 lakhs in the financial year 2024-25 a total grant of ₹2,656.38 lakhs has been released.

(Rs. In Lakhs)

Sl No	Works	Sanctioned Amount	Released amount		Total
			2023-24	2024-25	
1	2	3	4	5	6
Tranche-27					
1	Construction of Hostel buildings and other	940.00	600.00	150.00	750.00

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

			infrastructural facilities at UHS Bagalkot				
		2	Construction of infrastructure facilities at College of Horticulture in Mysuru district	502.00	450.00	50.00	500.00
		3	Creation of infrastructure at College of Horticulture Engineering and food technology DevihosurHaveri	2923.00	1225.00	151.38	1376.38
		Tranche-29					
		4	Construction of PG girls hostel at Kittur Rani Chennamma College of Horticulture Arabhavi, Kokak Taluk, Belagavi District (2444.90 sq.mt)	800.00	00.00	30.00	30.00
			Total	**5165.00**	**2275.00**	**381.38**	**2656.38**

Besides, Rs. 15 lakhs for establishing Kisan Mall at Bagalakote, Rs. 3995 lakhs for construction of Administrative and Academic Building of Horticulture College, Alamela, Rs. 150.00 lakhs for establishing Indigenous Seed Bank, Rs.489.00 lakhs for establishing information Knowledge Centre for collecting real time area, production, crop health data, Rs.75.00 lakhs for research to find solutions for varietal conservation of Byadagi Chilles and Leaf curl and Thrips has been sanctioned. Keladi Shivappa Nayaka Agriculture and Horticulture University is sanctioned with Rs. 43.61 lakhs to conduct research on Arecanut Leaf Spot.

ಆ	ಸದರಿ ವಿಶ್ವವಿದ್ಯಾಲಯಗಳಿಗೆ ಮೂಲಭೂತ ಸೌಕರ್ಯ ಹಾಗೂ ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮಗಳೇನು: (ವಿವರ ನೀಡುವುದು)	ಹೌದು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವಿವಿಧ ಮೂಲ ಸೌಕರ್ಯಗಳಿಗೆ ಹಾಗೂ ಇನ್ನಿತರೆ ಕಾಮಗಾರಿಗಳಿಗಾಗಿ ಅನುದಾನದ ಅವಶ್ಯಕತೆ ಕುರಿತಂತೆ ಲಭ್ಯತೆಯನ್ನು ಆಧರಿಸಿ ಹಂತಹಂತವಾಗಿ ಹಣಬಿಡುಗಡೆ ಮಾಡಲಾಗುತ್ತದೆ. Yes, the Government is aware of the need for funds for various basic infrastructure, and other works at UHS, Bagalkot. Based on the availability, the funds are being released in a phased manner.
ಇ	ಬಾಗಲಕೋಟೆ ತೋಟಗಾರಿಕಾ ವಿಜ್ಞಾನ	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ವಿಶ್ವವಿದ್ಯಾಲಯದಲ್ಲಿ ವಿವಿಧ ರೀತಿಯ ಕೃಷಿ ಸಂಶೋಧನೆಗಳನ್ನು ಕೈಗೊಳ್ಳಲು ಸರ್ಕಾರದ ಅನುದಾನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು: (ವಿವರ ನೀಡುವುದು)	
ಈ	ಬಾಗಲಕೋಟೆ ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ವಿವಿಧ ರೀತಿಯ ಕೃಷಿ ಸಂಶೋಧನೆಗಳನ್ನು ಕೈಗೊಳ್ಳಲು ಸುಮಾರು 200-250 ಎಕರೆ ಜಾಗವನ್ನು ಸರ್ಕಾರವು ಮಂಜೂರು ಮಾಡುವುದೆ, ಹಾಗಿದ್ದಲ್ಲಿ ಸರ್ಕಾರದ ಕ್ರಮವೇನು?	ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ತೋಟಗಾರಿಕೆ ಮಹಾವಿದ್ಯಾಲಯಗಳಿಗೆ ವಿವಿಧ ಶೈಕ್ಷಣಿಕ, ಸಂಶೋಧನಾ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಒಟ್ಟು 2028 ಎಕರೆ 35 ಗುಂಟಾ ಜಮೀನನ್ನು ಸರಕಾರವು ಮಂಜೂರು ಮಾಡಿದೆ. ಮುಂದುವರೆದು ಅವಶ್ಯಕತೆಗೆ ಅನುಗುಣವಾಗಿ ಜಾಗವನ್ನು ಮಂಜೂರು ಮಾಡಲು ಪರಿಗಣಿಸಲಾಗುವುದು. The Government has sanctioned a total of 2,028 acres and 35 guntas of lands to the University of Horticultural Sciences, Bagalkot and its affiliated Horticultural Colleges for various academic, research, and extension activities. Furthermore, additional land will be considered for the sanction based on the future requirements.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಒದಗಿಸಿರುತ್ತಾರೆ. ನಾನು ಪ್ರಶ್ನೆ ಕೇಳಿರುವುದೇನೆಂದರೆ ಕಳೆದ 2 ವರ್ಷಗಳ ಅವಧಿಯಲ್ಲಿ ಬಾಗಲಕೋಟೆಯಲ್ಲಿರುವಂತಹ ಪ್ರತಿಷ್ಠಿತ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ದೇಶದಲ್ಲಿ ಮೂರನೇ ವಿಶ್ವವಿದ್ಯಾಲಯವಾಗಿರುತ್ತದೆ ಮತ್ತು ರಾಜ್ಯದಲ್ಲಿ ಪ್ರಥಮ ವಿಶ್ವವಿದ್ಯಾಲಯವಾಗಿರುತ್ತದೆ. ಈ ವಿಶ್ವವಿದ್ಯಾಲಯದಲ್ಲಿ ಕೆಲವೊಂದು ತೊಂದರೆಗಳಿವೆ ಎನ್ನುವ ಬಗ್ಗೆ ನಾನು ಪ್ರಶ್ನೆ ಕೇಳಿರುತ್ತೇನೆ. ಅದರಂತೆ, ಕಳೆದ 2 ವರ್ಷಗಳ ಅವಧಿಯಲ್ಲಿ ಈ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಎಷ್ಟು ಹಣಕಾಸಿನ ನೆರವನ್ನು ಕೊಟ್ಟಿದ್ದೀರಿ ಎನ್ನುವ ಪ್ರಶ್ನೆಗೆ ರೂ.5,165/- ಲಕ್ಷಗಳ ಹಣ ಮಂಜೂರಾಗಿದೆ ಮತ್ತು ಇದಕ್ಕೆ ರೂ.2,656.38/- ಲಕ್ಷಗಳ ಹಣ ಬಿಡುಗಡೆಯಾಗಿದೆ ಎಂದು ಹೇಳಿರುತ್ತಾರೆ. ಆದರೆ, ಈ ವಿಶ್ವವಿದ್ಯಾಲಯದಲ್ಲಿ ಕಾಮಗಾರಿಗಳು ಅರ್ಧಕ್ಕೆ ನಿಂತಿರುತ್ತವೆ. ಆದುದರಿಂದ, ಆದಷ್ಟು ಬೇಗನೆ ಉಳಿದಿರುವಂತಹ ಹಣವನ್ನು ಬಿಡುಗಡೆ ಮಾಡಿ, ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಅದನ್ನು ಯಾವಾಗ ಮಾಡುತ್ತಾರೆಂಬುದನ್ನು ತಿಳಿಸಬೇಕು. ಅದರ ಜೊತೆಗೆ, ಬಹಳಷ್ಟು ಅಭಿವೃದ್ಧಿ ಕೆಲಸಗಳು ಅಂದರೆ, ವಿದ್ಯಾರ್ಥಿಗಳ ವಸತಿ ನಿಲಯಗಳು, ಸಿಬ್ಬಂದಿಗಳ ವಸತಿ ನಿಲಯಗಳ ಕೊರತೆ ಇದೆ. ಹಾಗಾಗಿ, ಆ ಕಾಮಗಾರಿಗಳನ್ನು ಆದಷ್ಟು ಬೇಗನೆ ಮಂಜೂರು ಮಾಡಬೇಕು. ಅದನ್ನು ಯಾವಾಗ ಮಾಡುತ್ತಾರೆಂಬ ಬಗ್ಗೆ ಮಾಹಿತಿ ನೀಡಬೇಕು. ಈ ವಿಶ್ವವಿದ್ಯಾಲಯದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಹಳಷ್ಟು ಎದ್ದು ಕಾಣುತ್ತಿದೆ. ಇದೊಂದು ಪ್ರತಿಷ್ಠಿತ ವಿಶ್ವವಿದ್ಯಾಲಯ ಆಗಿರುವುದರಿಂದ ಮೂಲಭೂತ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೌಕರ್ಯಗಳನ್ನು ಯಾವಾಗ ಮಾಡುತ್ತೀರೆಂದು ಪ್ರಶ್ನೆ ಕೇಳಿರುವುದಕ್ಕೆ, ಮಾನ್ಯ ಸಚಿವರು ಹಂತ ಹಂತವಾಗಿ ಮಾಡುತ್ತೇವೆಂದು ಉತ್ತರ ನೀಡಿರುತ್ತಾರೆ. ಆದರೆ, ಹಂತ-ಹಂತವಾಗಿ ಎಂದರೆ, ಯಾವಾಗ ಮಾಡುತ್ತಾರೆಂಬ ಬಗ್ಗೆ ಸಂಪೂರ್ಣ ವಿವರ ನೀಡಬೇಕು. ನನಗೆ ಗೊತ್ತಿರುವ ಹಾಗೆ, ಈ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿ ಕೊರತೆ ಇದೆ. ಒಟ್ಟಾರೆ ಸಿಬ್ಬಂದಿಯ ಶೇಕಡ 50 ರಷ್ಟು ಸಿಬ್ಬಂದಿಗಳು ಮಾತ್ರ ಈ ವಿಶ್ವವಿದ್ಯಾಲಯಲ್ಲಿದ್ದು, ಉಳಿದ ಶೇಕಡ 50 ರಷ್ಟು ಸಿಬ್ಬಂದಿಗಳ ಕೊರತೆ ಇದೆ. ಅದನ್ನು ಆದಷ್ಟು ಬೇಗ ತುಂಬಬೇಕು. ಅದನ್ನು ಯಾವಾಗ ತುಂಬುತ್ತಾರೆಂಬ ಬಗ್ಗೆ ಮಾಹಿತಿ ನೀಡಬೇಕು. ಸುಮಾರು 290 ಜನ ನೌಕರರು ಕಳೆದ 10-15 ವರ್ಷಗಳಿಂದ ಗುತ್ತಿಗೆ ಆಧಾರದ ಮೇರೆಗೆ ಕೆಲಸ ಮಾಡುತ್ತಿದ್ದಾರೆ. ಅಂದರೆ, 2008 ರಿಂದ ಇವೊತ್ತಿನವರೆಗೂ ಸಹ ಅವರು ಗುತ್ತಿಗೆ ಆಧಾರದ ಮೇರೆಗೆ ಕೆಲಸ ಮಾಡುತ್ತಿದ್ದಾರೆ. ಆದರೆ, ಅವರನ್ನು ಈಗ ತೆಗೆದು ಹಾಕಿ, ಹೊರಗುತ್ತಿಗೆ ಆಧಾರದ ಮೇರೆಗೆ ನೌಕರರನ್ನು ನೇಮಕ ಮಾಡಿಕೊಳ್ಳಬೇಕು ಎನ್ನುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಹೊರಗುತ್ತಿಗೆ ಆಧಾರದ ಮೇರೆಗೆ ನೌಕರರನ್ನು ನೇಮಕ ಮಾಡಿಕೊಂಡರೆ, ಈ ನೌಕರರಿಗೆ ಬಹಳಷ್ಟು ಸಮಸ್ಯೆಯಾಗುತ್ತದೆ. ಮಾನವೀಯ ದೃಷ್ಟಿಯಿಂದ ಅವರೆಲ್ಲರನ್ನೂ ಸಹ ಕನಿಷ್ಠ ವೇತನಕ್ಕೆ ಒಳಪಡಿಸಬೇಕು. ಅದನ್ನು ಯಾವಾಗ ಮಾಡುತ್ತಾರೆಂದು ಮಾನ್ಯ ಸಚಿವರು ಹೇಳಬೇಕು. ಇದಕ್ಕೆ ಕಾನೂನಿನಲ್ಲಿ ಯಾವುದೇ ಅಡಚಣೆ ಇರುವುದಿಲ್ಲ. ಇತ್ತೀಚೆಗೆ ಬೀದರ್ ವಿಶ್ವವಿದ್ಯಾಲಯದಲ್ಲಿ ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದಂತಹ ನೌಕರರನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಬೀದರ್ ಪಶುಸಂಗೋಪನಾ ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಮಾಡಿರುತ್ತಾರೆ. ಅದೇ ರೀತಿಯಾಗಿ, ಈ ನೌಕರರನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಂಡು ಕನಿಷ್ಠ ವೇತನವನ್ನು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸುಮಾರು 340 ಎಕರೆ ಜಮೀನು ಇದೆ. ಇನ್ನು ಹೆಚ್ಚುವರಿ ಜಮೀನು ಬೇಕು ಎನ್ನುವ ಬೇಡಿಕೆ ಇದೆ. ಸನ್ಮಾನ್ಯ ಸಚಿವರು 2,028 ಎಕರೆ ಜಮೀನನ್ನು ಸರ್ಕಾರ ಮಂಜೂರು ಮಾಡಿರುತ್ತದೆ ಎಂದು ಹೇಳಿರುತ್ತಾರೆ. ಆ ಜಮೀನುಗಳನ್ನು ಎಲ್ಲೆಲ್ಲಿ ಮಂಜೂರು ಮಾಡಿದ್ದಾರೆ, ಎಷ್ಟು ಮಂಜೂರು ಮಾಡಿದ್ದಾರೆ ಮತ್ತು ಅವುಗಳು ಯಾವ ಕ್ಷೇತ್ರದಲ್ಲಿದೆ ಹಾಗೂ ಅದು ಈಗ ಯಾವ ಹಂತದಲ್ಲಿದೆ ಎಂಬ ಬಗ್ಗೆ ಸಂಪೂರ್ಣ ಮಾಹಿತಿ ನೀಡಬೇಕೆಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪರವರ ಪ್ರಶ್ನೆಗೆ ಸಂಪೂರ್ಣವಾದ ಉತ್ತರವನ್ನು ಒದಗಿಸಲಾಗಿರುತ್ತದೆ. ಅದರಲ್ಲಿ ಮುಖ್ಯವಾಗಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಏನು ಪ್ರಶ್ನೆ ಕೇಳಿರುತ್ತಾರೆ, ಅದಕ್ಕೆ ಈಗಾಗಲೇ ರೂ.5,165/- ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಅದರಲ್ಲಿ ರೂ.2,275/- ಲಕ್ಷಗಳ ಅಂದಾಜಿನಲ್ಲಿ ಈಗಾಗಲೇ ಕಾಮಗಾರಿಗಳು ನಡೆಯುತ್ತಿರುತ್ತವೆ. ಅದರ ಜೊತೆಗೆ, ಇನ್ನು ರೂ.381.38/- ಅನುದಾನ ಸೇರಿ ಒಟ್ಟಾರೆಯಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂ.2,656.38/- ಲಕ್ಷಗಳ ಅನುದಾನ ಬಿಡುಗಡೆಯಾಗಬೇಕಾಗಿರುತ್ತದೆ. ಅದನ್ನು ಆದಷ್ಟು ಬೇಗ ಅಂದರೆ, ಈ ಕಾಮಗಾರಿ ಮುಕ್ತಾಯಗೊಳ್ಳುವ ಹಂತಕ್ಕೆ ಬಂದಾಗ, ಸಂಪೂರ್ಣ ಹಣವನ್ನು ಬಿಡುಗಡೆ ಮಾಡಿಸುತ್ತೇವೆ. ಎರಡನೆಯದಾಗಿ, ಗುತ್ತಿಗೆ ಆಧಾರದ ಮೇರೆಗೆ ಕೆಲಸ ಮಾಡುವಂತಹ ನೌಕರರ ಬಗ್ಗೆ ಹೇಳಿರುತ್ತಾರೆ. ಇದರ ಬಗ್ಗೆ ನಮಗೂ ಸಹ ಅರಿವಿದೆ. ಈ ವಿಷಯವನ್ನು ನಾವು ಈಗಾಗಲೇ ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ಅಲ್ಲಿಂದ ಅನುಮೋದನೆ ಬಂದ ನಂತರವೇ, ಆದಷ್ಟು ಬೇಗ ಈ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ. ಇನ್ನೊಂದು ಪ್ರಶ್ನೆ ಏನೆಂದರೆ, ಸದರಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಜಮೀನಿನ ಬಗ್ಗೆ ಪ್ರಶ್ನೆ ಕೇಳಿರುತ್ತಾರೆ. ಆ ವಿಶ್ವವಿದ್ಯಾಲಯಕ್ಕೆ ಈಗಾಗಲೇ 2,065 ಎಕರೆ ಜಮೀನು ಮಂಜೂರಾಗಿದೆ ಮತ್ತು ಅದು earmark ಕೂಡ ಆಗಿದೆ. ಆ ನಿಟ್ಟಿನಲ್ಲಿ ವಿವಿಧ ಹಂತದಲ್ಲಿ ಅಭಿವೃದ್ಧಿ ಪತದತ್ತ ನಾವು ಹೋಗೋಣ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:- ಮಾನ್ಯ ಸಭಾಪತಿಯವರೇ, ಆ ಜಮೀನು ಎಲ್ಲಿ ಇದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:- ಮಾನ್ಯ ಸಭಾಪತಿಯವರೇ, ಸದರಿ ಜಮೀನು ಎಲ್ಲಿ ಇದೆ ಎಂಬ ಬಗ್ಗೆ ನನ್ನ ಬಳಿ ಪಟ್ಟಿ ಇದ್ದು, ಅದನ್ನು ನಂತರ ನಾನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:- ಮಾನ್ಯ ಸಭಾಪತಿಯವರೇ, ಗುತ್ತಿಗೆ ಆಧಾರದ ಮೇರೆಗೆ ಕೆಲಸ ಮಾಡುತ್ತಿರುವಂತಹ ನೌಕರರನ್ನು ಅನುಕಂಪದ ಆಧಾರದ ಮೇರೆಗೆ ಅವರೆಲ್ಲರನ್ನು ಪರಿಗಣಿಸಬೇಕು. ಏಕೆಂದರೆ, ಅವರೆಲ್ಲರೂ ಸಹ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ತಮ್ಮ ಜಮೀನು ಮುಳಗಡೆಯಾದಂತಹ ಸಂತ್ರಸ್ತರಾಗಿರುತ್ತಾರೆ. ಅವೆರಲ್ಲರೂ ಕಳೆದ 15 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿರುತ್ತಾರೆ. ಇತ್ತೀಚೆಗೆ ಬೀದರ್ ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ನೌಕರರಿಗೆ ಏನು ಕನಿಷ್ಠ ವೇತನ ನೀಡಿರುತ್ತಾರೆ, ಅದೇ ರೀತಿ ಇಲ್ಲಿಯೂ ಕನಿಷ್ಠ ವೇತನ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಅದೇ ರೀತಿ, ಸದರಿ ವಿಶ್ವವಿದ್ಯಾಲಯದಲ್ಲಿ ಕೃಷಿ ಉಪಕರಣಗಳಿಗೆ ಸಂಬಂಧಪಟ್ಟಿರುವಂತಹ ವಿಷಯಕ್ಕೆ ಹೇಳುವುದಾದರೆ, 2008ರಲ್ಲಿ ತೆಗೆದುಕೊಂಡಿರುವಂತಹ ಟ್ರಾಕ್ಟರ್ ಅನ್ನು ಇವೊತ್ತಿನ ದಿವಸ ಕೂಡ ಉಪಯೋಗ ಮಾಡುತ್ತಿದ್ದಾರೆ. ಅದೇ ರೀತಿ, ಬಸ್ಸು ಮತ್ತು ಜೀಪುಗಳನ್ನು ಇವೊತ್ತಿನ ದಿವಸ ಕೂಡ ಓಡಿಸುತ್ತಿದ್ದಾರೆ. ಆದರೆ, ಆರ್.ಟಿ.ಓ. ಅಧಿಕಾರಿಗಳು ಸದರಿ ವಾಹನಗಳ ನೋಂದಣಿ ನವೀಕರಣ ಮಾಡುತ್ತಿರುವುದಿಲ್ಲ. ಏಕೆಂದರೆ, 15 ವರ್ಷ ಕಳೆದಂತಹ ಯಾವುದೇ ವಾಹನಗಳಿಗೆ ಸಾರಿಗೆ ಇಲಾಖೆಯಿಂದ ನೋಂದಣಿ ನವೀಕರಣ ಮಾಡುವುದಿಲ್ಲ. ಹಾಗಾಗಿ, ಈ ಎಲ್ಲಾ ವಾಹನಗಳು ಇವೊತ್ತಿನ ದಿವಸ ಜಖಂಗೊಂಡಿರುತ್ತವೆ. ಆದುದರಿಂದ, ಹೊಸ ವಾಹನಗಳನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:- ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಸದಸ್ಯರು ಆಗಲೇ ಕೇಳಿದಂತೆ, ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಜಮೀನಿಗೆ ಸಂಬಂಧಪಟ್ಟ ಪಟ್ಟಿ ನನ್ನ ಬಳಿ ಇದೆ. ಆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಟ್ಟಿಯಲ್ಲಿರುವ ಪ್ರತಿಯೊಂದನ್ನು ಓದುವುದಕ್ಕೆ ಬಹಳ ಸಮಯ ಆಗುತ್ತದೆ. ಆದುದರಿಂದ, ಸುಮಾರು 2028 ಎಕರೆ ಜಮೀನಿನ ಪಟ್ಟಿಯನ್ನು ನಾನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(632) 12.08.2025 11.40 ಮೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

ಪ್ರಶ್ನೆ ಸಂಖ್ಯೆ: 239

ಸಿಂದನೂರು ನಗರಕ್ಕೆ ಕುಡಿಯುವ ನೀರು ಒದಗಿಸುವ ಬಗ್ಗೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಿಂಧನೂರು ನಗರದಿಂದ 15 ಕಿ.ಮೀ ದೂರದಲ್ಲಿರುವ ತುರುವಹಾಳ ಗ್ರಾಮದ ವ್ಯಾಪ್ತಿಯಲ್ಲಿ 251 ಎಕರೆಯ ಬೃಹತ್ ಕೆರೆ ಇದ್ದು, ಈಗಾಗಲೇ 24/7 ಕುಡಿಯುವ ನೀರಿನ ಯೋಜನೆ ಚಾಲ್ತಿಯಲ್ಲಿದ್ದರೂ ಸಹ ಸಿಂಧನೂರು ನಗರಕ್ಕೆ ಐದು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದ್ದು, ಸಮರ್ಪಕವಾಗಿ ನೀರಿನ ಪೂರೈಕೆಯಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (ಕೆ.ಯು.ಐ.ಡಿ.ಎಫ್.ಸಿ) ವತಿಯಿಂದ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ಯೋಜನೆಯಡಿ ಸಿಂಧನೂರು ನಗರದಲ್ಲಿ 24x7 ಕುಡಿಯವ ನೀರು ಸರಬರಾಜು ಕಾಮಗಾರಿಯ ಗುತ್ತಿಗೆಯನ್ನು ಮೆ//ಎಸ್‌ಪಿಎಂಎಲ್ ಇನ್ಫ್ರಾ ಲಿಮಿಟೆಡ್, ನವ ದೆಹಲಿ ರವರಿಗೆ ದಿನಾಂಕ:17-12-2014 ರಂದು ರೂ.80.67 ಕೋಟಿಗೆ (ಕಾರ್ಯಚರಣೆ ಮತ್ತು ನಿರ್ವಹಣೆ ಮೊತ್ತ ರೂ.18.63 ಕೋಟಿಗಳು ಹೊರತುಪಡಿಸಿ) ಗುತ್ತಿಗೆ ನೀಡಲಾಗಿದೆ. ಪರಿಷ್ಕೃತ ಗುತ್ತಿಗೆ ಮೊತ್ತ ರೂ.96.48 ಕೋಟಿ (ಫೇಸ್-1). ಕಾಮಗಾರಿಗಳನ್ನು ಪೂರ್ಣಗೊಳಿಸಲು ಕರಾರಿನಂತೆ ದಿನಾಂಕ:16-06-2017 ಕ್ಕೆ ನಿಗದಿಪಡಿಸಲಾಗಿತ್ತು. ಈ ಯೋಜನೆಯಡಿ ಈ ಕೆಳಕಂಡ 2 ಮುಖ್ಯ ಕಾಮಗಾರಿಗಳು ಇರುತ್ತವೆ. **1. ಸಗಟು ನೀರು ಅಭಿವೃದ್ಧಿ ಕಾಮಗಾರಿಗಳು:**

ಕ್ರ. ಸ.	ಕಾಮಗಾರಿ ವಿವರ	ಗುರಿ	ಪ್ರಗತಿ	ಬಾಕಿ
1	ಜಲಸಂಗ್ರಹಗಾರ (IR)	1	95%	5% (finishing works)
2	ಮೂಲ ಸ್ಥಾವರ	1	100%	--
3	ಯಂತ್ರೋಪಕರಣಗಳು	2 ಸೆಟ್	100%	--
4	700 MM ವ್ಯಾಸದ BWSC Pipe (ಕಿ.ಮೀ)	17.50	17.50	--
5	10 MLD ಜಲ ಶುದ್ಧೀಕರಣಗಾರ	1	95%	5% (finishing works)
6	500 MM to 250 MM DI Rising Main (km)	18.31	18.31	--
7	ಮೇಲೆತ್ತರದ ಜಲಸಂಗ್ರಹಗಾರ (10LL – 3 nos. + 5LL – 2 nos.)	5	5	--

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸಗಟು ಕುಡಿಯುವ ನೀರು ಕಾಮಗಾರಿಯ 2021 ರಲ್ಲಿ ಪೂರ್ಣಗೊಂಡಿದೆ. ಪ್ರಸ್ತುತ ನಗರಸಭೆ ವತಿಯಿಂದ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ.

2. ವಿತರಣಾ ವ್ಯವಸ್ಥೆ:

ನಗರವನ್ನು 7 ವಿತರಣಾ ವಲಯಗಳಾಗಿ ವಿಂಗಡಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

1	ವಿತರಣಾ ಜಾಲ (ಹೆಚ್‌ಡಿಪಿಇ) ಕಿ.ಮೀ	206.07		
	ಸರಬರಾಜು		206.07	-
	ಜೋಡಣೆ		205.5	1.45
	ಚಾಲನೆ		116.96	89.54
2	ಮನೆ ಸಂಪರ್ಕ (ಸಂಖ್ಯೆ)	13946		
	ಸರಬರಾಜು		13946	-
	ಜೋಡಣೆ		12733	1213
	ಚಾಲನೆ		8941	5005
3	Valves (nos.)	670	251	419
4	Flowmeters (nos.)	12	9	3
5	Instrumentation (nos.) fixing & commissioning	35	0	35

ಇದುವರೆಗೆ ಭೌತಿಕವಾಗಿ ಶೇ.85 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದರೂ, ಅದರ ಬಳಕೆ ಶೇ.60 ರಷ್ಟು ಮಾತ್ರ ಉಪಯೋಗದಲ್ಲಿರುತ್ತದೆ. ಇದುವರೆಗೆ ರೂ.86.31 ಕೋಟಿ ವೆಚ್ಚ ಮಾಡಲಾಗಿದೆ.

ಗುತ್ತಿಗೆದಾರರ ವಿಳಂಬದಿಂದ ಗುತ್ತಿಗೆ ಅವಧಿಯನ್ನು 11 ಬಾರಿ ವಿಸ್ತರಿಸಿ, ಅಂತಿಮವಾಗಿ ದಿನಾಂಕ:30/04/2023 ರವರೆಗೆ ವಿಸ್ತರಿಸಲಾಗಿತ್ತು. ಆದರೂ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲವಾಗಿರುತ್ತಾರೆ.

ಡಿಸಂಬರ್-2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿದ ಕಾರಣ ಗುತ್ತಿಗೆ ಕರಾರನ್ನು ರದ್ದುಗೊಳಿಸಲು ದಿನಾಂಕ:27.06.2023 ರಂದು ಉದ್ದೇಶಿಸಿ ನೋಟೀಸು ಜಾರಿಗೊಳಿಸಿ ಬ್ಯಾಂಕ್ ಗ್ಯಾರಂಟಿಗಳನ್ನು ನಗದೀಕರಿಸಲು ಕ್ರಮವಹಿಸಲಾಗಿತ್ತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ದಿನಾಂಕ:13.07.2023 ರಂದು ಗುತ್ತಿಗೆದಾರರು ಸದರಿ ನೋಟೀಸ್ ಹಾಗೂ ಬ್ಯಾಂಕ್ ಗ್ಯಾರಂಟಿಗಳ ನಗಧೀಕರಿಸುವುದನ್ನು ಪ್ರಶ್ನಿಸಿ ಕೊಲ್ಕತ್ತಾ ನ್ಯಾಯಾಲಯದಲ್ಲಿ ತಡೆ ಆಜ್ಞೆ (Injunction Order) ತಂದಿರುತ್ತಾರೆ. Principal City Civil Court, ಕೊಲ್ಕೊತ್ತದಲ್ಲಿ ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಲು ನುರಿತ ವಕೀಲರನ್ನು ನೇಮಿಸಿ, ಮೂಲ ದಾವೆಗೆ ಲಿಖಿತ ಹೇಳಿಕೆ ಹಾಗೂ ಅಂಶವಾರು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ ದಾವೆಯನ್ನು ಸೂಕ್ತವಾದ ದಾಖಲಾತಿಗಳೊಂದಿಗೆ ಪ್ರತಿವಾದ ಮಂಡನೆ ಮಾಡಲಾಯಿತು. ಈ ಮಧ್ಯೆ ದಿನಾಂಕ:30.09.2023 ರಂದು ಗುತ್ತಿಗೆದಾರರು ಆರ್ಬಿಟ್ರೇಟರ್ ಅನ್ನು ನೇಮಕ ಮಾಡಲು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ (ಬೆಂಗಳೂರು) ಸಿವಿಲ್ ಮಿಸಲೇನಿಯಸ್ ಪಿಟಿಷನ್ ಅನ್ನು ಹೂಡಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶ - ಆರ್ಬಿಟ್ರೇಟರ್ ಅನ್ನು ನೇಮಕ ಮಾಡಿ ತಡೆ ಆಜ್ಞೆಯನ್ನು (Injunction Order) ಮುಂದುವರಿಸಿರುವುದು ಮತ್ತು ಗುತ್ತಿಗೆ ಕರಾರಿನಂತೆ, ಆರ್ಬಿಟರೇಷನ್ ನಿಯಮದ ರಿತ್ಯಾ ತಡೆ ಆಜ್ಞೆಯನ್ನು ಸೆಕ್ಷನ್ 17 ರ ಅಡಿಯಲ್ಲಿ ಪಡೆಯಲು ಗುತ್ತಿಗೆದಾರರಿಗೆ ಅರ್ಜಿಯನ್ನು ಆರ್ಬಿಟ್ರೇಟರ್ ರವರಿಗೆ ಸಲ್ಲಿಸಲು ದಿನಾಂಕ:29.02.2024 ರಂದು ಆದೇಶಿಸಲಾಗಿದೆ. ಆರ್ಬಿಟ್ರೇಷನ್ ಪ್ರಗತಿಯಲ್ಲಿದ್ದು, ದಿನಾಂಕ 10.07.2024 ರಂದು 51ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಸ್ಥಳೀಯ ಸಂಸ್ಥೆಯ ಬಾಕಿ ವಂತಿಕೆ ಮೊತ್ತ ಹಾಗೂ ಇತರೆ ಸ್ಥಳೀಯ ಸಂಸ್ಥೆಯ Fund ಬಳಸಿ ಕಾನೂನು ತಜ್ಞರ ಸಲಹೆ ಅನುಸಾರ ಬಾಕಿ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಯವರಿಂದ ಪೂರ್ಣಗೊಳಿಸಲು ಅನುಮೋದಿಸಿರುತ್ತಾರೆ. ದಿನಾಂಕ 15.11.2024 ರಂದು ಅಂದಾಜು ಸಮಿತಿ ಸಭೆಯಲ್ಲಿ ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ತುರ್ತು ಕ್ರಮ ಜರುಗಿಸಲು ಹಾಗೂ ಈ ಸಂಬಂಧ Advocate General ರವರು ಸ್ವತಃ ಮುಂದಿನ ವಿಚಾರಣಾ ದಿನಾಂಕದಂದು ಹಾಜರಾಗಿ ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸಲು Arbitrator ರವರಿಂದ ಅನುಮತಿ ಪಡೆಯಲು ಸೂಚಿಸಿರುತ್ತಾರೆ. ಈ ಮಧ್ಯೆ ಯೋಜನೆಯಡಿ ಅಳವಡಿಸಿ ಚಾಲನೆಯಾಗಿರುವ ಹೊಸ ವಿತರಣಾ ವ್ಯವಸ್ಥೆಯನ್ನು ಹಾಗೂ ಹಾಲಿ ಇರುವ ವಿತರಣಾ ವ್ಯವಸ್ಥೆಯನ್ನು ಉಪಯೋಗಿಸಿಕೊಂಡು ನೀರಿನ ಸೋರುವಿಕೆಯನ್ನು ತಡೆಗಟ್ಟಿ, ನೀರಿನ ವಿತರಣೆಯಲ್ಲಿ ಹೆಚ್ಚಿನ ಕಾರ್ಯಕ್ಷಮತೆಯೊಂದಿಗೆ ಸೋರಿಕೆ ಪ್ರಮಾಣ ಕಡಿಮೆ ಮಾಡಿ ಒಟ್ಟಾರೆ ಸೇವಾ ಅಭಿವೃದ್ಧಿ ಉಪಯೋಗಕ್ಕೆ ತರಲು ಸ್ಥಳೀಯ ಸಂಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ವ್ಯವಸ್ಥೆಯಡಿ ಕ್ರಮ ವಹಿಸಲಾಗುತ್ತಿತ್ತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಅಂದಾಜು ಸಮಿತಿಯ ತೀರ್ಮಾನದಂತೆ, ಮಧ್ಯಂತರ ತಡೆಯಾಜ್ಞೆಯನ್ನು ತೆರವು ಮಾಡುವ ಬಗ್ಗೆ, ಮತ್ತು ಬಾಕಿ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ, ಅಡ್ವೊಕೇಟ್ ಜನರಲ್, (GOK) ರವರು ಆರ್ಬಿಟ್ರೇಟರ್ ರವರ ಮುಂದೆ ಹಾಜರಾಗಿ ಸುಮಾರು 5 ಬಾರಿ ವಾದ ಮಂಡಿಸಿರುತ್ತಾರೆ. ದಿನಾಂಕ:25/06/2025 ಆರ್ಬಿಟ್ರೇಟರ್ ರವರಿಂದ ಬಾಕಿ ಕಾಮಗಾರಿಗಳನ್ನು ಬೇರೆ ಗುತ್ತಿಗೆದಾರರಿಂದ ಕೈಗೆತ್ತಿಗೊಳ್ಳಲು ಅನುಮತಿ ನೀಡಿರುತ್ತಾರೆ (Without Termination, without BG encashment and Claims & Counter Claims kept open till disposal). ದಿನಾಂಕ 10/07/2024 ರಂದು ನಡೆದ ಅಧಿಕಾರಯುತ ಸಮಿತಿ ತೀರ್ಮಾನದಂತೆ ಹಾಗೂ ದಿನಾಂಕ 25/06/2025 ರಂದು ಬಾಕಿ ಕಾಮಗಾರಿಗಳನ್ನು ಕೈಗೊಳ್ಳಲು ಆರ್ಬಿಟ್ರೇಟರ್ ರವರು ಅನುಮತಿ ನೀಡಿರುವಂತೆ ಬಾಕಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿಯಮಾನುಸಾರ ಕ್ರಮ ವಹಿಸಲು ನಗರಸಭೆಗೆ ದಿನಾಂಕ:23/07/2025 ರಂದು ಪತ್ರ ಬರೆಯಲಾಗಿದೆ.
ಆ)	ಸಿಂಧನೂರು ನಗರದ ಜನತೆಯ ಬಹು ನೀರೀಕ್ಷಿತ ಕನಸಿನ ಯೋಜನೆಯಾದ 24/7 ಯಾವಾಗ ಪ್ರಾರಂಭಿಸಲಾಗುವುದು?	ದಿನಾಂಕ:10/07/2024 ರಂದು ನಡೆದ ಅಧಿಕಾರಯುತ ಸಮಿತಿ ತೀರ್ಮಾನದಂತೆ ಹಾಗೂ ದಿನಾಂಕ:25/06/2025 ಆರ್ಬಿಟ್ರೇಟರ್ ರವರಿಂದ ಬಾಕಿ ಕಾಮಗಾರಿಗಳನ್ನು ಬೇರೆ ಗುತ್ತಿಗೆದಾರರಿಂದ ಕೈಗೆತ್ತಿಗೊಳ್ಳಲು ಅನುಮತಿ ನೀಡಿರುವಂತೆ (Without Termination, without BG encashment and Claims & Counter Claims kept open till disposal). ಈ ಯೋಜನೆಯಡಿ ಲಭ್ಯವಿರುವ ಅನುದಾನ ಹಾಗೂ ನಗರಸಭೆಯಿಂದ ಬರಬೇಕಾಗಿರುವ ಬಾಕಿ ವಂತಿಕೆಯೊಂದಿಗೆ ನಗರಸಭೆಯ ಇತರೆ ಸಂಪನ್ಮೂಲಗಳನ್ನು ಬಳಸಿಕೊಂಡು ಸಿಂಧನೂರು ನಗರದ 24x7 ಯೋಜನೆಯ ಬಾಕಿ ಕಾಮಗಾರಿಗಳನ್ನು ನಿಯಮಾನುಸಾರ ಕೈಗೆತ್ತಿಕೊಳ್ಳಲು ನಗರಸಭೆಗೆ ತಿಳಿಸಲಾಗಿದೆ.

ಕಡತ ಸಂಖ್ಯೆ:ವಅಆಇ 143

ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಮ್ಮ ಸಿಂಧನೂರು ನಗರದಿಂದ 15 ಕಿ.ಮೀ. ದೂರದಲ್ಲಿರುವ ತುರುವಹಾಳ ಗ್ರಾಮದ ವ್ಯಾಪ್ತಿಯಲ್ಲಿ 251 ಎಕರೆಯ ಬೃಹತ್ ಕೆರೆ ಇದ್ದು, 2014ನೇ ಇಸವಿಯಲ್ಲಿಯೇ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಸುಮಾರು ಶೇಕಡ 25 ರಷ್ಟು ಮಾತ್ರ ಕನೆಕ್ಷನ್ ಕೊಡುವಂಥ ಕೆಲಸ ಆಗಿದೆ. ಈಗಾಗಲೇ ಕಾಮಗಾರಿ ಪ್ರಾರಂಭಗೊಂಡು ಸುಮಾರು 9 ವರ್ಷಗಳು ಕಳೆದಿದ್ದು, ಇನ್ನೂ ಶೇಕಡ 75 ರಷ್ಟು ಕನೆಕ್ಷನ್ ಕೊಡುವಂಥ ಕೆಲಸ ಬಾಕಿ ಇದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಕಡ 90 ರಿಂದ 95 ರಷ್ಟು ಗುತ್ತಿಗೆದಾರರ ಬಿಲ್ ಪಾವತಿಯಾಗಿದೆ. ಆದಾಗ್ಯೂ ಈ ಸಂಬಂಧ ಕೊಲ್ಕೊತ್ತ ಹೈಕೋರ್ಟ್‌ನಲ್ಲಿ ಕೇಸ್ ಇದೆ. ಜನರಿಗೆ ಶುದ್ಧ ಕುಡಿಯುವ ನೀರನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಅನೇಕ ಕಾಯಿಲೆಗಳಿಗೆ ಜನರು ತುತ್ತಾಗುತ್ತಿದ್ದಾರೆ. ಶುದ್ಧೀಕರಣ ಘಟಕದ capacity ಏನಿದೆ, ಅದರ capacity ಗಿಂತ ಜನಸಂಖ್ಯೆ ಜಾಸ್ತಿಯಾಗಿದೆ. ಆ ಕಾರಣಕ್ಕಾಗಿ ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಇದಕ್ಕೊಂದು ಸಮಿತಿಯನ್ನು ರಚನೆ ಮಾಡಿ, ವೈಫಲ್ಯವನ್ನು ಸರಿಪಡಿಸುವಂಥ ಕೆಲಸವಾಗಬೇಕು. ಸುಮಾರು ರೂ.100 ಕೋಟಿಗಳಷ್ಟು ಅನುದಾನ ಬಿಡುಗಡೆಯಾಗಿದ್ದು, ಅದರ ಕೆಲಸ ಮಾತ್ರ ಸುಮಾರು ಶೇಕಡ 25 ರಷ್ಟಾಗಿದೆ. ಒಟ್ಟು 7 overhead tank ಗಳು ಇದ್ದು, ಅದರಲ್ಲಿ 4 overhead tank ಗಳ ಮೂಲಕ ನೀರು ಹರಿಯುತ್ತಿದ್ದು, ಇನ್ನೂ 3 overhead tank ಗಳಲ್ಲಿ ನೀರು ಹರಿಯುವಂಥ ಕೆಲಸ ಮಾಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ವಿಶೇಷ ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):- ಮಾನ್ಯ ಸಭಾಪತಿಯವರೇ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (ಕೆ.ಯು.ಐ.ಡಿ.ಎಫ್.ಸಿ) ವತಿಯಿಂದ ಸಿಂಧನೂರು ನಗರಕ್ಕೆ ಸಮಗ್ರ ಕುಡಿಯುವ ನೀರು ಯೋಜನೆಗೆ 2014ನೇ ಇಸವಿಯಲ್ಲಿಯೇ ರೂ.100 ಕೋಟಿಗಳಷ್ಟು ಅನುದಾನ ಕೊಟ್ಟಿದ್ದಾರೆ. ಆದರೆ, ಅದರ ಗುತ್ತಿಗೆ ವಹಿಸಿಕೊಂಡವನು ಮೋಸದ ಕಂಪನಿಯವನಾಗಿರುತ್ತಾನೆ. 2022ನೇ ಇಸವಿಯವರೆಗೂ 11 ಸಲ ನವೀಕರಣ ಮಾಡಲಾಗಿತ್ತು. ಏಕೆಂದರೆ, ಆತ ಬಂದು ಸ್ವಲ್ಪ ಕೆಲಸ ಮಾಡಿ, ಮತ್ತೆ ಸಮಯ ತೆಗೆದುಕೊಂಡು ಹೋಗುವಂಥ ಕೆಲಸವೇ ನಡೆದುಕೊಂಡು ಬಂದಿತ್ತು. ಆದ್ದರಿಂದ ನಮ್ಮ ಇಲಾಖೆಯಿಂದ 'ಆತನು ಹಣವನ್ನು forfeit ಮಾಡಿಕೊಂಡು, Bank Guarantee ಸಹ ವಾಪಸ್ಸು ತೆಗೆದುಕೊಳ್ಳಬಾರದು' ಎಂಬ ಕಾರಣಕ್ಕೆ ನೋಟಿಸ್ ನೀಡಿ, ಆತನ ಗುತ್ತಿಗೆಯನ್ನು ರದ್ದುಗೊಳಿಸುತ್ತೇನೆ. ಆದರೆ, ಆತನ ಮೂಲ ಹೆಡ್ ಆಫೀಸ್ ಕೊಲ್ಕೊತ್ತವಾದ ಪ್ರಯುಕ್ತ ಆತನು ಕೊಲ್ಕೊತ್ತ ಹೈ ಕೋರ್ಟ್ ಮೊರೆ ಹೋಗಿ ತಡೆಯಾಜ್ಞೆಯನ್ನು ತರುತ್ತಾನೆ. ತಡೆಯಾಜ್ಞೆ ತದ ನಂತರ ನ್ಯಾಯಾಲಯವು ಒಬ್ಬ ಆರ್ಬಿಟ್ರೇಟರ್‌ರವರನ್ನು ನೇಮಕ ಮಾಡಿ, ಆ ಆರ್ಬಿಟ್ರೇಟರ್‌ರವರು 'ಯಾವುದೇ ಕೆಲಸವನ್ನು ತೆಗೆದುಕೊಳ್ಳಬಾರದು ಮತ್ತು ಆತನ ಗುತ್ತಿಗೆಯನ್ನು ನಾವು ರದ್ದುಗೊಳಿಸಬಾರದು' ಎಂದು ನ್ಯಾಯಾಲಯವು ಆದೇಶ ಮಾಡುತ್ತದೆ. ಆದಾದ ನಂತರ ಖುದ್ದಾಗಿ ನಮ್ಮ ಅಡ್ವೊಕೇಟ್ ಜನರಲ್‌ರವರು ಆರ್ಬಿಟ್ರೇಟರ್‌ರವರ ಮುಂದೆ ಹಾಜರಾಗಿ ಸುಮಾರು 5 ಬಾರಿ ವಾದ ಮಂಡಿಸಿದ್ದು, ಈಗ ಲೆಟೆಸ್ಟ್ ಆಗಿ ಅವರ ಹಣವನ್ನು forfeit ಮಾಡಿಕೊಂಡಿದ್ದು, ನ್ಯಾಯಾಲಯದಿಂದ ಅಂತಿಮ ಆದೇಶ ಬರುವವರೆಗೂ ಹಾಗೆಯೇ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಲಿ ಎನ್ನುವಂಥದ್ದಾಗಿದೆ. "Without Termination, without BG encashment and Claims & Counter Claims kept open till disposal" ಎಂದು ಆದೇಶ ಮಾಡಿ, ಬಾಕಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಈಗ ಅನುಮತಿ ಕೊಟ್ಟಿದ್ದಾರೆ. ಹಿಂದಿನ ಗುತ್ತಿಗೆದಾರನ ಹತ್ತಿರ ರೂ.8 ಕೋಟಿ ನಮ್ಮ ಹಣ ಬಾಕಿ ಇದೆ. ಭೌತಿಕವಾಗಿ ಸಿಂಧನೂರು ನಗರದಲ್ಲಿ ಶೇಕಡ 80 ರಷ್ಟು ಕೆಲಸವಾಗಿದ್ದರೂ ಸಿಂಧನೂರು ನಗರಕ್ಕೆ ಶೇಕಡ 60 ರಷ್ಟು ಮಾತ್ರ ನೀರು ಕೊಡಲು ಸಾಧ್ಯವಾಗಿದ್ದು, ಇನ್ನೂ ಶೇಕಡ 40 ರಷ್ಟು ಜನರಿಗೆ ನೀರು ಕೊಡಲು ಆಗುತ್ತಿಲ್ಲ. ಈಗಾಗಲೇ ಹೊಸ ಎಸ್ಟಿಮೇಟ್ ಮಾಡಲಾಗಿದ್ದು, ಅದಕ್ಕೆ ಸುಮಾರು ರೂ.30 ಕೋಟಿ ಬೇಕಾಗುತ್ತದೆ. ರೂ.8 ಕೋಟಿ ಗುತ್ತಿಗೆದಾರನ ಹತ್ತಿರ ಬಾಕಿ ಮೊತ್ತ ಇದ್ದು, ಉಳಿದ ರೂ.22 ಕೋಟಿ ಹಣವನ್ನು ಹೊಂದಿಸಬೇಕಾಗಿದ್ದು, ನಮ್ಮ ಇಲಾಖೆಯವರು ನಗರಸಭೆಯಿಂದ ಹಣವನ್ನು ಸಂಗ್ರಹಣೆ ಮಾಡಿ, ಕಾಮಗಾರಿ ಮಾಡಬೇಕೆಂದು ಹೇಳುತ್ತಾರೆ. ಆದರೆ, ಅದು ಸಾಧ್ಯವಿಲ್ಲ. ಏಕೆಂದರೆ, ನಗರಸಭೆಯಲ್ಲಿ ಹಣವೇ ಇರುವುದಿಲ್ಲ. ಈ ಸಂಬಂಧ ಆರ್ಥಿಕ ಇಲಾಖೆಗೆ ಪತ್ರ ಬರೆದಿದ್ದು, ರೂ.22 ಕೋಟಿ ಹಣವನ್ನು ತೆಗೆದುಕೊಂಡು, ಮುಂದಿನ 6 ತಿಂಗಳೊಳಗೆ ಉಳಿದ ಶೇಕಡ 40 ರಷ್ಟು ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ. ಆ ಪ್ರಕರಣವು ವಜಾವಾಗಲಿ ಅಥವಾ ಬಿಡಲಿ. ಈಗಾಗಲೇ ನಮಗೆ ಅನುಮತಿ ನೀಡಿರುವುದರಿಂದ ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಬೇರೆ ಗುತ್ತಿಗೆದಾರನಿಗೆ ಈ ಕೆಲಸವನ್ನು ವಹಿಸಿ ಮಾಡಿಕೊಡುತ್ತೇವೆ. ಹಾಗಾಗಿ, ಇನ್ನೂ 6 ತಿಂಗಳು ಸಮಯ ಬೇಕಾಗಿದೆ.

ಶ್ರೀ ಬಸನಗೌಡ ಬಾದರ್ಲಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಿಂಧನೂರು ನಗರದಲ್ಲಿ ಶೇಕಡ 60 ರಷ್ಟು ಜನರು ಕುಡಿಯುವ ನೀರನ್ನು ಉಪಯೋಗಿಸುತ್ತಿದ್ದಾರೆ ಎಂದು ಹೇಳಿದ್ದರು. ಆದರೆ, ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ. 24X7 ಕುಡಿಯುವ ನೀರು ಬಾರದೇ ಸುಮಾರು 8 ದಿವಸಗಳಿಗೊಮ್ಮೆ ಕುಡಿಯುವ ನೀರು ಬರುತ್ತಿದ್ದು, ಇವತ್ತು ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿದೆ. ಸುಮಾರು ರೂ.4,000 ದಿಂದ ರೂ.5,000 ಪಾವತಿಸಿ ಟ್ಯಾಂಕರ್ ಮೂಲಕ ನೀರನ್ನು ಪಡೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಇದಕ್ಕೊಂದು ಸಮಿತಿ ರಚನೆ ಮಾಡಿ, ವಾಸ್ತವ ಸ್ಥಿತಿಯನ್ನು ತೆಗೆದುಕೊಂಡು ಮುಂದಿನ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಸುರೇಶ್:- ಮಾನ್ಯ ಸಭಾಪತಿಯವರೇ, ಆಗಬಹುದು. ಮಾನ್ಯ ಸದಸ್ಯರ ಬೇಡಿಕೆಗೆ ಒಪ್ಪಿ, ಮುಖ್ಯ ಇಂಜಿನಿಯರ್‌ರವರಿಗೆ ಈ ವಿಚಾರವಾಗಿ ತಿಳಿಸಿ ಸಮಿತಿ ರಚನೆ ಮಾಡಿ, ಅದರ ವರದಿಯನ್ನು ತೆಗೆದುಕೊಂಡು ಕೆಲಸ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 255

ಬಾಗಲಕೋಟೆ ಜಿಲ್ಲೆಯ ರೈತರಿಗೆ ವಿಶೇಷ ಪ್ಯಾಕೇಜ್ ಮತ್ತು ಬೆಳೆಗಳ ಶೇಖರಣೆಗೆ ಶೈತ್ಯಾಗಾರ ನಿರ್ಮಿಸುವ ಬಗ್ಗೆ.

ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 255
2. ಸದಸ್ಯರ ಹೆಸರು : ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
4. ಉತ್ತರಿಸುವ ದಿನಾಂಕ : 12-08-2025

ಕ್ರ. ಸಂ.	ವಿಷಯ	ಉತ್ತರ
(ಅ)	ಬಾಗಲಕೋಟೆ ಜಿಲ್ಲೆಯಲ್ಲಿ ಇತ್ತೀಚೆಗೆ ದಾಳಿಂಬೆ ಬೆಳೆಗೆ ದುಂಡಾಣು ರೋಗ, ಕೊಳೆರೋಗ, ಸೊರಗು ರೋಗ, ಕಾಂಡಕೊರಕ ಕೀಟದ ರೋಗಗಳಿಂದ ರೈತರು ಹಾನಿ ಅನುಭವಿಸುತ್ತಿರುವ ಗಂಭೀರ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಷ್ಟಗೊಂಡ ದಾಳಿಂಬೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆಯೇ:	ಸರ್ಕಾರದ ಗಮನಕ್ಕೆ ಬಂದಿದೆ. ಪ್ರಮುಖವಾಗಿ ದುಂಡಾಣು ರೋಗ, ಕೊಳೆರೋಗ, ಸೊರಗು ರೋಗ ಹಾಗೂ ಕಾಂಡಕೊರಕ ಕೀಟಗಳಿಂದ ಅಂದಾಜು 1350 ಹೆಕ್ಟೇರ್ ಪ್ರದೇಶದಲ್ಲಿ ದಾಳಿಂಬೆ ಬೆಳೆಗೆ ಹಾನಿಯಾಗಿರುತ್ತದೆ. ವಯಸ್ಸಾದ ಗಿಡಗಳಲ್ಲಿ ಮತ್ತು ಸಮಗ್ರ ಕೃಷಿ ನಿರ್ವಹಣಾ ಪದ್ಧತಿಗಳನ್ನು ಸಕಾಲದಲ್ಲಿ ಅಳವಡಿಸದೆ ಇರುವ ತಾಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿರುತ್ತದೆ. ದಾಳಿಂಬೆ ಬೆಳೆಗಾರರ ಹಿತದೃಷ್ಟಿಯಿಂದ ಕೆಳಕಾಣಿಸಿದಂತೆ ಕ್ರಮಕೈಗೊಳ್ಳಲಾಗಿದೆ. 1. ಈ ಬೆಳೆಗೆ ಬೀಳುವ ರೋಗ ಮತ್ತು ಕೀಟಗಳ ವಿವರಗಳನ್ನು ಹಾಗೂ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಮಾರ್ಗೋಪಾಯಗಳನ್ನು ರೈತರಿಗೆ ತಲುಪಿಸಲು National Research Center on Pomegranate, Solapur ಹಾಗೂ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವಿಜ್ಞಾನಿಗಳ ತಂಡವು ದಾಳಿಂಬೆ ಬೆಳೆಯುವ ತೋಟಗಳಿಗೆ ಭೇಟಿ ನೀಡಿ ರೈತರಿಗೆ ಸಲಹೆಗಳನ್ನು ನೀಡಿದೆ. 2. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಸಮಗ್ರ ಕೀಟ-ರೋಗ ನಿರ್ವಹಣೆ/ಸಮಗ್ರ ಪೋಷಕಾಂಶ ನಿರ್ವಹಣೆಯಡಿ ಜೈವಿಕ ಕೀಟನಾಶಕ/ಪೋಷಕಾಂಶಗಳು, ಜೈವಿಕ ಗೊಬ್ಬರ, ಸಾವಯವ ಗೊಬ್ಬರ, ಲಘು ಪೋಷಕಾಂಶ, Pheromone traps ಗಳಿಗೆ ರೈತರಿಗೆ ಸಹಾಯಧನ ನೀಡಲಾಗುತ್ತಿದೆ. 3. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಪಕ್ಷಿಗಳಿಂದ ಹಾನಿ ಉಂಟಾಗುವುದನ್ನು ತಪ್ಪಿಸಲು ನಿರೋಧಕ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಬಲೆ ಬಳಸಲು ಸಹಾಯಧನ ನೀಡಲಾಗುತ್ತಿದೆ. 4. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ದಾಳಿಂಬೆ ಬೆಳೆಗೆ ಸಹಾಯಧನ ನೀಡಲಾಗುತ್ತಿದೆ. 5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಬೆಳೆಗಳಲ್ಲಿ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮದಡಿ ನೀರಿನಲ್ಲಿ ಕರಗುವ ರಸಗೊಬ್ಬರ, ಲಘು ಪೋಷಕಾಂಶಗಳ ಮಿಶ್ರಣ ಮತ್ತು ಬೆಳೆ ಸ್ಪೆಷಲ್, ಬೆಳೆ/ಹಣ್ಣು/ಹೂ ಹೊದಿಕೆಗಳಿಗೆ, ಮೋಹಕ/ಜಿಗಟಾದ/ಸೌರಶಕ್ತಿ ಆಧಾರಿತ ಕೃತಕ ಬುದ್ಧಿಯ ಕೀಟ ನಿಯಂತ್ರಕ ಬಲೆಗಳಿಗೆ, ಸೋಲಾರ್ ಪಂಪ್ ಸೆಟ್ ಗಳಿಗೆ ಹಾಗೂ ಸ್ವಯಂ ಚಾಲಿತ ಹವಾಮಾನ ಮುನ್ಸೂಚನಾ ಘಟಕಗಳಿಗೆ ಸಹಾಯಧನ ನೀಡಲಾಗಿರುತ್ತದೆ. 6. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೋಯ್ಲೋತ್ತರ ನಿರ್ವಹಣೆ ಕಾರ್ಯಕ್ರಮದಡಿ ಪ್ಲಾಸ್ಟಿಕ್ ಕ್ರೇಟ್ಸ್/ಕರೊಗೆಟೆಡ್ ಫೈಬರ್ ಬಾಕ್ಸ್ ಹಾಗೂ ಫಾರ್ಮ್ ಗೇಟ್ ಗಳಿಗೆ (Farm Gate) ಸಹಾಯಧನ ನೀಡಲಾಗುತ್ತಿದೆ. 7. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಆವರಣದಲ್ಲಿ ದಾಳಿಂಬೆ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ದಾಳಿಂಬೆ ಬೆಳೆಗಾರರಿಗೆ ತರಬೇತಿ ನೀಡಲಾಗುತ್ತಿದೆ. 8. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯು ಅಭಿವೃದ್ಧಿ ಪಡಿಸಲಾದ "ದಾರಕ್ಷಕ" ಮತ್ತು "ಟ್ರೈಕೋಕವಚ" ಎಂಬ ಜೈವಿಕ ಶಿಲೀಂಧ್ರ ನಾಶಕಗಳನ್ನು ಬಳಸಲು ರೈತರಿಗೆ ತಿಳಿಸಲಾಗುತ್ತಿದೆ. 9. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ದಾಳಿಂಬೆ ತೋಟಗಳಲ್ಲಿ ಸಮರ್ಪಕ ನೀರಿನ ನಿರ್ವಹಣೆ ಮಾಡಲು ಎಲ್ಲಾ ವರ್ಗದ ರೈತರಿಗೆ 02 ಹೆಕ್ಟೇರ್ ವರೆಗೆ ಶೇ.90 ರಷ್ಟು ಮತ್ತು 2.1-05 ಹೆಕ್ಟೇರ್ ವರೆಗೆ ಶೇ.45 ರಷ್ಟು ಸಹಾಯಧನ ನೀಡಲಾಗುತ್ತಿದೆ. ದಾಳಿಂಬೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಕಲ್ಪಿಸುವ ಕಾರ್ಯಕ್ರಮ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		It has come to the notice of the Government. . Mainly bacterial blight, root rot, wilt and shot-hole borer infection has affected nearly 1350 hectare of pomegranate. The infection is severe in old and in orchards where Integrated management practices have not been followed on time. The following measures have been taken in the interest of pomegranate growers. 1. In order to provide information to the farmers about the pest and disease affected in this crop and measures to be taken to control this, a team of scientists from University of Horticultural Sciences, Bagalkote and National Research Center on Pomegranate, Solapur have visited fields and have given advise to the farmers 2. Under Mission of Integrated Development of Horticulture (MIDH) scheme, Integrated pest & disease management/ Integrated nutrient management programme subsidy for Biopesticides, bio fertilizers, organic fertilizers, micronutrients, pheromone traps are provided. 3. Under Mission of Integrated Development of Horticulture (MIDH) scheme, subsidy for Anti bird nets is provided in order to prevent bird damage.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		4. Under Mission of Integrated Development of Horticulture (MIDH) scheme subsidy for the New Area expansion programme and maintenance for Pomegranate is provided. 5. Under Rashtriya Krishi Vikas Yojana (RKVY), Special Incentives for Horticulture crops subsidy has been provided for Water Soluble Fertilizers, Micronutrient Mixture/ Crop specials, Crop / Fruit /Flower cover, Canopy Management, Pheromone/sticky/ Solar powered artificially intelligent pest control traps, Solar pump set and Automated weather stations. 6. Under Rashtriya Krishi Vikas Yojana (RKVY), Post-harvest management component subsidies is provided for Plastic crates/Corrugated fiber boxes and Farm gate. 7. A Center of Excellence for Pomegranate has been established on the premises of the University of Horticultural Sciences, Bagalkot, and training is being provided to pomegranate growers. 8. Farmers are advised to use 'Dharakshak' and 'Trichokavach' – bio fungicide product developed by the University of Horticultural Sciences, Bagalkot. 9. Under Pradhana Mantri Krishi Sinchayi Yojana (PMKSY), for all categories of

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		farmer's drip irrigation subsidy is provided at 90% up to 2 hectare and 45% for 2.1-5 hectare. There is no programme for special package to pomegranate growers.
(ಆ)	ದಾಳಿಂಬೆ ಜೊತೆಗೆ ಪೇರಲಾ, ದ್ರಾಕ್ಷಿ ಇತ್ಯಾದಿ ಹಣ್ಣುಗಳು ಅಲ್ಲದೇ ಅರಿಸಿನ ಹಾಗೂ ಕೆಂಪುಮೆಣಸಿನ ಕಾಯಿ ಕೂಡಾ ಹೆಚ್ಚಾಗಿ ಬೆಳೆಯುತ್ತಿದ್ದು, ಅವುಗಳಿಗೆ ಯೋಗ್ಯ ದರ ದೊರಕದೆ ಇರುವ ಸಂದರ್ಭಗಳಲ್ಲಿ ಶೇಖರಿಸಿ ಮುಧೋಳ ಹಾಗೂ ಜಮಖಂಡಿ ತಾಲ್ಲೂಕಿನಲ್ಲಿ ಬಹಳ ದಿನಗಳಿಂದ ರೈತರು ಶೈತ್ಯಾಗಾರಕ್ಕಾಗಿ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?	ಸರ್ಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ಕೈಗೊಂಡ ಕ್ರಮವು ಕೆಳಗಿನಂತಿವೆ. 1. ಶೈತ್ಯಾಗಾರಗಳನ್ನು ನಿರ್ಮಿಸಲು ರೈತರು/ ಉದ್ದಿಮೆದಾರರು/ಕಂಪನಿಗಳಿಗೆ ಸಹಾಯಧನ ನೀಡಲಾಗುತ್ತಿದೆ. ಏಕ ಉತ್ಪನ್ನದ ಶೇಖರಣೆಗೆ ನಿರ್ಮಿಸಲಾಗುವ ಶೀತಲಗೃಹದ ಘಟಕ ವೆಚ್ಚ ಪ್ರತಿ ಮೆಟ್ರಿಕ್ ಟನ್‌ಗೆ ರೂ.9,600/- ಗಳಾಗಿದ್ದು, ಇದರಲ್ಲಿ ಶೇ.35 ರಷ್ಟು ಎಂದರೆ ಪ್ರತಿ ಮೆಟ್ರಿಕ್ ಟನ್ ಗೆ ರೂ.3,360/-ಗಳ ಸಹಾಯಧನ ನೀಡಲಾಗುವುದು ಹಾಗೂ ಬಹು ಉತ್ಪನ್ನದ ಶೇಖರಣೆಗೆ ನಿರ್ಮಿಸಲಾಗುವ ಶೀತಲಗೃಹದ ಘಟಕ ವೆಚ್ಚ ಪ್ರತಿ ಮೆಟ್ರಿಕ್ ಟನ್‌ಗೆ ರೂ.12,000/- ಗಳಾಗಿದ್ದು, ಇದರಲ್ಲಿ ಶೇ.35 ರಷ್ಟು ಎಂದರೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.4,200/-ಗಳ ಸಹಾಯಧನ ನೀಡಲಾಗುವುದು. ಕನಿಷ್ಠ 500 ಮೆಟ್ರಿಕ್ ಟನ್ ನಿಂದ ಗರಿಷ್ಠ 5,000 ಮೆಟ್ರಿಕ್ ಟನ್ ಸಾಮರ್ಥ್ಯದ ಶೈತ್ಯಾಗಾರ ನಿರ್ಮಿಸಲು ಅವಕಾಶವಿರುತ್ತದೆ. ಈ ಶೀತಲಗೃಹದಲ್ಲಿ ಅಧಿಕ ಬೆಳೆ ಬಂದ ಸಂದರ್ಭಗಳಲ್ಲಿ ದಾಳಿಂಬೆ, ದ್ರಾಕ್ಷಿ, ಅರಿಶಿನ, ಕೆಂಪು ಮೆಣಸಿನಕಾಯಿ ಇತ್ಯಾದಿ ಉತ್ಪನ್ನಗಳನ್ನು ಶೇಖರಣೆ ಮಾಡಬಹುದು. 2. ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಸ್ತುತ 5,365 ಮೆಟ್ರಿಕ್ ಟನ್ ಸಾಮರ್ಥ್ಯದ 06 ಶೀತಲಗೃಹಗಳು ಕಾರ್ಯನಿರ್ವಹಿಸುತ್ತಿದ್ದು, ಬಾಗಲಕೋಟೆ ತಾಲ್ಲೂಕಿನಲ್ಲಿ 02 ಹಾಗೂ ಜಮಖಂಡಿ ತಾಲ್ಲೂಕಿನಲ್ಲಿ 04 ಶೀತಲಗೃಹಗಳಿವೆ. It has come to the notice of the Government. Following measures have been taken. 1. Farmers/entrepreneurs/companies are provided subsidy for construction of cold storage units. For Single commodity cold

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		store rooms of unit cost of Rs. 9,600/- per metric ton, 35% i.e. Rs. 3,360/- per metric ton subsidy will be provided. For Multi-commodity cold store rooms of unit cost Rs. 12,000/- per metric ton, 35% i.e. Rs. 4200/- per metric ton subsidy will be provided. Minimum capacity of 500 metric ton to a maximum of 5,000 metric ton will be eligible. Produce like pomegranate, grapes, turmeric, red chilly etc. can be stored in these cold storage facility 2. At present, there are 06 cold storage units with a capacity of 5,365 MT in Bagalkot district of which 06 units are in Bagalkot taluk and 04 units are in Jamakhandi Taluk.

ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ತಾವು ಸಹ ನಮ್ಮ ಜಿಲ್ಲೆಯವರೇ ಆಗಿದ್ದು, ತಮಗೂ ತಿಳಿದಿರುವಂತೆ ವಿಶೇಷವಾಗಿ ತೋಟಗಾರಿಕೆಯೂ ಬಾಗಲಕೋಟೆ, ವಿಜಯಪುರ ಒಳಗೊಂಡಂತೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಹಣ್ಣು-ಹಂಪಲುಗಳಾದ ದ್ರಾಕ್ಷಿ, ಪೇರಲಾ, ದಾಳಂಬೆ ಇವೆಲ್ಲವನ್ನೂ ವಿಫುಲವಾಗಿ ಬೆಳೆಯುತ್ತಾರೆ. ನಮ್ಮ ರಾಜ್ಯದಲ್ಲಿ ಈ ದಾಳಂಬೆ ಹಣ್ಣಿಗೆ ಮೊದಲನೆ ಅಥವಾ ಎರಡನೆ ಸ್ಥಾನ ನಮ್ಮ ಜಿಲ್ಲೆಯಲ್ಲಿದೆ ಎಂಬುದು ತಮಗೂ ತಿಳಿದಿದೆ. ದಾಳಂಬೆ ಹಣ್ಣನ್ನು ರಾಷ್ಟ್ರದ ಶೇಕಡ 10 ರಷ್ಟು ಉತ್ಪಾದನೆಯನ್ನು ಉತ್ತರ ಕರ್ನಾಟಕದಲ್ಲಿ ಬೆಳೆಯುತ್ತಾರೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಪೌಷ್ಟಿಕ ಅಂಶದ ಅನುಕೂಲತೆಗಾಗಿ ಬೇಡಿಕೆ ಇದ್ದು, ದಾಳಂಬೆ ಬೆಳೆಗೆ 'ಡಾಲರ್ ಬೆಲೆ' ಇದೆ ಎಂದು ಎಲ್ಲಾ ಕಡೆಗಳಲ್ಲಿ ಹೇಳುತ್ತಾರೆ. ಬಿಜಾಪುರ, ಬಾಗಲಕೋಟೆ, ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ, ಗದಗ, ತುಮಕೂರು, ರಾಯಚೂರು ಇವೆಲ್ಲಾ ಕಡೆಗಳಲ್ಲಿ ಸುಮಾರು 2 ಲಕ್ಷದಿಂದ 3 ಲಕ್ಷ ಟನ್‌ಗಳಷ್ಟು ಈ ದಾಳಂಬೆ ಬೆಳೆಯನ್ನು ಬೆಳೆಯುತ್ತಾರೆ. ಆದರೆ, ನಿರಂತರವಾಗಿ ಈ ಬೆಳೆಗೆ ಬರುತ್ತಿರುವಂಥ ರೋಗಗಳಿಗೆ ರೈತ ಸೋತು ಹೋಗುತ್ತಿದ್ದು, ಸರ್ಕಾರಕ್ಕೆ ಇವೆಲ್ಲವೂ ಗೊತ್ತಿದೆ. ಪ್ರತಿ ವರ್ಷ ದಾಳಂಬೆ ಬೆಳೆಗೆ ದುಂಡಾಣು ರೋಗ, ಕೊಳೆರೋಗ, ಸೊರಗು ರೋಗ, ಕಾಂಡಕೊರಕ ಕೀಟದ ರೋಗಗಳೆಲ್ಲವೂ ನಿರಂತರವಾಗಿ ಬರುತ್ತಿರುತ್ತದೆ. ಇದಕ್ಕೆ ಏನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕೆಂಬುದರ ಕುರಿತು ಸರ್ಕಾರದ ಹತ್ತಿರ ಉತ್ತರ ಇಲ್ಲ. ಆದರೆ, ವಾಸ್ತವವಾಗಿ ಸರ್ಕಾರ ಏನು ಕ್ರಮಕೈಗೊಳ್ಳುತ್ತದೆ ಎಂಬುದರ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಅದೇನೆಂದರೆ, ಔಷಧಿ ರೂಪದಲ್ಲಿ, ಸಹಾಯಧನದ ರೂಪದಲ್ಲಿ, ಗೊಬ್ಬರದ ರೂಪದಲ್ಲಿ ಎಂದು ಸುಮಾರು ೨ ರೀತಿಯಲ್ಲಿ ವಿವರಣೆಯನ್ನು ಕೊಟ್ಟಿದ್ದಾರೆ. ವಾಸ್ತವವಾಗಿ ಇವೆಲ್ಲವೂ ಸೇರಿದರೆ ಪ್ರತಿ ಹೆಕ್ಟೇರ್‌ಗೆ ೨೨೦೦ ಮಾತ್ರ ಸಹಾಯಧನ ಕೊಡುತ್ತಾರೆ. ಒಂದು ಹೆಕ್ಟೇರ್‌ನಲ್ಲಿ ದಾಳಂಬೆ ಬೆಳೆ ಬೆಳೆಯಬೇಕೆಂದರೆ, ಕನಿಷ್ಠ ರೂ.೫ ಲಕ್ಷಗಳಷ್ಟು ಹಣವನ್ನು ಖರ್ಚು ಮಾಡಿ, ೨ ವರ್ಷ ರೈತ ಕಾಯಬೇಕಾಗುತ್ತದೆ. ಆದರೆ, ಬೆಳೆ ಬರುವಂಥ ಸಂದರ್ಭದಲ್ಲಿ ಈ ರೋಗಗಳಿಗೆ ಬೆಳೆಗಳು ತುತ್ತಾಗುವುದರಿಂದ ರೈತ ಸೋತು ಹೋಗುತ್ತಿದ್ದಾನೆ. ಬೆಳೆ ಸಹಿತ ಬರುವುದಿಲ್ಲ, ಕೀಟಗಳು ಆ ಬೆಳೆಯ ಮೇಲೆ ಕೂರುವುದರಿಂದ ಇಡೀ ಬೆಳೆಯೇ ನಾಶವಾಗುತ್ತಿದೆ. ಇದು ಬಹಳ ಗಂಭೀರವಾದ ಸ್ಥಿತಿಯಾಗಿದೆ. ಈಗಾಗಲೇ ಪ್ರಶ್ನೆಯಲ್ಲಿ ಏನೇನು ಪ್ಯಾಕೇಜ್ ಕೊಡಲಾಗುತ್ತಿದೆ ಎಂಬುದನ್ನು ಕೇಳಿದ್ದು, ಸರ್ಕಾರದವರು ಯಾವುದೇ ರೀತಿಯ ಪ್ಯಾಕೇಜ್ ಕೊಡುವುದಿಲ್ಲ ಎನ್ನುವಂಥ ಸ್ಪಷ್ಟ ಉತ್ತರವನ್ನು ಕೊಟ್ಟಿದ್ದಾರೆ. ಹಾಗಾಗಿ, ನಾನು ಹೇಳುವುದೇನೆಂದರೆ, ದಕ್ಷಿಣ ಕರ್ನಾಟಕ ಮತ್ತು ಕೆನರಾ ಕರ್ನಾಟಕ ಭಾಗದಲ್ಲಿ ತೆಂಗಿನ ಬೆಳೆಯ ಇಳುವರಿಗಾಗಿ ಮತ್ತು ಅದರ ಪೋಷಕಾಂಶಕ್ಕಾಗಿ, ಗೊಬ್ಬರಕ್ಕಾಗಿ, ಬೇರೆ ಬೇರೆ ವಿಧಗಳಲ್ಲಿ ಕನಿಷ್ಠ ರೂ.೩೬,೦೦೦ ಗಳಂತೆ ಎರಡು ವರ್ಷಗಳಿಗೊಮ್ಮೆ ಕೊಡುತ್ತಾರೆ. ಹಾಗಾಗಿ, ನಾನು ಹೇಳುವುದೇನೆಂದರೆ, ಪ್ರತಿ ಹೆಕ್ಟೇರ್‌ಗೆ ಕನಿಷ್ಠ ಪಕ್ಷ ರೂ.1 ಲಕ್ಷಗಳಾದರೂ ಕೊಟ್ಟರೆ, ರೈತರು ಬದುಕುತ್ತಾರೆ. ದಯವಿಟ್ಟು ಕೊಡಬೇಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವುದು ಸಂಪೂರ್ಣವಾಗಿ ಅರಿವಾಗಿದ್ದು, ಪ್ರಮುಖವಾಗಿ ದಾಳಂಬೆ ಬೆಳೆಯ ಬಗ್ಗೆ ಸಾಕಷ್ಟು ಕಾಳಜಿಯನ್ನಿಟ್ಟುಕೊಂಡಿದ್ದಾರೆ. ಒಣ ಭೂಮಿಯಲ್ಲಿ ಹೆಚ್ಚಾಗಿ ದ್ರಾಕ್ಷಿ, ದಾಳಂಬೆ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ, ನೀರಿನ ಪ್ರಮಾಣ ಅಧಿಕವಾದರೂ ದಾಳಂಬೆಗೆ ರೋಗ ಬರುತ್ತದೆ. ಅದೇ ನಿಟ್ಟಿನಲ್ಲಿ ನೀರು ಕಡಿಮೆ ಪ್ರಮಾಣದಲ್ಲಿದ್ದರೆ ಒಳ್ಳೆಯ ಬೆಳೆ ಬರುತ್ತದೆ. ಈ ಹಿಂದಿನ ಬೆಳೆಯನ್ನು ನೋಡಿರುವ ಹಾಗೆ ಅಜ್ಜ-ಮುತ್ತಜ್ಜನವರೆಲ್ಲರೂ ಮಾಡಿದಂಥ ಸಾಲಗಳೆಲ್ಲವೂ ತೀರಿ ಹೋಗಿದ್ದವು. ಅಂತಹ ಒಳ್ಳೆಯ ಬೆಳೆ ಬಂತು, ದರ ಸಹ ಬಂತು. ಆ ನಿಟ್ಟಿನಲ್ಲಿ ಮಾನ್ಯ ಸದಸ್ಯರು ಕೇಳಿರುವಂತೆ ಮುಖ್ಯವಾಗಿ ಬಾಗಲಕೋಟೆ ಜಿಲ್ಲೆಯಲ್ಲಿ ೧೯೬೦ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯನ್ನು ಬೆಳೆಯುತ್ತಿದ್ದಾರೆ ಮತ್ತು ವಿವಿಧ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(633) 12.08.2025/11.50/ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಮುಂದು):-

ಮತ್ತೊಂದು ವಿಚಾರವೇನೆಂದರೆ, ಉಪಕರಣ ಮತ್ತು ಔಷಧಿಗಳ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಈಗಾಗಲೇ ನಮ್ಮ ಇಲಾಖೆಯಿಂದ distribute ಮಾಡುತ್ತಿದ್ದೇವೆ. ಇದು ಪ್ಯಾಕೇಜ್ ಸಿಸ್ಟಂ ಎನ್ನುವುದರ ಬದಲು individual ಆಗಿ ಕೊಡುತ್ತಿದ್ದೇವೆ. ಅವರಿಗೆ individual ಆಗಿ ಏನೇನು ಬೇಕೋ ನಮ್ಮ ಇಲಾಖೆಯ ಮಾಹಿತಿ ಪ್ರಕಾರ ಕೊಡುತ್ತಿದ್ದೇವೆ. ತೆಂಗಿನ ಬೆಲೆ ಜಾಸ್ತಿ ಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರ ಬೇಡಿಕೆಯಾಗಿದೆ. ಅದರ ಬಗ್ಗೆ ನನಗೆ ಸಂಪೂರ್ಣವಾದ ಅರಿವು ಇದೆ. ಆದಷ್ಟು ಬೇಗ ಅದನ್ನು ಪರಿಶೀಲನೆ ಮಾಡುವ ಬಗ್ಗೆ ನಾವು ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಕೇಳಿರುವುದೇನೆಂದರೆ, ತೆಂಗಿಗೆ ಪ್ಯಾಕೇಜ್ ಏನು ಕೊಡುತ್ತಿದ್ದಾರೆ, ಈ ತೆಂಗಿನ ಪ್ಯಾಕೇಜ್‌ಗೆ ಕೇಂದ್ರ ಸರ್ಕಾರದ Coconut Development Board ನಿಂದ ಸಹಾಯಧನ ಸಿಗುವಂತಹದ್ದು ಪ್ಯಾಕೇಜ್ ಕೂಡ ಇದೆ. ಅದೇ ರೀತಿ ಕೊಡುತ್ತಿದ್ದಾರೆ. ನಾನು ಹೇಳುವುದೇನೆಂದರೆ, ಉತ್ತರ ಕರ್ನಾಟಕದಲ್ಲಿ ಬೆಳೆಯುವಂತಹ ಅನೇಕ ಬೆಳೆಗಳಾದ ದ್ರಾಕ್ಷಿ, ಪೇರಳೆ, ದಾಳಿಂಬೆ ಇನ್ನೂ ಅನೇಕ ರೀತಿ ಹೊಸ ಹೊಸ ತಳಿಗಳನ್ನು ಸಂಶೋಧನೆ ಮಾಡಿ ನಮ್ಮ ಭಾಗದಲ್ಲಿ ವಿಫಲವಾಗಿ ಬೆಳೆಯುತ್ತಿದ್ದಾರೆ. ಅಡಿಕೆ ಬೆಳೆ ಬೆಳೆಯುವುದನ್ನು ಇವತ್ತಿನ ದಿವಸ ಪ್ರಾರಂಭವಾಗಿದೆ. ಇವತ್ತಿನ ದಿವಸ ನಮ್ಮ ತೋಟದಲ್ಲಿ ಗೋಡಂಬಿ ಗಿಡವನ್ನು ಕೂಡ ಹಾಕಿದ್ದೇವೆ. ಇವತ್ತು ಪ್ರಯೋಗ ಮಾಡುವಂತಹ ರೈತರಿಗೆ ಅನೂಕೂಲ ಮಾಡಿಕೊಡಬೇಕು. ರೈತರು ಏನಾದರೂ ಕೈಸುಟ್ಟುಕೊಂಡರೆ, ಅವರನ್ನು ಉಳಿಸುವವರು ಯಾರು? ಅವರ ನೆರವಿಗೆ ಬರುವಂತಹ ಕೆಲಸವನ್ನು ಸರ್ಕಾರ ಏನಾದರೂ ಮಾಡಬೇಕಲ್ಲ. ಪ್ರಯತ್ನ ಮಾಡುವಂತಹದ್ದು ಬೇರೆ. ಇದಕ್ಕೆ ನೇರವಾಗಿ ಪ್ಯಾಕೇಜ್ ಮಾಡಿ, ಅಕಸ್ಮಾತ್ ಆಗಿ ಲುಕ್ಸಾನವಾದರೆ, ಇಂತಿಷ್ಟು ಕೊಡುತ್ತೇವೆ ಎಂದು ಒಂದು ಪ್ಯಾಕೇಜ್ ಆದರೂ ಕೊಡಿ. ಕೇಂದ್ರ ಸರ್ಕಾರಕ್ಕೆ ಒಂದು ಪ್ರಸ್ತಾವನೆಯಾದರೂ ಕಳುಹಿಸಿ. ಕೇಂದ್ರ ಸರ್ಕಾರದ ಮೂಲಕ ತರಸಿಕೊಡಿ. ರೈತರ ನೆರವಿಗೆ ಬರಬೇಕಾಗಿರುವುದು ಸರ್ಕಾರದ ಕರ್ತವ್ಯವಲ್ಲವೇ? ಇದರ ಬಗ್ಗೆ ಯೋಚನೆ ಮಾಡುವಂತಹದ್ದಲ್ಲ, ಇದನ್ನು ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಿ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನೇನು ಕೇಳಿದ್ದಾರೆ. ಈಗ ಒಂದೊಂದು ಪ್ಯಾಕೇಜ್ ಅಂದರೆ ಎಲ್ಲವೂ ಬರುತ್ತದೆ. ರೋಗ ಯಾವುದು ಇದೆ ಎಂಬುದಕ್ಕೆ ನಾವು ಔಷಧಿ ಕೊಡಬೇಕು. ರೋಗ ಇರುವಂತಹ ಔಷಧಿಗಳನ್ನು ಈಗ ಕೊಡುತ್ತಿದ್ದೇವೆ. ಪ್ಯಾಕೇಜ್ ಎಂದರೆ ಎಲ್ಲವೂ ಸೇರಿಕೊಂಡು ಬಿಡುತ್ತದೆ. ಆ ನಿಟ್ಟಿನಲ್ಲಿ ನಾನು ಇಲಾಖೆಯ ಜೊತೆಗೆ ಚರ್ಚೆ ಮಾಡಿ, ನಾನು ಸೂಕ್ತವಾದ ನಿರ್ಧಾರ ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಪಿ.ಹೆಚ್. ಪೂಜಾರ್:– ಮಾನ್ಯ ಸಭಾಪತಿಯವರೇ, ಎಲ್ಲವೂ ಸೇರಿ ರೂ.೨,೫೦೦/– ಮಾತ್ರ ಕೊಟ್ಟಿರುವಂತಹದ್ದು. ಅದಕ್ಕಿಂತ ಹೆಚ್ಚಾಗಿ ಸರ್ಕಾರ ಕೊಟ್ಟಿಲ್ಲ. ಎಲ್ಲಾ ಸೇರಿ ರೂ.೨,೫೦೦/–ಗಳನ್ನು ಮಾತ್ರ ಕೊಟ್ಟಿದ್ದೀರಿ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:– ಮಾನ್ಯ ಸಭಾಪತಿಯವರೇ, water soluble fertilizer ಗೆ, protected cultivation ಗೆ, ಆಮೇಲೆ open cultivation ಗೆ ಈ ರೀತಿಯ ವಿವಿಧ ಹಂತದಲ್ಲಿ

ಶ್ರೀ ಪಿ.ಹೆಚ್. ಪೂಜಾರ್:– ಮಾನ್ಯ ಸಚಿವರೇ, ಎಲ್ಲವೂ ಸೇರಿ ರೂ.೨,೫೦೦/– ಮಾತ್ರ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:– ಮಾನ್ಯ ಸದಸ್ಯರೇ, ಜಾಸ್ತಿ ಬರುತ್ತದೆ.

ಶ್ರೀ ಪಿ.ಹೆಚ್. ಪೂಜಾರ್:– ಮಾನ್ಯ ಸಚಿವರೇ, ದಯವಿಟ್ಟು, ಅದಕ್ಕೆ ಒಂದು ಲಕ್ಷ ಪ್ಯಾಕೇಜ್ ಮಾಡಿಕೊಡಿ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್:– ಆಯಿತು.

ಶ್ರೀ ಪಿ.ಹೆಚ್. ಪೂಜಾರ್:– ಮಾನ್ಯ ಸಚಿವರೇ, ಬೆಳೆ ಬೆಳೆಯಬೇಕೋ, ಬೆಳೆಬಾರದೋ ಹೇಳಿ.

ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್:– ಮಾನ್ಯ ಸದಸ್ಯರೇ, ಕೇಂದ್ರ ಸರ್ಕಾರಕ್ಕೆ ನಾವು ಮತ್ತು ನೀವು ಜೊತೆಗೆ ಹೋಗಿ ಬರೋಣ.

ಶ್ರೀ ಪಿ.ಹೆಚ್. ಪೂಜಾರ್:– ಅದಕ್ಕೆ cold storage ಮಾಡಿಕೊಡಿ.

ಸಭಾಪತಿಯವರು:– ಮಾನ್ಯ ತಳವಾರ್ ಸಾಬಣ್ಣನವರೇ ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಪಿ.ಹೆಚ್. ಪೂಜಾರ್;– ಮಾನ್ಯ ಸಭಾಪತಿಯವರೇ, ನನ್ನದೊಂದು ಉಪ ಪ್ರಶ್ನೆ ಇದೆ. ನಾನು ಇನ್ನೂ ಉಪ ಪ್ರಶ್ನೆಯನ್ನೇ ಕೇಳಿಲ್ಲ.

ಸಭಾಪತಿಯವರು:– ಮಾನ್ಯ ಸದಸ್ಯರೇ, ಈಗ ಸಮಯವಿಲ್ಲ.

ಶ್ರೀ ಪಿ.ಹೆಚ್. ಪೂಜಾರ್:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

ಸಭಾಪತಿಯವರು:– ಮಾನ್ಯ ಸದಸ್ಯರೇ, ತಾವು ಆನಂತರ ಹೇಳಿ. ಶ್ರೀ ಪಿ.ಹೆಚ್. ಪೂಜಾರ್‌ರವರೇ ಈಗ ತಾವು ಕುಳಿತುಕೊಳ್ಳಿ. ಮಾನ್ಯ ತಳವಾರ್ ಸಾಬಣ್ಣನವರೇ, ತಮ್ಮ ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 261

ಮೆ: ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯು ರೈತರಿಂದ ಕೃಷಿ ಜಮೀನು ಖರೀದಿಸಿ ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವ ಕುರಿತು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದ ಮೆ: ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ಹಂಗನಹಳ್ಳಿ, ಊಡಗಿ, ಹುಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರಿಂದ ಕೃಷಿ ಜಮೀನು ಖರೀದಿಸಿ ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಆದೇಶ ಸಿಐ 30 ಎಸ್‌ಪಿಐ 2010, ದಿನಾಂಕ 25.02.2010 ರಲ್ಲಿ ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆಯಲ್ಲಿ ಮೆ॥ ರಾಜಶ್ರೀ ಸಿಮೆಂಟ್ಸ್ ಲಿ, ಕಂಪನಿಗೆ ಸಿಮೆಂಟ್ ಘಟಕ ಸ್ಥಾಪನೆಗೆ ಅನುಮೋದನೆ ನೀಡಿದ್ದು, ಸದರಿ ಯೋಜನೆಗೆ 573.15 ಎಕರೆ ಜಮೀನು ಘಟಕ ಸ್ಥಾಪನೆಗೆ ಮತ್ತು 398.23 ಎಕರೆ ಜಮೀನು ಮೈನಿಂಗ್‌ಗಾಗಿ ಕೆ.ಎಲ್.ಆರ್ ಕಾಯ್ದೆಯಡಿ ಖರೀದಿಸಲು ಅನುಮೋದನೆ ನೀಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಕಂಇ 76 ಎಲ್‌ಆರ್‌ಎಂ 2010, ದಿನಾಂಕ 27.11.2010 ರಲ್ಲಿ 572.24 ಎಕರೆ ಜಮೀನನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ ಕಂಇ 81 ಎಲ್‌ಆರ್‌ಎಂ 2010, ದಿನಾಂಕ 25.01.2011 ರಲ್ಲಿ 383.39 ಎಕರೆ ಜಮೀನನ್ನು ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961 ರ ಕಲಂ 109 ರಡಿ ಭೂಮಿ ಖರೀದಿಸಲು ಅನುಮತಿ ನೀಡಲಾಗಿದೆ. ಕಂದಾಯ ಇಲಾಖೆಯು ತನ್ನ ಅನಧಿಕೃತ ಟಿಪ್ಪಣಿ ದಿನಾಂಕ 06.08.2025 ರಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತದೆ: "ಮೆ: ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ಹಂಗನಹಳ್ಳಿ, ಊಡಗಿ, ಹುಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರಿಂದ ಕೃಷಿ ಜಮೀನು ಖರೀದಿಸಲು ಕಂಪನಿ ಮತ್ತು ರೈತರ ಮಧ್ಯೆ ನೇರ ಒಪ್ಪಂದ ಮಾಡಿಕೊಂಡಿರುತ್ತಾರೆ. ಅದರ ಪ್ರಕಾರ ರೈತರಿಗೆ ಹಣ ನೀಡಿ ಜಮೀನುಗಳನ್ನು ಖರೀದಿಸಲಾಗಿರುತ್ತದೆ".

ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರ ನನಗೆ ಸಮಾಧಾನವಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಈ ಪ್ರಶ್ನೆ ಇರುವುದೇನೆಂದರೆ, ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದಲ್ಲಿರುವ ಅಲ್ಟ್ರಾಟೆಕ್ ಸಿಮೆಂಟ್ಸ್ ಲಿಮಿಟೆಡ್ ಕಂಪನಿಗೆ ಸಂಬಂಧಪಟ್ಟಿರುವಂತಹದ್ದು. ಅದನ್ನು ಸಾಮಾನ್ಯವಾಗಿ ರಾಜಶ್ರೀ ಸಿಮೆಂಟ್ಸ್ ಕಂಪನಿ ಎಂದು ಕರೆಯುತ್ತಿದ್ದಾರೆ. ಈ ಅಲ್ಟ್ರಾಟೆಕ್ ಸಿಮೆಂಟ್ಸ್ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕವನ್ನು ಸ್ಥಾಪನೆ ಮಾಡಬೇಕಾದರೆ, ಹಂಗನಹಳ್ಳಿ, ಊಡಗಿ, ಹುಡಾ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಬಿ) ಮತ್ತು ನೃಪತುಂಗ ನಗರ ಈ ಹಳ್ಳಿಗಳಿಂದ ಸರಿ ಸುಮಾರು ಒಂದೂವರೆ ಸಾವಿರ ಎಕರೆ ಜಮೀನನ್ನು ಪಡೆದು ಪ್ರತಿ ಎಕರೆಗೆ ರೂ.3,50,000/- ಗಳನ್ನು ರೈತರಿಗೆ ಕೊಟ್ಟು, ಖರೀದಿ ಮಾಡಿರುತ್ತಾರೆ. ಅದರೆ ಅದೇ ಪಕ್ಕದ ಗ್ರಾಮದಲ್ಲಿ ಸ್ಥಾಪನೆಯಾಗಿರುವ ದಾಲ್ಮಿಯಾ ಎನ್ನುವಂತಹ ಒಂದು ಕಂಪನಿಯು ಸುಮಾರು ರೂ.8,00,000/- ಗಳಷ್ಟು ಕೊಟ್ಟಿದೆ. ಅದೇ ಅಲ್ಟ್ರಾಟೆಕ್ ಕಂಪನಿಯು, ಸರ್ಕಾರ ಬೀಳು ಭೂಮಿ ತೆಗೆದುಕೊಳ್ಳಬೇಕಾದರೆ, ರೂ.8,00,000/- ಕೊಟ್ಟಿದ್ದಾರೆ.

ಸಭಾಪತಿಯವರು:- ಮಾನ್ಯ ಸದಸ್ಯರೇ, ಸರ್ಕಾರ ಏನು ಮಾಡಬೇಕೆಂಬ ಬಗ್ಗೆ ಹೇಳಿ.

ಡಾ॥ ತಳವಾರ್ ಸಾಬಣ್ಣ:- ಮಾನ್ಯ ಸಭಾಪತಿಯವರೇ, ರೈತರ ಪ್ರಶ್ನೆ ಇರುವುದೇನೆಂದರೆ, ಹೆಚ್ಚುವರಿಯಾಗಿ ಪರಿಹಾರ ಕೊಡಿ ಎನ್ನುವುದೊಂದು.

ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿ ಹೋಗುವುದು ಬೇಡ. ನಾನು ಎಲ್ಲವನ್ನೂ ಉತ್ತರದಲ್ಲಿ ಕೊಟ್ಟಿದ್ದೇನೆ. ರಾಜಶ್ರೀ ಸಿಮೆಂಟ್ಸ್ ಲಿಮಿಟೆಡ್ ಕಂಪನಿಗೆ ಸಿಮೆಂಟ್ ಘಟಕ ಸ್ಥಾಪನೆ ಅನುಮೋದನೆ ನೀಡಿದ್ದು, ಸದರಿ ಯೋಜನೆಗೆ 573.15 ಎಕರೆ ಜಮೀನು ಘಟಕ ಸ್ಥಾಪನೆಗೆ ಮತ್ತು 398.23 ಎಕರೆ ಜಮೀನು ಮೈನಿಂಗ್‌ಗಾಗಿ ಸಲುವಾಗಿ ಇವತ್ತಿನ ದಿವಸ ತೆಗೆದುಕೊಂಡಿರುವಂತಹದ್ದು. ಇದು ಕಂದಾಯ ಇಲಾಖೆಯ ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961, ರ ಕಲಂ 109 ರ ಅಡಿಯಲ್ಲಿ ಭೂಮಿಯನ್ನು ಖರೀದಿ ಮಾಡಿರುತ್ತಾರೆ. ಆಗ ಗೈಡೆನ್ಸ್ ವ್ಯಾಲ್ಯೂ ಪ್ರಕಾರ ಅವೊತ್ತಿನ ದಿವಸ ಮಾರುಕಟ್ಟೆ ದರ ರೂ. 70,000/- ಇದ್ದಾಗ, ಕಂಪನಿ ಮತ್ತು ರೈತರು ಪರಸ್ಪರ ಒಪ್ಪಿಕೊಂಡು ರೂ.3,50,000/- ಕ್ಕೆ ಒಪ್ಪಂದ ಮಾಡಿಕೊಂಡು ಭೂಮಿ ಖರೀದಿ ಮಾಡಿರುತ್ತಾರೆ. ಆಗ ಪ್ರತಿಯೊಂದು ಮನೆಗೂ ಒಂದು ಉದ್ಯೋಗ ಎಂಬುದರ ಬಗ್ಗೆ ಚರ್ಚೆಯಾದಾಗ, ಭೂಮಾಲೀಕರು ಅಷ್ಟೊಂದು ಮಾಡುವುದಕ್ಕಾಗುವುದಿಲ್ಲ ಎಂದು ಅವೊತ್ತಿನ ದಿವಸ ಬಹಳ ದೀರ್ಘವಾಗಿ ಮಾತುಕತೆಯಾದ ನಂತರ ಉದ್ಯೋಗದ ಬದಲಾಗಿ ರೂ.2,75,000/- ಗಳನ್ನು ಹೆಚ್ಚುವರಿಯಾಗಿ ನೀಡುವುದಾಗಿ ಕಂಪನಿಯವರು ಒಪ್ಪಿಕೊಳ್ಳುತ್ತಾರೆ. ಹೀಗಾಗಿ ಜಮೀನಿಗೆ ರೂ.3,50,000/- ಗಳನ್ನು ಉದ್ಯೋಗದ ಬದಲಾಗಿ ರೂ.2,75,000/- ಗಳನ್ನು ಹೆಚ್ಚುವರಿಯಾಗಿ ನೀಡಲು ಪರಸ್ಪರವಾಗಿ ಒಪ್ಪಿಕೊಂಡಿರುವಂತಹದ್ದು. ತದನಂತರ ಹೆಚ್ಚಿನ ಪರಿಹಾರ ರೂ. 1,75,000/- ಪರಸ್ಪರವಾಗಿ ಒಪ್ಪಿರುವಂತಹದ್ದು. ಹೀಗಾಗಿ ಒಟ್ಟು ರೂ.8,00,000/- ಭೂ ಪರಿಹಾರ ಇವತ್ತಿನ ದಿವಸ ಅವರು ಪರಸ್ಪರ ಮಾಡಿಕೊಂಡಿರುವಂತಹದ್ದು ಇರುತ್ತದೆ.

ಡಾ॥ ತಳವಾರ್ ಸಾಬಣ್ಣ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತೆ, ರೈತರು ಮತ್ತು ಕಂಪನಿಯ ಮಧ್ಯೆ ಅಲ್ಲಿರುವಂತಹ ಏಜೆಂಟರು ಮಾಡಿರುವಂತಹ ಎಡವಟ್ಟು. ಅಲ್ಲಿರುವಂತಹ ಎಲ್ಲಾ ರೈತರು, ಅತಿ ಹಿಂದುಳಿದ ಜನಾಂಗದವರು ಇದ್ದಾರೆ. ಅವರಿಗೆ ಮಾರುಕಟ್ಟೆಯ ಬೆಲೆ ಗೊತ್ತಿಲ್ಲ. Guidance Value ಬೇರೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಮಾರುಕಟ್ಟೆಯ ದರನೇ ಬೇರೆ ಇರುತ್ತದೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ತಾವು ಮುಂದೆ ಮುಖ್ಯಮಂತ್ರಿಯಾಗುವಂತಹವರು ಮತ್ತು ನಾನು ಕೂಡ ತಾವು ಮುಖ್ಯಮಂತ್ರಿಯಾಗಬೇಕೆನ್ನುವ ಆಸೆಯನ್ನು ಇಟ್ಟುಕೊಂಡಿರುವಂತಹವನು. ಈ ಒಂದು ಗಂಭೀರವಾದ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಂದು ವೇಳೆ ರೈತರಿಗೆ ತೃಪ್ತಿಕರವಾದಂತಹ ಬೆಲೆ ಕೊಟ್ಟಿದ್ದರೆ, 1712 ದಿವಸ ...

ಸಭಾಪತಿಯವರು:– ತಾವು ಆಗ ಕೇಳುವರಂತೆ ಬಿಡಿ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, 1,712 ದಿವಸ ಅಂದರೆ ಐದು ವರ್ಷ ಸರದಿ ಉಪವಾಸ ಸತ್ಯಾಗ್ರಹ ರೈತರು ಸೇಡಂ ತಾಲ್ಲೂಕಿನಲ್ಲಿ ಮಾಡಿದ್ದಾರೆ. ಅವರಿಗೆ ತೃಪ್ತಿ ಏನಾದರೂ ಆಗಿದ್ದರೆ, 2015 ರಿಂದ 2020 ರವರೆಗೆ ಐದು ವರ್ಷಗಳ ಕಾಲ ಈ ಒಂದು ಸತ್ಯಾಗ್ರಹ ಏತಕ್ಕೆ ಮಾಡುತ್ತಿದ್ದರು?

ಸಭಾಪತಿಯವರು:– ಮಾನ್ಯ ಸದಸ್ಯರೇ ಏನು ಮಾಡಬೇಕೆಂಬ ಬಗ್ಗೆ ಹೇಳಿ.

ಡಾ॥ ತಳವಾರ್ ಸಾಬಣ್ಣ:–ಮಾನ್ಯ ಸಭಾಪತಿಯವರೇ, ಈ ಒಂದು ಸತ್ಯಾಗ್ರಹದಲ್ಲಿ ಇಪ್ಪತ್ತೆರಡು ಜನ ರೈತರು ಸಾವನ್ನಪ್ಪಿದ್ದಾರೆ. ಅವರಿಗೆ ಪರಿಹಾರ ಕೊಟ್ಟಿಲ್ಲ ಮತ್ತು ಅವರ ಕುಟುಂಬಕ್ಕೆ ಪರಿಹಾರ ಕೊಟ್ಟಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುವುದೇನೆಂದರೆ, ತಮ್ಮೊಂದಿಗೆ ಚರ್ಚಿಸಿದಂತೆ ಇಲಾಖೆಯ ಅಧಿಕಾರಿಗಳ ತಂಡವನ್ನು ಕಳುಹಿಸಿ. ಏಕೆಂದರೆ, ಅಲ್ಲಿ ಹಲವಾರು ಸಮಸ್ಯೆಗಳಿವೆ. ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.

ಸಭಾಪತಿಯವರು:–ಮಾನ್ಯ ಸದಸ್ಯರೇ, ತಮ್ಮ ಪ್ರಶ್ನೆ ಕೇಳಿ.

ಡಾ॥ ತಳವಾರ್ ಸಾಬಣ್ಣ:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನ ಪ್ರಶ್ನೆ ಮುಗಿಯಿತು.

ಸಭಾಪತಿಯವರು:– ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರ ಹೇಳುತ್ತಾರೆ ಬಿಡಿ.

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 109 ರಡಿಯಲ್ಲಿ ಇವತ್ತಿನ ದಿವಸ ಭೂಮಿಯನ್ನು ಖರೀದಿ ಮಾಡಿದ್ದಾರೆ. ಪರಸ್ಪರ ಒಪ್ಪಂದ ಮಾಡಿಕೊಂಡು ರೂ.3,70,000/– ಮಾರುಕಟ್ಟೆ ದರವಿದ್ದಾಗ ರೂ.3,50,000/– ಗಳಿಗೆ ಮತ್ತು in lieu of employment ರೂ, 2,75,000/– ಗಳನ್ನು ಪಡೆದುಕೊಂಡಿದ್ದಾರೆ. ತದನಂತರ ರೂ.1,75,000/– ಗಳು ಒಟ್ಟು 8,00,000/– ಗಳನ್ನು ಪಡೆದುಕೊಂಡಿದ್ದಾರೆ. ಕಂದಾಯ ಇಲಾಖೆಯವರು ಕೂಡ ಮಾಹಿತಿಯನ್ನು ಕೊಟ್ಟಿದ್ದಾರೆ. ಕಂಪನಿ ಮತ್ತು ರೈತರ ನೇರ ಒಪ್ಪಂದದ ಮೂಲಕ ಭೂಮಿಯನ್ನು ಖರೀದಿಸುವಂತಹ ಕಂದಾಯ ಇಲಾಖೆಯ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 109(1) ರಡಿಯಲ್ಲಿ ಉಲ್ಲಂಘನೆಯಾಗಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಕಂದಾಯ ಇಲಾಖೆಯು ಕೂಡ ಹೇಳಿದೆ. ಕೆಲವು ಕಂಪನಿಯವರು ಮಾತ್ರ ಹೆಚ್ಚುವರಿ ಭೂ ಪರಿಹಾರವನ್ನು ಎಲ್ಲಾ ರೈತರಿಗೆ ನೀಡಲಾಗಿದೆ. ಕೆಲವರು ಕೇಳಿದ್ದರಿಂದ ಎಲ್ಲವನ್ನೂ ನೀಡಲಾಗಿದೆ. Ease of Doing Business ಇರುತ್ತದೆ. ..... ರೂ. ರೂ.70,000/– ಒಳಗೆ ರೂ.3,50,000/– ಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಸ್ಪರ ಒಪ್ಪಂದವನ್ನು ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 109 ರಡಿಯಲ್ಲಿ ಭೂಮಿಯನ್ನು ಮಾಡಿಕೊಂಡಿರುವಂತಹದ್ದು. ನಾವು ನೀವೂ ಮಾಡಿಕೊಂಡಿರುವಂತಹದ್ದಲ್ಲ, ಕಲಂ 109 ರಡಿಯಲ್ಲಿ ಭೂಮಿಯನ್ನು ಖರೀದಿ ಮಾಡಿರುವಂತಹದ್ದು. ಹೀಗಾಗಿ, ಈ ರೀತಿ...

ಶ್ರೀ ಥಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಈಗ ಬೇರೆ ಬೇರೆ ಕಡೆ ಜಮೀನುಗಳನ್ನು ತೆಗೆದುಕೊಂಡು, ಏರ್‌ಪೋರ್ಟ್‌ಗೆ ರೂ.5,00,000/- ಜಾಗ ಖರೀದಿಯಾಗಿರುವಂತಹದ್ದನ್ನು ನಾವು ನೋಡಿದ್ದೇವೆ. ಈಗ 1.50 ಕೋಟಿ ರೂಪಾಯಿಗಳಿಂದ 2 ಕೋಟಿ ರೂಪಾಯಿಗಳವರೆಗೆ ಹೆಚ್ಚುವರಿ ಪರಿಹಾರವನ್ನು ರೈತರಿಗೆ ಕೊಟ್ಟಿದೆ. ಆ ರೀತಿ ರೈತರಿಂದ ಭೂಮಿಯನ್ನು ಖರೀದಿ ಮಾಡುವಾಗ ನಾಲ್ಕು ಪಟ್ಟು ಕೊಟ್ಟು ತೆಗೆದುಕೊಳ್ಳಬೇಕೆಂಬುದು ಇದೆ. ಆ ಕಾರಣದಿಂದ ರೈತರಿಗೆ ಸ್ವಲ್ಪ ಹಣ ಕೊಟ್ಟರೆ ಏನೂ loss ಆಗುವುದಿಲ್ಲ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಸಭಾಪತಿಯವರೇ, ಭೂಸುಧಾರಣಾ ಕಾಯ್ದೆ ಆಗಿರುವಂತಹ ಮುಂಚೆ ಇದು 2010ರಲ್ಲಿ ಆಗಿರುವಂತಹದ್ದು. 2013ರಲ್ಲಿ ಭೂಸ್ವಾಧೀನ ಕಾಯ್ದೆ ಬಂತು. 2010ರಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961 ರ ಕಲಂ 109 ರಡಿಯಲ್ಲಿ ಭೂಮಿಯನ್ನು ಖರೀದಿ ಮಾಡಿರುವಂತಹದ್ದು. ಪರಸ್ಪರ ಒಪ್ಪಂದದ ಮೇರೆಗೆ ಅಂದರೆ consent ಮೇಲೆ ರೂ.70,000/- ಗಳು ಮಾರುಕಟ್ಟೆ ದರ ಇದ್ದಾಗ, ರೂ.3,50,000/- ಗಳನ್ನು ಕೊಟ್ಟು ಪಡೆದುಕೊಂಡಿದ್ದಾರೆ. ಪ್ರತಿ ಮನೆಗೊಬ್ಬರಿಗೆ ಉದ್ಯೋಗ ಕೊಡಬೇಕೆಂಬ ಸಂದರ್ಭದಲ್ಲಿ ಅಷ್ಟೊಂದು ಉದ್ಯೋಗಕ್ಕೆ ಕಟ್ಟಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ.

(ಮುಂದು)

(634) 12.08.2025 12.00 ಟಿಸಿಹೆಚ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಂ.ಬಿ.ಪಾಟೀಲ್ (ಮುಂದು)

ಅದರ ಬದಲಿಗೆ ಇವರಿಗೆ ರೂ. 2,75,000ಗಳು ಕೊಡುವಂತೆ ಬಹಳ ಸುದೀರ್ಘವಾಗಿ ಮಾತುಕತೆ ಮಾಡಿಕೊಂಡಿದ್ದು, ಅವರಿಬ್ಬರ understanding ನಲ್ಲಿ ಆಗಿರುತ್ತದೆ. ಒಂದು ಬಾರಿ ರೂ.3 ಲಕ್ಷ ರೂಪಾಯಿಗಳು, ಇನ್ನೊಂದು ಬಾರಿ ರೂ. 2,75,000ಗಳನ್ನು ಕೊಟ್ಟಿದ್ದಾರೆ. ತದನಂತರ ಅವರು ಮಾತುಕತೆ ಮಾಡಿಕೊಂಡು ಮತ್ತೆ ರೂ. 1,75,000 ಗಳು ಹೆಚ್ಚಿನ ಪರಿಹಾರವನ್ನು ಕೊಟ್ಟಿದ್ದಾರೆ. ಒಟ್ಟು ರೂ. 8 ಲಕ್ಷ ರೂಪಾಯಿಗಳಷ್ಟು ಪರಿಹಾರ ಕೊಟ್ಟಿದ್ದಾರೆ. ಇವತ್ತಿನ ದಿವಸ ಕೆಲವೇ ರೈತರು ಭೂ ಪರಿಹಾರವನ್ನು ಕೇಳಿದ್ದರು. ಕೇಳದೇ ಇದ್ದವರಿಗೂ ಕೂಡ ಭೂ ಪರಿಹಾರವನ್ನು ಕೊಟ್ಟಿದ್ದಾರೆ. ಇದು ವಾಸ್ತವ ಸಂಗತಿ. Section 109 ರಲ್ಲಿ . . .

ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ರೂ. 2,75,000 ಗಳನ್ನು ಕೊಟ್ಟರೆ ಅವರ ಜೀವನಕ್ಕೆ ಸಾಕಾಗುತ್ತದೆಯೇ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

ಸಭಾಪತಿಯವರು:– ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಿಸಿದಂತೆ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಸಭಾಪತಿಯವರು:– ಆಯಿತು. ಡಾ.ತಳವಾರ್ ಸಾಬಣ್ಣನವರೇ ತಾವು ಒಂದು ಪತ್ರ ಕೊಡಿ.

ಡಾ.ತಳವಾರ್ ಸಾಬಣ್ಣ (ನಾಮನಿರ್ದೇಶಿತರು):– ಮಾನ್ಯ ಸಭಾಪತಿಯವರೇ, ಆಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ.253
ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರುಗಳ ಗೌರವಧನ ಹೆಚ್ಚಳ ಕುರಿತು

	ಪ್ರಶ್ನೆ	ಉತ್ತರ
ಅ	ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಸದಸ್ಯರ ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಗೌರವಧನವನ್ನು ಹೆಚ್ಚಿಸುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು;	ಪ್ರಸ್ತುತ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. 2023-24 ರ ಸಾಲಿನಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನವನ್ನು ಪರಿಷ್ಕರಿಸಿ ಹೆಚ್ಚಳ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ಗೌರವಧನವನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ಒಪ್ಪಿರುವುದಿಲ್ಲ. ಆರ್ಥಿಕ ಇಲಾಖೆ ಅನುಮೋದನೆ ನೀಡದ ಕಾರಣ ಈ ಹಂತದಲ್ಲಿ ಗೌರವಧನ ಪರಿಷ್ಕರಣೆ ಸಾಧ್ಯವಾಗುವುದಿಲ್ಲ.
ಆ	ಸದರಿ ಸದಸ್ಯರ ಗೌರವಧನವನ್ನು ಈ ಹಿಂದೆ ಯಾವಾಗ ಪರಿಷ್ಕರಿಸಲಾಗಿತ್ತು (ವಿವರ ನೀಡುವುದು);	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರ ಗೌರವಧನವನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 156 ಎಂಎಲ್ಆರ್ 2015; ದಿನಾಂಕ:15/09/2016 ರನ್ವಯ ಪರಿಷ್ಕರಿಸಲಾಗಿರುತ್ತದೆ. (ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ)
ಇ	ಪ್ರಸ್ತುತ, ಸದರಿ ಸದಸ್ಯರ ಗೌರವಧನ ಎಷ್ಟು ಇದೆ (ವಿವರ ನೀಡುವುದು)?	ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರಿಗೆ ಪ್ರಸ್ತುತ ಸರ್ಕಾರದ ಆದೇಶದ ಸಂಖ್ಯೆ:ನಅಇ 156 ಎಂಎಲ್ಆರ್ 2015; ದಿನಾಂಕ:15/09/2016 ರನ್ವಯ ಪಾವತಿಸುತ್ತಿರುವ ಗೌರವಧನದ ವಿವರ:

ನಗರ ಸ್ಥಳೀಯ ಸಂಸ್ಥೆಗಳು	ಅಧ್ಯಕ್ಷ	ಉಪಾಧ್ಯಕ್ಷ	ಸ್ಥಾಯಿ ಸಮಿತಿ ಸದಸ್ಯ	ಸದಸ್ಯ	ನಾಮ ನಿರ್ದೇಶನ ಸದಸ್ಯರು
ನಗರಸಭೆ - 1	12000	8000	400	4000	4000
ನಗರಸಭೆ - 2	8000	4000	400	2000	2000
ಪುರಸಭೆ	4800	2400	300	1200	1200
ಪಟ್ಟಣ ಪಂಚಾಯಿತಿ	3200	1600	200	800	800

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ಪ್ರಶ್ನೆ	ಉತ್ತರ
ಅ	ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಸದಸ್ಯರ ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಗೌರವಧನವನ್ನು ಹೆಚ್ಚಿಸುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು;	ಪ್ರಸ್ತುತ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. 2023-24 ರ ಸಾಲಿನಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರಿಗೆ ಪ್ರಸ್ತುತ ನೀಡುತ್ತಿರುವ ಗೌರವಧನವನ್ನು ಪರಿಷ್ಕರಿಸಿ ಹೆಚ್ಚಳ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ಗೌರವಧನವನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ಒಪ್ಪಿರುವುದಿಲ್ಲ. ಆರ್ಥಿಕ ಇಲಾಖೆ ಅನುಮೋದನೆ ನೀಡದ ಕಾರಣ ಈ ಹಂತದಲ್ಲಿ ಗೌರವಧನ ಪರಿಷ್ಕರಣೆ ಸಾಧ್ಯವಾಗುವುದಿಲ್ಲ.
ಆ	ಸದರಿ ಸದಸ್ಯರ ಗೌರವಧನವನ್ನು ಈ ಹಿಂದೆ ಯಾವಾಗ ಪರಿಷ್ಕರಿಸಲಾಗಿತ್ತು (ವಿವರ ನೀಡುವುದು);	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರ ಗೌರವಧನವನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 156 ಎಂಎಲ್ಆರ್ 2015; ದಿನಾಂಕ:15/09/2016 ರನ್ವಯ ಪರಿಷ್ಕರಿಸಲಾಗಿರುತ್ತದೆ. (ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ)
ಇ	ಪ್ರಸ್ತುತ, ಸದರಿ ಸದಸ್ಯರ ಗೌರವಧನ ಎಷ್ಟು ಇದೆ (ವಿವರ ನೀಡುವುದು)?	ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರಿಗೆ ಪ್ರಸ್ತುತ ಸರ್ಕಾರದ ಆದೇಶದ ಸಂಖ್ಯೆ:ನಅಇ 156 ಎಂಎಲ್ಆರ್ 2015; ದಿನಾಂಕ:15/09/2016 ರನ್ವಯ ಪಾವತಿಸುತ್ತಿರುವ ಗೌರವಧನದ ವಿವರ:

ನಗರ ಸ್ಥಳೀಯ ಸಂಸ್ಥೆಗಳು	ಅಧ್ಯಕ್ಷ	ಉಪಾಧ್ಯಕ್ಷ	ಸ್ಥಾಯಿ ಸಮಿತಿ ಸದಸ್ಯ	ಸದಸ್ಯ	ನಾಮ ನಿರ್ದೇಶನ ಸದಸ್ಯರು
ನಗರಸಭೆ - 1	12000	8000	400	4000	4000
ನಗರಸಭೆ - 2	8000	4000	400	2000	2000
ಪುರಸಭೆ	4800	2400	300	1200	1200
ಪಟ್ಟಣ ಪಂಚಾಯಿತಿ	3200	1600	200	800	800

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು / ಉಪ ಮಹಾಪೌರರು / ಅಧ್ಯಕ್ಷ / ಉಪಾಧ್ಯಕ್ಷ ಮತ್ತು ಸದಸ್ಯರುಗಳ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವ ಧನ ಹೆಚ್ಚಿಸುವ ಕುರಿತು.

ಓದಲಾಗಿದೆ: 1)ಸರ್ಕಾರದ ಆದೇಶ ಸಂಖ್ಯೆ: ನಅಇ 63 ಎಂಎನ್ಇ 98, ದಿನಾಂಕ:09.03.1999.
2)ಸರ್ಕಾರದ ಆದೇಶ ಸಂಖ್ಯೆ:ನಅಇ 114 ಎಂಎಲ್ಆರ್ 2002 ದಿನಾಂಕ:03.05.2005.
3)ಸರ್ಕಾರದ ಆದೇಶ ಸಂಖ್ಯೆ:ನಅಇ 94 ಎಂಎಲ್ಆರ್ 2010 ದಿನಾಂಕ:31.08.2010.
4)ಆಯುಕ್ತರು, ಮಹಾನಗರಪಾಲಿಕೆ, ಕಲಬುರ್ಗಿ, ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಇವರುಗಳ ಪ್ರಸ್ತಾವನೆ.
5)ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಕಚೇರಿಯ ಪತ್ರಸಂಖ್ಯೆ:ಪೌನಿ/ಇತರೆ/ಸಿಆರ್/46/2015-16, ದಿನಂಕ:11.08.2015.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) (2) ಮತ್ತು (3)ರ ಆದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರ ಮಾಸಿಕ ಗೌರವಧನವನ್ನು ನಿಗಧಿಪಡಿಸಿ/ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ (4) ಆಯುಕ್ತರು, ಮಹಾನಗರಪಾಲಿಕೆ, ಕಲಬುರ್ಗಿ, ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಇವರುಗಳ ಪ್ರಸ್ತಾವನೆ ಹಾಗೂ ಮೇಲೆ ಓದಲಾದ (5)ರ ನಿರ್ದೇಶಕರು, ಪೌರಾಡಳಿತ ನಿರ್ದೇಶನಲಯ, ಬೆಂಗಳೂರು ಇವರ ಪ್ರಸ್ತಾವನೆಯಲ್ಲಿ, ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪ ಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಮಾಸಿಕ ಗೌರವ ಧನವನ್ನು ಹೆಚ್ಚಿಸಲು ಹಾಗೂ ಪ್ರಸ್ತಾವನೆಯನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವಧನವನ್ನು ಪರಿಷ್ಕರಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 156 ಎಂಎಲ್ಆರ್ 2015, ದಿ:15.09.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರುಗಳ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವಧನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಹಾಗೂ ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

ಕ್ರ ಸಂ	ಹುದ್ದೆ	ಪರಿಷ್ಕೃತ ಗೌರವಧನ (ರೂ. ಗಳಲ್ಲಿ)
	ಮಹಾನಗರಪಾಲಿಕೆ	
1.	ಮಹಾಪೌರರು	16,000/-
2.	ಉಪ ಮಹಾಪೌರರು	10,000/-
3.	ಸದಸ್ಯರು	6,000/-
4.	ಸ್ಥಾಯಿ ಸಮಿತಿ ಸದಸ್ಯರು	400/- (ಮಾಸಿಕ ರೂ. 800-00 ಮೀನದಂತೆ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ನಗರಸಭೆಗಳು	
1.	ಅಧ್ಯಕ್ಷರು (ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು)	12,000/-
2.	ಉಪಾಧ್ಯಕ್ಷರು (ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು)	8,000/-
3.	ಸದಸ್ಯರು (ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು)	4,000/-
4.	ಅಧ್ಯಕ್ಷರು (ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು)	8,000/-
5.	ಉಪಾಧ್ಯಕ್ಷರು (ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು)	4,000/-
6.	ಸದಸ್ಯರು (ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು)	2,000/-
7.	ಸ್ಥಾಯಿ ಸಮಿತಿ ಸದಸ್ಯರು	400/- (ಮಾಸಿಕ ರೂ.800-00 ಮೀರದಂತೆ)
	ಪುರಸಭೆಗಳು	
1.	ಅಧ್ಯಕ್ಷರು	4,800/-
2.	ಉಪಾಧ್ಯಕ್ಷರು	2,400/-
3.	ಸದಸ್ಯರು	1,200/-
4.	ಸ್ಥಾಯಿ ಸಮಿತಿ ಸದಸ್ಯರು	300/- (ಮಾಸಿಕ ರೂ.600-00 ಮೀರದಂತೆ)
	ಪಟ್ಟಣ ಪಂಚಾಯತಿ	
1.	ಅಧ್ಯಕ್ಷರು	3,200/-
2.	ಉಪಾಧ್ಯಕ್ಷರು	1,600/-
3.	ಸದಸ್ಯರು	800/-
4.	ಸ್ಥಾಯಿ ಸಮಿತಿ ಸದಸ್ಯರು	200/- (ಮಾಸಿಕ ರೂ.400-00 ಮೀರದಂತೆ)

ಷರತ್ತುಗಳು:

1. ಈ ಗೌರವಧನದ ವೆಚ್ಚವನ್ನು ಆಯಾಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು. ಸರ್ಕಾರದಿಂದ ಈ ಬಗ್ಗೆ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.
2. ಸ್ಥಾಯಿ ಸಮಿತಿ ಸದಸ್ಯರು, ಪ್ರತಿ ತಿಂಗಳಿಗೆ ಗರಿಷ್ಠ ಎರಡು ಸಭೆಯ ಭತ್ಯೆಗೆ ಮಾತ್ರ ಅರ್ಹರಿರುತ್ತಾರೆ.
3. ಮುಂದಿನ ಐದು ವರ್ಷದವರೆಗೆ ಗೌರವಧನವನ್ನು/ಭತ್ಯೆಗಳನ್ನು ಹೆಚ್ಚಿಸುವ ಅಥವಾ ಪರಿಷ್ಕರಿಸುವ ಬಗ್ಗೆ ಪರಿಗಣಿಸುವಂತಿಲ್ಲ.

Scanned with OKEN Scanner

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 674 ಸೇ-3/2016 ದಿನಾಂಕ:02.08.2016ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದಿಕ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸ ಸೌಧ ಬೆಂಗಳೂರು- ಮುಂದಿನ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 250 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲು ಕೋರಲಾಗಿದೆ.

ಪ್ರತಿ:
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
4. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕೆ.ಯೂ.ಐ.ಡಿ.ಎಫ್.ಸಿ. ಬೆಂಗಳೂರು.
6. ಆಯುಕ್ತರು, ಎಲ್ಲಾ ಮಹಾನಗರಪಾಲಿಕೆಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ.
9. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
10. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
11. ಎಲ್ಲಾ ಜಿಲ್ಲಾ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ.
12. ಎಲ್ಲಾ ನಗರಸಭೆಗಳ ಪೌರಾಯುಕ್ತರು.
13. ಎಲ್ಲಾ ಪುರಸಭೆಗಳ / ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳು.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಕೆಳಮಟ್ಟದಲ್ಲಿ ಕಾರ್ಯ ಕಾರ್ಯನಿರ್ವಹಿಸುವ ನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಅತ್ಯಂತ ಕಡಿಮೆ ಗೌರವಧನವನ್ನು ನೀಡಲಾಗುತ್ತಿದೆ. ಬೇರೆ ರಾಜ್ಯಗಳಾದ ಕೇರಳ, ಹರಿಯಾಣ, ತಮಿಳುನಾಡು, ತೆಲಂಗಾಣ ಮತ್ತು ಮಧ್ಯಪ್ರದೇಶಕ್ಕೆ ಹೋಲಿಕೆ ಮಾಡಿದರೆ, ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಅತಿಕಡಿಮೆ ಗೌರವಧನವನ್ನು ಮಾತ್ರ ಕೊಡಲಾಗುತ್ತಿದೆ. ನಾನು ಕಳೆದ ಬಾರಿ ಕೂಡ ಪ್ರಶ್ನೆ ಕೇಳಿದ್ದೆನು. ಆದರೆ ಸುಮಾರು ೨ ವರ್ಷಗಳ ಹಿಂದೆ ಹೆಚ್ಚು ಮಾಡಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ತಮ್ಮ ಉತ್ತರದಲ್ಲಿ "ಪ್ರಸ್ತುತ ನೀಡುತ್ತಿರುವ ಗೌರವಧನವನ್ನು ಪರಿಷ್ಕರಿಸಿ ಹೆಚ್ಚಳ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ಗೌರವಧನವನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಪ್ಪಿರುವುದಿಲ್ಲ. ಆರ್ಥಿಕ ಇಲಾಖೆ ಅನುಮೋದನೆ ನೀಡದ ಕಾರಣ ಈ ಹಂತದಲ್ಲಿ ಗೌರವಧನ ಪರಿಷ್ಕರಣೆ ಸಾಧ್ಯವಾಗುವುದಿಲ್ಲ¨ ಎಂದು ಹೇಳಿದ್ದಾರೆ. ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಮಹಾನಗರ ಪಾಲಿಕೆಗಳಿಗೆ compare ಮಾಡಿದರೆ, ಕರ್ನಾಟಕದಲ್ಲಿ ನಗರಸಭೆಯ ಪ್ರತಿನಿಧಿಗಳಿಗೆ ರೂ.16,000ಗಳು ಗೌರವಧನ ಕೊಡುತ್ತಿದ್ದಾರೆ.

ಸಭಾಪತಿಯವರು:– ಮಾನ್ಯ ಸಚಿವರೇ, ಈಗ ತಾವು ಉತ್ತರ ಹೇಳಿ. ಮಾನ್ಯ ಸುನೀಲ್‌ಗೌಡ ರವರೇ, ತಾವು ಆಮೇಲೆ ಮಾತನಾಡಿ.

ಶ್ರೀ ರಹೀಂಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು):– ಮಾನ್ಯ ಸಭಾಪತಿಯವರೇ, already ಮುನಿಸಿಪಾಲಿಟಿಯಲ್ಲಿ C.M.C., T.M.C., President, Vice President ಹಾಗೂ ಎಲ್ಲಾ Members ಗೆ ಗೌರವಧನ increase ಮಾಡುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸುನೀಲ್‌ಗೌಡ ಪಾಟೀಲ್ ರವರು ಪ್ರಶ್ನೆ ಕೇಳಿದ್ದಾರೆ. ಈ ಸಂಬಂಧ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಆದರೆ ಅವರು clearance ಕೊಟ್ಟಿಲ್ಲ. ಬೇರೆ ರಾಜ್ಯಗಳಲ್ಲಿ ಗೌರವಧನವನ್ನು increase ಮಾಡಿದ್ದಾರೆ. ಆದರೂ ಕೂಡ ಮತ್ತೆ ನಾನು ಒಂದುಬಾರಿ Finance Department ನಿಂದ clearance ಮಾಡಿಸಿ, ಈ proposal ಅನ್ನು clear ಮಾಡುತ್ತೇನೆ.

ಶ್ರೀ ಸುನೀಲ್‌ಗೌಡ ಪಾಟೀಲ್:– ಮಾನ್ಯ ಸಭಾಪತಿಯವರೇ, ಬೆಲೆ ಏರಿಕೆಯಂತಹ ಇಂದಿನ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ಎಲ್ಲಾ ಮಾನ್ಯ ಸಚಿವರಿಗೆ, ಮಾನ್ಯ ಶಾಸಕರಿಗೆ ಮತ್ತು ಸರ್ಕಾರಿ ನೌಕರರಿಗೆ ವೇತನ ಹೆಚ್ಚಳ ಮಾಡಲಾಗಿದೆ. ಆದರೆ ನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಗೌರವಧನವನ್ನು ಕಳೆದ 9 ವರ್ಷಗಳ ಹಿಂದೆ ಹೆಚ್ಚಳ ಮಾಡಲಾಗಿತ್ತು. ಆದರೆ ಬೇರೆ ರಾಜ್ಯಗಳಿಗೆ compare ಮಾಡಿದರೆ ಕರ್ನಾಟಕದಲ್ಲಿ ಮಹಾನಗರ ಪಾಲಿಕೆಯಲ್ಲಿ ರೂ.16,000ಗಳು ಗೌರವಧನ ಕೊಡುತ್ತಿದ್ದಾರೆ. ಕೇರಳದಲ್ಲಿ ರೂ.15,800ಗಳು ಗೌರವಧನ ಕೊಡುತ್ತಿದ್ದಾರೆ. ಹರಿಯಾಣದಲ್ಲಿ ರೂ.30,000ಗಳು ಗೌರವಧನ ಕೊಡುತ್ತಿದ್ದಾರೆ. ತಮಿಳುನಾಡಿನಲ್ಲಿ ರೂ.30,000ಗಳು ಗೌರವಧನ ಕೊಡುತ್ತಿದ್ದಾರೆ. ತೆಲಂಗಾಣದಲ್ಲಿ ರೂ.65,000ಗಳು ಗೌರವಧನ ಕೊಡುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಅತಿ ಕಡಿಮೆ ಗೌರವಧನವನ್ನು ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯರಿಗೆ ರೂ.6,000ಗಳನ್ನು ಕೊಡುತ್ತಿದ್ದಾರೆ. ಹರಿಯಾಣ ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯರಿಗೆ ರೂ.15,000ಗಳನ್ನು ಕೊಡುತ್ತಿದ್ದಾರೆ. ತಮಿಳುನಾಡಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯರಿಗೆ ರೂ.10,000ಗಳನ್ನು ಕೊಡುತ್ತಿದ್ದಾರೆ. ತೆಲಂಗಾಣದಲ್ಲಿ ಒಬ್ಬರು ಸದಸ್ಯರಿಗೆ ರೂ.8,000ಗಳು ಗೌರವಧನವನ್ನು ಕೊಡುತ್ತಿದ್ದಾರೆ.

ಸಭಾಪತಿಯವರು:– ಮಾನ್ಯ ಸಚಿವರೇ, ಬೇರೆ ರಾಜ್ಯಗಳಲ್ಲಿ ಹೆಚ್ಚಿಗೆ ಗೌರವಧನವನ್ನು ಕೊಡುತ್ತಿದ್ದಾರೆ, ನಮ್ಮಲ್ಲೂ ಕೊಡಿ ಎಂದು ಕೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ರಹೀಂಖಾನ್:– ಮಾನ್ಯ ಸಭಾಪತಿಯವರೇ, Finance Department ನಿಂದ clearance ಮಾಡಿಸಿ immediate ಆಗಿ ಕೊಡಲಾಗುವುದು.

ಶ್ರೀ ಸುನೀಲ್‌ಗೌಡ ಪಾಟೀಲ್:– ಮಾನ್ಯ ಸಭಾಪತಿಯವರೇ, ಕಳೆದ ಎರಡು-ಮೂರು ಬಾರಿ ಈ ಸಂಬಂಧ ಪ್ರಶ್ನೆ ಕೇಳಿದ್ದೆನು. Finance Department ನಿಂದ clearance ಬರಬೇಕೆಂದು ಉತ್ತರ ಕೊಡುತ್ತಿದ್ದಾರೆ. ಮಾನ್ಯ ಸಚಿವರಿಗೆ, ಮಾನ್ಯ ಶಾಸಕರಿಗೆ ಮತ್ತು ಸರ್ಕಾರಿ ನೌಕರರಿಗೆ ವೇತನ ಹೆಚ್ಚಳ ಮಾಡಲಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಯಾವಾಗ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಗೌರವಧನವನ್ನು ಹೆಚ್ಚಳ ಮಾಡುತ್ತಾರೆ?

ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮೇಲಿಂದ ಮೇಲೆ ಪ್ರಶ್ನೆ ಕೇಳುತ್ತಿದ್ದಾರೆ. ನಗರ ಸ್ಥಳೀಯ ಪ್ರತಿನಿಧಿಗಳಿಗೆ ಗೌರವಧನ ಹೆಚ್ಚಿಗೆ ಕೊಡಬೇಕು. ಆದರೆ ಕೇಳಿದಾಗಲೆಲ್ಲಾ ಬರೀ ಹಾರಿಕೆ ಉತ್ತರವನ್ನು ಕೊಡುತ್ತಿದ್ದಾರೆ. ದಯಮಾಡಿ ಅವರಿಗೂ ಗೌರವಧನವನ್ನು ಹೆಚ್ಚಳ ಮಾಡಬೇಕು.

ಶ್ರೀ ಸುರೇಶ್ ಬಿ.ಎಸ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):– ಮಾನ್ಯ ಸಭಾಪತಿಯವರೇ, ಮಾನ್ಯ ಪೌರಾಡಳಿತ ಸಚಿವರು ಹಾರಿಕೆ ಉತ್ತರ ಕೊಟ್ಟಿಲ್ಲ. ಇದು Finance Department's consideration ಮಾಡಬೇಕು. ಅಲ್ಲಿಂದ ಅನುಮತಿ ಕೊಟ್ಟ ತಕ್ಷಣವೇ ಕೊಡುತ್ತೇವೆಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಹೆಚ್.ಪೂಜಾರ್:– ಮಾನ್ಯ ಸಭಾಪತಿಯವರೇ, ಆಯಿತು ಸರ್ಕಾರ ಆದಷ್ಟು ಬೇಗ ಅವರಿಗೆ ಗೌರವಧನ ಹೆಚ್ಚಳ ಮಾಡಲಿ.

ಶ್ರೀ ಸುನೀಲ್‌ಗೌಡ ಪಾಟೀಲ್:– ಮಾನ್ಯ ಸಭಾಪತಿಯವರೇ, ಈಗ ಪುರಸಭೆಯ ಸದಸ್ಯರಿಗೆ ರೂ.1,200ಗಳು ಇದೆ. ಇವತ್ತಿನ ದಿನಮಾನದಲ್ಲಿ ಒಂದು ಮೊಬೈಲ್‌ಗೆ ಪ್ರತಿ ತಿಂಗಳು currency ಕೂಡ ಹಾಕಿಸುವುದಕ್ಕೆ ಆಗುವುದಿಲ್ಲ. ದಿನಗೂಲಿ ಮಾಡುವವರಿಗೆ ದಿನಕ್ಕೆ ರೂ.500 ಕೊಡುತ್ತಾರೆ.

ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಿ.

ಸಭಾಪತಿಯವರು:– ಆಯಿತು, ಶ್ರೀ ಸುನೀಲ್‌ಗೌಡ ಪಾಟೀಲ್ ರವರೇ, ತಾವು ಒಂದು letter ಕೊಡಿ. ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸುನೀಲ್‌ಗೌಡ ಪಾಟೀಲ್:– ಮಾನ್ಯ ಸಭಾಪತಿಯವರೇ, ಆಯಿತು. ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ.297
ಭೂ-ಸ್ವಾಧೀನ ಪ್ರಮಾಣ ಪತ್ರ ನೀಡುವ ಬಗ್ಗೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ 1200 ಚದರಡಿ ಅಳತೆಯ ನಿವೇಶನಗಳಲ್ಲಿ ಕಟ್ಟಿರುವ 3 ಅಂತಸ್ತಿನ ಕಟ್ಟಡದ ಮಾಲೀಕರಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ (ಎನ್.ಒ.ಸಿ) ಪಡೆಯುವುದಕ್ಕೆ ವಿನಾಯಿತಿ ನೀಡಲಾಗಿದೆಯೇ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1200 ಚದರಡಿ ಮೀರದಂತಹ ನಿವೇಶನಗಳಲ್ಲಿ ನೆಲ+2 ಅಂತಸ್ತು ಅಥವಾ ಸ್ಟಿಲ್ಟ್+3 ಅಂತಸ್ತಿನವರೆಗಿನ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಟ್ಟಡ ನಿರ್ಮಾಣದ ನಂತರ ಸ್ವಾಧೀನಾನುಭವ ಪ್ರಮಾಣ ಪತ್ರದಿಂದ ವಿನಾಯಿತಿ ನೀಡುವುದು ಪರಿಶೀಲನೆಯಲ್ಲಿದೆ.
ಆ)	ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024 ರನ್ವಯ ಸರ್ಕಾರ ಹೊರಡಿಸಿದ ಅಧಿಸೂಚನೆಯಿಂದ ಗ್ರಾಮ ಪಂಚಾಯತಿ, ನಗರ ಸಭೆ ಮತ್ತು ಪುರಸಭೆಗಳಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲು ಪ್ರಸ್ತುತ ಇರುವ ಬೈಲಾಗಳಿಂದ ಕಟ್ಟಡ ಮಾಲೀಕರಿಗೆ ಅಡಚಣೆಯಾಗುವುದಿಲ್ಲವೇ:	ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರನ್ವಯ ಹೊರಡಿಸಲಾದ ಅಧಿಸೂಚನೆಯು ನಗರ ಸ್ಥಳೀಯ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ.
ಇ)	ರಾಜ್ಯದ ಎಲ್ಲಾ ಗ್ರಾಮ ಮತ್ತು ನಗರಗಳಲ್ಲಿ ಕಟ್ಟಡ ಮಾಲೀಕರು ಈ ರೀತಿ ಸ್ವಾಧೀನಾನುಭವ ಪ್ರಮಾಣ ಪತ್ರ (ಎನ್.ಒ.ಸಿ) ವಿನಾಯಿತಿ ಪಡೆಯಬೇಕಿದ್ದರೆ, ಈ ಯೋಜನೆ ಅನುಷ್ಠಾನಗೊಳಿಸಲು ಸಾಧ್ಯವಾಗುವುದೇ: ಹಾಗಿದ್ದಲ್ಲಿ, ಇದರ ಕುರಿತು ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ? (ಮಾಹಿತಿ ಒದಗಿಸುವುದು)	ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ರಲ್ಲಿ ಕಟ್ಟಡ ನಿರ್ಮಾಣದ ನಂತರ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯಬೇಕಾಗುತ್ತದೆ. ಕೆಲವೊಂದು ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರದಿಂದ ವಿನಾಯಿತಿ ನೀಡುವ ಕುರಿತು ಕಾಯ್ದೆಗಳ ತಿದ್ದುಪಡಿ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.

ಡಾ: ಉಮಾಶ್ರೀ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಈಗಾಗಲೇ ಸಾಕಷ್ಟು ಜನ ಮನೆಗಳನ್ನು ಕಟ್ಟುತ್ತಿದ್ದಾರೆ. ಮನೆಗಳನ್ನು ಕಟ್ಟುವಂತಹ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ N.O.C (No Objection Certificate) ಕೊಟ್ಟರೆ ಮಾತ್ರವೇ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬಹುದು, ಮಹಾನಗರ ಪಾಲಿಕೆ ಇರಬಹುದು, ಬಿ.ಬಿ.ಎಂ.ಪಿ ಇರಬಹುದು ಅಥವಾ ಪುರಸಭೆ ಯಾರೇ ಆದರೂ ಕೂಡ ಕಟ್ಟಡಕ್ಕೆ N.O.C ಕೊಟ್ಟ ನಂತರವೇ ವಿದ್ಯುತ್ ಮತ್ತು ನೀರು ಕೊಡಬೇಕು ಎಂದು ಸಮಸ್ಯೆ ಉದ್ಭವವಾಗಿರುವುದಕ್ಕೆ ರಾಜ್ಯ ಸರ್ಕಾರ ಕೋರ್ಟ್ ಆದೇಶವನ್ನು implement ಮಾಡಿದೆ. ಈಗ ಎಲ್ಲಾ ಸಾರ್ವಜನಿಕರಿಗೂ ಅದು ಬಹುದೊಡ್ಡ ಸಮಸ್ಯೆಯಾಗಿದೆ. ರಾಜ್ಯ ಸರ್ಕಾರ ಜನರಿಗೆ ಅನುಕೂಲವಾಗುವಂತೆ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕಿದೆ. ನಾನು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ರಲ್ಲಿ ಕಾಲಕಾಲಕ್ಕೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಸಾರ್ವಜನಿಕರಿಗೆ ಇಂತಹ ಸಮಸ್ಯೆಗಳು ಬಂದಾಗ N.O.C ವಿನಾಯಿತಿ ನೀಡಬಹುದು ಎಂದು ಒಂದು provision ಮಾಡಿಕೊಂಡಿದ್ದಾರೆ. ಅದೇ ಮಾದರಿಯಲ್ಲಿ ನೀವು ಕೂಡ ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಮಾನ್ಯ ಸಚಿವರಿಗೆ ಕೇಳಿದ್ದೇನೆ. ಅವರು ಕೆಲವೊಂದು ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರದಿಂದ ವಿನಾಯಿತಿ ನೀಡುವ ಕುರಿತು ಕಾಯ್ದೆಗಳ ತಿದ್ದುಪಡಿ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ ಎಂದು ಹೇಳಿದ್ದಾರೆ. ಅದಕ್ಕೆ ತಿದ್ದುಪಡಿ ಯಾವಾಗ ಮಾಡುತ್ತೀರಿ, ಏನು ಮಾಡುತ್ತೀರಿ? ಯಾವ ರೀತಿ ತಿದ್ದುಪಡಿ ತರುತ್ತೀರಿ? ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಲ್ಲಿ 1200 ಚದರ ಅಡಿ ನಿವೇಶನಕ್ಕೆ ಕೊಡಲಾಗುವುದು ಎಂದು ಹೇಳಿದ್ದಾರೆ. ಅದಕ್ಕಿಂತ ಕಡಿಮೆ ನಿವೇಶನಗಳನ್ನು ಹೊಂದಿರುವ ಸಾಕಷ್ಟು ಬಡವರು ಇದ್ದಾರೆ. 20X30 ಅಡಿಗಳು, 20X40 ಅಡಿಗಳಲ್ಲಿ ಮನೆ ಕಟ್ಟಿಕೊಳ್ಳುವವರು ಕೂಡ ಇದ್ದಾರೆ. ಇವರ ಸ್ಥಿತಿ ಏನಾಗಬಹುದು? ಸಾರ್ವಜನಿಕರಿಗೆ ಬೇಗ ಪರಿಹಾರವನ್ನು ಯಾವಾಗ ಮಾಡಿಕೊಡುತ್ತೀರಿ?

ಶ್ರೀ ರಹೀಂಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು):- ಮಾನ್ಯ ಸಭಾಪತಿಯವರೇ, recently ಕಟ್ಟಡ ಕಟ್ಟುವುದಕ್ಕೆ NOC ಪಡೆದಿರಬೇಕೆಂದು ಸುಪ್ರೀಂ ಕೋರ್ಟ್ ಆದೇಶವಾಗಿದೆ. NOC ಇಲ್ಲದಿದ್ದರೆ Electricity, Water connection, basic needs ಕೊಡಬಾರದೆಂದು ಆದೇಶವಾಗಿದೆ. ಈ ಆದೇಶದಿಂದಾಗಿ ಈ ಸಮಸ್ಯೆ ಉಂಟಾಗಿದೆ. ಆದ್ದರಿಂದ ಈ ಸದನದಲ್ಲೇ Municipality Act ತಿದ್ದುಪಡಿ ಮಾಡಲು ಈಗಾಗಲೇ Bill ಬಂದಿದೆ. Mostly, ಈ ಅಧಿವೇಶನದಲ್ಲೇ ಇದು clearance ಆಗಬಹುದು.

ಡಾ: ಉಮಾಶ್ರೀ:- ಮಾನ್ಯ ಸಭಾಪತಿಯವರೇ, ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರಿಗೆ ಧನ್ಯವಾದಗಳು. ದಯವಿಟ್ಟು ಇದೇ ಅಧಿವೇಶನದಲ್ಲಿ ತಿದ್ದುಪಡಿ Bill ತೆಗೆದುಕೊಂಡು ಬಂದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 267

ಹಾಪ್‌ಕಾಮ್ಸ್ ಮಳಿಗೆಗಳು ಮುಚ್ಚಿರುವ ಬಗ್ಗೆ

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಒಟ್ಟು ಹಾಪ್ ಕಾಮ್ಸ್ ಮಳಿಗೆಗಳ ಸಂಖ್ಯೆ ಎಷ್ಟು : ಪ್ರಸ್ತುತ ಎಷ್ಟು ಹಾಪ್ ಕಾಮ್ಸ್ ಗಳು ವಹಿವಾಟು ನಡೆಸುತ್ತಿವೆ : ಎಷ್ಟು ಮಳಿಗೆಗಳನ್ನು ಬಂದ್ ಮಾಡಲಾಗಿದೆ : ಬಂದ್ ಆಗಿದ್ದಲ್ಲಿ ಆಗಲು ಕಾರಣಗಳೇನು? (ಜಿಲ್ಲಾವಾರು ವಿವರಗಳನ್ನು ನೀಡುವುದು)	ರಾಜ್ಯದಲ್ಲಿ ಒಟ್ಟು 557 ಹಾಪ್ ಕಾಮ್ಸ್ ಮಳಿಗೆಗಳಿದ್ದು, ಈ ಮಳಿಗೆಗಳ ಪೈಕಿ ಪ್ರಸ್ತುತ 416 ಮಳಿಗೆಗಳು ವಹಿವಾಟು ನಡೆಸುತ್ತಿವೆ. ಒಟ್ಟು 141 ಮಳಿಗೆಗಳನ್ನು ಬಂದ್ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಕಾರಣಗಳು : I. ಬೆಂಗಳೂರಿನ ಪ್ರತಿಷ್ಠಿತ ಮಾಲ್ ಗಳು ಹಾಗೂ ಖಾಸಗಿ ವ್ಯಾಪಾರಸ್ಥರಿಂದ ತೀವ್ರ ವ್ಯಾಪಾರ ಪೈಪೋಟಿ ಉಂಟಾಗಿರುತ್ತದೆ. ಜೊತೆಗೆ, ಕೆಲವು ಪ್ರದೇಶಗಳಲ್ಲಿ ರಸ್ತೆಯ ಅಗಲೀಕರಣ, ಮೆಟ್ರೋ ನಿರ್ಮಾಣದಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ. II. ಜನಸಂದಣಿ ಕಡಿಮೆ ಇರುವ ಕಾರಣ, ಕೆಲವು ಪ್ರದೇಶಗಳಲ್ಲಿ, ಹೆಚ್ಚು ವ್ಯಾಪಾರ ವಹಿವಾಟು ನಡೆಯದೇ ಇರುವ ಸ್ಥಳಗಳಲ್ಲಿ ಮಳಿಗೆಗಳನ್ನು ಮುಚ್ಚಲಾಗಿದೆ. III. ಖಾಸಗಿಯವರು ತಳ್ಳುವ ಗಾಡಿಗಳು ಹಾಗೂ ಬೀದಿ ಬದಿಯಲ್ಲಿ ಹೆಚ್ಚಿನ ಹಣ್ಣು-ತರಕಾರಿ ಮಾರಾಟ ಮಾಡುತ್ತಿರುವುದರಿಂದ ಹಾಪ್ ಕಾಮ್ಸ್ ಮಳಿಗೆಗಳ ವ್ಯಾಪಾರ ವಹಿವಾಟು ಕಡಿಮೆಯಾಗಿರುತ್ತದೆ. There are 557 Hopcoms stalls in the state, out of which 416 stalls are functioning and 141 stalls are closed. District-wise details are provided in the Annexure. <u>Reasons :</u> I. Intense business competition from prestigious malls and private traders in Bengaluru. In some areas, stalls have been demolished due to road widening and metro construction.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		II. Some stalls are located in less populated areas hence due to less transaction stall are closed. III. Private traders sell fruits and vegetables in mobile carts and on road side, this has reduced the sale proceeds of Hopcoms.
ಆ)	ಹಾಪ್ ಕಾಮ್ಸ್ ಮಳಿಗೆಯಲ್ಲಿ ಯಾವ ಯಾವ ಪದಾರ್ಥಗಳನ್ನು ಮಾರಾಟ ಮಾಡಬೇಕೆಂಬ ನಿಯಮ ಇದೆಯೇ : ಕೆಲವೊಂದು ಮಳಿಗೆಗಳಲ್ಲಿ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದು, ಹಾಪ್ ಕಾಮ್ಸ್ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :	ಹೌದು ನಿಯಮ ಇದೆ. ಹಾಪ್ ಕಾಮ್ಸ್ ಸಂಸ್ಥೆಯ ಮಳಿಗೆಗಳಲ್ಲಿ ಖಾಸಗಿ ವ್ಯಕ್ತಿಗಳು ಹಣ್ಣುಗಳನ್ನು ಮಾರಾಟ ಮಾಡುತ್ತಿರುವುದಿಲ್ಲ. ಸಂಸ್ಥೆಯ ಬಹುತೇಕ ಮಳಿಗೆಗಳನ್ನು ಸಂಸ್ಥೆಯ ನೌಕರರ ವತಿಯಿಂದಲೇ ನಿರ್ವಹಿಸಲಾಗುತ್ತಿದೆ. ಕೆಲವು ಮಳಿಗೆಗಳನ್ನು ಸಂಸ್ಥೆಯ ನಿಯಮಗಳಂತೆ ಫ್ರಾಂಚೈಸಿ ಆಧಾರದ ಮೇಲೆ ನೀಡಲಾಗಿರುತ್ತದೆ. ಸಂಸ್ಥೆಯ ಮಳಿಗೆಗಳಲ್ಲಿ ಆನ್ ಲೈನ್ ಬಿಲ್ಲಿಂಗ್ ವ್ಯವಸ್ಥೆ ಜಾರಿಯಲ್ಲಿದ್ದು ಸಂಸ್ಥೆಯು ನಿಗಧಿ ಪಡಿಸಿದ ದರಗಳನ್ನು ತೂಕದ ಮಾಪನ ಯಂತ್ರ (ಸ್ಕೇಲ್) ಗಳಿಗೆ ಪ್ರತಿದಿನ ಆರೋಹಣ (upload) ಮಾಡಲಾಗುವುದು. ಸದರಿ ಫ್ರಾಂಚೈಸಿದಾರರು ಸಹ ಸಂಸ್ಥೆಯು ಪ್ರತಿ ದಿನ ನಿಗಧಿಪಡಿಸಿದ ದರಗಳಲ್ಲಿಯೇ ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ಹೀಗಾಗಿ ಹಣ್ಣುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. Yes, rules are there. No private individuals sell fruits in Hopcoms stalls. Most of the stalls are managed by the employees of the Hopcoms. Some stalls are given on franchise. Online billing system is in place in the Hopcoms stalls and the prices are fixed on daily basis and uploaded to the weighing scales. Franchisees also sell fruits at the prices fixed by the Hopcoms every day. There is no scope for selling fruits at a higher price.
ಇ)	ಬೆಂಗಳೂರು ನಗರ ಭಾಗದ ಅನೇಕ ಕಡೆ ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಅಕ್ಕಿ ಮೂಟೆ ಹಾಗೂ ಇನ್ನಿತರೆ ತೋಟಗಾರಿಕೆಯ ಬೆಳೆಗಳಲ್ಲದ ಸಾಮಗ್ರಿಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ .ಗಮನಕ್ಕೆ ಬಂದಿದೆಯೇ : ಹಾಪ್ ಕಾಮ್ಸ್ ಸಂಸ್ಥೆಯ ಮೂಲ ಉದ್ದೇಶವೇನು:	ಹೌದು. ಸಂಸ್ಥೆಯನ್ನು ಲಾಭದಾಯಕವಾಗಿ ನಡೆಸುವ ದೃಷ್ಟಿಯಿಂದ ಸಂಸ್ಥೆಯ ಉಪವಿಧಿಗಳ ಅನ್ವಯ ಕೃಷಿ/ಆಹಾರ ಪದಾರ್ಥಗಳನ್ನು ಮಾರಾಟ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. • ಕರ್ನಾಟಕ ಆಯಿಲ್ ಫೆಡರೇಷನ್ ಸಂಸ್ಥೆಯು ಸರಬರಾಜು ನೀಡುವ ಅಕ್ಕಿಯನ್ನು ಸಂಸ್ಥೆಯ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. • ಹಾಪ್ ಕಾಮ್ಸ್ ಸಂಸ್ಥೆಯ ಮೂಲ ಉದ್ದೇಶವೆಂದರೆ, ಸದಸ್ಯ ರೈತರು ಬೆಳೆದ ಹಣ್ಣು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಮತ್ತು ತರಕಾರಿಗಳನ್ನು ಯೋಗ್ಯ ಬೆಲೆಯಲ್ಲಿ ಖರೀದಿಸಿ ವ್ಯಾಪಾರ ಮಾಡುವುದು. Yes. In the interest of profitability of Hopcoms, a provision has been made to sell other agricultural/food products as per byelaws. • Rice supplied by Karnataka Oil Federation is being sold in the Hopcoms stalls. • The basic objective of Hopcoms is to purchase and market fruits and vegetables grown by member farmers at a reasonable price
ಈ)	ಹಾಗಿದ್ದಲ್ಲಿ ಇದುವರೆಗೂ ಎಷ್ಟು ಮಳಿಗೆಗಳನ್ನು ಪರಿಶೀಲಿಸಲಾಗಿದೆ: ತೆಗೆದುಕೊಂಡ ಕ್ರಮವೇನು: ಇದರಿಂದ ರೈತರಿಗೆ ಅನಾನುಕೂಲವಾಗುವುದಿಲ್ಲವೇ :	ಅನ್ವಯಿಸುವುದಿಲ್ಲ Not applicable
ಉ)	ಪ್ರಸ್ತುತ ಎಷ್ಟು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಯೆಷ್ಟು? ಸಿಬ್ಬಂದಿಯ ಕೊರತೆಯಿಂದ ಸಂಸ್ಥೆಯ ದಿನನಿತ್ಯದ ಕೆಲಸಕಾರ್ಯಕ್ಕೆ ತೊಂದರೆಯಾಗುತ್ತಿಲ್ಲವೇ;	ರಾಜ್ಯದಲ್ಲಿರುವ ಹಾಪ್ ಕಾಮ್ಸ್ ಸಂಸ್ಥೆಗಳಲ್ಲಿ ಒಟ್ಟು ಮಂಜೂರಾದ 782 ಹುದ್ದೆಗಳಲ್ಲಿ, 438 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 344 ಹುದ್ದೆಗಳು ಖಾಲಿ ಇರುತ್ತವೆ. ಸಿಬ್ಬಂದಿಯ ಕೊರತೆಯಿಂದ ಸಂಸ್ಥೆಯ ದಿನನಿತ್ಯದ ಕೆಲಸಕಾರ್ಯಕ್ಕೆ ತೊಂದರೆಯಾಗದಂತೆ ಹೊರ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಕಾರ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. Total sanctioned posts are 782 in that 438 staff are working in HOPCOMS in the state, and 344 posts are vacant. Day to day activities are being carried out by employing staff on outsource basis, to avoid any disruption due to shortage of staff
ಊ)	ಹಾಪ್ ಕಾಮ್ಸ್ ಸಂಸ್ಥೆ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿರುವುದು ನಿಜವೇ; ಹಾಗಿದ್ದಲ್ಲಿ ಇದರಿಂದ ಹೊರಬರಲು ಇಲಾಖೆ ಯಾವ ಕ್ರಮ ತೆಗೆದುಕೊಂಡಿದೆ;	ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯು ಈ ಹಿಂದಿನ 4 ಸಾಲುಗಳ ಲೆಕ್ಕ ಪರಿಶೋಧನಾ ವರದಿಯ ಅನ್ವಯ ನಷ್ಟದಲ್ಲಿರುತ್ತದೆ. ಸಂಸ್ಥೆಯಲ್ಲಿ ನಿವೃತ್ತ ನೌಕರರ ಸಂಖ್ಯೆ ಹೆಚ್ಚಾಗಿದ್ದು, ಸದರಿ ನೌಕರರಿಗೆ ನೀಡಬೇಕಾದ ನಿವೃತ್ತಿ ನಂತರದ ಆರ್ಥಿಕ ಸೌಲಭ್ಯಗಳಿಗೆ ಅವಕಾಶ ಕಲ್ಪಿಸಿಕೊಂಡಿರುವುದರಿಂದ ನಷ್ಟಕ್ಕೆ ಕಾರಣವಾಗಿದೆ. ಇದರಿಂದ ಹೊರಬರಲು ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ, 1. ಸರ್ಕಾರದಿಂದ ದುಡಿಯುವ ಬಂಡವಾಳವಾಗಿ ದೀರ್ಘಾವಧಿ ಸಾಲ ಪಡೆದಿದ್ದು, ಸಂಸ್ಥೆಯ ದೈನಂದಿನ ವಹಿವಾಟು ಹೆಚ್ಚಿಸಲು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		ಹೋಟೆಲ್, ಕಾರ್ಖಾನೆಗಳು, ಸಂಘ ಸಂಸ್ಥೆಗಳಿಗೆ ಸಗಟು ದರದಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಸರಬರಾಜು ಮಾಡಲು ಕ್ರಮವಹಿಸಲಾಗಿರುತ್ತದೆ. 2. ಮೊಬೈಲ್ ವಾಹನಗಳ ಮೂಲಕ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಕ್ರಮವಹಿಸಲಾಗಿರುತ್ತದೆ. 3. ಅಪಾರ್ಟ್‌ಮೆಂಟ್‌ಗಳಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಕ್ರಮ ವಹಿಸಲಾಗಿರುತ್ತದೆ. 4. ಪ್ರಸ್ತುತ 2024-25 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯು ಪ್ರಗತಿಯಲ್ಲಿದ್ದು, ಲಾಭದ ನಿರೀಕ್ಷೆಯಲ್ಲಿದೆ. Bangalore Hopcoms has incurred loss in the previous 4 years as per the audit report. This loss is due to the payment of post-retirement financial benefits to the increased number of retired employees during the period. To come out of this following measures are taken: 1) Long term loan from the government for working capital has been received to increase the daily turnover of Hopcoms, steps are being taken to supply fruits and vegetables at wholesale prices to hotels, factories, organizations. 2) To sell fruits and vegetables through mobile vehicles. 3) Fruits and vegetables are sold at apartments across Bengaluru. 4. The current audit report for the year 2024-25 is in progress and it is expected to be profitable.
ಖ)	ಹಾಪ್ ಕಾಮ್ಸ್ ಸರ್ಕಾರದಿಂದ ಸಾಲ ಪಡೆದುಕೊಂಡಿದೆಯೇ; ಹಾಗಿದ್ದಲ್ಲಿ ಶೇಕಡ ಬಡ್ಡಿ ದರವೆಷ್ಟು; ಹಾಗೂ ಸಾಲ ಪಡೆಯುವ ಉದ್ದೇಶವೇನು;	ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯು ರೂ. 15.00 ಕೋಟಿಗಳನ್ನು ಸರ್ಕಾರದಿಂದ ಸಾಲ ಪಡೆದುಕೊಂಡಿದೆ. ಈ ಸಾಲಕ್ಕೆ ವಾರ್ಷಿಕ 10.25% ಬಡ್ಡಿ ದರ ವಿಧಿಸಲಾಗಿದೆ. ಈ ಸಾಲವನ್ನು ದುಡಿಯುವ ಬಂಡಾವಳದ ಉದ್ದೇಶಕ್ಕಾಗಿ ಪಡೆದುಕೊಳ್ಳಲಾಗಿದೆ. Bangalore Hopcoms has taken a loan of Rs. 15 crores from the Government for working capital at an interest rate of 10.25 percent.

ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಹಾಪ್ ಕಾಮ್ಸ್ ಮಳಿಗೆಗಳು ತೋಟಗಾರಿಕೆ ಬೆಳೆಗಳನ್ನು ಬೆಳೆಯುವಂತಹ ರೈತರಿಗೆ ಹಣ್ಣು ಬೆಳೆಯುವಂತಹ ಬೆಳೆಗಳನ್ನು ಮಾರುಕಟ್ಟೆ ಮಾಡಿಕೊಳ್ಳುವುದಕ್ಕೋಸ್ಕರ ಸರ್ಕಾರದಿಂದಲೇ 1959 ನೇ ಇಸವಿಯಲ್ಲಿ ಈ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಪ್‌ಕಾಮ್ಸ್ ಮಳಿಗೆಗಳನ್ನು ಪ್ರಾರಂಭ ಮಾಡುತ್ತಾರೆ. ಅದಕ್ಕೆ ಮತ್ತೆ ಹಾಪ್‌ಕಾಮ್ಸ್ ಎಂಬ ರೂಪ ಕೊಟ್ಟು ಹೆಚ್ಚಿನ ಮಳಿಗೆಗಳನ್ನು ಎಲ್ಲಾ ನಗರಗಳಲ್ಲೂ ಕೂಡ ಮಾಡಿರುವುದನ್ನು ನಾವು ನೋಡಿದ್ದೇವೆ. ಹಾಪ್‌ಕಾಮ್ಸ್ ಮಳಿಗೆಗಳಿಂದಲೇ ಪ್ರತಿವರ್ಷ ಮಾವು ಮೇಳ, ದ್ರಾಕ್ಷಿ ಮೇಳ ಮತ್ತಿತರೆ ಹಣ್ಣುಗಳ ಮೇಳಗಳನ್ನು ಮಾಡಿ ರೈತರು ಬೆಳೆದಂತಹ ಬೆಳೆಗಳಿಗೆ ಒಳ್ಳೆಯ ಬೆಲೆಯನ್ನು ಕೊಟ್ಟು, ಅವೊತ್ತಿನಿಂದ ಬಹಳ ನಿಷ್ಠೆಯಿಂದ ಈ ಹಾಪ್‌ಕಾಮ್ಸ್ ಮಳಿಗೆಗಳು ಮಾರಾಟ ಮಾಡಿಕೊಂಡು ಬಂದಿದ್ದಾರೆ. ಆದರೆ ಕಳೆದ ಸುಮಾರು 8-10 ವರ್ಷಗಳಿಂದ ಈ ಹಾಪ್‌ಕಾಮ್ಸ್ ಮಳಿಗೆಗಳ ವಿಚಾರದಲ್ಲಿ ಬಹಳ ನಿರ್ಲಕ್ಷ್ಯ ವಹಿಸಿದ್ದಾರೆ. ಎಲ್ಲಾ ಕಡೆ 557 ಹಾಪ್‌ಕಾಮ್ಸ್ ಮಳಿಗೆಗಳನ್ನು ಪ್ರಾರಂಭ ಮಾಡಿದ್ದರು. ಇವತ್ತಿನ ದಿವಸ ಕೇವಲ 334 ಮಳಿಗೆಗಳು ಮಾರಾಟ ಮಾಡುತ್ತಿದ್ದಾರೆ. ಅದರಲ್ಲೂ ಎಲ್ಲಾ ತೋಟಗಾರಿಕೆ ಬೆಳೆಗಳನ್ನು ಬೆಳೆಯುವಂತಹ ಕೆಂದ್ರಗಳು, suppose ಕೋಲಾರದಲ್ಲೇ ಅತಿ ಹೆಚ್ಚು ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಾರೆ. ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ರೈತರಿಂದ ಅಲ್ಲಲ್ಲೇ ರೈತರಿಂದ procurement ಮಾಡಿ, ಅಲ್ಲಿಂದಲೇ ಎಲ್ಲಾ ಮಳಿಗೆಗಳಿಗೂ distribute ಮಾಡುತ್ತಿದ್ದರು. ಒಳ್ಳೆಯ ಬೆಲೆ ಕೂಡ ಸಿಕ್ಕುತ್ತಿತ್ತು. ಆದರೆ ಇವತ್ತಿನ ದಿವಸ ಅಲ್ಲಿ ಬೆಂಬಲವೂ ಇಲ್ಲದೇ, ಅವರು ನಷ್ಟ ಅನುಭವಿಸಿ ಸುಮಾರು 136 ಹಾಪ್‌ಕಾಮ್ಸ್ ಮಳಿಗೆಗಳನ್ನು ಮುಚ್ಚಿಬಿಟ್ಟಿದ್ದಾರೆ.

(ಮುಂದು)

(635)12.8.2025/12.10/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಗೋವಿಂದರಾಜು (ಮುಂದು):-

ಸರ್ಕಾರ ರಸ್ತೆ ಬದಿಯಲ್ಲಿ ಅಂಗಡಿಗಳನ್ನು ನಿರ್ಮಾಣ ಮಾಡಿರುವಂತಹದ್ದಾಗಿದ್ದು ಸರ್ಕಾರದ ನಿರ್ಲಕ್ಷ್ಯದಿಂದ ಹಾಪ್‌ಕಾಮ್ಸ್ ಸಂಸ್ಥೆಯಲ್ಲಿ ರೈತರಿಂದ ತೆಗೆದುಕೊಂಡ ಉತ್ಪನ್ನಗಳ ಬೆಲೆಗಳು ಬಹಳ ಕುಸಿದಿವೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ.

ಸಭಾಪತಿಯವರು:- ಆಯಿತು ಕುಳಿತುಕೊಳ್ಳಿ. ಆಮೇಲೆ ಪ್ರಶ್ನೆ ಕೇಳಿ.

ಶ್ರೀ ಗೋವಿಂದರಾಜು:- ಮಾನ್ಯ ಸಭಾಪತಿಯವರೇ, ಪೂರ್ತಿ ಕೇಳಿಬಿಡುತ್ತೇನೆ.

ಸಭಾಪತಿಯವರು:- ಎಷ್ಟು ಭಾಷಣ ಮಾಡುತ್ತೀರಿ? ಪ್ರಶ್ನೆ ಕೇಳಬೇಕಲ್ಲವೇ? ನೋಡಿ, ಸಮಯ ಇರುವುದಿಲ್ಲ. ನಿಮ್ಮ ಸಮಯವನ್ನು ಕಟ್ ಮಾಡುತ್ತೇನೆ. ಪ್ರಶ್ನೋತ್ತರಗಳ ಸಮಯವಿದು.

ಶ್ರೀ ಗೋವಿಂದರಾಜು:- ಮಾನ್ಯ ಸಭಾಪತಿಯವರೇ, ಹತ್ತು ನಿಮಿಷ ಸಮಯ ಕೊಡದಿದ್ದರೆ ಹೇಗೆ? ಸರ್ಕಾರದಿಂದ ಅವರಿಗೆ ಶೇ.10.25 ಬಡ್ಡಿ ದರದಂತೆ 15 ಕೋಟಿ ರೂಪಾಯಿಗಳ ಸಾಲ ಕೊಡಲಾಗಿದೆ. ಮೊದಲೇ ಆ ಸಂಸ್ಥೆ ನಷ್ಟದಲ್ಲಿದ್ದು ಹಲವಾರು ಮಳಿಗೆಗಳು ಮುಚ್ಚಿವೆ. ಅದಕ್ಕೆ ನೀವು ಬಡ್ಡಿ ಇಲ್ಲದೇ ಇನ್ನೂ ಹೆಚ್ಚಿನ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂಡವಾಳವನ್ನು ಕೊಟ್ಟು ಏನು ಮಳಿಗೆಗಳನ್ನು ಮುಚ್ಚಿದ್ದೀರಿ ಅದನ್ನೆಲ್ಲಾ ಪುನರ್ ಸ್ಥಾಪನೆ ಮಾಡಬೇಕು. ಕೆಲವು ಮಳಿಗೆಗಳನ್ನು ಬಾಡಿಗೆಗೆ ಸಹ ಕೊಟ್ಟಿದ್ದೀರಿ. ರೈತರ ಉಪಯೋಗಕ್ಕೋಸ್ಕರ ಬಾಡಿಗೆ ಕೊಟ್ಟಿರುವ ಮಳಿಗೆಗಳನ್ನು ವಾಪಸ್ ತೆಗೆದುಕೊಂಡು ಇನ್ನೂ ಹೆಚ್ಚಿನ ಮಳಿಗೆಗಳನ್ನು ಹೆಚ್ಚು ಬಂಡವಾಳ ಕೊಟ್ಟು ನಡೆಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಪೂರ್ಣವಾಗಿ ಉತ್ತರವನ್ನು ಒದಗಿಸಲಾಗಿದೆ. ಅವರು ಹೇಳಿದ ಹಾಗೆ 557 ಹಾಪ್‌ಕಾಮ್ಸ್ ಇದ್ದವು. ಅದರಲ್ಲಿ ಈಗ 416 ಹಾಪ್‌ಕಾಮ್ಸ್ ನಡೆಯುತ್ತಿವೆ. ಇನ್ನೂ 141 ಹಾಪ್‌ಕಾಮ್ಸ್ road widening, ಮೆಟ್ರೋ ಸ್ಟೇಷನ್ ಬಂದಂತಹ ವಿಚಾರಗಳಲ್ಲಿ ಸಾಕಷ್ಟು ಹಾಪ್‌ಕಾಮ್ಸ್ ಶಿಫ್ಟ್ ಆಗುತ್ತಿವೆ. ಆ ದೃಷ್ಟಿಕೋನದಲ್ಲಿ ಸ್ವಲ್ಪ ಕಡಿಮೆಯಾಗಿದೆ. ತಾವು ಹೇಳಿದ ವಿಚಾರಗಳು ಸಂಪೂರ್ಣವಾಗಿ ಅರಿವಾಗಿದೆ. ಈಗಾಗಲೇ 15 ಕೋಟಿ ರೂಪಾಯಿಗಳ ಸಾಲವನ್ನು ಶೇ.10.25 ಬಡ್ಡಿ ದರದಲ್ಲಿ ನಮ್ಮ ಇಲಾಖೆಯಿಂದ ಕೊಟ್ಟಿದ್ದೇವೆ. ಮುಖ್ಯವಾಗಿ ಅವರು ಏನು ಸಾಲವನ್ನು ಕೇಳುತ್ತಿದ್ದಾರೆ ಅದನ್ನು ನಮ್ಮ ಇಲಾಖೆಯಲ್ಲಿ ಚರ್ಚೆ ಮಾಡಿ ನಂತರ ನಿಮಗೆ ತಿಳಿಸುತ್ತೇವೆ.

27			ವಾ.ನಂ. 01ರ 5ನೇ ಹಂತದ ಪಿ.ಎಫ್. ಆಫೀಸ್ ಮುಖ್ಯ ರಸ್ತೆಯಿಂದ ಶಿವಮೂರ್ತಿ ಬಸಪ್ಪ ಮನೆಯವರೆಗೆ ರಸ್ತೆ ಡಾಂಬರೀಕರಣ.
28			ವಾರ್ಡ್.ನಂ 01ರ ಯೋಗಪ್ಪ ಮಾಸ್ಟರ್ ಮನೆಯಿಂದ ಪಿಎಫ್ ಆಫೀಸ್ ಕಾಂಪೌಂಡ್ ವರೆಗೆ ಕೆಳಭಾಗ ರಸ್ತೆ ಡಾಂಬರೀಕರಣ
29			ವಾರ್ಡ್.ನಂ 01ರ ಶಿವನಂಜಪ್ಪ ಮನೆಯಿಂದ ಸವನೂರ ರಸ್ತೆಯವರೆಗೆ ರಸ್ತೆ ಡಾಂಬರೀಕರಣ
30			ವಾರ್ಡ್.ನಂ 01ರ ಬಸವರಾಜಪ್ಪ ಮನೆಯಿಂದ ಪೊಲೀಸ್ ನಂಜೇಶ್ ರವರ ಮನೆಯವರೆಗೆ ರಸ್ತೆ ಡಾಂಬರೀಕರಣ
31			ವಾರ್ಡ್.ನಂ 01ರ ಪಿಎಫ್ ಆಫೀಸ್ ಮುಖ್ಯರಸ್ತೆಯಿಂದ ಉಮಾದೇವಿ ಮನೆಯವರೆಗೆ ರಸ್ತೆ ಡಾಂಬರೀಕರಣ.
32			ವಾರ್ಡ್.ನಂ 01ರ ಲಲಿತಮ್ಮ ಮನೆ ರಸ್ತೆ ಡಾಂಬರೀಕರಣ
33		ಅಮೃತ್	ವಾರ್ಡ್.ನಂ 01ರ ಸಗನಿಪುರದ ರಸ್ತೆಯಿಂದ ಉಮಾಪತಿ ಉದಯಕುಮಾರ್ ಮನೆಯವರೆಗೆ ರಸ್ತೆ ಡಾಂಬರೀಕರಣ
34	2023-24	ನಗರೋತ್ಥಾನ	ವಾರ್ಡ್.ನಂ 01ರ ಗಂಗಾಧರಪ್ಪ ಮನೆಯಿಂದ ಗುರುಶಾಂತಪ್ಪ ಮನೆಯವರೆಗೆ ರಸ್ತೆ ಡಾಂಬರೀಕರಣ
35		ಹಂತ-4	ವಾರ್ಡ್.ನಂ 02ರ ತೋಟದ ಗಂಗಾಧರಪ್ಪ ಮನೆ ರಸ್ತೆ ಡಾಂಬರೀಕರಣ
36			ವಾರ್ಡ್.ನಂ 02ರ ನೀಲಾಂಭಿಕ ಮಾರ್ಗ 6ನೇ ಕ್ರಾಸ್ ಪಾರ್ಕ್ ಹತ್ತಿರ ಬಾಕ್ಸ್ ಚರಂಡಿ ನಿರ್ಮಾಣ
37			ವಾರ್ಡ್.ನಂ 02ರ ನೀಲಾಂಭಿಕ ಮಾರ್ಗ 6ನೇ ಕ್ರಾಸ್ ನ 1ನೇ ಅಡ್ಡ ರಸ್ತೆ ಡಾಂಬರೀಕರಣ
38			ವಾರ್ಡ್.ನಂ 02ರ ಹೌಸಿಂಗ್ ಬೋರ್ಡ್ ಎಸ್.ಬಿ.ಐ ಬ್ಯಾಂಕ್ ಹಿಂಭಾಗದ ರಸ್ತೆ ಡಾಂಬರೀಕರಣ
39			ವಾರ್ಡ್.ನಂ 02ರ ಲಕ್ಷ್ಮೀಕಾಂತ್ ನಾಯ್ಕ್ ಮನೆಯಿಂದ ಕುಶಾಲ್ ನಾಯ್ಕ್ ಮನೆವರೆಗೆ ರಸ್ತೆ ಡಾಂಬರೀಕರಣ
40			ವಾರ್ಡ್ ನಂ: 03 ರ ದೊಡ್ಡಕುರುಬರಹಳ್ಳಿ ಮುಖ್ಯ ರಸ್ತೆ ಮತ್ತು ಮೊದಲನೇ ಕ್ರಾಸ್ ಡಾಂಬರೀಕರಣ ಮತ್ತು ಬಾಕ್ಸ್ ಚರಂಡಿ ನಿರ್ಮಾಣ
41			ವಾರ್ಡ್ ನಂ: 03 ರ ದೊಡ್ಡಕುರುಬರಹಳ್ಳಿ ಎರಡನೇ ಕ್ರಾಸ್ ರಸ್ತೆ ಡಾಂಬರೀಕರಣ
42			ವಾರ್ಡ್ ನಂ: 03ರ ಕಲ್ಯಾಣನಗರ ಬೈಪಾಸ್ ರಸ್ತೆಯಿಂದ ಯುವರಾಜ್ ಮನೆ ರಸ್ತೆ ಡಾಂಬರೀಕರಣ ಮತ್ತು ಬಾಕ್ಸ್ ಚರಂಡಿ ನಿರ್ಮಾಣ
43			ವಾರ್ಡ್ ನಂ: 03 ಚಿಕ್ಕಕುರುಬರಹಳ್ಳಿ ದಿನೇಶ ಮನೆ ಮತ್ತು ಕುಮಾರ್ ಮನೆ ರಸ್ತೆ ಕಾಂಕ್ರೀಟೀಕರಣ ಮತ್ತು ಬಾಕ್ಸ್ ಚರಂಡಿ ನಿರ್ಮಾಣ
44			ವಾ.ನಂ 03ರ ಹಿಂದೂ ರುದ್ರಭೂಮಿ ಪಕ್ಕದ ಪೊಲೀಸ್ ಲೇಔಟ್ ರಸ್ತೆ ಡಾಂಬರೀಕರಣ ಮತ್ತು ಬಾಕ್ಸ್ ಚರಂಡಿ ನಿರ್ಮಾಣ
45			ವಾ.ನಂ. 03ರ ದೊಡ್ಡ ಕುರುಬರಹಳ್ಳಿ ಬಸವ ಮಂದಿರದ ಪಕ್ಕದ ರಸ್ತೆ ಬೈಪಾಸ್ ರಸ್ತೆಯಿಂದ ಯೋಗನಾಂದ ಮನೆ ತನಕ ಡಾಂಬರೀಕರಣ.
46			ವಾ.ನಂ. 03ರ ದೀಪಾ ನರ್ಸಿಂಗ್ ಹೋಂ 60 ಅಡಿ ರಸ್ತೆಯಿಂದ ದೊಡ್ಡ ಕುರುಬರಹಳ್ಳಿ ಹಾಲಿನ ಡೈರಿವರೆಗೆ ಬಾಕ್ಸ್ ಚರಂಡಿ ನಿರ್ಮಾಣ.
47			ವಾ.ನಂ. 04ರ ವೈಕುಂಠ ದ್ವಾರದಿಂದ ಸಿದ್ಧನ ಕಟ್ಟೆ ತನಕ ಬಾಕ್ಸ್ ಚರಂಡಿ ನಿರ್ಮಾಣ.
48			ವಾ.ನಂ. 04ರ ಲಕ್ಷ್ಮೀಪುರ ಬಾಕ್ಸ್ ಚರಂಡಿ ನಿರ್ಮಾಣ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ.ಸಂ	ವರ್ಷ	ಯೋಜನೆ	ಕಾಮಗಾರಿ
49			ವಾ.ನಂ. 04ರ ವಾಟರ್ ಟ್ಯಾಂಕ್ ನಿಂದ ಬಸ್ ಸ್ಟಾಂಡ್ ವರೆಗೆ ಡಾಂಬರೀಕರಣ.
50			ವಾ.ನಂ. 05ರ ಕೋಟೆ ಕಂಚುಗಾರ ಬೀದಿ ವಿಶ್ವರವರ ಮನೆಯಿಂದ ವಯಾ ಗಿರಿಶ್ ಸ್ಟುಡಿಯೋ ಮನೆ ರಸ್ತೆ ಎಡ ಭಾಗದಿಂದ ಅರಳಿ ಮರ ಮುಖ್ಯ ರಸ್ತೆವರೆಗೆ ಬಾಕ್ಸ್ ಚರಂಡಿ ಮತ್ತು ಎರಡು ಡೆಕ್ ಸ್ಲಾಬ್ ನಿರ್ಮಾಣ.
51			ವಾ.ನಂ. 05ರ ದೂರ ಮನೆ (ಶಶಿ ಪ್ರಸಾದ್ ಮನೆ ರಸ್ತೆ) ಮುಂದಿರುವ ಪಾರ್ಕ್‌ನಿಂದ ಕೆಳಭಾಗದ ರೈಲ್ವೆ ಬ್ರಿಡ್ಜ್ ತನಕ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ. ಮತ್ತು ಒಂದು ಡೆಕ್ ಸ್ಲಾಬ್ ನಿರ್ಮಾಣ.
52			ವಾ.ನಂ. 05ರ ಮಂಜೇಗೌಡರ ಮನೆ ರಸ್ತೆ ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ.
53			ವಾ.ನಂ. 05ರ ರೈಲ್ವೆ ಬ್ರೀಡ್ಜ್‌ನಿಂದ ಕಾನ್‌ಟ್ರಕ್ಟರ್ ಲೋಹಿತ್ ಮನೆವರಗೆ ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ.
54			ವಾ.ನಂ. 05ರ ಕಂಚುಗಾರ ಬೀದಿ ಎಂ.ಇ.ಜಿ. ಮನೆ ರಸ್ತೆ ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ.
55			ವಾ.ನಂ. 05ರ ಕಂಚುಗಾರ ಬೀದಿ (ಹರಿಹರೇಶ್ವರ ದೇವಸ್ಥಾನದ ಮುಂಭಾಗದ ರಸ್ತೆ) ಬಾಬು ಮಣಿ ರಸ್ತೆ ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲಾಬ್ ನಿರ್ಮಾಣ.
56			ವಾ.ನಂ. 05ರ ಕಂಚುಗಾರ ಬೀದಿ ಎಂ.ಇ.ಜಿ. ಮನೆ ರಸ್ತೆ ಕಾಂಕ್ರೀಟ್ ಹಾಕಿ ಅಭಿವೃದ್ಧಿಪಡಿಸುವುದು.
57			ವಾ.ನಂ. 06ರ ಕುವೆಂಪು ಪಾರ್ಕ ಪಕ್ಕದಿಂದ ಟಿ.ಡಿ. ರಮೇಶ್ ಮನೆವರೆಗೆ ಮತ್ತು ಪಾರ್ಕ್ ಬಲಭಾಗದ ನೀಲ್ ಕುಮಾರ್ ಮನೆ ರಸ್ತೆಯಲ್ಲಿ ಡೆಕ್ ಸ್ಲಾಬ್ ಮತ್ತು ಪಾರ್ಕ್ ಒಳಭಾಗ ಮತ್ತು ಬಲಭಾಗದ ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ. ಮತ್ತು ಶಿವಮ್ಮ ಅಂಗಡಿ ಮನೆ ಹತ್ತಿರ ಬಾಕ್ಸ್ ಚರಂಡಿ ನಿರ್ಮಾಣ.
58			ವಾ.ನಂ. 06ರ ವಿಜಯನಗರ ಚಾನಲ್ ರಸ್ತೆಯಲ್ಲಿ ಮಂಜಣ್ಣ ಅಂಗಡಿಯಿಂದ ರಾಧಮ್ಮ ಮನೆವರೆಗೆ ಬಾಕ್ಸ್ ಚರಂಡಿ ನಿರ್ಮಾಣ.
59	2023-24	ಅಮೃತ್ ನಗರೋತ್ಥಾನ ಹಂತ-4	ವಾ.ನಂ. 06ರ ಶೇಷಪ್ಪನ ರಸ್ತೆ ನೀರಿನ ಟ್ಯಾಂಕ್‌ನಿಂದ ಹರಿಹರೇಶ್ವರ ದೇವಸ್ಥಾನದ ರಸ್ತೆ ಶೇಷಪ್ಪ ಬೀದಿವರೆಗೆ ಎರಡು ಬದಿ ಬಾಕ್ಸ್ ಚರಂಡಿ ಮತ್ತು 4 ಡೆಕ್ ಸ್ಲಾಬ್ ನಿರ್ಮಾಣ.
60			ವಾ.ನಂ. 06ರ ಮೂರ್ಮನೆ ಹಳ್ಳಿ ರಸ್ತೆ ಪ್ರಶಾಂತ್ ಮನೆಯವರ ಎದುರು ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲಾಬ್ ನಿರ್ಮಾಣ.
61			ವಾ.ನಂ. 06ರ ಸ್ಕೌನ್ಸರ್ ರಸ್ತೆಯಿಂದ ಅಗ್ರಹಾರ ಸರ್ಕಲ್ ವರೆಗೆ ಒಂದು ಬದಿ ಮತ್ತು ಗೌರಮ್ಮ ಬಸವೇ ಗೌಡರ ಮನೆ ಹತ್ತಿರದಿಂದ ಆಟೋ ಸರ್ಕಲ್‌ವರೆಗೆ ಬಾಕ್ಸ್ ಚರಂಡಿ ನಿರ್ಮಾಣ.
62			ವಾ.ನಂ. 06ರ ಮೂರ್ಮನೆ ಹಳ್ಳಿ ದೀಲೀಪ್ ಮನೆ ರಸ್ತೆ ಒಂದು ಬದಿ ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲಾಬ್ ನಿರ್ಮಾಣ. (ಭಟ್ ಮನೆ ಪಕ್ಕದ ರಸ್ತೆ)
63			ವಾ.ನಂ. 06ರ ಶೇಷಪ್ಪ ರಸ್ತೆ ರಾಮಚಂದ್ರಣ್ಣ ಮನೆಯಿಂದ ಶಿವ ಕೃಪಾ ನಿಲಯದವರಗೆ ಎರಡು ಬದಿ ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲಾಬ್ ನಿರ್ಮಾಣ.
64			ವಾ.ನಂ. 06ರ ಅಗ್ರಹಾರ ರಸ್ತೆ ಮಣಿಯಪ್ಪ ಮನೆಯಿಂದ' ಬೇಲೂರು ರಸ್ತೆವರೆಗೆ ಬಾಕ್ಸ್ ಚರಂಡಿ ನಿರ್ಮಾಣ.
65			ವಾ.ನಂ. 06ರ ವಿಜಯನಗರ 2ನೇ ಕ್ರಾಸ್ ಪಾರ್ಕ್ ಪಕ್ಕದಿಂದ ನಿಂಗೇ ಗೌಡರ ಮನಪಕ್ಕದಿಂದ ಬಾಕ್ಸ್ ಚರಂಡಿ ಡೆಕ್ ಸ್ಲಾಬ್ ನಿರ್ಮಾಣ.
66			ವಾ.ನಂ. 06ರ ಕುವೆಂಪು ನಗರ (ಮೂರ್ಮನೆ ಹಳ್ಳಿ ಬಡಾವಣೆ) ಪೋಲಿಸ್ ರಂಗನಾಥ್ ಮನೆ ಹತ್ತಿರ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ.
67			ವಾ.ನಂ. 06ರ ಚಾನಲ್ ರಸ್ತೆ ವೆಂಕಟೇಶ್ ಮನೆ ಪಕ್ಕ ಪಾರ್ಕ್‌ವರೆಗೆ ಬಾಕ್ಸ್ ಚರಂಡಿ ನಿರ್ಮಾಣ.
68			ವಾ.ನಂ. 06ರ ವಿಜಯನಗರ 1ನೇ ಕ್ರಾಸ್ ಉಳಿಕೆ ರಸ್ತೆ ಡಾಂಬರೀಕರಣ.
69			ವಾ.ನಂ. 07ರ ಉದ್ಯೋಗ ವಿನಿಮಯ ಕಛೇರಿ ಪಕ್ಕದ ರಸ್ತೆಯ ಕೀರ್ತಿ ಮನೆಯಿಂದ ಕನಸು ನಿಲಯದವರಗೆ 03 ಡೆಕ್ ಸ್ಲಾಬ್ ಹಾಗೂ ಬಾಕ್ಸ್ ಚರಂಡಿ ನಿರ್ಮಾಣ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ.ಸಂ	ವರ್ಷ	ಯೋಜನೆ	ಕಾಮಗಾರಿ
70			ವಾ.ನಂ. 07ರ ಗಾಂಧಿನಗರ ಮುಖ್ಯರಸ್ತೆ ಮಾರುತಿ ನಿಲಯದಿಂದ ಲಕ್ಷ್ಮಣ್ ಮನೆವರೆಗೆ ಒಂದು ಬಾಕ್ಸ್ ಚರಂಡಿ ಮತ್ತು 2 ಡೆಕ್ ಸ್ಲ್ಯಾಬ್ ನಿರ್ಮಾಣ ಮತ್ತು ಆಚಾರ್ ಮನೆಯಿಂದ ಘಾರಸ್ಥ ಕೃಷ್ಣಮೂರ್ತಿ ಮನೆವರೆಗೆ ಒಂದು ಬದಿ ಬಾಕ್ಸ್ ಚರಂಡಿ ಮತ್ತು ಎರಡು ಡೆಕ್ ಸ್ಲ್ಯಾಬ್ ನಿರ್ಮಾಣ.
71			ವಾ.ನಂ. 07ರ ಗಾಂಧಿನಗರ 4ನೆ ಕ್ರಾಸ್ ಅಪ್ಸರ್ ಅಹಮದ್ ಮನೆ ಹಿಂಭಾಗ ಪಾರ್ಕ್ ನಿಂದ ಪಾರ್ಕ್ ವರೆಗೆ ಒಂದು ಬದಿ ಬಾಕ್ಸ್ ಚರಂಡಿ ಮತ್ತು ಗಿರಿಯಣ್ಣ ಮನೆಯಿಂದ ವರ್ತಕರ ಭವನದ ತನಕ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ.
72			ವಾ.ನಂ. 07ರ ದೋಣಿಖಣ ರವಿ ಮನೆಯಿಂದ ಷಂಬರ್ ವಿಜಿ ಮನೆಯವರೆಗೆ ಎರಡು ಬದಿ ಬಾಕ್ಸ್ ಚರಂಡಿ ಮತ್ತು 2 ಡೆಕ್ ಸ್ಲ್ಯಾಬ್ ನಿರ್ಮಾಣ. ರವಿ ಮನೆಯಿಂದ ಲೋಕೇಶ್ ಮನೆವರೆಗೆ ಒಂದು ಬದಿ ಬಾಕ್ಸ್ ಚರಂಡಿ ಮತ್ತು ಒಂದು ಡೆಕ್ ಸ್ಲ್ಯಾಬ್ ನಿರ್ಮಾಣ.
73			ವಾ.ನಂ. 07ರ ದೋಣಿಖಣ ಭಾರತೀಯಮ್ಮ ಮನೆ ಪಕ್ಕದಿಂದ ಗಾಂಧಿನಗರದ ವರೆಗೆ ಮಳೆ ನೀರು ಚರಂಡಿ ಮತ್ತು ಕವರಿಂಗ್ ಸ್ಲ್ಯಾಬ್ ನಿರ್ಮಾಣ.
74			ವಾ.ನಂ. 07ರ ದೋಣಿಖಣ ಕೃಷ್ಣಪ್ಪ ನಾಯಕ್ ಮನೆಯಿಂದ ರಾಜು ಶಾಮಿಯಾನದವರೆಗೆ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ.
75			ವಾ.ನಂ. 07ರ ಕೌಶಿಕ್ ಮನೆ ರಸ್ತೆ ಇಂಟರ್ ಲಾಕ್ ಹಾಕಿ ಅಭಿವೃದ್ಧಿಪಡಿಸುಯವುದು
76			ವಾ.ನಂ. 08ರ ಮಾಡ್ಲ ಪ್ರಕಾಶ್ ರವರ ಮನೆ ರಸ್ತೆ ಡಾಂಬರೀಕರಣ
77			ವಾ.ನಂ. 08ರ ಜಯನಗರ 3ನೇ ಅಡ್ಡ ರಸ್ತೆ ಕೇಬಲ್ ಮೋಹನ್ ಮನೆಯಿಂದ ಕೆ.ಪಿ ಶ್ರೀನಿವಾಸ ಮನೆಯವರೆಗೂ। ಬದಿ ಬಾಕ್ಸ್ ಚರಂಡಿ ನಿರ್ಮಾಣ.
78			ವಾ.ನಂ. 08ರ ಲೂಯಿಸ್ ಲೇಔಟ್ ನ ಪ್ರವೀಣ್ ಮನೆಯಿಂದ ಪಾರ್ಕ್ ವರೆಗೆ ಮತ್ತು ಅಡ್ಡರಸ್ತೆ ಡಾಂಬರೀಕರಣ
79	2023-24	ಅಮೃತ್ ನಗರೋತ್ಥಾನ ಹಂತ-4	ವಾ.ನಂ. 09ರ ಗವನಹಳ್ಳಿ ಆಶ್ರಯ ಬಡಾವಣೆ ಒಳಭಾಗದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ.
80			ವಾ.ನಂ. 09ರ ಶ್ರೀನಿವಾಸ ನಗರ ಸುನೀಲ್ ಮನೆಯಿಂದ ಪುಟ್ಟ ರಾಜು ಮನೆವರೆಗೆ ಎರಡು ಬದಿ ಬಾಕ್ಸ್ ಚರಂಡಿ, ಮೂರು ಡೆಕ್ ಸ್ಲ್ಯಾಬ್ ಮತ್ತು ಚಿಂತಾಮಣಿ ದೇವಸ್ಥಾನದ ಎದುರು ರಸ್ತೆಯ ಎಡ ಬದಿ ಮತ್ತು ಅಡ್ಡ ರಸ್ತೆ ಬಾಕ್ಸ್ ಚರಂಡಿ ನಿರ್ಮಾಣ. ಮತ್ತು ಎರಡು ಡೆಕ್ ಸ್ಲ್ಯಾಬ್ ನಿರ್ಮಾಣ.
81			ಶ್ರೀನಿವಾಸ ನಗರ ಕಿಶೋರ್ ಬೈಸಾನಿ ಮನೆ ಹತ್ತಿರ ಎರಡು ಡೆಕ್ ಸ್ಲ್ಯಾಬ್ ನಿರ್ಮಾಣ.
82			ವಾ.ನಂ. 09ರ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಹಿಂಭಾಗದಿಂದ ಕೃಷ್ಣೇಗೌಡರ ಮನೆವರೆಗೆ ರಸ್ತೆ ಅಭಿವೃದ್ಧಿ.
83			ವಾ.ನಂ. 10ರ ಉಂಡೇದಾಸರಹಳ್ಳಿ ರಾಮಯ್ಯ ಸರ್ಕಲ್ ನಿಂದ ರೇಖಾ ಮೀಸ್ ಮನೆಯ ತನಕ ಎರಡು ಬದಿ ಬಾಕ್ಸ್ ಚರಂಡಿ ಮತ್ತು ಡಕ್ ಸ್ಲ್ಯಾಬ್ ನಿರ್ಮಾಣ.
84			ವಾ.ನಂ. 10ರ ರಾಮೇಶ್ವರ ನಗರ ಸತ್ಯನಾರಾಯಣ ಲೇಔಟ್ ಮನೆಯಿಂದ ಹಳ್ಳದ ರಾಮೇಶ್ವರ ದೇವಸ್ಥಾನದ ತನಕ ಒಂದು ಬಾಕ್ಸ್ ಚರಂಡಿ ನಿರ್ಮಾಣ.
85			ವಾ.ನಂ. 10ರ ಉಂಡೇದಾಸರಹಳ್ಳಿ ಸಂಪಿಗೆ ಬಡಾವಣೆಯ ಶಿವಾನಂದ ಸ್ವಾಮಿ ಮನೆಯಿಂದ ಪ್ರೀತಿ ಯೋಗೀಶ್ ಮನೆವರೆಗೆ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ.
86			ವಾ.ನಂ. 10ರ ಉಂಡೇದಾಸರಹಳ್ಳಿ ಮುಖ್ಯ ರಸ್ತೆಯಿಂದ ಮಾಜಿ ಆಶ್ರಯ ಕಮಿಟಿ ಲಕ್ಷ್ಮೀಮ್ಮ ಮನೆ ತನಕ ಅಡ್ಡ ರಸ್ತೆ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ.
87			ವಾ.ನಂ. 10ರ ರಾಮೇಶ್ವರ ನಗರ ಓ.ಹೆಚ್.ಟಿ. ಪಕ್ಕದ ರಸ್ತೆ ಎರಡು ಬದಿ ಬಾಕ್ಸ್ ಚರಂಡಿ ಮತ್ತು ಒಂದು ಡಕ್ ಸ್ಲ್ಯಾಬ್ ನಿರ್ಮಾಣ.
88			ವಾ.ನಂ. 10ರ ಗುರುನಾಥ ಟಾಕೀಸ್ ರಸ್ತೆ ಹೂವಿನ ಚಂದ್ರ ಅಂಗಡಿಯಿಂದ ಶಂಕರ್ ಟೀ ಸ್ಟಾಲ್ ವರೆಗೆ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ.
89			ವಾ.ನಂ. 10ರ ಪಾಯಿಸ್ ಕಾಂಪೌಂಡ್ ಕೆಳಭಾಗ ಸುರೇಶ್ ಶೆಟ್ಟಿ ಮನೆಯಿಂದ ಸಂದಿಲ್ ಮನೆವರೆಗೆ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ.ಸಂ	ವರ್ಷ	ಯೋಜನೆ	ಕಾಮಗಾರಿ
90			ವಾ.ನಂ. 10ರ ಉಂಡೇದಾಸರಹಳ್ಳಿ ರಾಜೇಗೌಡರ ಮನೆಯಿಂದ ಗಿರಿಜಮ್ಮ ಮನೆವರೆಗೆ ರಸ್ತೆ ಡಾಂಬರೀಕರಣ.
91			ವಾ.ನಂ. 10ರ ಉಂಡೇದಾಸರಹಳ್ಳಿ ರೇಖಾ ಟೀಚರ್ ಮನೆ ರಸ್ತೆ ಮತ್ತು ಎದುರು ರಸ್ತೆಯ ಲಕ್ಷ್ಮೀ ರಂಗನಾಥ್ ನಿಲಯದಿಂದ ಸುನೀಲ್ ಮನೆ
92			ತನಕ ಎರಡು ಬದಿ ಬಾಕ್ಸ್ ಚರಂಡಿ ಮತ್ತು ಒಂದು ಡಿಕ್ ಸ್ಲ್ಯಾಬ್ ನಿರ್ಮಾಣ.
93			ವಾರ್ಡ್ ನಂ 15ರ ಮಧುವನ ಲೇಔಟ್ ಫಾನಲ್ ಪಕ್ಕದ ರಸ್ತೆ ಪಾಯಿಸ್ ಕಾಂಪೌಂಡ್ ನಾಗೇಶ್ ಮನೆ ತನಕ ಡಾಂಬರೀಕರಣ
94			ವಾರ್ಡ್ ನಂ 15ರ ಮಧುವನ ಲೇಔಟ್‌ನ ರಜಿನಿ ಬಾಯಿ ಮನೆಯ ರಸ್ತೆ ಡಾಂಬರೀಕರಣ ವಾರ್ಡ್ ನಂ 15ರ ಮಧುವನ ಲೇಔಟ್‌ನ
95			ಆಂತರಿಕ ರಸ್ತೆಗಳ ಮರು ಡಾಂಬರೀಕರಣ
96			ವಾರ್ಡ್ ನಂ: 12. ಭಾರತಿ ವಿದ್ಯಾ ಸಂಸ್ಥೆ ಹಿಂಭಾಗದ ರಸ್ತೆ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ
97			ವಾ.ನಂ. 12ರ ಆಟೋ ಸ್ಟ್ಯಾಂಡ್ ಹತ್ತಿರದ ಶರವಣ ಅಂಗಡಿಯಿಂದ ಪಾರ್ಕ್ ವರೆಗೆ ರಸ್ತೆ ಡಾಂಬರೀಕರಣ
98			ವಾ.ನಂ 14ರ ದರ್ಜಿ ಬೀದಿಯ ಪಾಂಡುರಂಗ ದೇವಸ್ಥಾನದಿಂದ ತಿಮ್ಮೇಗೌಡರ ಮನೆಯವರೆಗೆ ಶಮನಾಥ್ ಮನೆಯಿಂದ ಗಣೇಶ್ ಮನೆಯವರಿಗೆ ಮತ್ತು ಲಕ್ಷ್ಮೀನಾರಾಯಣ ದೇವಸ್ಥಾನದ ಹಿಂಬದಿಯಿಂದ ನಾಗೇಂದ್ರ ಡಾಕ್ಟರ್ ಮನೆಯವರೆಗೆ ಮತ್ತು ಎಂಜಿ ರೋಡ್ ಕ್ರಾಸ್ ಸಂಗೀತ ಜ್ಯುವೆಲ್ಸ್ ತನಕ ಮತ್ತು ಎಂಜಿ ರೋಡ್ ಕ್ರಾಸ್ ಆಂಜನೇಯ ದೇವಸ್ಥಾನದ ಬೀದಿಯಿಂದ ಮಾರ್ಕೆಟ್ ರೋಡ್ ಲಕ್ಷ್ಮೀನಾರಾಯಣ ದೇವಸ್ಥಾನದವರೆಗೆ ರಸ್ತೆ ಡಾಂಬರೀಕರಣ
99			ವಾ.ನಂ 14ರ ಅಗಸರ ಬೀದಿಯ ಟೈಟಾನಿಕ್ ಸಲೂನ್ ಶಾಪ್‌ನಿಂದ ಬನಶಂಕರಿ ದೇವಸ್ಥಾನದ ವರೆಗೆ ಪಶ್ಚಿಮ ಮತ್ತು ಪೂರ್ವ ಸಾಲಿನ ಎರಡು ಬದಿ ಚರಂಡಿ ಮತ್ತು ರಸ್ತೆ ಡಾಂಬರೀಕರಣ ಮತ್ತು ಅಗಸರ ಬೀದಿ ಸತೀಶ್ ಮನೆಯಿಂದ ನಕ್ಷ ಬಿಲ್ಡರ್ಸ್ ಕಿರಣ್ ಆಫೀಸ್ ತನಕ ರಸ್ತೆ ಡಾಂಬರೀಕರಣ
100	2023-24	ಅಮೃತ್ ನಗರೋತ್ಥಾನ ಹಂತ-4	ವಾರ್ಡ್ ನಂ. 19ರ ಪೆನ್ ಷನ್ ಮೊಹಲ್ಲಾ ಫಾನಲ್ ಭಾಗದ ಆಟೋ ನಾಗರಾಜ್ ಅವರ ಮನೆಯ ಹತ್ತಿರ ಶ್ರೀ ರೇಣುಕಾಂಬ ದೇವಸ್ಥಾನದವರೆಗೆ ಬಾಕ್ಸ್ ಚರಂಡಿ ನಿರ್ಮಾಣ
101			ವಾರ್ಡ್ ನಂ. 19ರ ಆರ್.ಎಸ್.ಎಸ್ ಸಂದೀಪ್ ರವರ ಮನೆಯ ಪಕ್ಕದ ರಸ್ತೆಗೆ ಕಾಂಕ್ರೀಟೀಕರಣ ಹಾಗೂ ಬಾಕ್ಸ್ ಚರಂಡಿ ನಿರ್ಮಾಣ
102			ವಾರ್ಡ್ ನಂ 16ರ ಉಪ್ಪಳ್ಳಿ ಹೀರೋ ಹೋಂಡಾ ಶೋರೂಮ್ ನಿಂದ ಗಣಪತಿ ದೇವಸ್ಥಾನದ ತನಕ ಬಾಕ್ಸ್ ಚರಂಡಿ ನಿರ್ಮಾಣ
103			ವಾರ್ಡ್ ನಂ 16ರ ಉಪ್ಪಳ್ಳಿ ಆಲದ ಮರದಿಂದ ದೇವಿರಮ್ಮ ದೇವಸ್ಥಾನದ ವರೆಗೆ ಚರಂಡಿ ನಿರ್ಮಾಣ
104			ವಾರ್ಡ್ ನಂಬರ್ 17ರ ಕಲ್ಲುದೊಡ್ಡಿ ಶಾಂತಿನಗರ 1ನೇ. 2ನೇ ಮತ್ತು ಅಡ್ಡ ರಸ್ತೆಗಳಲ್ಲಿ ಬಾಕ್ಸ್ ಚರಂಡಿ ಕಾಮಗಾರಿ
105			ವಾರ್ಡ್ ನಂಬರ್ 17ರ ಹಿರೇಕೊಳಲೆ ರಸ್ತೆ ಪೈ ಲೇಔಟ್ ಮುಬಾರಕ್ ಮನೆ ರಸ್ತೆ ಬಾಕ್ಸ್ ಚರಂಡಿ ಕಾಮಗಾರಿ
106			ವಾರ್ಡ್ ನಂ. 18ರ ಕಲ್ಲು ದೊಡ್ಡಿ ಅಂಗಡಿ ಬಾಬಣ್ಣ ಮನೆಯಿಂದ ಚೌಡಮ್ಮ ಮತ್ತು ಭೂತಪ್ಪ ದೇವಸ್ಥಾನ ತನಕ ಬಾಕ್ಸ್ ಚರಂಡಿ ನಿರ್ಮಾಣ
107			ವಾರ್ಡ್ ನಂ. 18ರ ಕಲ್ಲುದೊಡ್ಡಿ ರಾಜೇಶ್ ಮನೆಯಿಂದ ಗಣಪತಿ ದೇವಸ್ಥಾನದ ತನಕ ಕಾಂಕ್ರೀಟ್ ರಸ್ತೆ ಮತ್ತು ಎರಡು ಬದಿ ಚರಂಡಿ ನಿರ್ಮಾಣ
108			ವಾರ್ಡ್ ನಂ. 18ರ ಕಲ್ಲುದೊಡ್ಡಿ ಗಣಪತಿ ದೇವಸ್ಥಾನದ ಹಿಂಭಾಗದ ರಸ್ತೆ ಕಾಂಕ್ರಿಟೀಕರಣ ಮತ್ತು ಬಾಕ್ಸ್ ಚರಂಡಿ ನಿರ್ಮಾಣ
109			ವಾರ್ಡ್ ನಂ. 18ರ ಕಲ್ಲುದೊಡ್ಡಿ ಸಿಆರ್ ಸಿದ್ದಿಕ್ ಮನೆಯಿಂದ ಸೋಡಾ ರಾಜಣ್ಣ ಮನೆತನಕ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ
110			ವಾರ್ಡ್ ನಂ. 18ರ ಕಲ್ಲುದೊಡ್ಡಿ ಕ್ಯಾಂಟೀನ್ ಗೋಪಿ ಮನೆಯಿಂದ ದೊರೆ ಮನೆ ತನಕ ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ
111			ವಾರ್ಡ್ ನಂ. 18ರ ಇಂದಿರಾಗಾಂಧಿ ಬಡಾವಣೆ ಫಸ್ಟ್ ಮೇನ್ ರೋಡ್ ಬಾಕ್ಸ್ ಚರಂಡಿ ನಿರ್ಮಾಣ
112			ವಾರ್ಡ್ ನಂ. 18ರ ವಾಜಪೇಯಿ ಬಡಾವಣೆ ಆಶಾ ಪ್ಲಾಜಿನ್ ಸ್ಟೋರ್ ನಿಂದ ನೂರಿ ಮನೆ ತನಕ ರಸ್ತೆ ಡಾಂಬರೀಕರಣ
			ವಾರ್ಡ್ ನಂ 20ರ ಮನೋಹರ್ ಮನೆಯ ಮುಂಭಾಗದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ
			ವಾರ್ಡ್ ನಂ 20ರ ಪೊಲೀಸ್ ಸ್ಟೇಷನ್ ಹಿಂಭಾಗದಿಂದ ಹರೀಶ್ ಮನೆಯವರೆಗೆ ಬಾಕ್ಸ್ ಚರಂಡಿ ನಿರ್ಮಾಣ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ.ಸಂ	ವರ್ಷ	ಯೋಜನೆ	ಕಾಮಗಾರಿ
113			ವಾರ್ಡ್ ನಂ 20ರ ಪೊಲೀಸ್ ಸ್ಟೇಷನ್ ಪಕ್ಕದ ಸಮುದಾಯ ಭವನದ ರಸ್ತೆಗೆ ಇಂಟರ್ ಲಾಕ್ ಅಳವಡಿಸುವುದು
114			ವಾರ್ಡ್ ನಂ 21ರ ಕರಾಳಮ್ಮ ರಸ್ತೆ ಕಾಂಕ್ರೀಟೀಕರಣ ಮತ್ತು ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ
115			ವಾರ್ಡ್ ನಂ 21ರ ನೆಹರೂ ರಸ್ತೆಯ ಎರಡು ಬದಿಯಲ್ಲಿ ಬಾಕ್ಸ್ ಚರಂಡಿ ನಿರ್ಮಾಣ
116			ವಾರ್ಡ್ ನಂ 21ರ ಆಂಡೆಭತ್ರದಿಂದ ಕೊಲ್ಲಾಪುರದಮ್ಮ ದೇವಸ್ಥಾನದ ರಸ್ತೆ ಎರಡು ಬದಿಯಲ್ಲಿ ಬಾಕ್ಸ್ ಚರಂಡಿ ನಿರ್ಮಾಣ
117			ವಾ.ನಂ. 21ರ ವೈಶ್ಯ ಬ್ಯಾಂಕ್ ಪಕ್ಕದಿಂದ ಗುಂಡಪ್ಪ ರಸ್ತೆವರೆಗೆ ಕಾಂಕ್ರೀಟೀಕರಣ
118			ವಾ.ನಂ.21ರ ಮುನ್ಸಿಪಲ್ ಆಸ್ಪತ್ರೆ ರಸ್ತೆ ಅಭಿವೃದ್ಧಿ
119			ವಾರ್ಡ್ ನಂಬರ್ 22 ಮಂಗಳ ಮೆಡಿಕಲ್ಸ್ ನಿಂದ ಶರೀಫ್ ಗಲ್ಲಿ ಮದೀನ ಮಸೀದಿ ರವರೆಗೆ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ
120			ವಾರ್ಡ್ ನಂಬರ್ 22 ಚಾಮುಂಡಿ ಕಾಫಿ ಕ್ಯೂರಿಂಗ್ ಪಕ್ಕ ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ
121			ವಾರ್ಡ್ ನಂಬರ್ 22 ಅಜಯ್ ಟೈಲರ್ ಪಕ್ಕದ ರಸ್ತೆ ಕಾಂಕ್ರೀಟೀಕರಣ
122			ವಾರ್ಡ್ ನಂ 23ರ ಬೈಪಾಸ್ ಕಡೆಯಿಂದ ದಂಟರಮಕ್ಕಿ ಹೋಗುವ ರಸ್ತೆಯ ನೇ ಅಡ್ಡ ರಸ್ತೆ ಮಾಸ್ತಿಗೌಡರ ಮನೆ ರಸ್ತೆ ಪಿ.ಎ. ರವಿ ಮನೆವರೆಗೆ ಡಾಂಬರೀಕರಣ ಮತ್ತು ಬಾಕ್ಸ್ ಚರಂಡಿ.
123			ವಾ.ನಂ.24ರ ಕುರುವಂಗಿ ರಸ್ತೆಯಿಂದ ಸಿದ್ಧರಾಮೇಶ್ವರ ದೇವಸ್ಥಾನದ ತನಕ ರಸ್ತೆ ಡಾಂಬರೀಕರಣ.
124			ವಾರ್ಡ್ ನಂಬರ್ 24ರ ಚಂದ್ರಶೇಖರ್ ರವರ ಮನೆಯಿಂದ ಬಸವನಹಳ್ಳಿ ಕೆರೆವರೆಗೆ ಬಾಕ್ಸ್ ಚರಂಡಿ ನಿರ್ಮಾಣ.
125			ವಾರ್ಡ್ ನಂಬರ್ 25ರ ವಿಜಯಪುರ ಪ್ರೈಮರಿ ಶಾಲೆ ರಸ್ತೆ ಬದಿ ಚರಂಡಿ ನಿರ್ಮಾಣ
126			ವಾರ್ಡ್ ನಂಬರ್ 25ರ ವಿಜಯಪುರ ಉಷಾ ಲಾಡ್ಜ್ ಹಿಂಭಾಗದ ರಸ್ತೆಯಲ್ಲಿ ಚರಂಡಿ ನಿರ್ಮಾಣ
127			ವಾರ್ಡ್ ನಂಬರ್ 25ರ ವಿಜಯಪುರ ಆಂಜನೇಯ ಸ್ವಾಮಿ ದೇವಸ್ಥಾನದ ರಸ್ತೆಯಲ್ಲಿ ಬಾಕ್ಸ್ ಚರಂಡಿ
128			ವಾರ್ಡ್ ನಂಬರ್ 25ರ ವಿಜಯಪುರ ಎರಡನೇ ಮುಖ್ಯ ರಸ್ತೆ ತಾರಾನಾಥ್ ಮನೆಯಿಂದ ಮಲ್ಲೂದೂರು ರಸ್ತೆ ತನಕ ಬಾಕ್ಸ್ ಚರಂಡಿ
129			ವಾರ್ಡ್ ನಂಬರ್ 28ರ ತಿಲಕ್ ಪಾರ್ಕ್ ರಸ್ತೆ ಕೆಇಬಿ ಕ್ವಾಟ್ರಸ್ ನಿಂದ ತಿಲಕ್ ಪಾರ್ಕ್ ತನಕ ಬಾಕ್ಸ್ ಚರಂಡಿ ನಿರ್ಮಾಣ
130			ವಾರ್ಡ್ ನಂಬರ್ 28ರ ರೇಣುಕಾಚಾರ್ಯ ಛತ್ರದ ಹಿಂಭಾಗದ ರಸ್ತೆಯಲ್ಲಿ ಬಾಕ್ಸ್ ಚರಂಡಿ ಮತ್ತು ರಸ್ತೆ ಡಾಂಬರೀಕರಣ
131			ವಾರ್ಡ್ ನಂಬರ್ 28ರ ಭುವನೇಂದ್ರ ಶಾಲೆ ಹಿಂಭಾಗದ ಕನ್ನರ್ವನ್ಸಿ ರಸ್ತೆ ಕಾಂಕ್ರೀಟೀಕರಣ ಮತ್ತು ಬಾಕ್ಸ್ ಚರಂಡಿ
132			ವಾ.ನಂ.28ರ ಡಿ.ಸಿ.ಸಿ. ಬ್ಯಾಂಕ್ ಹಿಂಭಾಗದ ರಸ್ತೆ ಬಾಕ್ಸ್ ಚರಂಡಿ
133		ಅಮೃತ್	ವಾರ್ಡ್ ನಂಬರ್ 29ರ ನೆಹರುನಗರ ವೆಲ್ಕಮ್ ಸ್ಟೋರ್ ಮುಂಭಾಗದ ರಸ್ತೆ ಡಾಂಬರೀಕರಣ
134	2023-24	ನಗರೋತ್ಥಾನ	ವಾರ್ಡ್ ನಂಬರ್ 29ರ ನೆಹರುನಗರ ಗುಳ್ಳಮ್ಮ ದೇವಸ್ಥಾನದ ರಸ್ತೆ ಡಾಂಬರೀಕರಣ
135		ಹಂತ-4	ವಾರ್ಡ್ ನಂಬರ್ 29ರ ನೆಹರೂನಗರ ವನಜ ಪ್ರಿಂಟರ್ಸ್ ಕೆಳಭಾಗದ ರಸ್ತೆ ಡಾಂಬರೀಕರಣ
136			ವಾರ್ಡ್ ನಂಬರ್ 29ರ ವನಜ ಪ್ರಿಂಟರ್ಸ್ ರಸ್ತೆ ಉಳಿಕೆ ಬಾಕ್ಸ್ ಚರಂಡಿ ನಿರ್ಮಾಣ
137			ವಾರ್ಡ್ ನಂ 29ರ ನೆಹರುನಗರ ಬೋಜೆಗೌಡರ ಮನೆ ರಸ್ತೆ ಕಾಂಕ್ರೀಟೀಕರಣ
138			ವಾರ್ಡ್ ನಂಬರ್ 26ರ ಕತ್ರಿ ಮಾರಮ್ಮ ದೇವಸ್ಥಾನದ ಹಿಂಭಾಗ ರಸ್ತೆ, ಕುಂಬಾರ ಬೀದಿ 1 & 2 ನೇ ಕ್ರಾಸ್, ನೇಕಾರ ಬೀದಿ (ಬಸವನಹಳ್ಳಿ), ಅಂಚೆಲಿಂಗಣ್ಣ ಬೀದಿ, ಗೋಪಾಲಸ್ವಾಮಿ ದೇವಸ್ಥಾನದ ಹಿಂಭಾಗದ ರಸ್ತೆ, ಬಸವನಹಳ್ಳಿ ಮುಖ್ಯರಸ್ತೆಯಿಂದ ವೀರಭದ್ರೇಶ್ವರ ದೇವಸ್ಥಾನದ ತನಕ(ನೃಪತುಂಗ ರಸ್ತೆ) ಗಾಯಿತ್ರಿ ಪ್ರೀಂಟರ್ಸ್ ರಸ್ತೆ ಡಾಂಬರೀಕರಣ
139			ವಾರ್ಡ್ ನಂಬರ್ 26ರ ವಿವೇಕಾನಂದ ಕಾಲೇಜು ಪಕ್ಕ, ಶಿವಜ್ಯೋತಿ ಮನೆಯಿಂದ ನಗರಸಭೆ ನಿವೇಶನ ಅಂಗನವಾಡಿ ತನಕ ಬಾಕ್ಸ್ ಚರಂಡಿ ಕಾಮಗಾರಿ
140			ವಾರ್ಡ್ ನಂಬರ್ 26ರ ಬ್ರಹ್ಮಕುಮಾರಿ ಭವನದ ಮುಂಭಾಗ ದಿಂದ ಮಠದ ಅಯ್ಯನವರ ಮನೆತನಕ ಬಾಕ್ಸ್ ಚರಂಡಿ ನಿರ್ಮಾಣ
141			ವಾರ್ಡ್ ನಂಬರ್ 26ರ ನೃಪತುಂಗ ರಸ್ತೆ ಹೈಟೆಕ್ ಸರ್ವಿಸ್ ಸ್ಟೇಷನ್ ಇಂದ ರಾಮಸ್ವಾಮಿಯವರ ಮನೆತನಕ ಚರಂಡಿ ನಿರ್ಮಾಣ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ.ಸಂ	ವರ್ಷ	ಯೋಜನೆ	ಕಾಮಗಾರಿ
142			ವಾರ್ಡ್ ನಂಬರ್ 26ರ ಬಸವನಹಳ್ಳಿ ನೇಕಾರ ಬೀದಿ ರಸ್ತೆ ಬಾಕ್ಸ್ ಚರಂಡಿ ನಿರ್ಮಾಣ
143			ವಾರ್ಡ್ ನಂಬರ್ 27ರ ಅರವಿಂದನಗರ ಡಾಕ್ಟರ್ ಶಿವಕುಮಾರ ಸ್ವಾಮೀಜಿ ಪಾರ್ಕ್ ನಿಂದ ಜೆ ಬಿ ಮಹೇಶ್ ಮನೆತನಕ ರಸ್ತೆ ಅಭಿವೃದ್ಧಿ
144			ವಾರ್ಡ್ ನಂಬರ್ 27ರ ಅರವಿಂದ ನಗರ ಥಿಯೇಟರ್ ಕಮಲ್ ಮನೆಯಿಂದ ಕಾಳಿದಾಸ ನಗರದ ತನಕ ರಸ್ತೆ ಡಾಂಬರೀಕರಣ
145			ವಾರ್ಡ್ ನಂಬರ್ 27ರ ಡಿಸಿಸಿ ಬ್ಯಾಂಕ್ ಲೋಕ ಗೌಡರ ಮನೆ ಮುಂಭಾಗದಿಂದ ಚಾನಲ್ ಪಕ್ಕದ ರಸ್ತೆ ವೀರೇಂದ್ರ ಹೆಗಡೆ ರಸ್ತೆ ತನಕ ರಸ್ತೆ ಡಾಂಬರೀಕರಣ
146			ವಾರ್ಡ್ ನಂಬರ್ 27ರ ಅರವಿಂದನಗರ ಬಾಲಾಜಿ ರಸ್ತೆ ಮತ್ತು ರಾಯ್ಕರ್ ಮನೆ ರಸ್ತೆ ವಾರ್ಡ್ ನಂಬರ್ 27ರ ಅರವಿಂದ ನಗರ ಚೌಡೇಶ್ವರಿ ದೇವಸ್ಥಾನದ ರಸ್ತೆ ಡಾಂಬರೀಕರಣ
147			ವಾರ್ಡ್ ನಂಬರ್ 27ರ ಅರವಿಂದನಗರ ಶ್ರೀಲೇಖ ಥಿಯೇಟರ್ ಪಕ್ಕದ ಕೊಡನಹಳ್ಳಿ ರುದ್ರಗೌಡರ ಮನೆ ರಸ್ತೆ ಡಾಂಬರೀಕರಣ
148			ವಾರ್ಡ್ ನಂ 30ರ ಮಂಗಳ ಮನೆ ರಸ್ತೆ ಕಾಂಕ್ರೀಟೀಕರಣ ಮತ್ತು ರಾಬರ್ಟ್ ಮನೆ ರಸ್ತೆ ಕಾಂಕ್ರೀಟೀಕರಣ ಮತ್ತು ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ
149			ವಾರ್ಡ್ ನಂ 30ರ ಶೇಕಾಂತ್ ಮನೆ ಹಿಂಭಾಗ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ
150			ವಾರ್ಡ್ ನಂ 30ರ ನೂರಾನಿ ಮಸೀದಿ ಇನೇ ತಿರುವು ಇಸ್ಮಾಯಿಲ್ ಮನೆಯಿಂದ ಅಕ್ಕಂರವರ ಮನೆ ತನಕ ಮತ್ತು ಶಹರಿನ್ ಮನೆಯಿಂದ ಆರಿಫ್ ಮನೆಯವರೆಗೆ ಬಾಕ್ಸ್ ಚರಂಡಿ ನಿರ್ಮಾಣ
151			ವಾ.ನಂ 31ರ ಮೂರ್ತಿ ಜೆಂಟ್ಸ್ ಪಾರ್ಲರ್ ಮುಂಭಾಗದ ರಸ್ತೆ ಕಾಂಕ್ರೀಟೀಕರಣ ಮತ್ತು ಬಾಕ್ಸ್ ಚರಂಡಿ ನಿರ್ಮಾಣ
152			ವಾ.ನಂ 31ರ ಆದಿಭೂತಪ್ಪ ದೇವಸ್ಥಾನದ ಹಿಂಭಾಗದ ರಸ್ತೆ ಮೇಲ್ಯಾಗದಲ್ಲಿ ರಮೇಶ್ ಮನೆಯಿಂದ ರಾಜ್ ಕುಮಾರ್ ಮಾಸ್ಟರ್ ಮನೆಯವರೆಗೆ ಕಾಂಕ್ರೀಟೀಕರಣ ಮತ್ತು ಬಾಕ್ಸ್ ಚರಂಡಿ ನಿರ್ಮಾಣ
153			ವಾರ್ಡ್ ನಂ 31 ರ ಗುಡ್ ಮಾರ್ನಿಂಗ್ ಶಾಪ್ ಮುಂಭಾಗ 3 ಅಡ್ಡ ರಸ್ತೆಗಳಿಗೆ ಕಾಂಕ್ರೀಟೀಕರಣ ಮತ್ತು 2 ಬದಿ ಬಾಕ್ಸ್ ಚರಂಡಿ ನಿರ್ಮಾಣ ಮತ್ತು ಶೇಷಗೌಡ ರ ಮನೆ ಕನ್ಸ್ ರ್ ವೆನ್ಸಿ ರಸ್ತೆ ಕಾಂಕ್ರೀಟೀಕರಣ
154			ವಾ.ನಂ. 32ರ ಗೌರಿಕಾಲುವೆ ನಗರಸಭಾ ಸದಸ್ಯರಾದ ಭವ್ಯ ಮಂಜುನಾಥ್ ಮನೆ ರಸ್ತೆ ಡಾಂಬರೀಕರಣ.
155			ವಾ.ನಂ. 32ರ ಗೌರಿಕಾಲುವೆ ಸಂತೆ ದೇವರಾಜ್ ಮನೆ ರಸ್ತೆ ಡಾಂಬರೀಕರಣ.
156			ವಾ.ನಂ. 32ರ ಗೌರಿಕಾಲುವೆ ಥಿಯೇಟರ್ ಮಂಜಣ್ಣ ಮನೆ ರಸ್ತೆ ಡಾಂಬರೀಕರಣ.
157			ವಾ.ನಂ. 32ರ ಗೌರಿಕಾಲುವೆ ಕಾರ್ಪೆಂಟರ್ ಬಾಬಣ್ಣ ಮನೆ ರಸ್ತೆ ಡಾಂಬರೀಕರಣ.
158			ವಾ.ನಂ. 32ರ ಗೌರಿಕಾಲುವೆ ಪ್ರೆಸ್ ಕಿಶೋರ್ ಮನೆ ರಸೆ ಕಲ್ಯಾಣ ಕುಮಾರ್ ಮನೆವರೆಗೆ ಮತ್ತು ಹೊನ್ನಣ್ಣ ಟೈಲರ್ ಮನೆ ಪಕ್ಕ ಕನ್ಸರ್ ವೆನ್ಸಿ ರಸ್ತೆ ಇಂಟರ್ ಲಾಕ್ ಹಾಕಿ ಅಭಿವೃದ್ಧಿಪಡಿಸುವುದು
159			ವಾ.ನಂ. 32ರ ಗೌರಿಕಾಲುವೆ ಕಾರ್ಪೆಂಟರ್ ಬಾಬಣ್ಣ ಮನೆ ರಸ್ತೆ ಚಂದ್ರಶೇಖರ್ ಮನೆವರೆಗೆ ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ.
160		ಅಮೃತ್	ವಾ.ನಂ. 32ರ ಗೌರಿಕಾಲುವೆ ಹೊನ್ನಣ್ಣ ಟೈಲರ್ ಮನೆ ರಸ್ತೆ ಒಂದು ಬದಿ ಬಾಕ್ಸ್ ಚರಂಡಿ ಮತ್ತು ಒಂದು ಡಕ್ ಸ್ಲಾಬ್ ನಿರ್ಮಾಣ.
161	2023-24	ನಗರೋತ್ಥಾನ	ವಾ.ನಂ. 32ರ ಗೌರಿಕಾಲುವೆ ಮರಿಯಾ ಎಸ್.ಟಿ.ಡಿ. ರಸ್ತೆ ಮತ್ತು ಅಕ್ಕಪಕ್ಕದ ರಸ್ತೆಗಳಲ್ಲಿ ಒಂದು ಬದಿ ಬಾಕ್ಸ್ ಚರಂಡಿ ನಿರ್ಮಾಣ.
162		ಹಂತ-4	ವಾ.ನಂ.32ರ ಗೌರಿಕಾಲುವೆ ಮಹಮ್ಮದಿಯ ಮಸೀದಿ ಹಿಂಭಾಗದ ರಸ್ತೆ ಎರಡು ಬದಿ ಬಾಕ್ಸ್ ಚರಂಡಿ ಮತ್ತು 4 ಡಕ್ ಸ್ಲಾಬ್ ನಿರ್ಮಾಣ.
163			ವಾ.ನಂ. 32ರ ಗೌರಿಕಾಲುವೆ ಸಬಿತಾ ಮನೆ ಮತ್ತು ಓ.ಹೆಚ್.ಟಿ ಪಕ್ಕದ ಕನ್ಸರ್ವೆನ್ಸಿ ರಸ್ತೆಗೆ ಬಾಕ್ಸ್ ಚರಂಡಿ ಮತ್ತು ಡಕಸ್ಲಾಬ್ ನಿರ್ಮಾಣ.
164			ವಾ.ನಂ. 32ರ ಗೌರಿಕಾಲುವೆ ತೆರದಾಳ್ ಮಂಜಣ್ಣ ಮನೆ ರಸ್ತೆ ಎರಡು ಬದಿ ಬಾಕ್ಸ್ ಚರಂಡಿ ಮತ್ತು ಎರಡು ಡಕ್ ಸ್ಲಾಬ್ ನಿರ್ಮಾಣ.
165			ವಾ.ನಂ. 33ರ ಸ್ವಾಮಿಯಣ್ಣ ಮನೆಯಿಂದ ಜೋಸೆಫ್ ಮನೆವರೆಗೆ ಕಾಂಕ್ರೀಟೀಕರಣ.
166			ವಾ.ನಂ. 33 ರಾಮನಹಳ್ಳಿ ಬಚ್ಚಣ್ಣ ಮನೆಯಿಂದ ರಾಣಿ ಮನೆವರೆಗೆ ಒಂದು ಬದಿ ಬಾಕ್ಸ್ ಚರಂಡಿ ಮತ್ತು ಜಗದೀಶ್ ಮನೆ ಹತ್ತಿರ ಡಕ್ ಸ್ಲಾಬ್ ನಿರ್ಮಾಣ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರ.ಸಂ	ವರ್ಷ	ಯೋಜನೆ	ಕಾಮಗಾರಿ
167			ವಾ.ನಂ. 33ರ ರಾಮನಹಳ್ಳಿ ಓಂ ಶಕ್ತಿ ದೇವಸ್ಥಾನದ ರಸ್ತೆ ಎರಡು ಬದಿ ಬಾಕ್ಸ್ ಚರಂಡಿ ಮತ್ತು ಸಶ್ಥಾನದ ಹಿಂಭಾಗದ ಉಳಿಕೆ ಬಾಕ್ಸ್ ಚರಂಡಿ ನಿರ್ಮಾಣ.
168			ವಾ.ನಂ. 34ರ ಕೆಂಪನಹಳ್ಳಿ ಕೆ.ಇ.ಬಿ ರಾಮಣ್ಣ ಮನೆ ಹತ್ತಿರದಿಂದ ತಿಮ್ಮೇಗೌಡರ ಮನೆಯ ವರೆಗೆ ರಸ್ತೆ ಕಾಂಕ್ರೀಟೀಕರಣ ಮತ್ತು ಬಾಕ್ಸ್ ಚರಂಡಿ , ಡೆಕ್ ಸ್ಲಾಬ್ ನಿರ್ಮಾಣ
169			ವಾ.ನಂ. 34ರ ಬಾಳೇಹಳ್ಳಿ ಬಿ.ಎನ್ ಜಗದೀಶ್ ವರವ ಮನೆ ಹತ್ತಿರದಿಂದ ಸಿದ್ಧೇಶ್ವರ ದೇವಸ್ಥಾನದ ವರೆಗೆ ಕಾಂಕ್ರೀಟೀಕರಣ
170			ವಾ.ನಂ. 34ರ ಮುಳ್ಳೇಗೌಡ ಮನೆಯಿಂದ ಪ್ರಿಯ ಜೆರಾಕ್ಸ್ ಅಶೋಕ್ ಮನೆಯವರೆಗೆ ಚರಂಡಿ ಅಭಿವೃದ್ಧಿ ಕಾಮಗಾರಿ
171			ವಾ.ನಂ. 34ರ ಚಂದ್ರ ನಗರ ಕುಮಾರ್ ನಾಯ್ಕ ಮನೆ ರಸ್ತೆ ಕಾಂಕ್ರೀಟೀಕರಣ
172			ವಾ.ನಂ. 35ರ ಕೆಂಪನಹಳ್ಳಿ ತರಕಾರಿ ವಾಸು ಮನೆಯಿಂದ ಹುಲಿಯಪ್ಪ ಮನೆವರೆಗೆ ಡಾಂಬರೀಕರಣ.
173			ವಾ.ನಂ. 35ರ ಕೆಂಪನಹಳ್ಳಿ ಮಲೆಯಾಲಿ ಚಂದ್ರಣ್ಣ ಮನೆಯಿಂದ ಆಲ್ಲೂರ್ ಸತೀಶ್ ಮನೆವರೆಗೆ (ಗಾಯಿತ್ರಿ ಚೌಟರಿ ಹಿಂಭಾಗ) ಡಾಂಬರೀಕರಣ.
174			ವಾ.ನಂ.35ರ ಕುಮಾರಸ್ವಾಮಿ ಮನೆ ರಸ್ತೆ ಡಾಂಬರೀಕರಣ.
175			ವಾ.ನಂ. 35ರ ರತ್ನಗಿರಿ ಬಡಾವಣೆ ನೇತ್ರಮ್ಮ ಮನೆಯಿಂದ ಪುಟ್ಟ ಸ್ವಾಮಿ ಗೌಡರ ಮನೆ ಹಾಗೂ ಡಾ. ಮೋಹನ್ ಮನೆವರೆಗೆ ಎರಡು ಬದಿ ಬಾಕ್ಸ್ ಚರಂಡಿ ನಿರ್ಮಾಣ.
176			ವಾ.ನಂ. 35ರ ಕೆಂಪನಹಳ್ಳಿ ಶಿವಮೂರ್ತಿ ಪ್ರಾಂಶುಪಾಲರ ಮನೆ ಪಕ್ಕದ ರಸ್ತೆ ವಿಜಯಮ್ಮ ಮನೆವರೆಗೆ ಎರಡು ಬದಿ ಮಳೆ ನೀರು ಚರಂಡಿ ಮತ್ತು ಒಂದು ಡೆಕ್ ಸ್ಲಾಬ್ ನಿರ್ಮಾಣ.
177			ವಾ.ನಂ. 35ರ ಕೆಂಪನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಶೋಭಾ ರವರ ಮನೆಯಿಂದ ರಫೀಕ್ ಮನೆವರೆಗೆ ಬಾಕ್ಸ್ ಚರಂಡಿ ನಿರ್ಮಾಣ.
178			ವಾ.ನಂ. 35ರ ಕೆಂಪನಹಳ್ಳಿ ಮಮತಾ ಲಾಯರ್ ಮನೆ ರಸ್ತೆ ಎರಡು ಬದಿ ಬಾಕ್ಸ್ ಚರಂಡಿ ಮತ್ತು ಡೆಕ್ ಸ್ಲಾಬ್ ನಿರ್ಮಾಣ.
179			ವಾ.ನಂ. 35ರ ಧರ್ಮಣ್ಣ ಮನೆಯಿಂದ ಡಿಶ್ ಕುಮಾರ್ ಮನೆವರೆಗೆ ಬಾಕ್ಸ್ ಚರಂಡಿ ನಿರ್ಮಾಣ.
180			ವಾ.ನಂ. 35ರ ಆಶಾ ಕಿರಣ ಅಂಧ ಮಕ್ಕಳ ಶಾಲೆಯಿಂದ ಕನ್ನಡ ಭವನದವರೆಗೆ ಡಾಂಬರೀಕರಣ.
181	2023-24	ಅಮೃತ್ ನಗರೋತ್ಥಾನ ಹಂತ-4	ಹೌಸಿಂಗ್ ಬೋರ್ಡ್ ಮೇಲ್ಸಾಗದಿಂದ ಹುಣಸುವಳ್ಳಿ ಕರೆಗೆ ವರೆಗೆ ಮಳೆ ನೀರು ಚರಂಡಿ ನಿರ್ಮಾಣ.
182			ವಾ.ನಂ. 04ರ ಹಿರೇಮಗಳೂರು ವ್ಯಾಪ್ತಿಯ ಎನ್.ಹೆಚ್. ರಸ್ತೆಯ ನಂದಾ ಉನ್ನತಿ ಸ್ಕೂರ್ಸ್ ಹತ್ತಿರದ ಬಲಭಾಗದಿಂದ ಜಾನ್ಯಾ ರವರ ಮನೆವರೆಗೆ ಮಳೆ ನೀರು ಚರಂಡಿ ನಿರ್ಮಾಣ.
183			ವಾ.ನಂ. 07ರ ವರ್ತಕರ ಭವನದ ರಸ್ತೆ ಪಾರ್ಕ್ ನಿಂದ ಫಾನಲ್ ವರೆಗೆ ಒಂದು ಬದಿ ಮಳೆ ನೀರು ಚರಂಡಿ ಮತ್ತು ಡೆಕ್ ಸ್ಲಾಬ್ ನಿರ್ಮಾಣ.
184			ವಾ.ನಂ. 08ರ ಜಯನಗರ ಮುಖ್ಯ ರಸ್ತೆ ಪುಷ್ಪ ರಾಜೇಂದ್ರ ರವರ ಮನೆ ಹತ್ತಿರದಿಂದ ಗ್ಯಾರೇಜ್ ವರೆಗೆ ಮಳೆ ನೀರು ಚರಂಡಿ ನಿರ್ಮಾಣ.
185			ವಾ.ನಂ. 32ರ ವ್ಯಾಪ್ತಿಯ 60 ಅಡಿ ರಸ್ತೆಯಲ್ಲಿ ಒಂದು ಬದಿ ಮಳೆ ನೀರು ಚರಂಡಿ ಮತ್ತು ಡೆಕ್ ಸ್ಲಾಬ್‌ಗಳ ನಿರ್ಮಾಣ.
186			ವಾ.ನಂ. 33ರ ಶಾದಿಮಹಲ್ ಪಕ್ಕದ ರಸ್ತೆ ಎರಡು ಬದಿ ಮಳೆ ನೀರು ಚರಂಡಿ ನಿರ್ಮಾಣ.

ಸಹಿ/-
ಪೌರಾಯುಕ್ತರು,
ನಗರಸಭೆ, ಚಿಕ್ಕಮಗಳೂರು

ಕಾರ್ಯಪಾಲಕ ಇಂಜಿನಿಯರ್
ಜಿಲ್ಲಾ ನಗರಾಭಿವೃದ್ಧಿ ಕೋಶ,
ಚಿಕ್ಕಮಗಳೂರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಸಿ ಬಂಧ - 13

ಅನುಬಂಧ - 05

ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿ ರುದ್ರಭೂಮಿ ಮತ್ತು ಉದ್ಯಾನವನಗಳ ಅಭಿವೃದ್ಧಿಗೆ ಕೈಗೊಂಡ ಕಾಮಗಾರಿಗಳ ವಿವರ

ಕ್ರ. ಸಂ	ವರ್ಷ	ಯೋಜನೆ	ಕಾಮಗಾರಿ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಖರ್ಚಾದ ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	2022-23	15ನೇ ಹಣಕಾಸು (ಉದ್ಯಾನವನ)	ನಗರಸಭಾ ಆವರಣದಲ್ಲಿನ ಉದ್ಯಾನವನದ ಸಮಗ್ರ ಅಭಿವೃದ್ಧಿಯ ಮುಂದುವರೆದ ಕಾಮಗಾರಿ (ಮ್ಯೂಸಿಕಲ್ ಫೌಂಟೇನ್ ಸುತ್ತಲು ಆಸನ ವ್ಯವಸ್ಥೆ ಕಲ್ಪಿಸುವ ಉಳಿಕೆ ಕಾಮಗಾರಿ. ಪ್ರವೇಶ ದ್ವಾರದ ಕಾಮಾನು ನಿರ್ಮಾಣ. ಲ್ಯಾಂಡ್ ಸ್ಕೇಪಿಂಗ್ ಕಾಮಗಾರಿ. ಆಡಿಟೋರಿಯಂ ನಿರ್ಮಾಣ ಮತ್ತು ಅಲಂಕಾರಿಕ ಲೈಟ್‌ಗಳನ್ನು ಅಳವಡಿಸುವುದು)	85.00	74.14	ಕಾಮಗಾರಿ ಪೂರ್ಣಗೊಂಡಿದೆ.
2	2023-24	15ನೇ ಹಣಕಾಸು (ರುದ್ರಭೂಮಿ)	ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ವಾರ್ಡ್ ನಂ 34 ರ ಚಂದ್ರನಗರದಲ್ಲಿರುವ ಹಿಂದೂ ಸ್ಮಶಾನ ಅಭಿವೃದ್ಧಿ ಕಾಮಗಾರಿ.	30.00	25.38	ಕಾಮಗಾರಿ ಪೂರ್ಣಗೊಂಡಿದೆ.
3			ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ವಾ.ನಂ.೦೩ರ ಹಿರೇಮಗಳೂರಿನಲ್ಲಿರುವ ಹಿಂದೂ ಸ್ಮಶಾನದ ಮುಂದುವರಿದ ಕಾಮಗಾರಿ.	10.00	6.69	ಕಾಮಗಾರಿ ಪೂರ್ಣಗೊಂಡಿದೆ.
4			ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ವಾ.ನಂ.೩೪ರ ರಾಮನಹಳ್ಳಿಯಲ್ಲಿರುವ ಹಿಂದೂ ಸ್ಮಶಾನದ ಮುಂದುವರಿದ ಕಾಮಗಾರಿ	10.00	0.00	ಕಾಮಗಾರಿ ಪೂರ್ಣಗೊಂಡಿದೆ. ಬಿಲ್ ಪಾವತಿಗೆ ಬಾಕಿ ಇದೆ.

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ನಗರಾಡಳಿತ ನಿರ್ದೇಶನಾಲಯ
ಬೆಂಗಳೂರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ - 14

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು

[illegible]

ವಿಷಯ :- ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್ ಎಲ್ ಭೋಜೇಗೌಡ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 26(217) ಕ್ಕೆ ಉತ್ತರ ಸಲ್ಲಿಸುವ ಬಗ್ಗೆ

ಉಲ್ಲೇಖ :- 1. ತಮ್ಮ ಕಛೇರಿಯ ಇ-ಮೇಲ್ ಸಂದೇಶ ದಿನಾಂಕ:31.07.2025

2. ಪೌರಾಯುಕ್ತರು, ನಗರಸಭೆ ಚಿಕ್ಕಮಗಳೂರು ರವರ ಪತ್ರ ಸಂಖ್ಯೆ [illegible] ಸಕಶಾಪ/ ಎಲ್ಎಕ್ಯೂ/217/2025-26 ದಿನಾಂಕ 02.08.2025

******

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್ ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 26(217) ಕ್ಕೆ ಜಿಲ್ಲಾ ನಗರಾಭಿವೃದ್ಧಿ ಕೋಶ, ನಗರಸಭೆ ಚಿಕ್ಕಮಗಳೂರು ರವರಿಂದ ಉಲ್ಲೇಖ (2) ರಲ್ಲಿ ಸಲ್ಲಿಕೆಯಾದ ಮಾಹಿತಿಯನ್ನು ಯಥಾವತ್ತಾಗಿ ಸಲ್ಲಿಸಿದೆ

ಕ್ರ ಸಂ	ಪ್ರಶ್ನೆ	ಉತ್ತರ
01	ಕಳೆದ 3 ವರ್ಷಗಳಿಂದ ಚಿಕ್ಕಮಗಳೂರು ನಗರಸಭೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು: ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ: ಎಷ್ಟು ಅನುದಾನ ಬಳಕೆಯಾಗಿದೆ: 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸದರಿ ನಗರಸಭೆಗೆ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ: ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು)	1. ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. 2. ಕಳೆದ 3 ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳ ವಿವರವನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. 3. 2025-26 ನೇ ಸಾಲಿನಲ್ಲಿ ಕಾಮಗಾರಿಗಳಿಗೆ ಮೀಸಲಿರುವ ಅನುದಾನದ ವಿವರವನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ.
02	ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಯಾವ ಯಾವ ಯೋಜನೆ ರೂಪಿಸಲಾಗಿದೆ: ಕಳೆದ 3 ವರ್ಷಗಳಲ್ಲಿ ಎಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ: (ಸಂಪೂರ್ಣವಾದ ವಿವರ ನೀಡುವುದು)	ನಗರಸಭಾ ನಿಧಿ, ಎಸ್.ಎಫ್.ಸಿ ವಿಶೇಷ ಅನುದಾನ/ 15ನೇಹಣಕಾಸು / ಎಸ್.ಎಫ್.ಸಿ ಶೇ.24.10%, ಶೇ.7.25% ಯೋಜನೆಗಳಲ್ಲಿ ಕೈಗೊಳ್ಳಲಾದ ರಸ್ತೆ ಅಭಿವೃದ್ಧಿ ಕಾಮಗಾರಿಗಳ ವಿವರವನ್ನು ಅನುಬಂಧ-4ರಲ್ಲಿ ಲಗತ್ತಿಸಿದೆ
03	ಮಾನ್ಯಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ-4ರಲ್ಲಿ ಚಿಕ್ಕಮಗಳೂರು ನಗರಸಭೆಗೆ ಸಂಬಂಧಿಸಿದಂತೆ ಸಲ್ಲಿಕೆಯಾದ ತಾಂತ್ರಿಕ ಬಿಡ್ ಗಳನ್ನು ಅನುಮೋದನೆಗೆ ಸಲ್ಲಿಸಿ ಹಲವಾರು ತಿಂಗಳುಗಳು ಕಳೆದರು ಈವರೆಗೂ ಯಾವುದೇ ಪ್ರಕ್ರಿಯೆಗಳು ಆಗದೇ ಇರುವುದು. ಸರ್ಕಾರದ ಗಮನಕ್ಕಿದೆಯೇ: ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಈ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಿ ಕಾಮಗಾರಿಗಳನ್ನು ಕೈಗತ್ತಿಕೊಳ್ಳಲಾಗುವುದು: (ಸಂಪೂರ್ಣವಾದ ವಿವರ ನೀಡುವುದು)	ರೂ. 576 57 ಲಕ್ಷ ಅಂದಾಜು ಮೊತ್ತದ ವಿವಿಧ ಸಮುದಾಯ ಭವನದ ನಿರ್ಮಾಣ ಮತ್ತು ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗೆ ಸಲ್ಲಿಕೆಯಾದ ಟೆಂಡರ್‌ನ ತಾಂತ್ರಿಕ ಬಿಡ್ ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ 18.07.2025 ರಂದು ಅನುಮೋದನೆಗೊಂಡಿರುತ್ತದೆ. ದಿನಾಂಕ: 30.07.2025 ರಂದು ನಡೆದ ಜಿಲ್ಲಾ ಮಟ್ಟದ ಟೆಂಡರ್ ಪರಿಶೀಲನಾ ಸಮಿತಿ ಸಭೆಯಲ್ಲಿ ಆರ್ಥಿಕ ಬಿಡ್ ಅಂಗೀಕರಿಸಿ ಅನುಮೋದನೆಗೆ ಪೌರಾಡಳಿತ ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಗಿರುತ್ತದೆ. ಆದರಂತೆ ಆರ್ಥಿಕ ಬಿಡ್ ಅನುಮೋದನೆಗೆ ಇ-ಪೋರ್ಟಲ್ ಮೂಲಕ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಲಾಗಿದೆ

...2

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

04	[illegible]	[illegible] ವಿವರವನ್ನು ಅನುಬಂಧ-ಅ ರಲ್ಲಿ ಲಗತ್ತಿಸಿದೆ
	ರಾಮಾನಾಯ್ಕ ಎಂಬವರ ವಿಧವೆಯಾದರೂ ಇವರಿಗೂ ಅನಿವಾಸಿ ಭಾರತೀಯ ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಅನಿವಾಸಿಭಾರತೀಯರಿಗೆ [illegible] (ಸಂಪೂರ್ಣವಾದ ವಿವರ ನೀಡುವುದು)	ರಾಮಾನಾಯ್ಕ ಹಿಂದೂ ಯುವಮೋರ್ಚಾ ಅಧ್ಯಕ್ಷರು ಅಮಾನುಷ [illegible] ಯೋಜನೆಯಡಿ [illegible] ಮಾರ್ಗಸೂಚಿಯಂತೆ [illegible] ಟೆಂಡರ್ ಕರೆಯಲಾಗಿರುತ್ತದೆ
05	ನಗರಸಭೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಕಡಿತದಿಂದ ಹೆಚ್ಚಾಗಿ ಮಂಡಿಸಿದ ದಿನಾಂಕ ಅನುಷ್ಠಾನಗೊಳ್ಳುತ್ತಿಲ್ಲ ಈ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳುತ್ತಿದೆ (ಸಂಪೂರ್ಣವಾದ ವಿವರ ನೀಡುವುದು)	ಚಿಕ್ಕಮಗಳೂರು ನಗರಸಭೆಯಿಂದ 2021-22 ನೇ ಸಾಲಿನಲ್ಲಿ 2000 ಹಾಗೂ 2022-23 ನೇ ಸಾಲಿನಲ್ಲಿ 1250 [illegible] ಬೀದಿನಾಯಿಗಳಿಗೆ ಸಂಬಂಧಪಟ್ಟ [illegible] ಮಾಡಿಸಲಾಗಿರುತ್ತದೆ ತದನಂತರ 2024-25 ನೇ ಸಾಲಿನಲ್ಲಿ 01 ಬಾರಿ ಟೆಂಡರ್ ಕರೆಯಲಾಗಿದ್ದು, ಯಾರೂ ಈ ಟೆಂಡರಿನಲ್ಲಿ ಭಾಗವಹಿಸಿರುವುದಿಲ್ಲ. ನಂತರ ದಿನಾಂಕ: 25-07-2025 ರಂದು ಪುನಃ ಟೆಂಡರ್ ಕರೆಯಲಾಗಿದ್ದು, ದಿನಾಂಕ: 11-08-2025 ಟೆಂಡರ್ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ದಿನಾಂಕ 01-08-2025 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಶಾಸಕರ ಉಪಸ್ಥಿತಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಹಾಗೂ SPCA ಸದಸ್ಯರೊಂದಿಗೆ ಸಭೆಯನ್ನು ನಡೆಸಲಾಗಿದ್ದು, ಬೀದಿನಾಯಿಗಳ ನಿಯಂತ್ರಣ/ನಿಂಬರ್ತಣ ಬಗ್ಗೆ ಶೀಘ್ರ ಕ್ರಮವಹಿಸುವಂತೆ ತೀರ್ಮಾನಿಸಲಾಗಿರುತ್ತದೆ.
06	ನಗರಸಭೆ ವ್ಯಾಪ್ತಿಯಲ್ಲಿ ಬಡಾವಣೆಗಳು ಹಾಗೂ ಇನ್ನಿತರ ರಸ್ತೆಗಳಲ್ಲಿ ಬೀದಿದೀಪಗಳ ಕಂಬಗಳಿದ್ದು ಬೀದಿದೀಪವನ್ನು ಅಳವಡಿಸಲು ಅನುದಾನದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿಯಾವ ಕಾಲಮಿತಿಯೊಳಗೆ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು? (ಸಂಪೂರ್ಣವಾದ ವಿವರ ನೀಡುವುದು)	ಸಿ.ಸಿ.ಎಂ.ಎಸ್. ಯೋಜನೆಯಡಿ ಹೆಚ್ಚುವರಿ ಬೀದಿದೀಪಗಳನ್ನು ಅಳವಡಿಸುವ ಸಂಬಂಧ ಪ್ರಸ್ತಾವನೆಯನ್ನು ದಿನಾಂಕ: 29.07.2025 ರಂದು ಸಲ್ಲಿಸಲಾಗಿರುತ್ತದೆ. ಮಂಜೂರಾತಿಯ ನಂತರ ಹಾಲಿ ರಿಯಾಯಿತಿದಾರರು ಹೊಸ ಬೀದಿದೀಪಗಳನ್ನು ಅಳವಡಿಸುವರು. ಹೆಚ್ಚುವರಿ ಬೀದಿ ದೀಪಗಳನ್ನು ಅಳವಡಿಸಲು ಬಂದಾಗ ವೆಚ್ಚಕ್ಕೆ ಈ ಯೋಜನೆಯಡಿ ಸರ್ಕಾರದ ಅನುದಾನದ ಅಗತ್ಯವಿರುವುದಿಲ್ಲ.

ತಮ್ಮ ವಿಶ್ವಾಸಿ.
02.8.25
ಯೋಜನಾ ನಿರ್ದೇಶಕರು,
ಮುಖ್ಯ ನಗರಾಭಿವೃದ್ಧಿ ಕೋಶ,
ಚಿಕ್ಕಮಗಳೂರು.

Scanned with OKEN Scanner

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು

E-Mail :- ka.chikkamagaluru.dudc@gmail.com

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 26(217) ಕ್ಕೆ ಪೌರಾಯುಕ್ತರು, ನಗರಸಭೆ ಚಿಕ್ಕಮಗಳೂರು ರವರಿಂದ ಉಲ್ಲೇಖ (2) ರಲ್ಲಿ ಸಲ್ಲಿಕೆಯಾದ ಮಾಹಿತಿಯನ್ನು ಯಥಾವತ್ತಾಗಿ ಸಲ್ಲಿಸಿದೆ.

ಕ್ರ.ಸಂ	ಪ್ರಶ್ನೆ	ಉತ್ತರ
01	ಕಳೆದ 3 ವರ್ಷಗಳಿಂದ ಚಿಕ್ಕಮಗಳೂರು ನಗರಸಭೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು: ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ: ಎಷ್ಟು ಅನುದಾನ ಬಳಕೆಯಾಗಿದೆ: 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸದರಿ ನಗರಸಭೆಗೆ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ: ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು)	1. ಚಿಕ್ಕಮಗಳೂರು ನಗರ ಸಭೆಗೆ 2022-23,2023-24 ಮತ್ತು 2024-25ನೇ ಸಾಲಿಗೆ ಸರ್ಕಾರದಿಂದ ಹಂಚಿಕೆಯಾದ ಮತ್ತು ಬಿಡುಗಡೆಯಾದ ಮತ್ತು ಬಳಕೆಯಾದ ಅನುದಾನದ ವಿವರವನ್ನು ಅನುಬಂಧ-1ರಂತೆ ಲಗತ್ತಿಸಿದೆ.ಸದರಿ ಅನುದಾನದಡಿ ಕೈಗೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳ ವಿವರವನ್ನು ಯೋಜನೆವಾರು ಹಾಗೂ ವರ್ಷವಾರು ಅನುಬಂಧ -2ರಲ್ಲಿ ಲಗತ್ತಿಸಿದೆ. 2. ಚಿಕ್ಕಮಗಳೂರು ನಗರ ಸಭೆಗೆ 2025-26ನೇ ಸಾಲಿಗೆ ಸರ್ಕಾರದಿಂದ ಹಂಚಿಕೆಯಾದ ಮತ್ತು ಬಿಡುಗಡೆಯಾದ ಮತ್ತು ಬಳಕೆಯಾದ ಅನುದಾನದ ವಿವರವನ್ನು ಅನುಬಂಧ-3ರಂತೆ ಲಗತ್ತಿಸಿದೆ. ಸದರಿ ಅನುದಾನದಡಿ ಕೈಗೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳ ವಿವರವನ್ನು ಯೋಜನೆವಾರು ಅನುಬಂಧ-4ರಂತೆ ಲಗತ್ತಿಸಿದೆ.
02	ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ಯಾವ ಯಾವ ಯೋಜನೆ ರೂಪಿಸಲಾಗಿದೆ: ಕಳೆದ 3 ವರ್ಷಗಳಲ್ಲಿ ಎಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ: (ಸಂಪೂರ್ಣವಾದ ವಿವರ ನೀಡುವುದು)	ಚಿಕ್ಕಮಗಳೂರು ನಗರ ಸಭೆಗೆ 2022-23, 2023-24 ಮತ್ತು 2024-25ನೇ ಸಾಲಿಗೆ ಸರ್ಕಾರದಿಂದ ಹಂಚಿಕೆಯಾದ ಅನುದಾನದಡಿ ಕೈಗೊಳ್ಳಲಾದ ರಸ್ತೆ ಕಾಮಗಾರಿಗಳ ವಿವರವನ್ನು ಯೋಜನೆವಾರು ಅನುಬಂಧ -5ರಲ್ಲಿ ಲಗತ್ತಿಸಿದೆ.
03	ಮಾನ್ಯಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ-4ರಲ್ಲಿ ಚಿಕ್ಕಮಗಳೂರು ನಗರಸಭೆಗೆ ಸಂಬಂಧಿಸಿದಂತೆ ಸಲ್ಲಿಕೆಯಾದ ತಾಂತ್ರಿಕ ಬಿಡ್ ಗಳನ್ನು ಅನುಮೋದನೆಗೆ ಸಲ್ಲಿಸಿ ಹಲವಾರು ತಿಂಗಳುಗಳು ಕಳೆದರು	1. ಸರ್ಕಾರದ ಆದೇಶ ಸಂಖ್ಯೆ ನಅಇ/122/ಐಎಸ್‌ಟಿ/2022 ದಿನಾಂಕ:05.07.2022 ರಂತೆ ವಿವಿಧ ಸಮುದಾಯ ಭವನಗಳು ಹಾಗೂ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯು ಅನುಮೋದನೆಯಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಮಿಕರಿಗೂ ಯೋಜನೆಯ ಲಾಭ ದೊರೆಯಲಿದೆ ಎಂದು ತಿಳಿಸಿದರು.

ಸಭಾಪತಿಯವರು: ಸಭೆಯ ಗಮನಕ್ಕೆ ಬಂದಿದೆ. ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಈ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು? (ಸಂಪೂರ್ಣವಾದ ವಿವರ ನೀಡುವುದು)

ಶ್ರೀ ಎಂ.ಬಿ. ಪಾಟೀಲ: ಸಭಾಪತಿಯವರೇ, ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆಗಳು ಮುಗಿದಿವೆ. ಕೆಲವು ಕಡೆ ಕಾಮಗಾರಿಗಳು ಪ್ರಾರಂಭವಾಗಿವೆ. ಕೆಲವು ಕಡೆ ಪ್ರಾರಂಭವಾಗಬೇಕಾಗಿದೆ. ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣ ವಿವರಗಳನ್ನು ಕೊಡಲು ಸಿದ್ಧನಿದ್ದೇನೆ. ಸಭಾಪತಿಯವರು ಅನುಮತಿ ನೀಡಿದರೆ ಸಂಪೂರ್ಣ ವಿವರಗಳನ್ನು ಕೊಡುತ್ತೇನೆ.

ಸಭಾಪತಿಯವರು: ಸಂಪೂರ್ಣ ವಿವರಗಳನ್ನು ಕೊಡಿ.

ಶ್ರೀ ಎಂ.ಬಿ. ಪಾಟೀಲ: ಸಭಾಪತಿಯವರೇ, ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆಗಳು ಮುಗಿದಿವೆ. ಕೆಲವು ಕಡೆ ಕಾಮಗಾರಿಗಳು ಪ್ರಾರಂಭವಾಗಿವೆ. ಕೆಲವು ಕಡೆ ಪ್ರಾರಂಭವಾಗಬೇಕಾಗಿದೆ. ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣ ವಿವರಗಳನ್ನು ಕೊಡಲು ಸಿದ್ಧನಿದ್ದೇನೆ. ಸಭಾಪತಿಯವರು ಅನುಮತಿ ನೀಡಿದರೆ ಸಂಪೂರ್ಣ ವಿವರಗಳನ್ನು ಕೊಡುತ್ತೇನೆ.

ಸಭಾಪತಿಯವರು: ಸಂಪೂರ್ಣ ವಿವರಗಳನ್ನು ಕೊಡಿ.

2. ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ, ಚಿಕ್ಕಮಗಳೂರು ಇವರ ಆದೇಶ ಸಂಖ್ಯೆ: 27/2023-24 ದಿನಾಂಕ:04.03.2024 ರಂತೆ ರೂ.169.00 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲ್ಪಟ್ಟಿರುತ್ತದೆ.
3. ಮಂಜೂರಾದ ಕಾಮಗಾರಿಗೆ ಅಧೀಕ್ಷಕ ಅಭಿಯಂತರರು, ಶಿವಮೊಗ್ಗ, ಇವರ ಆದೇಶ ಸಂಖ್ಯೆ: ಶಿಮಹೂಸ/ಅಂತರಾಯ/ತಾತಪ/559/2023-24 ದಿನಾಂಕ:04.03.2024 ರಲ್ಲಿ ಅಂದಾಜು ಮೊತ್ತ ರೂ. 476.54 ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿ ನೀಡಲ್ಪಟ್ಟಿರುತ್ತದೆ.
4. ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಸಂಖ್ಯೆ: ದಿಯುಡಿಸಿ (1) ಸಿಆರ್/20/2021-22 ದಿನಾಂಕ:07.03.2024 ರ ಎರಡು ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲ್ಪಟ್ಟಿರುತ್ತದೆ.
5. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡಿ.ಟಿ.ಎಸ್. ತಯಾರಿಸಿ, ಮುಖ್ಯ ಅಭಿಯಂತರರು, ನೌರಾಡಳಿತ ನಿರ್ದೇಶನಾಲಯ ಇವರಿಂದ ದಿನಾಂಕ:28.08.2024 ರಂದು ಅನುಮೋದನೆಯನ್ನು ಪಡೆಯಲಾಗಿದೆ.
6. ದಿನಾಂಕ:10.09.2024ರಂದು ಇಂಡೆಂಟ್ ಸಂಖ್ಯೆ DMA/224-25/BD/WORK_INDENT17186 ರಲ್ಲಿ ಮೊದಲ ಬಾರಿ ಟೆಂಡರ್ ಕರೆಯಲಾಗಿದೆ. ಯಾವುದೇ ಬಿಡ್ ಸಲ್ಲಿಕೆಯಾಗಿರುವುದಿಲ್ಲ.
7. ದಿನಾಂಕ:28.10.2024 ರಂದು ಈ ಕಾಮಗಾರಿಗೆ 2ನೇ ಬಾರಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:26.09.2024 ಆಗಿರುತ್ತದೆ.
8. ದಿನಾಂಕ:08.01.2025ರ ಜಿಲ್ಲಾ ಮಟ್ಟದ ಟೆಂಡರ್ ಪರಿಶೀಲನಾ ಸಮಿತಿಯಲ್ಲಿ ತಾಂತ್ರಿಕ ಬಿಡ್ ಅನುಮೋದನೆಗಾಗಿ ಪ್ರಸ್ತಾವನೆಯನ್ನು ನೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಲು ತೀರ್ಮಾನವಾಗಿರುತ್ತದೆ.
9. ಅದರಂತೆ ತಾಂತ್ರಿಕ ಬಿಡ್ ಅನುಮೋದನೆಗೆ ನೌರಾಡಳಿತ ನಿರ್ದೇಶನಾಲಯಕ್ಕೆ 17.03.2025ರಂದು ಪ್ರಸ್ತಾವನೆಯು ಸಲ್ಲಿಕೆಯಾಗಿರುತ್ತದೆ.
10. ದಿನಾಂಕ:10.07.2025ರಂದು ನೌರಾಡಳಿತ ನಿರ್ದೇಶನಾಲಯದ ಟೆಂಡರ್ ಪರಿಶೀಲನಾ ಸಮಿತಿಯಲ್ಲಿ ತಾಂತ್ರಿಕ ಬಿಡ್ ಅನುಮೋದನೆಗೆ ತೀರ್ಮಾನವಾಗಿದ್ದು, ದಿನಾಂಕ:18.07.2025ರಂದು ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ಅನುಮೋದನೆ ಮಾಡಿ ಹಿಂದಿರುಗಿಸಲ್ಪಟ್ಟಿರುತ್ತದೆ.
11. ಆ ನಂತರ ಆರ್ಥಿಕ ಬಿಡ್ ತೆರೆದು ತುಲನಾತ್ಮಕ ತಃಖ್ತೆಯನ್ನು ತಯಾರಿಸಿ, ಎಲ್ -1 ಟೆಂಡರ್‌ದಾರರೊಂದಿಗೆ ಇ-ಪೋರ್ಟಲ್ ಮೂಲಕ ದರ ಸಂಧಾನ ನಡೆಸಲಾಗಿದೆ. ದಿನಾಂಕ:28.07.2025ರಂದು ತಮ್ಮ ಸಂಧಾನ ಪತ್ರವನ್ನು ಸಲ್ಲಿಸಿರುತ್ತಾರೆ.
12. ದಿನಾಂಕ:30.07.2025ರಂದು ಜಿಲ್ಲಾ ಮಟ್ಟದ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯಲ್ಲಿ ಆರ್ಥಿಕ ಬಿಡ್ ಅನುಮೋದನೆಗೆ ವಿಷಯ ಮಂಡಿಸಲಾಗಿದ್ದು, ಎಲ್-1 ಬಿಡ್ ದಾರರಾದ ಸಿ.ಪಿ.ರವಿಶಂಕರ್ ಇವರ ಆರ್ಥಿಕ ಬಿಡ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

		13. ಎಲ್ ! ಬಿಡ್‌ಬಾಗಿ ಆರ್ಥಿಕ ಬಿಡ್ ಅ... ಅಭಿಯಂತರರು, ಶಿವಮೊಗ್ಗ ಜಿಲ್ಲಾ ಪಂಚಾಯತ್ ಶಿವಮೊಗ್ಗ ಇವರಿಗೆ ದಿನಾಂಕ:02.08.2025ರಂದು ಸಲ್ಲಿಸಲಾಗಿರುತ್ತದೆ. 14. ಆರ್ಥಿಕ ಬಿಡ್ ಅ...ದನೆಗೆ ಬಾಕಿ ಇರುತ್ತದೆ.
04	ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯ ಹಿರೇಕೊಳ ದಾಸ್ತೂರು ಅಭಿವೃದ್ಧಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು, ಅದಾವಾಗ ಬಿಡುಗಡೆಯಾಗಿದೆ ಅಲ್ಲದೇ ಇದುವರೆಗೂ ಗಮನಿಸಿ, ಅಭಿವೃದ್ಧಿಪಡಿಸಲಾಗುವುದು (ಸಂಪೂರ್ಣವಾದ ವಿವರ ನೀಡುವುದು)	ಹಿಂದೂ ಬಿಡುಗಡೆಯಾದ ಅನುದಾನದ ಬಗ್ಗೆ ವಿವರವನ್ನು ಅನುಬಂಧ 06 ರಲ್ಲಿ ಲಗತ್ತಿಸಿದೆ.
05	ನಗರಸಭೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಕಡಿತದಿಂದ ಹಲವಾರು ಮಂದಿದಿನೇ ದಿನೇ ಅಸ್ವಸ್ಥಗೊಳ್ಳುತ್ತಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಾಗಿದೆ. (ಸಂಪೂರ್ಣವಾದ ವಿವರ ನೀಡುವುದು)	ಚಿಕ್ಕಮಗಳೂರು ನಗರಸಭೆಯಿಂದ 2021-22 ನೇ ಸಾಲಿನಲ್ಲಿ 2000 ಹಾಗೂ 2022-23 ನೇ ಸಾಲಿನಲ್ಲಿ 1250 ಒಟ್ಟು 3250 ಬೀದಿನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಲಾಗಿರುತ್ತದೆ. ತದನಂತರ 2024-25 ನೇ ಸಾಲಿನಲ್ಲಿ 04 ಬಾರಿ ಟೆಂಡರ್ ಕರೆಯಲಾಗಿದ್ದು, ಯಾರೂ ಕೂಡ ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ. ನಂತರ ದಿನಾಂಕ. 25-07-2025 ರಂದು ಪುನಃ ಟೆಂಡರ್ ಕರೆಯಲಾಗಿದ್ದು, ದಿನಾಂಕ: 11-08-2025 ಟೆಂಡರ್ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ದಿನಾಂಕ:01-08-2025 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಶಾಸಕರ ಉಪಸ್ಥಿತಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ SPCA ಸದಸ್ಯರೊಂದಿಗೆ ಸಭೆಯನ್ನು ನಡೆಸಲಾಗಿದ್ದು, ಬೀದಿನಾಯಿಗಳ ನಿಯಂತ್ರಣ/ಸಂರಕ್ಷಣೆ ಬಗ್ಗೆ ತುರ್ತು ಕ್ರಮವಹಿಸುವಂತೆ ತೀರ್ಮಾನಿಸಲಾಗಿರುತ್ತದೆ.
06	ನಗರಸಭೆ ವ್ಯಾಪ್ತಿಯಲ್ಲಿ ಬಡಾವಣೆಗಳು ಹಾಗೂ ಇನ್ನಿತರ ರಸ್ತೆಗಳಲ್ಲಿ ಬೀದಿದೀಪಗಳ ಕಂಬಗಳಿದ್ದು, ಬೀದಿದೀಪವನ್ನು ಅಳವಡಿಸಲು ಅನುದಾನದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿಯಾವ ಕಾಲಮಿತಿಯೊಳಗೆ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು? (ಸಂಪೂರ್ಣವಾದ ವಿವರ ನೀಡುವುದು)	ನಗರ ಸಭೆಯಿಂದ ಸರ್ವೇ ನಡೆಸಿದಂತೆ ಒಟ್ಟು 2333 ಬೀದಿ ದೀಪಗಳನ್ನು ಅಳವಡಿಸಬೇಕಾಗಿದ್ದು, ಇದಕ್ಕಾಗಿ ನಗರ ಸಭೆಯಲ್ಲಿ ಪ್ರಸ್ತುತ ಅನುದಾನದ ಕೊರತೆ ಇರುತ್ತದೆ. ಸರ್ಕಾರದಿಂದ ರೂ.1.00 ಕೋಟಿ ಅನುದಾನದ ಅಗತ್ಯ ಇರುತ್ತದೆ. ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ.

ತಮ್ಮ ವಿಶ್ವಾಸಿ,

ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ಚಿಕ್ಕಮಗಳೂರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸದ್ದಾರೆ ಅದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನಾನು ಕೇಳಿರುವ ಪ್ರಶ್ನೆಗಳ ಸಂಖ್ಯೆ ಅ ಯಿಂದ ಊ ವರೆಗೆ ಇದೆ. ಅ... ಆ...ಇ...ಈ...ಉ...ಊ... ಕಲಿತುಕೊಳ್ಳುವುದಕ್ಕಾಗಿಯೇ ನಾವೆಲ್ಲರೂ ಇಲ್ಲಿಗೆ ಬಂದಿದ್ದೇವೆ. ಆದ್ದರಿಂದ ಅ ರಿಂದ ಊ ವರೆಗೆ ಪ್ರಶ್ನೆಗಳನ್ನು ಕೇಳಿದ್ದೇನೆ.

ಸಭಾಪತಿಯವರು:- ಮಾನ್ಯ ಭೋಜೇಗೌಡರೇ, ತಾವು ಹೇಳುವ ಮಾತುಗಳನ್ನು ಕೇಳ ನಗುವಂತಿಲ್ಲ; ಸುಮ್ಮನೆ ಕುಳಿತುಕೊಳ್ಳುವಂತಿಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಕಛೇರಿ ಬಹಳ ಅಲರ್ಟ್ ಆಗಿದೆ. ನಾನು ಪ್ರಶ್ನೆ ಕೇಳಿದ ಕೂಡಲೇ ದಿನಾಂಕ:08.08.2025ಕ್ಕೆ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ನಾನು ಪ್ರಶ್ನೆ ಕೇಳಿದ ಮೇಲೆ ಟೆಂಡರ್ ಕರೆದಿದ್ದಾರೆ. ಇಷ್ಟು ದಿನ ತಡವಾಗುವುದಕ್ಕೆ ಕಾರಣವೇನು? ಮಾನ್ಯ ಸಚಿವರು ತಮ್ಮ ಕಛೇರಿಯಲ್ಲಿರುವ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳಬೇಕಾಗುತ್ತದೆ. Your Officers are so fast that they have given the answer within a weak days' time. But all these days what were they doing? They have delayed it for more than two years. ಯಾಕೆ ಅಷ್ಟು ತಡ ಮಾಡಿದ್ದಾರೆ? ಈಗ ಹೇಗೆ ಇಷ್ಟು ತ್ವರಿತವಾಗಿ ಕಾರ್ಯ ನಿರ್ವಹಿಸಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಡಿ.ಎಂ.ಎ.,ಯಲ್ಲಿ ಇನ್ನೂ ಮಾರ್ಗಸೂಚಿಯನ್ನು ರೂಪಿಸಿಲ್ಲವೆಂದು ಹೇಳಿದ್ದಾರೆ. ರಾಜ್ಯ ಸರ್ಕಾರದ ಅಧಿಕಾರಿಗಳು ಕಛೇರಿಯಲ್ಲಿ ಕುಳಿತುಕೊಂಡು ದುಡ್ಡಿದ್ದರೂ ಇನ್ನೂ ಮಾರ್ಗಸೂಚಿಯನ್ನು ರಚನೆ ಮಾಡಿ ಕೊಡದೇ ಇರುವುದಕ್ಕೆ ಕಾರಣವೇನು? ನಾನು ಕೇಳಿರುವುದು particularly for Chickmagalur District. As I am the resident of Chickmagalur District, ಚಿಕ್ಕಮಗಳೂರು ನಗರಸಭೆಗೆ ಸೀಮಿತವಾಗಿ ನಾನು ಕೇಳಿದ್ದೇನೆ. ರಾಜ್ಯದಲ್ಲಿ ಇನ್ನೂ ಎಷ್ಟು ಬಾಕಿ ಉಳಿದಿದೆ ಎನ್ನುವುದು ನನಗೆ ಗೊತ್ತಿಲ್ಲ. ಸುಮಾರು 2,3೩೩ ವಿದ್ಯುತ್ ಕಂಬಗಳನ್ನು ಕೆ.ಇ.ಬಿ.,ಯವರು ಅಳವಡಿಸಿದ್ದಾರೆ. ಆ ಒಂದೂ ಕಂಬದಲ್ಲಿಯೂ ಲೈಟ್ ಇಲ್ಲ. ಸರ್ಕಾರ ಆಸ್ತಿತ್ವದಲ್ಲಿದೆಯೇ? ಅಥವಾ DMA (Directorate of Municipal Administration) ಕೆಲಸ ಮಾಡುತ್ತಿದೆಯೇ? ಮಾನ್ಯ ನಗರಾಭಿವೃದ್ಧಿ ಸಚಿವರ ತಪ್ಪಿಲ್ಲ. ಆದರೆ, ಅಧಿಕಾರಿಗಳು ಏನು ಮಾಡುತ್ತಿದ್ದಾರೆಂದು ಕೇಳಬೇಕಾಗುತ್ತದೆ. ಒಂದು ಟೌನ್‌ನಲ್ಲಿ ಸುಮಾರು 2,3೩೩ ಕಂಬಗಳಲ್ಲಿ ಲೈಟ್ ಇಲ್ಲವೆಂದು ಮಾನ್ಯ ಸಚಿವರೇ ಉತ್ತರವನ್ನು ಕೊಟ್ಟಿದ್ದಾರೆ. ನಾವು ಯಾವ ಕಾಲದಲ್ಲಿದ್ದೇವೆ?

ಈ ಸದನದ ಕಾರ್ಯಕಲಾಪಗಳನ್ನು ವೀಕ್ಷಣೆ ಮಾಡಲು ಸದನದ ಗ್ಯಾಲರಿಯಲ್ಲಿ ಶಾಲಾ ಮಕ್ಕಳು ಕುಳಿತುಕೊಂಡಿದ್ದಾರೆ. ಬೀದಿ ನಾಯಿಗಳ ಕಾಟ ಇಡೀ ರಾಜ್ಯದಲ್ಲಿ ಅತಿ ಹೆಚ್ಚಾಗಿದೆ. ಸುಪ್ರೀಂ ಕೋರ್ಟ್‌ನ ಆದೇಶವೊಂದನ್ನೇ ಆಧಾರವಾಗಿಟ್ಟುಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. We should

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

respect the Supreme Court and any other Court verdicts. ಬೀದಿ ನಾಯಿಗಳ ಕಾಟ ಬೆಂಗಳೂರು ನಗರವನ್ನೂ ಬಿಟ್ಟಿಲ್ಲ, ಯಾವುದೇ ತಾಲ್ಲೂಕು ಹೋಬಳಿಯನ್ನು ಬಿಟ್ಟಿಲ್ಲ. ಬೀದಿ ನಾಯಿಗಳಿಂದ ನಮ್ಮ ನಿಮ್ಮ ಮಕ್ಕಳಿಗೆ ತೊಂದರೆಯಾಗುವುದಿಲ್ಲ, ಅವರುಗಳು ಕಾರಿನಲ್ಲಿ ಹೋಗುತ್ತಾರೆ, ಕಾರಿನಲ್ಲಿ ಬರುತ್ತಾರೆ. ಎಂ.ಎಲ್.ಎ., ಮಂತ್ರಿಗಳು ಮತ್ತು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಜಡ್ಜ್‌ಗಳ ಹೆಂಡತಿ ಮಕ್ಕಳಿಗೂ ತೊಂದರೆಯಾಗುವುದಿಲ್ಲ. ಬೀದಿಯಲ್ಲಿ ಓಡಾಡುವ ಮಕ್ಕಳಿಗೆ ಮತ್ತು ಶಾಲೆಗೆ ಹೋಗುವಂತಹ ಮಕ್ಕಳಿಗೆ ಬೀದಿ ನಾಯಿಗಳು ಕಚ್ಚಿರುವುದರಿಂದ ಅದರ ಪರಿಣಾಮ ಕೆಟ್ಟದಾಗಿದೆ. ಹಲವಾರು ಮಕ್ಕಳು ನಾಯಿ ಕಡಿತದಿಂದಾಗಿ ಮೃತಪಟ್ಟಿದ್ದಾರೆ. ಇದಕ್ಕಾಗಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ನಾವು ಸುಖವಾಗಿದ್ದರೆ ಸಾಕೇ?

ಶ್ರೀ ಥಲವಾದಿ ಟಿ ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿರುವ ವಿಚಾರವಾಗಿದೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್.ಎಲ್.ಭೋಜೇಗೌಡ:– ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಗಮನಹರಿಸದೇ ಹೋದರೆ, ಅಮಾಯಕರಿಗೆ ತೊಂದರೆಯಾಗುತ್ತದೆ. ಯಾವ ಅಧಿಕಾರಿಗಳಿಗೂ ತೊಂದರೆಯಾಗುವುದಿಲ್ಲ. ಯಾವ creamy layer of the society ಇದ್ದಾರೆ ಅವರಿಗೂ ತೊಂದರೆಯಾಗುವುದಿಲ್ಲ. ಬಸ್ ಇಳಿದು ಮಕ್ಕಳು ಶಾಲೆಗೆ ಹೋಗಲು ಬೀದಿ ನಾಯಿಗಳ ತೊಂದರೆಯಿದೆ. ಯಾರೂ ವಾಕಿಂಗ್ ಮಾಡುವಂತಹ ಪರಿಸ್ಥಿತಿ ಇಲ್ಲ. ಕಬ್ಬನ್ ಪಾರ್ಕ್‌ನಲ್ಲಿಯೂ ಬೀದಿ ನಾಯಿಗಳ ಕಾಟ ಹೆಚ್ಚಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಒಂದು ಅರ್ಜಿಯನ್ನು ಹಾಕಬೇಕಾಗಿದೆ. "ಆಗ ತಾವು ತೀರ್ಮಾನ ನೀಡಿದಂತಹ ಸಂದರ್ಭದಲ್ಲಿ ನಾಯಿಗಳ ಸಂಖ್ಯೆ ಇಷ್ಟಿತ್ತು; ಈಗ ಹೆಚ್ಚಾಗಿದೆ. ಇದಕ್ಕೆ ಏನು ಮಾಡಬೇಕು" ಎಂದು ಸುಪ್ರೀಂ ಕೋರ್ಟ್‌ನ ಜಡ್ಜ್‌ಗೆ ಕೇಳಬೇಕಾಗುತ್ತದೆ.

ಡಾ॥ಎಂ.ಸಿ.ಸುಧಾಕರ್(ಉನ್ನತ ಶಿಕ್ಷಣ ಸಚಿವರು):– ಸನ್ಮಾನ್ಯ ಸಭಾಪತಿಯವರೇ, ಇವತ್ತು ಜಡ್ಜ್‌ಮೆಂಟ್ ಬಂದಿದೆ.

ಶ್ರೀ ರಹೀಂ ಖಾನ್(ಪೌರಾಡಳಿತ ಹಾಗೂ ಹಜ್ ಸಚಿವರು):– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚಿಕ್ಕಮಗಳೂರು ಸಿ.ಎಂ.ಸಿ.,ಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಎಸ್.ಎಫ್.ಸಿ., ವಿಶೇಷ ಅನುದಾನದಡಿಯಲ್ಲಿ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 15ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಸುಮಾರು 25 ಕೋಟಿ ರೂಪಾಯಿಗಳನ್ನು, ಅಮೃತ 2.0 ಯೋಜನೆಯಡಿ 8 ಕೋಟಿ ರೂಪಾಯಿಗಳನ್ನು ಮತ್ತು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ(ಮುನಿಸಿಪಾಲಿಟಿ) ಯೋಜನೆ(ಹಂತ-04)ರಡಿಯಲ್ಲಿ 40 ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಕೆಲಸ ಏತಕ್ಕೋಸ್ಕರ ತಡವಾಗಿದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಬಗ್ಗೆ ನಾನು ಒಂದು ಮೀಟಿಂಗ್ ಮಾಡಿ ಇದರಲ್ಲಿ ಯಾರ್ಯಾರು ಇದ್ದಾರೆ ಎನ್ನುವುದರ ಬಗ್ಗೆ ಪರಿಶೀಲಿಸಿ ಗಂಭೀರವಾಗಿ ಕ್ರಮವನ್ನು ಕೈಗೊಳ್ಳಲಾಗುತ್ತದೆ.

(ಮುಂದು)

(637) 12.8.2025 12.30 ಪಿಕೆ:ಪಿಕೆ (ಸಭಾಪತಿಗಳ ಉಪಸ್ಥಿತಿ)

ಶ್ರೀ ರಹೀಂ ಖಾನ್ (ಮುಂದು)

ಮಾನ್ಯ ಸದಸ್ಯರು ಬೀದಿನಾಯಿಗಳ ಹಾವಳಿಯ ಬಗ್ಗೆ ಪ್ರಶ್ನೆಯನ್ನು ಕೇಳಿದರು. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದಾಗಿದೆ. ಈ ಬೀದಿನಾಯಿಗಳಿಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ನಿಂದ ಒಂದು ಆದೇಶವಾಗಿತ್ತು. ನಾಯಿಗಳಿಗೆ ವ್ಯಾಕ್ಸಿನ್ ಕೊಡಬೇಕು ಅಥವಾ ಸರ್ಜರಿ ಮಾಡಬೇಕು ಎಂದು ಹೇಳಿದ್ದರು. ನಮ್ಮ ರಾಜ್ಯದಲ್ಲಿ ಈ ಸಂಬಂಧ ಎರಡು-ಮೂರು ಸಲ ಟೆಂಡರ್ ಕರೆಯಲಾಗಿತ್ತು. ಆ ಕಾಪಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ. ಮಾನ್ಯ ಸಭಾಪತಿಗಳೆ, ಈ ಕೆಲಸವನ್ನು ಮಾಡುವವರು ನಮ್ಮ ರಾಜ್ಯದಲ್ಲಿ ಯಾರೂ ಇಲ್ಲ. ಅವರನ್ನು ಕೇರಳ ರಾಜ್ಯದಿಂದ ಕರೆಸಬೇಕಾಗುತ್ತದೆ. ಈ ಸಲ ನಾನು ಡಿಸಿ ಅವರ ಹತ್ತಿರ ಮಾತನಾಡಿ, ನೀವೇ ಖುದ್ದಾಗಿ ಸಂಬಂಧಪಟ್ಟವರ ಜೊತೆ ಮಾತನಾಡಿ, ಚಿಕ್ಕಮಗಳೂರಿನಲ್ಲಿ ಬೀದಿನಾಯಿಗಳ ಹಾವಳಿಯನ್ನು ತಡೆಗಟ್ಟಲು ವ್ಯಾಕ್ಸಿನೇಷನ್ ಮಾಡುವುದಾಗಲಿ ಅಥವಾ ಸರ್ಜರಿ ಮಾಡುವ ನಿಟ್ಟಿನಲ್ಲಿ ಗಂಭೀರವಾಗಿ ತೆಗೆದುಕೊಂಡು ಮುಂದುವರೆಯಬೇಕೆಂದು ಹೇಳಿದ್ದೇನೆ. ಇದರ ಬಗ್ಗೆ ಇನ್ನೊಂದು ಸಲ ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ತಮ್ಮನ್ನು ಕರೆಸಿ ಮಾತನಾಡಿ, ಮುಂದಿನ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್.ಎಲ್.ಭೋಜೇಗೌಡ:- ಮಾನ್ಯ ಸಭಾಪತಿಗಳೆ, ಇನ್‌ಜೆಕ್ಷನ್ ಕೊಟ್ಟು ರೇಬಿಸ್‌ನ ನಿವಾರಣೆ ಮಾಡಬಹುದು ಅಷ್ಟೆ. ಆದರೆ ನಾಯಿಗಳು ಕಚ್ಚುವುದನ್ನು ತಪ್ಪಿಸುವುದಕ್ಕೆ ಆಗುತ್ತದೆಯೇ? ನಮ್ಮ ಊರಿನಲ್ಲಿ ನಾಯಿಗಳ ಸಂಖ್ಯೆ ಸಿಕ್ಕಾ-ಪಟ್ಟೆ ಜಾಸ್ತಿಯಾಗಿದೆ. ಆಹಾರ ಹುಡುಕಿಕೊಂಡು ಚಿರತೆಗಳು ನಮ್ಮ ಟೌನ್‌ಗೆ ಬರುತ್ತಿವೆ. ಸುಪ್ರೀಂ ಕೋರ್ಟ್ ಏನು ತೀರ್ಪು ಕೊಟ್ಟಿದ್ದಾಗ ಆಗ ಇದ್ದ ಪರಿಸ್ಥಿತಿ ಬೇರೆ ಇತ್ತು. ಇವತ್ತಿನ ಪರಿಸ್ಥಿತಿ ಬೇರೆ ಇದೆ. ಇವತ್ತಿರುವ ಪರಿಸ್ಥಿತಿಯನ್ನು ನೀವು ಸುಪ್ರೀಂ ಕೋರ್ಟ್‌ಗೆ ಏಕೆ ಮನವರಿಕೆ ಮಾಡಿಕೊಡಬಾರದು? ವಸ್ತುಸ್ಥಿತಿಯ ಬಗ್ಗೆ ಅವರಿಗೆ ತಿಳಿಸಿ; ಅವರು ಮತ್ತೆ ಏನು ನಿರ್ಧಾರ ತೆಗೆದುಕೊಳ್ಳುತ್ತಾರೋ ನೋಡೋಣ. ಆ ಪ್ರಾಣಿದಯಾ ಸಂಘದವರ ಮನೆಗಳಲ್ಲಿ ಹತ್ತತ್ತು ನಾಯಿಗಳನ್ನು ತೆಗೆದುಕೊಂಡು ಹೋಗಿ ಬಿಟ್ಟುಬಿಡಬೇಕು, ಅವರು ಆ ನಾಯಿಗಳನ್ನು ಸಾಕಿಕೊಳ್ಳಲಿ. ಆಗ ಅವರಿಗೆ ಗೊತ್ತಾಗುತ್ತದೆ. ನಮಗೂ ಪ್ರಾಣಿಗಳ ಬಗ್ಗೆ ಕರುಣೆ ಇದೆ. ನಾಯಿಗಳಿಂದ ಕಚ್ಚಿಸಿಕೊಂಡು ಗೋಳಾಡುವುದನ್ನು ಟಿವಿಗಳಲ್ಲಿ ನಾವು ನೋಡುತ್ತಿದ್ದೇವೆ, ಪತ್ರಿಕೆಗಳಲ್ಲೂ ಇಂತಹ ವಿಚಾರಗಳು ಬರುತ್ತಿರುತ್ತವೆ. ನಾಯಿಯಿಂದ ಕಚ್ಚಿಸಿಕೊಂಡ ಮಕ್ಕಳು ಪ್ರತಿನಿತ್ಯ ಆಸ್ಪತ್ರೆಗಳಲ್ಲಿ ಅಡ್ಮಿಟ್ ಆಗುತ್ತಿರುವುದನ್ನು ನಾವೆಲ್ಲಾ ನೋಡುತ್ತಿರುತ್ತೇವೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರ ವಸ್ತುಸ್ಥಿತಿಯನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿನ್ನಲೆಯಾಗಿಟ್ಟುಕೊಂಡು ಸುಪ್ರೀಂ ಕೋರ್ಟ್‌ಗೆ ಒಂದು ಅರ್ಜಿಯನ್ನು ಸಲ್ಲಿಸಲಿ. ಇಡೀ ರಾಷ್ಟ್ರದಲ್ಲಿ ಮೊದಲಬಾರಿಗೆ ಕರ್ನಾಟಕ ಸರ್ಕಾರ ಇಂತಹ ಒಂದು ಮೂವ್‌ಮೆಂಟ್ ಮಾಡಿ, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ ಎನ್ನುವ ಹೆಸರಾದರೂ ಬರಲಿ. ಸುಪ್ರೀಂ ಕೋರ್ಟ್‌ನ ಜಡ್ಜ್‌ಗಳು ಏನು ಮಾಡುತ್ತಾರೋ ನೋಡೋಣ? ಅವರ ಮಕ್ಕಳಿಗೆ ಅಥವಾ ನಮ್ಮಂಥವರ ಮಕ್ಕಳಿಗೆ ತೊಂದರೆ ಆಗಿದ್ದರೆ ಅಂತಹ ಸಂದರ್ಭದಲ್ಲಿ ಯಾವುದಾದರೂ ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆಯೋ ಇಲ್ಲವೋ? ಒಂದು ಕಾಲದಲ್ಲಿ ನಾನು ಮುನಿಸಿಪಾಲಿಟಿ ಅಧ್ಯಕ್ಷನಾಗಿದ್ದಾಗ, ಸುಮಾರು 2800 ನಾಯಿಗಳನ್ನು ಸಾಯಿಸುವ ವ್ಯವಸ್ಥೆ ಮಾಡಿಸಿ ಭೂಮಿಯ ಒಳಗೆ ಹೂಳಿಸಿದ್ದೆ. ಮಾನ್ಯ ಸಭಾಪತಿಗಳೆ, ಇದು ಬಹಳ ಗಂಭೀರವಾಗಿರತಕ್ಕಂಥ ವಿಚಾರವಾಗಿದೆ. ಈ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರ ಒಂದು ಮೂವ್‌ಮೆಂಟ್ ಮಾಡಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ಕೆಲಸ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ರಹೀಂ ಖಾನ್:- ಮಾನ್ಯ ಸಭಾಪತಿಗಳೆ, ಇದರ ಬಗ್ಗೆ ನಾನು ಕಾನೂನು ಇಲಾಖೆಯ ಜೊತೆ ಚರ್ಚೆ ಮಾಡಿ, ಅವರ ಅಭಿಪ್ರಾಯ ತೆಗೆದುಕೊಂಡು ಮತ್ತು ನಿಮ್ಮ ಜೊತೆ ಕೂಡ ಮಾತನಾಡಿ ಈ ನಿಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 284

ರಾಜ್ಯದಲ್ಲಿರುವ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಬದಲಾವಣೆ ಮಾಡುವ ಬಗ್ಗೆ

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 2 ವರ್ಷದಿಂದ ರಾಜ್ಯದಲ್ಲಿ ಕೃಷಿಯೇತರ ಚಟುವಟಿಕೆಗಳಿಗೆ ಎಷ್ಟು ಎಕರೆ ಭೂ ಬದಲಾವಣೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಕಳೆದ 2 ವರ್ಷದಿಂದ ರಾಜ್ಯದಲ್ಲಿ (BDA, BMRDA ಮತ್ತು BMICAPA ವ್ಯಾಪ್ತಿಯನ್ನು ಹೊರತುಪಡಿಸಿ) ಕೃಷಿಯೇತರ ಚಟುವಟಿಕೆಗಳಿಗೆ 2747.50 ಎಕರೆ ಭೂ ಬದಲಾವಣೆ ಮಾಡಲಾಗಿದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ).
ಆ)	ಸರ್ಕಾರದ ಕಾರ್ಯದರ್ಶಿಯವರಿಗೆ ಭೂ ಬದಲಾವಣೆ ಮಾಡಲು ಎಷ್ಟು ಎಕರೆವರೆಗೆ ಅಧಿಕಾರವಿದೆ; ಸಚಿವರಿಗೆ ಭೂ ಬದಲಾವಣೆ ಮಾಡಲು ಎಷ್ಟು ಎಕರೆ ಮೇಲ್ಪಟ್ಟಿದ್ದರೆ ಕಡತ ಸಲ್ಲಿಸಲಾಗುತ್ತದೆ;	ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-ಎ ರನ್ವಯ ವಿಸ್ತೀರ್ಣದ ಮಿತಿಯಿಲ್ಲದೇ ಭೂ ಉಪಯೋಗ ಬದಲಾವಣೆಯ ಎಲ್ಲಾ ಪ್ರಸ್ತಾವನೆಗಳನ್ನು ಇಲಾಖಾ ಸಚಿವರ ಅನುಮೋದನೆ ಪಡೆದು ಸರ್ಕಾರಿ ಆದೇಶಗಳನ್ನು ಹೊರಡಿಸಲಾಗುತ್ತದೆ.
ಇ)	ರಾಜ್ಯದಲ್ಲಿ ನಗರಸಭೆ ಹಾಗೂ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಇ-ಖಾತಾ ಹೊಂದಿರುವವರಿಗೆ ಮನೆ ನಿರ್ಮಾಣ ಮಾಡಲು ಪ್ರಾಧಿಕಾರದಿಂದ ಲೈಸೆನ್ಸ್ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಜಾಗಕ್ಕೆ ಸಂಬಂಧಿಸಿದ ಆಡಳಿತಕ್ಕೆ ನಿಯಮಾನುಸಾರ ಆಸ್ತಿ ಕಂದಾಯ ಪಾವತಿ ಮಾಡುತ್ತಿದ್ದರೂ ಸಹ ಮನೆ ನಿರ್ಮಾಣ ಮಾಡಲು ಲೈಸೆನ್ಸ್ ನೀಡದಿರಲು ಕಾರಣಗಳೇನು; (ವಿವರ ನೀಡುವುದು)	ಬಂದಿದೆ. ಕರ್ನಾಟಕ ಪೌರಸಭೆಗಳ ಅಧಿನಿಯಮ 1964 / ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 ಗೆ ತಿದ್ದುಪಡಿ ತಂದು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ದಿನಾಂಕ:10.09.2024 ರ ಪೂರ್ವದಲ್ಲಿ ರಚಿಸಲಾಗಿರುವ ಬಡಾವಣೆಗಳಲ್ಲಿನ ಸ್ವತ್ತುಗಳಿಗೆ ಇ-ಖಾತಾ ನೀಡಲು ಅವಕಾಶ ಕಲ್ಪಿಸಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯದ ಆಸ್ತಿಗಳಿರುತ್ತವೆ. ಈ ರೀತಿಯ ಸ್ವತ್ತುಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ವ್ಯಾಪ್ತಿಯಿಂದ ಹೊರಗುಳಿದಿರುತ್ತವೆ. ಸದರಿ
ಈ)	ಇ-ಖಾತಾ ಹೊಂದಿರುವವರು ಮನೆ ನಿರ್ಮಾಣಕ್ಕೆ ಸ್ಥಳೀಯ ಪ್ರಾಧಿಕಾರದ ವತಿಯಿಂದ ಅನುಮತಿ ನೀಡದೇ ಇರುವ ಕಾರಣ ಬ್ಯಾಂಕ್ ಅಥವಾ ಇನ್ನಿತರ	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

	ಸಂಸ್ಥೆಗಳಿಂದ ಮನೆ ನಿರ್ಮಾಣಕ್ಕೆ ಸಾಲ ಮಂಜೂರಾಗದೇ ಮನೆ ನಿರ್ಮಾಣ ಮಾಡಲು ತೊಂದರೆಯಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಆಸ್ತಿಗಳಲ್ಲಿನ ನಿವೇಶನಗಳಿಗೆ ನಗರ ಸ್ಥಳೀಯ ಸಂಸ್ಥೆಗಳಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುತ್ತಿರುವುದಿಲ್ಲ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಡಿ ವಿನ್ಯಾಸ ಅನುಮೋದನೆ ಪಡೆದು ರಚಿಸಲಾಗಿರುವ ಇ-ಖಾತಾ ಹೊಂದಿರುವ ನಿವೇಶನಗಳಿಗೆ ಹಾಗೂ ಗ್ರಾಮಠಾಣಾ ಸ್ವತ್ತುಗಳಿಗೆ ಕಟ್ಟಡ ಪರವಾನಿಗೆ ನೀಡಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ
ಜಿಲ್ಲಾವಾರು ಮಾಹಿತಿ

ಕ್ರ.ಸಂ.	ಜಿಲ್ಲೆಗಳು	ವಿಸ್ತೀರ್ಣ (ಎಕರೆಗಳಲ್ಲಿ)
1.	ಬಾಗಲಕೋಟೆ	131.82
2.	ಬೆಳಗಾವಿ	73.31
3.	ಬಳ್ಳಾರಿ	39.98
4.	ಬೀದರ್	40.12
5.	ವಿಜಯಪುರ	26.78
6.	ಚಿಕ್ಕಮಗಳೂರು	124.68
7.	ಚಿತ್ರದುರ್ಗ	280.73
8.	ದಾವಣಗೆರೆ	17.07
9.	ಗದಗ	154.90
10.	ಕಲಬುರಗಿ	147.92
11.	ಹಾಸನ	19.35
12.	ವಿಜಯನಗರ	82.49
13.	ಧಾರವಾಡ	395.40
14.	ಕೋಲಾರ	90.55
15.	ಮಂಡ್ಯ	0.075
16.	ದಕ್ಷಿಣ ಕನ್ನಡ	44.21
17.	ಮೈಸೂರು	361.17
18.	ರಾಯಚೂರು	71.57
19.	ಶಿವಮೊಗ್ಗ	198.37
20.	ತುಮಕೂರು	46.65
21.	ಉಡುಪಿ	12.55
22.	ಉತ್ತರ ಕನ್ನಡ	-
23.	ಕೊಡಗು	63.59
24.	ಯಾದಗಿರಿ	124.88
25.	ಚಾಮರಾಜನಗರ	-
26.	ಚಿಕ್ಕಬಳ್ಳಾಪುರ	36.88
27.	ಹಾವೇರಿ	154.15
28.	ಕೊಪ್ಪಳ	8.27
	ಒಟ್ಟು	2747.50 ಎಕರೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಗಳೆ, ಕಳೆದ 2 ವರ್ಷದಿಂದ ರಾಜ್ಯದಲ್ಲಿ ಕೃಷಿಯೇತರ ಚಟುವಟಿಕೆಗಳಿಗೆ ಎಷ್ಟು ಎಕರೆ ಭೂ ಬದಲಾವಣೆ ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದ್ದೆ. ಪ್ರತಿ ವರ್ಷ ಸರ್ಕಾರಗಳು ಸಾವಿರಾರು ಎಕರೆ ಕೃಷಿ ಭೂಮಿಯನ್ನು ಪರಿವರ್ತನೆ ಮಾಡುತ್ತಲೇ ಇವೆ. ರೈತರಿಂದ ಭೂಮಿ ತೆಗೆದುಕೊಂಡು ಕೆಐಎಡಿಬಿ ಇತ್ಯಾದಿ ಸಂಸ್ಥೆಗಳು ತಮ್ಮ ಕೆಲಸಕ್ಕೆ ಉಪಯೋಗ ಮಾಡಿಕೊಳ್ಳುತ್ತವೆ. ಕೆಲವರು ತಮ್ಮ ಸ್ವಂತ ಜಾಗವನ್ನು ಬಡಾವಣೆ ಮಾಡುವುದಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಪ್ರತಿ ವರ್ಷ ಸಾವಿರಾರು ಎಕರೆಗಳು ಈ ರೀತಿ ಭೂ ಬದಲಾವಣೆ ಆಗುತ್ತಿದೆ. ನೀವು ನಿಮ್ಮ ಇಲಾಖೆಗೆ ಸಂಬಂಧಪಟ್ಟ ವಿವರಗಳನ್ನು ಮಾತ್ರ ಕೊಟ್ಟಿದ್ದೀರಿ. ಆದರೆ ಕೆಐಎಡಿಬಿಗೆ ಪ್ರತ್ಯೇಕವಾಗಿ, ಸರ್ಕಾರಿ ಯೋಜನೆಗಳಿಗೆ ಪ್ರತ್ಯೇಕವಾಗಿ ಕೃಷಿ ಭೂಮಿಯನ್ನು ಬದಲಾವಣೆ ಮಾಡಿ ಬಳಕೆ ಮಾಡುತ್ತಾರೆ. ಬಿಡಿಎ, ಬಿಎಂಆರ್‌ಡಿಎ ಮತ್ತು ಬಿಎಂಐಸಿಎಪಿಎ ಗಳ ಬಗ್ಗೆ ನೀವು ವಿವರ ಕೊಟ್ಟಿದ್ದೀರಿ. ಬಿಐಎಎಪಿಎ ನಿಮ್ಮ ವ್ಯಾಪ್ತಿಗೆ ಬರದೇ ಇರುವುದರಿಂದ ಆ ಸಂಬಂಧ ವಿವರಣೆ ಕೊಟ್ಟಿಲ್ಲ. ಅಂದರೆ ಹತ್ತಾರು ಸಾವಿರ ಎಕರೆ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗೆಗೋಸ್ಕರ ಭೂ ಪರಿವರ್ತನೆ ಮಾಡುವಂಥದ್ದು ಸರ್ಕಾರದ ಕಡೆಯಿಂದ ಆಗುತ್ತಿದೆ. ಆದರೆ, ಒಂದು ವರ್ಷಕ್ಕೆ ಇಂತಿಷ್ಟು ಭೂಮಿಯನ್ನು ಮಾತ್ರ ಪರಿವರ್ತನೆ ಮಾಡಬಹುದು ಎಂಬ ಬಗ್ಗೆ ಸರ್ಕಾರ ಮಾರ್ಗಸೂಚಿಯನ್ನು ತರಬಹುದೇ? ಈಗೇನಾಗುತ್ತಿದೆ ಎಂದರೆ, ಭೂ ಪರಿವರ್ತನೆ ಮಾಡುವಾಗ, ಯಾರಿಂದ ಭೂಮಿಯನ್ನು ಖರೀದಿ ಮಾಡಿರುತ್ತಾರೋ ಅವರಿಗೆ ಕಡಿಮೆ ಮೊತ್ತ ಸಿಗುತ್ತದೆ; ಆದರೆ ಆ ಭೂಮಿಯನ್ನು ಪರಿವರ್ತನೆ ಮಾಡಿ ಇತರ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವವರಿಗೆ ಹೆಚ್ಚು ಲಾಭವಾಗುತ್ತಿದೆ. ಮಾನ್ಯ ಸಭಾಪತಿಗಳೆ, ನಾನು ಇ-ಖಾತೆಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ತಾವು ಸ್ಪಷ್ಟವಾಗಿ, ಇ-ಖಾತೆ ಎನ್ನುವುದು ಕೇವಲ ರೆವಿನ್ಯೂ ಕಲೆಕ್ಷನ್‌ಗೆ ಮಾತ್ರ ಇರುವಂಥದ್ದಾಗಿದ್ದು, ಇದರಿಂದ ಮನೆ ಕಟ್ಟುವುದಕ್ಕಾಗಲಿ, ಲೋನ್ ತೆಗೆದುಕೊಳ್ಳುವುದಕ್ಕಾಗಲಿ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ತಾವು, ಕಂದಾಯ ಇಲಾಖೆಯ ಸಚಿವರು ಮತ್ತು ಪೌರಾಡಳಿತ ಸಚಿವರು, ಇದು ಈ ಮೂವರ ವ್ಯಾಪ್ತಿಗೆ ಬರುತ್ತದೆ. ಈಗ ಇ-ಖಾತಾ ಎನ್ನುವುದು ಒಂದು ರೀತಿಯಲ್ಲಿ ಎನ್‌ಫೋರ್ಸ್‌ಮೆಂಟ್ ಖಾತಾ ಆಗಿಬಿಟ್ಟಿದೆ. ಸ್ವತಃ ಎನ್‌ಫೋರ್ಸ್‌ಮೆಂಟ್ ಮಾಡಿ ತೆರಿಗೆ ವಸೂಲು ಮಾಡುವಂಥದ್ದಾಗಿದೆ. ಇದರಿಂದ ಯಾರು ಪಡೆದುಕೊಳ್ಳುತ್ತಾರೋ ಅವನಿಗೆ ಪರ್ಮನೆಂಟ್ ಆಗಿರುವಂತಹ ಸೌಲಭ್ಯ ಸಿಗುತ್ತಿಲ್ಲ. ನೀವು ಇ-ಖಾತೆ ಮಾಡುವುದೇಯಾದರೆ, ಅವನಿಗೆ ಪರ್ಮನೆಂಟ್ ಸೌಲಭ್ಯವನ್ನು ಮಾಡಿಕೊಡಿ. ಆತ ಯಾವತ್ತೂ ಸರ್ಕಾರದ ಬಾಗಿಲಿಗೆ ಬರದ ಹಾಗೆ ವ್ಯವಸ್ಥೆ ಮಾಡಿ.

ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):- ಮಾನ್ಯ ಸಭಾಪತಿಗಳೆ, 2 ವರ್ಷಗಳಲ್ಲಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಎಷ್ಟು ಎಕರೆ ಜಾಗವನ್ನು ಪರಿವರ್ತನೆ ಮಾಡಿದ್ದಾರೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮ ಉತ್ತರದಲ್ಲಿ ತಿಳಿಸಿರುವಂತೆ, 2 ವರ್ಷದಿಂದ, ಬಿಡಿಎ, ಬಿಎಂಆರ್‌ಡಿಎ ಮತ್ತು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಎಂಐಸಿಎಪಿಎ ವ್ಯಾಪ್ತಿಯನ್ನು ಹೊರತುಪಡಿಸಿ ಕೃಷಿಯೇತರ ಚಟುವಟಿಕೆಗಳಿಗೆ 2747.50 ಎಕರೆ ಭೂ ಬದಲಾವಣೆ ಮಾಡಲಾಗಿದೆ ಎಂದು ತಿಳಿಸಿದ್ದೇವೆ. ಈಗ ಮಾನ್ಯ ಸದಸ್ಯರು, ಏಕೆ ಈ ರೀತಿ ಮಾಡುತ್ತಿದ್ದೀರಿ; ಅದಕ್ಕೊಂದು ಕ್ಯಾಪ್ ಹಾಕಿ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್.ನವೀನ್:- ಮಾನ್ಯ ಸಭಾಪತಿಗಳೆ, ನಾನು ಕ್ಯಾಪ್ ಹಾಕಿ ಎಂದು ಹೇಳುತ್ತಿಲ್ಲ. ಯಾವ ಯಾವ ಉದ್ದೇಶಕ್ಕೆ ಎಷ್ಟೆಷ್ಟು ಜಾಗವನ್ನು ಬಳಸಬೇಕು ಎಂಬ ಬಗ್ಗೆ ಒಂದು ಮಾರ್ಗಸೂಚಿ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಸುರೇಶ್:- ಮಾನ್ಯ ಸಭಾಪತಿಗಳೆ, ಖಾಸಗಿ ಜಮೀನು ಹೊಂದಿರುವ ಮಾಲೀಕರು ತಮ್ಮ ಕೃಷಿ ಭೂಮಿಯನ್ನು ಯಾವುದೇ ರೀತಿಯಲ್ಲಿ ಬಳಸಿಕೊಳ್ಳಬಹುದು ಅಥವಾ ಪರಿವರ್ತನೆ ಮಾಡಿಕೊಂಡು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಬಹುದು. ನೀವು ಹೀಗೆಯೇ ಮಾಡಿ ಎಂದು ಜಾಗದ ಮಾಲೀಕರಿಗೆ ಹೇಳುವುದಕ್ಕೆ ಆಗುವುದಿಲ್ಲ. ಅದು ಅವರ ಜಮೀನ, ಅವರ ಹಕ್ಕು. ನೀವು ಜಮೀನನ್ನು ಯಾವುದಕ್ಕೆ ಬಳಸಿಕೊಳ್ಳುತ್ತಿರಿ ಎಂದು ಸರ್ಕಾರ ಹೇಗೆ ಕೇಳುವುದಕ್ಕೆ ಆಗುತ್ತದೆ? ಯಾವ ಪ್ರಾಧಿಕಾರಗಳು ಆ ರೀತಿ ಕೇಳುವುದಕ್ಕಾಗುತ್ತದೆ? ನೀವೇ ಕೆಲವು ಸಲ, ರೈತರಿಗೆ ಅವಕಾಶ ಸಿಗುತ್ತಿಲ್ಲ; ರೈತರಿಗೆ ದುಡ್ಡು ಸಿಗುತ್ತಿಲ್ಲ ಎಂದು ಹೇಳುತ್ತೀರಿ. ರೈತ ತನ್ನ ಬಳಿಯಿರುವಂತಹ ಕೃಷಿ ಜಮೀನನ್ನು ಪರಿವರ್ತನೆ ಮಾಡಿಕೊಂಡು ಕೃಷಿಯೇತರ ಚಟುವಟಿಕೆಗಳಿಗೆ ಅಥವಾ ವಾಣಿಜ್ಯ ಚಟುವಟಿಕೆಗೆ ಅಥವಾ ಬಡಾವಣೆಯನ್ನು ಮಾಡಿ, ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳುವುದಕ್ಕೆ ನೋಡುತ್ತೇನೆ. ಆತನ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕು ಎನ್ನುವುದು ನಮ್ಮ ಉದ್ದೇಶ ಕೂಡ ಆಗಿದೆ. ಇಂಥದ್ದಕ್ಕೆ ಯಾವುದೇ ರೂಲ್ಸ್ ಮಾಡುವುದಕ್ಕೆ ಆಗುವುದಿಲ್ಲ. ಅವನ ಜಮೀನು ಅವನ ಇಷ್ಟ, ಅವನು ಹೇಗಾದರೂ ಬಳಸಿಕೊಳ್ಳಬಹುದಾಗಿದೆ. ಹೀಗೆಯೇ ಮಾಡಬೇಕೆಂದು ಹೇಳುವ ಅಧಿಕಾರ ನಮಗೂ ಇಲ್ಲ; ನಿಮಗೂ ಇಲ್ಲ ಎನ್ನುವುದು ನನ್ನ ಸ್ವಂತ ಅಭಿಪ್ರಾಯವಾಗಿದೆ. ಕೆಐಎಡಿಬಿ ಮುಖಾಂತರ ಕೂಡ ಜಮೀನು ಪಡೆದುಕೊಳ್ಳುತ್ತಾರೆ. ಏಕೆಂದರೆ ಕೈಗಾರಿಕೆಗಳು ಬೆಳೆಯಬೇಕು ಅಲ್ಲವೇ? ಈ ಹಿನ್ನೆಲೆಯಲ್ಲಿ ಈಗ ರೂ.175 ಕೋಟಿ, ರೂ. 2.00 ಕೋಟಿ ಹೀಗೆ ಹೆಚ್ಚಿಗೆ ಕೊಡುತ್ತಿದ್ದೇವೆ. ಈ ರೀತಿ ಹಲವಾರು ಕಡೆ ಕೊಡುತ್ತಿದ್ದೇವೆ. ಕೃಷಿಯೇತರ ಚಟುವಟಿಕೆ ಇಂಥದ್ದೇ ಮಾಡಬೇಕು ಎಂದು ಹೇಳುವ ಅಧಿಕಾರ ಸರ್ಕಾರಕ್ಕೆ ಇಲ್ಲ.

ಮಾನ್ಯ ಸಭಾಪತಿಗಳೆ, ನಮ್ಮ ಇಲಾಖೆಯ ಕಾರ್ಯದರ್ಶಿಯವರಿಗೆ ಎಷ್ಟು ಎಕರೆ ಭೂ ಬದಲಾಣೆ ಮಾಡಲು ಅಧಿಕಾರವಿದೆ ಎಂದು ಕೇಳಿದ್ದಾರೆ. ಕಾರ್ಯದರ್ಶಿಗಳಿಗೆ ಇಂತಹ ಯಾವುದೇ ಅಧಿಕಾರ ಇರುವುದಿಲ್ಲ. ಭೂಪರಿವರ್ತನೆ ಆಗಬೇಕಾದರೆ ಅದು ನನ್ನ ಹತ್ತಿರವೇ ಬರಬೇಕಾಗುತ್ತದೆ. ಯಾವುದೇ ಭೂಪರಿವರ್ತನೆಯಾಗಲಿ ಅದನ್ನು ಸಂಬಂಧಪಟ್ಟ ಸಚಿವರೇ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ-ಖಾತೆಯ ಸಂಬಂಧ ನಾನು ನಿನ್ನೆ ಕೂಡ ಸದನದಲ್ಲಿ ಹೇಳಿದ್ದೆ. ಮುಂಚೆ, ಅನಧಿಕೃತ ಬಡಾವಣೆಗಳಲ್ಲಿ ಯಾರು ನಿವೇಶನಗಳನ್ನು ಪಡೆದುಕೊಂಡಿದ್ದರೋ ಅವರಿಗೆ ಯಾವುದೇ ರೀತಿಯ ಖಾತೆ ಇರಲಿಲ್ಲ. ಒಬ್ಬ ವ್ಯಕ್ತಿ ನಿವೇಶನ ಖರೀದಿ ಮಾಡಿದರೂ ಯಾವುದೇ ಖಾತೆ ಇರುತ್ತಿರಲಿಲ್ಲ. ಸ್ಥಳೀಯ ಸಂಸ್ಥೆಗಳ ದಾಖಲೆಗಳಲ್ಲೂ ಆತನ ಹೆಸರು ಇರುತ್ತಿರಲಿಲ್ಲ.

(ಮುಂದು)

(638) 12-8-2025 12.40 ಡಿಎಸ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಬಿ.ಎಸ್.ಸುರೇಶ (ಮುಂದು):-

ಅವರಿಗೆ ಒಂದು ಖಾತೆ ಸಿಗಬೇಕು ಎಂದು ನಾವು ಈ 'ಬಿ' ಖಾತೆಯನ್ನು ಕೊಟ್ಟಿದ್ದೇವೆ. ಕಟ್ಟಡ ಕಟ್ಟುವುದಕ್ಕೆ ಅವಕಾಶ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಅದು ಸತ್ಯ. ಕಟ್ಟಡ ಕಟ್ಟುವುದಕ್ಕೆ ಅದರಲ್ಲಿ ಅವಕಾಶ ಇಲ್ಲ. ಹೊಸದಾಗಿ ನಾವು ಪ್ರಸ್ತಾವನೆಯನ್ನು.....

ಶ್ರೀ ಸಿ.ಟಿ.ರವಿ:- ಮಾನ್ಯ ಸಭಾಪತಿಯವರೇ, 'ಮಹತ್ವಾಕಾಂಕ್ಷೆ ಯೋಜನೆ' ಎಂದು ಹೇಳುತ್ತಾರೆ. ಅದನ್ನು ಉಪ್ಪಿನಕಾಯಿ ಹಾಕಿಕೊಂಡು ನೆಕ್ಕಬೇಕಾ?

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಯವರೇ, ಅದು ಉಪ್ಪಿನಕಾಯಿ ಅಲ್ಲ ನೆಕ್ಕಕ್ಕೆ. ಹಾಗಾದರೆ ಅವರು ಏಕೆ ಮಾಡಲಿಲ್ಲ? **(ಗೊಂದಲ)**

ಶ್ರೀ ಕೆ.ಎಸ್.ನವೀನ್:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಹತ್ವಾಕಾಂಕ್ಷೆ ಯೋಜನೆ ಮಾಡಿದ್ದೇವೆ ಎಂದು ಹೇಳುತ್ತಾರೆ.

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಯವರೇ, ಹಿಂದಿನ ದಿವಸಗಳಲ್ಲಿ ಯಾವುದೇ ಖಾತೆ ಇರಲಿಲ್ಲ. ಯಾರಾದರೂ ಬಡವರು ನಿವೇಶನವನ್ನು ತೆಗೆದುಕೊಂಡರೆ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ನೋಂದಣಿಯಾಗುತ್ತಿತ್ತೇ ಹೊರತು ನೋಂದಣಿಯಾಗಿರುವಂತಹ ಜಮೀನಿಗೆ ಒಂದು ರಸೀದಿ ಕೂಡ ಅವನ ಹತ್ತಿರ ಇರುತ್ತಿರಲಿಲ್ಲ. ಅವನು ಮಾಲೀಕ ಎನ್ನುವುದಕ್ಕೆ ಯಾವುದೇ ಸಾಕ್ಷಿ ಇರುತ್ತಿರಲಿಲ್ಲ. ಈಗ ಅವನು ಮಾಲೀಕ ಎನ್ನುವುದಕ್ಕೆ ಯಾವುದಾದರೊಂದು ದಾಖಲೆ ಇರಲಿ ಎಂದು, ಬಡವರಿಗೆ ಸಹಾಯವಾಗಲಿ ಎಂದು ನಗರಸಭೆಗಳಲ್ಲಿ, ಮಹಾನಗರ ಪಾಲಿಕೆಗಳಲ್ಲಿನ ರಿಜಿಸ್ಟರ್‌ನಲ್ಲಿ ಅವನ ಹೆಸರು ಬರಬೇಕು ಮತ್ತು ಅವನ ಹೆಸರಿನಲ್ಲಿ ಖಾತೆ ಇರಬೇಕೆಂದು ನಾವು ಇ-ಖಾತೆಯನ್ನು ಕೊಡುತ್ತಿದ್ದೇವೆ. 'ಬಿ' ಖಾತೆಯಿಂದ 'ಎ'ಖಾತೆಯನ್ನು ಮಾಡುವುದಕ್ಕೆ ಹೊರಟಿದ್ದೇವೆ. ಅದು ಮಹತ್ವಾಕಾಂಕ್ಷೆ ಯೋಜನೆಯಾಗಿದೆ. ಅದು ಮಾನ್ಯ ಸಿದ್ದರಾಮಯ್ಯನವರು ಮಾಡಿರುವಂತಹ ಯೋಜನೆಯಾಗಿದೆ. ಇಷ್ಟು ವರ್ಷ ಇದ್ದವರು ಅದನ್ನು ಮಾಡಲಿಲ್ಲ. ಇವತ್ತು ನಾವು ಮಾಡಿರುವ ರೀತಿ ಅವರು ಮಾಡಬಹುದಾಗಿತ್ತಲ್ಲವೇ? ಮುಂಚೆ ಏಕೆ 'ಬಿ' ಖಾತೆಯನ್ನು ಕೊಟ್ಟಿಲ್ಲ? 'ಬಿ'

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾತೆಯಿಂದ 'ಎ' ಖಾತೆಯನ್ನು ಮಾಡಿ ಕೊಡುತ್ತೇವೆ. ಅದಕ್ಕೆಲ್ಲಾ ಕಾಯಬೇಕು. ಎಲ್ಲವನ್ನು ಒಂದೇ ದಿನ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೇ, ಕನ್‌ವರ್ಶನ್ ಮಾಡುವಂಥದ್ದು ಎಲ್ಲವನ್ನು ಮಂತ್ರಿಗಳಿಗೆ ಬರಬೇಕು ಎನ್ನುವುದು ಈಗ ತೀರ್ಮಾನವಾಯಿತು. ರೈತರು ಕಾಲು ಎಕರೆ, ಅರ್ಧ ಎಕರೆ ಇದ್ದರೂ ಕೂಡ ಅದರಲ್ಲಿ ಮನೆ ಕಟ್ಟಿಕೊಳ್ಳುವುದಕ್ಕಾಗದೆ, ಕಾರ್ಯದರ್ಶಿಗಳು ಅಥವಾ ಯಾರೇ ಅಲ್ಲಿ ಸೂಕ್ತ ವ್ಯವಸ್ಥೆ ಮಾಡುತ್ತಿದ್ದರೂ ಕೂಡ ಅದು ಮಂತ್ರಿಗಳಿಗೆ ಬರಬೇಕೆಂದರೆ ಎಷ್ಟರ ಮಟ್ಟಿಗೆ ಸರಿ? ಎಷ್ಟು ವರ್ಷಗಳಾದರೂ ಕೂಡ ಅದು ಕನ್‌ವರ್ಷನ್ ಆಗಿ ಇಷ್ಟು ದೂರ ಕಡತ ವಾಪಸ್ ಬರುವುದಿಲ್ಲ. ಅದು ಎಷ್ಟು ಕಷ್ಟ ಎಂಬುದನ್ನು ಯೋಚನೆ ಮಾಡಬೇಕಾಗಿದೆ. 'ಇ' ಖಾತದಿಂದ ನಿಮಗೇನು ಪ್ರಯೋಜನವೇ ಆಗುವುದಿಲ್ಲ. ನಾವು ತೆರಿಗೆ ಮಾತ್ರ ಸಂಗ್ರಹ ಮಾಡಿಕೊಳ್ಳುತ್ತೇವೆಂದರೆ ಇದು ಎಷ್ಟು ಸರಿ? ಅದರಿಂದ ಅವನಿಗೇನು ಪ್ರಯೋಜನವಾಗುವುದಿಲ್ಲ ಎಂದು ಅವರೇ ಹೇಳುತ್ತಿದ್ದಾರೆ. ಲೋನ್ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ, ಪ್ಲಾನ್ ಸ್ಯಾಂಕ್ಷನ್ ಅದರಿಂದ ಆಗುವುದಿಲ್ಲ, ಇದು ಯಾವುದು ಆಗುವುದಿಲ್ಲವೆಂದರೆ ಮಾನ್ಯ ಸಿ.ಟಿ.ರವಿ ಹೇಳಿರುವುದು ಸರಿಯಾಗಿದೆಯಲ್ಲವೇ? 'ಇ' ಖಾತೆ ತೆಗೆದುಕೊಂಡ ಮೇಲೆ ಎಲ್ಲಾ ಪ್ರಯೋಜನಗಳು ಅದರಿಂದ ಸಿಗಬೇಕು. ಇಲ್ಲದಿದ್ದರೆ ನೇರವಾಗಿ ಖಾತಾವನ್ನು ಕೊಡಿ. ಇದರಲ್ಲಿ ಅವರೊಬ್ಬರದ್ದೇ ಪಾತ್ರವಿಲ್ಲ. ಈಗ ಯಾವ್ಯಾವ ಇಲಾಖೆಗೆ ಇದು ಸಂಬಂಧ ಬರುತ್ತದೆಯೋ, ಇದರಲ್ಲಿ ಕಂದಾಯ ಇಲಾಖೆ ಬರುತ್ತದೆ,...

ಸಭಾಪತಿಯವರು:– ಮಾನ್ಯ ಸಚಿವರು ಅವರದ್ದಷ್ಟೇ ಹೇಳುತ್ತಾರೆ. ಉಳಿದವುಗಳ ಬಗ್ಗೆ ಅವರೇನು ಹೇಳುತ್ತಾರೆ? ಅವರಿಗೆ ಸಂಬಂಧಪಟ್ಟಿರುವುದನ್ನು ಮಾತ್ರ ಅವರು ಹೇಳಲಿ. ಉಳಿದವುಗಳನ್ನು ಆಮೇಲೆ ಬೇರೆ ಸಚಿವರು ಹೇಳುತ್ತಾರೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಇವೆಲ್ಲಾ ಸೇರಿಸಿ ನಾವು ಚರ್ಚೆ ಮಾಡುವುದಕ್ಕೆ ಆ ಸಚಿವರನ್ನೂ ಕರೆಯಿಸಿ ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಸಭಾಪತಿಯವರು:– ನೋಟಿಸ್ ಕೊಡಿ.

ಶ್ರೀ ಪ್ರದೀಪ್ ಶೆಟ್ಟರ್:– ಮಾನ್ಯ ಸಭಾಪತಿಯವರೇ, ...

ಸಭಾಪತಿಯವರು:– ತಾವು ಕುಳಿತುಕೊಳ್ಳಿ.

ಶ್ರೀ ಪ್ರದೀಪ್ ಶೆಟ್ಟರ್:– ಮಾನ್ಯ ಸಭಾಪತಿಯವರೇ, ನಾನು ಯಾವತ್ತು ಎದ್ದು ಮಾತನಾಡುವುದಿಲ್ಲ ಎಂಬುದು ತಮಗೆ ಗೊತ್ತಿದೆ. ಈ ವಿಚಾರ ನಿಮಗೆ ಸಂಬಂಧಪಟ್ಟಿರುವಂಥದ್ದು ಇದೆ. ನಾನು ಯಾವಾಗಲೂ ಅವಕಾಶ ಕೊಡಿ ಎಂದು ಕೇಳುವುದಿಲ್ಲ. ಇವತ್ತು ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶ ಕೊಡಿ.

ಸಭಾಪತಿಯವರು:– ರೂಲ್ಸ್ ಮತ್ತು ರೆಗ್ಯುಲೇಷನ್‌ಗಳು ಏನಿವೆ ಎಂಬುದನ್ನು ತಿಳಿದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಪ್ರದೀಪ್ ಶೆಟ್ಟರ್:– ಮಾನ್ಯ ಸಭಾಪತಿಯವರೇ, ಬೆಂಗಳೂರು, ಬಿಡಿಎ, ಬಿಬಿಎಂಪಿ ಬಿಟ್ಟರೆ ಹುಬ್ಬಳ್ಳಿ-ಧಾರವಾಡ ಅತಿ ಹೆಚ್ಚು change of land use ಗೆ ಬಂದಿದೆ. ಮಾನ್ಯ ಸಚಿವರು ಅನುಬಂಧದಲ್ಲಿ ಕೊಟ್ಟಿರುವ ಪ್ರಕಾರ ನಮ್ಮ ಹುಬ್ಬಳ್ಳಿ-ಧಾರವಾಡದಲ್ಲಿ 395 ಎಕರೆ ಬಂದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇದು ಮುಂಚೆ ಈ ರೀತಿ ಇರಲಿಲ್ಲ. ಇವೆಲ್ಲಾ ಕಡತಗಳನ್ನು ಮಾನ್ಯ ಸಚಿವರು ಏಕೆ ತರಿಸಿಕೊಳ್ಳುತ್ತಾರೆ? ಈ ಕೆಲಸ ಬೇಗ ಆಗುವುದಿಲ್ಲ. ಅಲ್ಲಿ developers ಇದ್ದಾರೆ. ಸಣ್ಣಪುಟ್ಟ development ಅನ್ನು ನಾವು ಮಾಡುತ್ತೇವೆ.

ಶ್ರೀ ಬಿ.ಎಸ್.ಸುರೇಶ:– ಮಾನ್ಯ ಸಭಾಪತಿಯವರೇ, ಮುಂಚೆಯಿಂದಲೂ change of land use ಗೆ ಸರ್ಕಾರಕ್ಕೆ ಬರಬೇಕು. ಅವರಿಗೆ ಮಾಹಿತಿ ಕೊರತೆ ಇದೆ. ಮುಂಚಿನ ಸರ್ಕಾರಗಳಲ್ಲಿ change of land use ಗೆ ಸರ್ಕಾರಕ್ಕೆ ಬರಬೇಕು. ಮಂತ್ರಿಗಳೇ ಮಾಡಬೇಕು.

ಸಭಾಪತಿಯವರು:– ಮಾನ್ಯ ಸಚಿವರೇ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಸುರೇಶ:– ಮಾನ್ಯ ಸಭಾಪತಿಯವರೇ, ಅವರಿಗೆ ನಾನು ಸಮಜಾಯಿಷಿ ಕೊಡುತ್ತಿದ್ದೇನೆ.

ಶ್ರೀ ಪ್ರದೀಪ್ ಶೆಟ್ಟರ್:– ಮಾನ್ಯ ಸಭಾಪತಿಯವರೇ, ಈಗ ತಾವು ಹಾಗೂ ನಾನು ಹುಬ್ಬಳಿ-ಧಾರವಾಡ ಪ್ರಾಧಿಕಾರದ ಸದಸ್ಯರಾಗಿದ್ದೇವೆ. ಅಲ್ಲಿ ಡೆವಲಪರ್ಸ್ ಬಂದು ನನಗೆ ಪ್ರಶ್ನೆಯನ್ನು ಕೇಳುತ್ತಾರೆ. ಇಷ್ಟು ತಡವಾಗಿ ಏಕೆ ಆಗುತ್ತಿದೆ, ಇದರಲ್ಲಿ ಏನು ನಡೆಯುತ್ತಿದೆ, ಇದರಲ್ಲಿ ಭ್ರಷ್ಟಾಚಾರ, ಅವ್ಯವಹಾರ ಏನಾದರೂ ನಡೆಯುತ್ತಿದೆಯೇ, ನಾವು ಎಕರೆಗೆ ಜಾಸ್ತಿ ಹಣ ಕೊಡಬೇಕೇ ಎಂದು ಡೆವಲಪರ್ಸ್ ನನಗೆ ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಸುರೇಶ:– ಯಾರಿಗೆ ಹಣ ಕೊಡಬೇಕು? ಇದು ಹಿಂದಿನಿಂದಲೂ ಇದೆ. ನಾವು ಮಾಡಿರುವುದಲ್ಲ.

ಶ್ರೀ ಕೆ.ಎಸ್.ನವೀನ್:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾವು ಮೊದಲನೇ ಹೆಜ್ಜೆ ಇಟ್ಟಿದ್ದೇವೆಂದು ಹೇಳುತ್ತಿದ್ದಾರೆ. 'ಇ' ಖಾತೆಯನ್ನು ನಿಜವಾಗಿಯೂ ಪಡೆದುಕೊಳ್ಳುವುದಕ್ಕೆ ಏನಾಗಿದೆ ಎಂದರೆ ಯಾರ ಹತ್ತಿರ ಆಸ್ತಿ ಇದೆ ಅದು ನೋವು ಖಾತೆ ಆಗಿಬಿಟ್ಟಿದೆ. ಅದನ್ನು ಪಡೆದುಕೊಳ್ಳುವುದಕ್ಕೆ ಅವರಿಗೆ ನೋವು ಆಗಿದೆ. ಹತ್ತಾರು ದಾಖಲೆಗಳನ್ನು ತೆಗೆದುಕೊಂಡು ಹೋಗಿ ಕೊಡಬೇಕು, ಹತ್ತಾರು ಸಲ ಹೋಗಬೇಕು. ಸರ್ಕಾರ ಮೇಳ ಮಾಡುತ್ತದೆ ಎಂದು ಹೇಳುತ್ತಾರೆ, ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ ಎಂದು ಹೇಳುತ್ತಾರೆ, ಪ್ಲಾನ್ ಸ್ಯಾಂಕ್ಷನ್ ಕೊಡುವುದಿಲ್ಲ, ಕಟ್ಟಡ ಕಟ್ಟುವುದಕ್ಕೆ ಅನುಮತಿಯನ್ನು ಕೊಡುವುದಿಲ್ಲ. ಅವರು ಇಂತಹ ಖಾತೆ ತೆಗೆದುಕೊಂಡು ಏನು ಮಾಡಬೇಕಾಗಿದೆ? ಅವರಿಗೆ ಲೋನ್ ಸಿಗುವುದಿಲ್ಲ. ಅವರು ಹತ್ತಾರು ಸಲ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಓಡಾಡಿದರೂ ಕೂಡ ಅವರ ಕೈಗೆ ಸಿಗುವುದು ಒಂದು piece of paper. ಇವರು ಇಂತಹದ್ದನ್ನು ಮಾಡುವುದು ಬಿಟ್ಟು ಸಮಸ್ಯೆ ಏನಿದೆ ಅದನ್ನು ಸರಿಪಡಿಸುವಂಥದ್ದಕ್ಕೆ ಯೋಜನೆಯನ್ನು ರೂಪಿಸಬೇಕಾಗಿದೆ.

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಾನು ಹೇಳಬಯಸುವುದೇನೆಂದರೆ, ಮುಂಚಿನ ದಿವಸಗಳಲ್ಲಿ ನಾವು ಮಾಡಿದಂತಹ ರಸ್ತೆ, ವಿದ್ಯುತ್, ನೀರನ್ನು ಉಪಯೋಗಿಸುತ್ತಿದ್ದರು. ಆದರೆ, ಅವರು ಯಾವುದಕ್ಕೂ ತೆರಿಗೆಯನ್ನು ಕೊಡುತ್ತಿರಲಿಲ್ಲ. ಸರ್ಕಾರ ಎಲ್ಲಾ ವ್ಯವಸ್ಥೆ ಕೊಡಬೇಕು, ಆದರೆ ಅವರು ತೆರಿಗೆಯನ್ನು ಕಟ್ಟಲಿಲ್ಲವೆಂದರೆ ಹೇಗೆ? ನಾವು ಈಗ 'ಬಿ' ಖಾತೆಯನ್ನು ಕೊಡುವುದಕ್ಕೆ ಮೊದಲನೇ ಹೆಜ್ಜೆ ಇಟ್ಟಿದ್ದೇವೆ. ಈಗ ನಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. 'ಬಿ' ಖಾತಾ ಇರುವವರಿಗೆ OTS (One Time Settlement) ನಲ್ಲಿ ಇದುವರೆಗೂ ಆಗಿರುವಂತಹ 'ಬಿ' ಖಾತೆಗಳಿಗೆ 'ಎ' ಖಾತೆ ಕೊಡಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಸರ್ಕಾರ ಕೊಡುವಂತಹ ಎಲ್ಲಾ ಸವಲತ್ತುಗಳನ್ನು ಅವರು ಬಳಸಿಕೊಂಡು ಸರ್ಕಾರಕ್ಕೆ ತೆರಿಗೆಯೇ ಕಟ್ಟಲಿಲ್ಲವೆಂದರೆ ಸರ್ಕಾರ ನಡೆಸುವುದು ಹೇಗೆ?

(ಗೊಂದಲ)

ಸಭಾಪತಿಯವರು:- ಮಾನ್ಯ ನವೀನ್‌ರವರೇ, ಸಾಕು ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಯವರೇ, ಬೇಡ ಎಂದರೆ ತೆಗೆದುಕೊಳ್ಳಬೇಡಿ ಬಿಡಿ. ಕಡ್ಡಾಯವಾಗಿ ಇಲ್ಲ.

(ಗೊಂದಲ)

ಶ್ರೀ ಕೆ.ಎಸ್.ನವೀನ್:- ಮಾನ್ಯ ಸಭಾಪತಿಯವರೇ, ಇ-ಖಾತೆಗೆ ಸಂಬಂಧಪಟ್ಟ ಹಾಗೆ ಚರ್ಚೆ ಮಾಡುವುದಕ್ಕೆ 6-7 ಸದಸ್ಯರುಗಳು ಸಹಿ ಮಾಡಿ ಕೊಟ್ಟಿದ್ದಾರೆ. ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು.

(ಈ ಹಂತದಲ್ಲಿ ಮಾನ್ಯ ಕೆ.ಎಸ್.ನವೀನ್‌ರವರು ಸಹಿ ಮಾಡಿರುವ ನೋಟಿಸ್ ಅನ್ನು ಮಾನ್ಯ ಸಭಾಪತಿಯವರಿಗೆ ನೀಡಿದರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 169

ರಾಜ್ಯದಲ್ಲಿ ಟ್ರೇಡ್ ಲೈಸೆನ್ಸ್ ನೀತಿಯ ಬಗ್ಗೆ

ಸದಸ್ಯರು.

	ಪ್ರಶ್ನೆ	ಉತ್ತರ
ಅ)	ರಾಜ್ಯದ ವ್ಯಾಪಾರಸ್ಥರು, ಉದ್ಯಮಿಗಳು ಹಾಗೂ ಸೇವಾ ಕ್ಷೇತ್ರದ ವ್ಯಕ್ತಿಗಳಿಗೆ ಟ್ರೇಡ್ ಲೈಸೆನ್ಸ್ ಪಡೆಯುವುದು ಕಡ್ಡಾಯವೇ;	• ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ-1976 ಕಲಂ 353 ಹಾಗೂ ಕರ್ನಾಟಕ ಪೌರಸಭೆಗಳ ಅಧಿನಿಯಮ-1964ರ ಕಲಂ 256ರನ್ವಯ ನಗರ ಸ್ಥಳೀಯ ಸಂಸ್ಥೆ ಹಾಗೂ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವ್ಯಾಪಾರ ವಹಿವಾಟು ಮಾಡಲು ಉದ್ದಿಮೆ ಪರವಾನಿಗೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.
ಆ)	ಟ್ರೇಡ್ ಲೈಸೆನ್ಸ್ ಜಾರಿಯ ಮೂಲಕ ರಾಜ್ಯ ಸರ್ಕಾರಕ್ಕೆ ಆಗುವ ಆದಾಯ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)	• 2024-25 ನೇ ಸಾಲಿನಲ್ಲಿ ಉದ್ದಿಮೆ ಪರವಾನಿಗೆ ನೀಡುವುದರಿಂದ ಸಂಗ್ರಹಿಸಲಾದ ಶುಲ್ಕದ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ ನೀಡಿದೆ.** • ಉದ್ದಿಮೆ ಪರವಾನಿಗೆಯಿಂದ ಸಂಗ್ರಹಿಸಲಾದ ಶುಲ್ಕವನ್ನು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳೇ ಬಳಕೆ ಮಾಡಿಕೊಳ್ಳುತ್ತವೆ.
ಇ)	ರಾಜ್ಯದಲ್ಲಿ ಎಲ್ಲಾ ಮಹಾನಗರ ಪಾಲಿಕೆಯು ಟ್ರೇಡ್ ಲೈಸೆನ್ಸ್ ನೀಡುವಲ್ಲಿ, ಏಕೀಕೃತ ಮಾರ್ಗದರ್ಶಕ ತತ್ವವನ್ನು ಅನುಸರಿಸುತ್ತಿದೆಯೇ; ವಿವರ ಒದಗಿಸುವುದು)	ಹೌದು. • ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ-1976 ಪ್ರಕರಣ 353 ರಡಿ ವಿವರಿಸಿರುವಂತೆ ಮಹಾನಗರ ಪಾಲಿಕೆಗಳಲ್ಲಿ ಉದ್ದಿಮೆ ಪರವಾನಿಗೆಯನ್ನು 15 ದಿನಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದ್ದು, ಈ ಕೆಳಕಂಡ ದಾಖಲಾತಿಗಳನ್ನು ಪಡೆದು ಉದ್ದಿಮೆ ಪರವಾನಿಗೆ ನೀಡಲಾಗುತ್ತಿದೆ. 1) ಮಾಲೀಕತ್ವದ ಪುರಾವೆ/ಬಾಡಿಗೆ ಕರಾರು 2) ಅಫಿಡವಿಟ್ 3) ಚಾಲ್ತಿ ಸಾಲಿನ ಆಸ್ತಿ ತೆರಿಗೆ ಪಾವತಿ ರಶೀದಿ 4) ಬಾಡಿಗೆಯಾದಲ್ಲಿ ಉದ್ದಿಮೆ ನಡೆಸಲು ಮಾಲೀಕರ ನಿರಾಕ್ಷೇಪಣಾ ಪತ್ರ • ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 25 ತುಮಪಾ 2022 (ಇ) ದಿನಾಂಕ: 20.10.2022 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 281 ಜಿಇಎಲ್ 2022, ದಿನಾಂಕ: 18.10.2022ರಲ್ಲಿ ರಾಜ್ಯದ ಮಹಾನಗರ ಪಾಲಿಕೆಗಳ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉದ್ದಿಮೆ/ವಾಣಿಜ್ಯ ಪರವಾನಿಗೆಯನ್ನು ಪಾರದರ್ಶಕವಾಗಿ ಮತ್ತು ತ್ವರಿತವಾಗಿ ನೀಡುವ ದೃಷ್ಟಿಯಿಂದ ಕಡ್ಡಾಯವಾಗಿ ಕಾಲಮಿತಿಯೊಳಗೆ ಮಂಜೂರು ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಕಳೆದ ಮೂರೂವರೆ ವರ್ಷಗಳಲ್ಲಿ ನಾನು ಈ ಪ್ರಶ್ನೆಯನ್ನು ಮೂರನೇ ಬಾರಿ ಕೇಳುತ್ತಿದ್ದೇನೆ. ಟ್ರೇಡ್ ಲೈಸೆನ್ಸ್ ವ್ಯಾಪಾರಸ್ಥರಿಗೆ ಏಕೆ ಬೇಕು ಎಂಬುದಕ್ಕೆ ನನಗೆ ಸರಿಯಾದಂತಹ ಉತ್ತರ ಸರ್ಕಾರದ ಅಧಿಕಾರಿಗಳಿಂದ ಸಿಗುತ್ತಿಲ್ಲ. ಟ್ರೇಡ್ ಲೈಸೆನ್ಸ್ ಅನ್ನು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976ರ ಕಲಂ 353 ರನ್ವಯ ತೆಗೆದುಕೊಳ್ಳಬೇಕೆಂದು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದಾರೆ. ಅದರಲ್ಲಿ ಬಹಳ ಸ್ಪಷ್ಟವಾಗಿದೆ. Nuisance and hazardous, ಅವರಿಗೆ ಮಾತ್ರ ಟ್ರೇಡ್ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಇದೆ. ಈಗ ಏನಾಗಿದೆ ಎಂದರೆ, ಎಲ್ಲರೂ ಇಡೀ ರಾಜ್ಯದಲ್ಲಿ ೫೦ ಲಕ್ಷಕ್ಕಿಂತ ಹೆಚ್ಚು ವ್ಯಾಪಾರಸ್ಥರು ಇದ್ದಾರೆ. ಅದರಲ್ಲಿ ಸಣ್ಣ, ಮಧ್ಯಮ ಮತ್ತು ಉತ್ತಮ ವ್ಯಾಪಾರಸ್ಥರು ಇದ್ದಾರೆ. ನಾನು ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಇವತ್ತಿನ ವ್ಯಾಪಾರಸ್ಥರ ಸ್ಥಿತಿ ಏನಾಗಿದೆ ಎಂದರೆ ಅವರು ಯಾವ್ಯಾವ ಇಲಾಖೆಗಳಲ್ಲಿ fee ಗಳನ್ನು ಕೊಟ್ಟು ಲೈಸೆನ್ಸ್ ಅನ್ನು ತೆಗೆದುಕೊಳ್ಳಬೇಕು ಎಂಬುದನ್ನು ಸುಮ್ಮನೆ ನಾನು ಮಾನ್ಯ ಸಚಿವರ ಗಮನಕ್ಕೆ ಹೇಳುತ್ತಿದ್ದೇನೆ; labour department, Weights and Measures, Professional Tax, Income Tax, Property Tax, Pollution Control Board, GST Registration, Factories, health department, FSSAI, ESI, P.F., Shops and Establishment, power, ಇಷ್ಟು ಕಡೆ ಹೋಗಬೇಕು. ಇದಲ್ಲದೆ, ಇತ್ತೀಚೆಗೆ ಜಿಎಸ್‌ಟಿ ಯಿಂದ 13,000 ವ್ಯಾಪಾರಸ್ಥರಿಗೆ ನೋಟಿಸ್ ಅನ್ನು ಕೊಡುತ್ತಾರೆ. ವ್ಯಾಪಾರಸ್ಥರು ಎಲ್ಲಾ ಅಂಗಡಿ ವ್ಯವಹಾರವನ್ನು ಮುಚ್ಚಿಕೊಂಡು ಹೋಗಬೇಕು.

ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು, ರಾಜ್ಯದ ವ್ಯಾಪಾರಸ್ಥರು, ಉದ್ಯಮಿಗಳು ಹಾಗೂ ಸೇವಾ ಕ್ಷೇತ್ರದ ವ್ಯಕ್ತಿಗಳಿಗೆ ಟ್ರೇಡ್ ಲೈಸೆನ್ಸ್ ಪಡೆಯುವುದು ಕಡ್ಡಾಯವೇ ಎಂದು ಪ್ರಶ್ನೆ ಕೇಳಿದ್ದಾರೆ. ಹೌದು, ಇದು ಕಡ್ಡಾಯವಾಗಿದೆ. ಯಾವುದೇ ವ್ಯಾಪಾರ ವಹಿವಾಟು ಮಾಡುವಂಥವರು ಇದ್ದರೆ ಅವರು ಟ್ರೇಡ್ ಲೈಸೆನ್ಸ್ ತೆಗೆದುಕೊಳ್ಳಬೇಕಾಗಿರುವುದು ಅವರ ಕರ್ತವ್ಯವಾಗಿರುತ್ತದೆ. ಅದನ್ನು ಇಶ್ಯೂ ಮಾಡುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಅದು ಕಡ್ಡಾಯವಾಗಿದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಈಗ ಬೇರೆ ಬೇರೆ ರೀತಿಯ ತೆರಿಗೆಯನ್ನು ಸಂಗ್ರಹ ಮಾಡುತ್ತಿದ್ದೇವೆ. ಅದಕ್ಕೆ minimum ಮತ್ತು maximum ಎಂದು ಹೊಸದಾಗಿ ರೂಲ್ಸ್ ಮಾಡುವುದಕ್ಕೆ ಹೊರಟಿದ್ದೇವೆ. ನನ್ನ ಪ್ರಕಾರ ಈ ಅಧಿವೇಶನದಲ್ಲೇ ಆ ವಿಧೇಯಕವನ್ನು ಸದನದಲ್ಲಿ ಮಂಡಿಸುತ್ತೇವೆ. ದೊಡ್ಡ ಮಹಾನಗರ ಪಾಲಿಕೆ ಎಲ್ಲೆಲ್ಲಿ ಇರುತ್ತದೆ ಅದಕ್ಕೆ ಹೆಚ್ಚು ತೆರಿಗೆ ಶುಲ್ಕವನ್ನು ವಿಧಿಸುವಂಥದ್ದು. ಸಣ್ಣಸಣ್ಣ ಊರುಗಳು, ಪುರಸಭೆಗಳು, ನಗರಸಭೆಗಳಿದ್ದರೆ ಅವುಗಳಿಗೆ ಕಡಿಮೆ ತೆರಿಗೆಯನ್ನು ಕೊಡುವಂಥದಕ್ಕೆ ರೂಲ್ಸ್‌ನ್ನು ಮಾಡುತ್ತಿದ್ದೇವೆ. ಈ ಅಧಿವೇಶನದಲ್ಲೇ ನಾವು ವಿಧೇಯಕವನ್ನು ತರುತ್ತಿದ್ದೇವೆ. ಟ್ರೇಡ್ ಲೈಸೆನ್ಸ್ ದೊರೆಯುವ ಪ್ರಕ್ರಿಯೆಯಲ್ಲಿ ಏನಾದರೂ ವಿಳಂಬವಾಗುತ್ತಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಸಕಾಲ ಎನ್ನುವ ಹೊಸ ಯೋಜನೆಯನ್ನು ಮಾಡಿದ್ದೇವೆ. ಅಂಗಡಿ ಮಾಲೀಕನಿಗೆ ಪರವಾನಗಿ ಬೇಕಾಗಿದೆ ಎಂದರೆ, ಅವರು ನಾವು ಕೇಳಿದಂತಹ ದಾಖಲೆಗಳನ್ನೆಲ್ಲಾ ಕೊಡಬೇಕಾಗುತ್ತದೆ. ಅವರು ದಾಖಲೆಗಳನ್ನು ಸಂಪೂರ್ಣವಾಗಿ ಕೊಟ್ಟಂತಹ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನದಿಂದ 15 ದಿನಗಳ ಒಳಗಾಗಿ ಅವರಿಗೆ ನಾವು ಲೈಸೆನ್ಸ್ ಅನ್ನು ಇಶ್ಯೂ ಮಾಡುವಂತಹ ಕೆಲಸ ಮಾಡುತ್ತೇವೆ. ಆದ್ದರಿಂದ ವಿಳಂಬ, ಭ್ರಷ್ಟಾಚಾರ ಪ್ರಕರಣಗಳು ರಿಜಿಸ್ಟರ್ ಆಗಿರುವುದು ಯಾವುದು ಸರ್ಕಾರದ ಗಮನಕ್ಕೆ ಇದುವರೆಗೂ ಬಂದಿಲ್ಲ.

(ಮುಂದು)

(639) 12/08/2025 12:50 ಎಸ್‌ಪಿಆರ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಬಿ.ಎಸ್.ಸುರೇಶ (ಮುಂದು):-

ಸದಸ್ಯರು ಕೇಳಿರುವ ಪ್ರಶ್ನೆಗಳಿಗೆಲ್ಲಾ ನಾನು ಉತ್ತರ ನೀಡಿದ್ದೇನೆ. ಆಯಾ ನಗರ ಸ್ಥಳೀಯ ಸಂಸ್ಥೆಗಳ ಮೂಲಗಳಿಗೆ ಅನುಗುಣವಾಗಿ ಕನಿಷ್ಠ ಅಥವಾ ಗರಿಷ್ಠ ಎರಡನ್ನೂ ಸಹ ನಿಗದಿಪಡಿಸಲಾಗುವುದು. ಇತ್ತೀಚಿನ ಸಚಿವ ಸಂಪುಟದ ಸಭೆಯಲ್ಲಿ ಇದಕ್ಕೆ ಅನುಮೋದನೆಯು ದೊರೆತಿರುತ್ತದೆ. ಇದಕ್ಕೆ ಸಂಬಂಧಿತ ವಿಧೇಯಕವನ್ನು ಈ ಸದನದಲ್ಲಿ ಮಂಡಿಸಿ, ಸದನದ ಅನುಮೋದನೆಯನ್ನು ಪಡೆದುಕೊಂಡ ನಂತರ ನಿಯಮಾವಳಿಗಳಿಗೆ ತಿದ್ದುಪಡಿಗಳನ್ನು ಮಾಡಿ ಜಾರಿಗೊಳಿಸಲಾಗುವುದು.

ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ತಿಳಿಸಿದಂತೆ, ಉದ್ದಿಮೆ ಪರವಾನಿಗೆ ಪಡೆಯುವುದು ಕಡ್ಡಾಯ ಮಾಡಿರುವುದರಿಂದ 50 ಲಕ್ಷಕ್ಕಿಂತಲೂ ಹೆಚ್ಚಿನ ವ್ಯಾಪಾರಸ್ಥರಿಂದ 2025-26 ನೇ ಸಾಲಿನಲ್ಲಿ ಕೇವಲ 2,248.57 ಲಕ್ಷ ರೂಪಾಯಿಗಳು ಮಾತ್ರವೇ ಸಂಗ್ರಹವಾಗಿರುತ್ತದೆ.

ಶ್ರೀ ಬಿ.ಎಸ್.ಸುರೇಶ (ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು):- ಮಾನ್ಯ ಸಭಾಪತಿಯವರೆ, ಇದು ಪೂರ್ತಿ ವರ್ಷವಾಗಿರದೇ ಕೇವಲ ಅರ್ಧ ವರ್ಷ ಮಾತ್ರವೇ ಆಗಿರುತ್ತದೆ. ಲಿಖಿತ ಉತ್ತರದಲ್ಲಿನ ಅಂಶಗಳನ್ನು ಸದಸ್ಯರು ಬಹಳವಾಗಿ ಗಮನಿಸಬೇಕು. 2024-25 ನೇ ಸಾಲಿನಲ್ಲಿ ಒಟ್ಟು 5,069.17 ಲಕ್ಷ ರೂಪಾಯಿಗಳು ಸಂಗ್ರಹವಾಗಿದೆ.

ಶ್ರೀ ಡಿ.ಎಸ್.ಅರುಣ್:- ಮಾನ್ಯ ಸಭಾಪತಿಯವರೆ, ಈ ಆರು ತಿಂಗಳ ಅವಧಿಯಲ್ಲಿಯೇ ಹೆಚ್ಚಿನ ಪ್ರಮಾಣದ ಶುಲ್ಕವು ಸಂಗ್ರಹವಾಗುತ್ತದೆ. ಶುಲ್ಕ ಸಂಗ್ರಹಣೆ ವಿಚಾರದಲ್ಲಿ ಬಹಳಷ್ಟು ಹೆಚ್ಚಿನ ಪ್ರಮಾಣದಲ್ಲಿ ಭ್ರಷ್ಟಾಚಾರ ಆಗುತ್ತದೆ. ಈ ಅಂಶವನ್ನು ಸಚಿವರು ನಂಬುವುದಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ 14,000 ಸಂಖ್ಯೆಯಷ್ಟು ವ್ಯಾಪಾರಸ್ಥರು ಇದ್ದಾರೆ. ಆದರೆ ಈ ಪೈಕಿ ಕೇವಲ 1,500 – 2,000 ವ್ಯಾಪರಸ್ಥರಿಂದಲೇ ಮಾತ್ರವೇ ಶುಲ್ಕ ಸಂಗ್ರಹಣೆ ಮಾಡುವುದಕ್ಕಾಗುತ್ತದೆ. ಇಷ್ಟು ವ್ಯಾಪಾರಸ್ಥರನ್ನು ಹೊರತು ಪಡಿಸಿ, ಹೆಚ್ಚಿನ ಪ್ರಮಾಣದಲ್ಲಿ ಶುಲ್ಕ ಸಂಗ್ರಹಣೆ ಮಾಡುವುದಕ್ಕಾಗುವುದಿಲ್ಲ. ಇಷ್ಟು ವ್ಯಾಪಾರಸ್ಥರು ಉದ್ದಿಮೆ ಪರವಾನಿಗೆಯನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆ ಪಡೆಯುತ್ತಾರೆ ಎಂದರೆ, ಬ್ಯಾಂಕುಗಳಲ್ಲಿ ಅವರುಗಳು ಪಡೆದುಕೊಂಡಿರುವ ಸಾಲವನ್ನು ನವೀಕರಣ ಮಾಡಿಕೊಳ್ಳಬೇಕಾಗಿರುತ್ತದೆ. ಈ ಕಾರಣಕ್ಕಾಗಿಯೇ ಅವರುಗಳು ಉದ್ದಿಮೆ ಪರವಾನಿಗೆಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ, ಇದರಲ್ಲಿ ಭ್ರಷ್ಟಾಚಾರವಾಗುತ್ತಿದೆ. ದಯಮಾಡಿ ಸರ್ಕಾರವು ಈ ವ್ಯವಸ್ಥೆಯನ್ನು ರದ್ದುಗೊಳಿಸಬೇಕು. 4,10,000 ಕೋಟಿ ರೂಪಾಯಿಗಳಷ್ಟು ಗಾತ್ರದ ಆಯವ್ಯಯವನ್ನು ಹೊಂದಿರುವ ರಾಜ್ಯಕ್ಕೆ 40-50 ಕೋಟಿ ರೂಪಾಯಿಗಳು ಮಾತ್ರವೇ ಈ ಮೂಲಕ ಸಂಗ್ರಹವಾಗುತ್ತಿದೆ. ಇದು ಉದ್ದಿಮೆ ಪರವಾನಿಗೆಯ ಶುಲ್ಕವಾಗಿದ್ದು, ಕರ ಆಗಿರುವುದಿಲ್ಲ. ಸರ್ಕಾರವು ಎಲ್ಲದ್ದಕ್ಕೂ ಉದ್ದಿಮೆ ಪರವಾನಿಗೆಯನ್ನು ಪಡೆದುಕೊಳ್ಳುವಂತೆ ತಿಳಿಸುತ್ತಿದ್ದು, ಇದರ ಶುಲ್ಕವನ್ನು 50/- ರೂಪಾಯಿಗಳಿಗೆ ನಿಗದಿಪಡಿಸಿದರೆ ಆಗುತ್ತದೆ. ಒಟ್ಟಾರೆಯಾಗಿ ಉದ್ದಿಮೆ ಪರವಾನಿಗೆಯನ್ನು ಸರ್ಕಾರವು ರದ್ದುಗೊಳಿಸಬೇಕು; ಏಕೆಂದರೆ, ಇದರಿಂದ ಯಾವುದೇ ಉಪಯೋಗವಾಗುವುದಿಲ್ಲ.

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಯವರೆ, ಪ್ರತಿ ವರ್ಷವೂ ಉದ್ದಿಮೆ ಪರವಾನಿಗೆಯ ನವೀಕರಣ ಮಾಡಬೇಕು ಎಂದು ಕಳೆದ ಬಾರಿ ಸದಸ್ಯರು ಪ್ರಸ್ತಾಪಿಸಿದ್ದರು. ಆದರೆ, ನಾವು ಇದರ ಅವಧಿಯನ್ನು ಮೂರು ವರ್ಷಗಳಿಗೆ ಎಂಬುದಾಗಿ ಮಾಡಿದ್ದೇವೆ. ಅದಾದ ಮೇಲೆ ಐದು ವರ್ಷ....

(ಗೊಂದಲ)

ಶ್ರೀ ಡಿ.ಎಸ್.ಅರುಣ್:- ಮಾನ್ಯ ಸಭಾಪತಿಯವರೆ, ಇದನ್ನು ಐದು ವರ್ಷಗಳಿಗೆ ಎಂಬುದಾಗಿ ಮಾಡಬೇಕು ಎಂದು ತಿಳಿಸಿದ್ದು, ಆದರೆ, ಇದನ್ನು ಎಲ್ಲಿಯೂ ಸಹ ಜಾರಿಗೊಳಿಸಿಲ್ಲ. ಇಲಾಖೆಯ ಅಧಿಕಾರಿಗಳು ಕೇವಲ ಸುಳ್ಳನ್ನು ಹೇಳುತ್ತಿದ್ದಾರೆ.

ಸಭಾಪತಿಯವರು:- ಶ್ರೀ ಅರುಣ್ ರವರೇ ನಾನು ಹೇಳುವುದನ್ನು ಕೇಳಿ.

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಯವರೆ, ಹಾಲಿ ಚಾಲ್ತಿಯಲ್ಲಿರುವ ವ್ಯವಸ್ಥೆಯನ್ನು ರದ್ದುಗೊಳಿಸಬೇಕೆಂದರೆ, ಇದಕ್ಕೆ ಅರ್ಥವೇ ಇರುವುದಿಲ್ಲ. ಉದ್ದಿಮೆ ಪರವಾನಿಗೆ ನೀಡುವ ಸಂಬಂಧ ಹಣ ಸಂಗ್ರಹಣೆ ಮಾಡದಿದ್ದರೆ, ಸ್ಥಳೀಯ ಸಂಸ್ಥೆಗಳ ಕಛೇರಿಗಳನ್ನು ನಡೆಸುವುದು ಹೇಗೆ ಮತ್ತು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ವೇತನವನ್ನು ನೀಡುವವರು ಯಾರು? ಉದ್ದಿಮೆ ಪರವಾನಿಗೆಯನ್ನು ಸುಖಾ ಸುಮ್ಮನೆ ನೀಡುವುದಕ್ಕಾಗುತ್ತದೆಯೇ? ಸದಸ್ಯರು ಹೇಳಿದಂತೆ ಮಾಡುವುದಕ್ಕಾಗುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ 2,248.57 ಲಕ್ಷ ರೂಪಾಯಿಗಳನ್ನು ಸಂಗ್ರಹಣೆ ಮಾಡಲಾಗಿದೆ. ಕಳೆದ ಸಾಲಿನ ಅಂದರೆ 2024-25 ನೇ ಸಾಲಿನ ಒಟ್ಟು ಸಂಗ್ರಹಣೆಯ ಮೊತ್ತವನ್ನು ಗಮನಿಸಬೇಕು. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಈ ಎಲ್ಲಾ ಮಾಹಿತಿಗಳನ್ನು ಲಿಖಿತ ಉತ್ತರದಲ್ಲಿ ನೀಡಲಾಗಿದೆ. ಕಳೆದ ವರ್ಷ ಸಂಗ್ರಹಣೆ ಮಾಡಲಾದ ಒಟ್ಟು 5069.17 ಲಕ್ಷ ರೂಪಾಯಿಗಳು ಕಡಿಮೆ ಮೊತ್ತವಾಗಿರುವುದಿಲ್ಲ. ಸದಸ್ಯರು ಕೇವಲ ದೊಡ್ಡ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಳೀಯ ಸಂಸ್ಥೆಗಳ ಬಗ್ಗೆ ಮಾತ್ರವಲ್ಲದೇ ಸಣ್ಣ ಸ್ಥಳೀಯ ಸಂಸ್ಥೆಗಳ ಬಗ್ಗೆಯೂ ಸಹ ಯೋಚನೆ ಮಾಡಬೇಕು. ಇಂತಹ ಸಣ್ಣ ಸ್ಥಳೀಯ ಸಂಸ್ಥೆಗಳಲ್ಲಿ 10-20 ಲಕ್ಷ ರೂಪಾಯಿಗಳು ಸಂಗ್ರಹಣೆಯಾದರೆ, ಅದನ್ನು ವೇತನ ಪಾವತಿ, ನೀರು ಸರಬರಾಜು ಇತ್ಯಾದಿ ಇನ್ಯಾವುದೇ ಕೆಲಸಗಳಿಗಾಗಿ ಖರ್ಚು ಮಾಡುವಂತಹ ವ್ಯವಸ್ಥೆಗಳು ಅಲ್ಲಿರುತ್ತವೆ. ಶುಲ್ಕ ಸಂಗ್ರಹಣೆಯ ಇಡೀಯಾದ ವ್ಯವಸ್ಥೆಯನ್ನೇ ರದ್ದುಗೊಳಿಸುವಂತೆ ಸದಸ್ಯರು ತಿಳಿಸುತ್ತಿದ್ದು, ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಶುಲ್ಕ ಸಂಗ್ರಹಣೆಯ ಪ್ರಮಾಣವು ಹಂತ ಹಂತವಾಗಿ ಹೆಚ್ಚಾಗುತ್ತಿದೆ. ಈ ಅಂಕಿ ಅಂಶಗಳನ್ನು ಲಿಖಿತ ಉತ್ತರದಲ್ಲಿ ನೋಡಬಹುದಾಗಿರುತ್ತದೆ. 2022-23 ನೇ ಸಾಲಿನಲ್ಲಿ 4,321.93 ಲಕ್ಷ ರೂಪಾಯಿಗಳು; 2023-24 ನೇ ಸಾಲಿನಲ್ಲಿ 4,654.27 ಲಕ್ಷ ರೂಪಾಯಿಗಳು; 2024-25 ನೇ ಸಾಲಿನಲ್ಲಿ 5,069.17 ಲಕ್ಷ ರೂಪಾಯಿಗಳು ಹಾಗೂ ಪ್ರಸಕ್ತ ಸಾಲಿನಲ್ಲಿ ಈವರೆಗೆ 2,248.57 ಲಕ್ಷ ರೂಪಾಯಿಗಳು ಸಂಗ್ರಹಣೆ ಆಗಿರುತ್ತವೆ. ಸುಮಾರು 55-60 ಸಾವಿರ ಲಕ್ಷ ರೂಪಾಯಿಗಳ ಸಂಗ್ರಹಣೆಯನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಇದನ್ನು ಸುಲಭವಾಗಿ ಮಾಡುವ ಕೆಲಸವನ್ನು ಮಾಡುತ್ತೇವೆ. ಹಾಲಿ ಚಾಲ್ತಿಯಲ್ಲಿರುವ ವ್ಯವಸ್ಥೆಯನ್ನು ರದ್ದುಗೊಳಿಸಲು ಆಗುವುದಿಲ್ಲ. ಹಾಲಿ ಮೂರು ವರ್ಷಗಳ ಅವಧಿಗೆ ಉದ್ದಿಮೆ ಪರವಾನಿಗೆಯನ್ನು ನೀಡುವ ವ್ಯವಸ್ಥೆಯು ಜಾರಿಯಲ್ಲಿರುತ್ತದೆ. ಮೂರು ವರ್ಷಗಳ ಅವಧಿಯ ನಂತರ ಆಟೋಮ್ಯಾಟಿಕ್ ಆಗಿ ಅದು ಕಂಪ್ಯೂಟರೈಸ್ಡ್ ಆಗಿ ಜನರೇಟ್ ಆಗುತ್ತದೆ. ಮುಂದಿನ ಮೂರು ವರ್ಷಗಳ ಅವಧಿಗೆ ಅದು ನವೀಕರಣಗೊಳ್ಳುತ್ತದೆ. **(ಗೊಂದಲ)** ಆನ್‌ಲೈನ್ ವ್ಯವಸ್ಥೆಯ ಮುಖಾಂತರವೇ ಪರವಾನಿಗೆ ನವೀಕರಣಗೊಳ್ಳುತ್ತದೆ.

ಶ್ರೀ ಡಿ.ಎಸ್.ಅರುಣ:- ಮಾನ್ಯ ಸಭಾಪತಿಯವರೆ, ನನ್ನದೊಂದು ಪ್ರಶ್ನೆ ಇದೆ.

ಸಭಾಪತಿಯವರು:- ಶ್ರೀ ಅರುಣ ರವರೇ ಕುಳಿತುಕೊಳ್ಳಿ. ಶ್ರೀ ಸುಧಾಮ್ ದಾಸ್ ರವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಡಿ.ಎಸ್.ಅರುಣ್:- ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದ ಸರ್ಕಾರವು ಅಧಿಕಾರದಲ್ಲಿದ್ದಾಗ ಐದು ವರ್ಷಗಳ ಪರವಾನಿಗೆಯ ಅವಧಿಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಇದರ ಬಗ್ಗೆ ನಾನು ಕೇಳುತ್ತಿದ್ದೇನೆ. ಸಚಿವರು ದಯಮಾಡಿ ಇದನ್ನು ಗಮನಿಸಬೇಕು. ನನ್ನ ಬಳ ಅಧಿಸೂಚನೆಯ ಪ್ರತಿ ಇದ್ದು, ಅದನ್ನು ಈಗಲೇ ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಬಿ.ಎಸ್.ಸುರೇಶ:- ಮಾನ್ಯ ಸಭಾಪತಿಯವರೆ, ಸದರಿ ಅಧಿಸೂಚನೆಯ ಸಂಬಂಧಿತ ನಿಯಮಾವಳಿಗಳ ತಿದ್ದುಪಡಿಯಾಗಿದೆ.

ಶ್ರೀ ಡಿ.ಎಸ್.ಅರುಣ್:- ಮಾನ್ಯ ಸಭಾಪತಿಯವರೆ, ಅದರೆ ಐದು ವರ್ಷಗಳ ಅವಧಿಗೆ ನಿಯಮಾವಳಿಗಳ ತಿದ್ದುಪಡಿಯಾಗಿದೆ. ಆದರೆ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಐದು ವರ್ಷಗಳ ಅವಧಿಗೆ ಉದ್ದಿಮೆ ಪರವಾನಿಗೆಯನ್ನು ನೀಡುತ್ತಿಲ್ಲ. ಇದನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕ ಮಾಡಲಾಗುತ್ತದೆ ಎಂದು ಸಚಿವರು ತಿಳಿಸುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಯಾವುದೇ ಸ್ಥಳೀಯ ಸಂಸ್ಥೆಗಳು ಆನ್‌ಲೈನ್ ವ್ಯವಸ್ಥೆಯ ಮುಖಾಂತರ ಉದ್ದಿಮೆ ಪರವಾನಿಗೆ ನವೀಕರಣ ಮಾಡಿಕೊಡುತ್ತಿಲ್ಲ. ದಯಮಾಡಿ ಸಚಿವರು ಇದನ್ನು ಗಮನಿಸಿ, ಈ ವ್ಯಸವ್ಥೆಯನ್ನು ಜಾರಿಗೊಳಿಸಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 172

ಎಸ್‌ಸಿಎಸ್‌ಪಿ/ಟಿಎಸ್‌ಪಿ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನಗಳ ವಿವರಗಳ ಬಗ್ಗೆ

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಕಾಯ್ದೆ SCSPTSP ಅಡಿಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ 2021-22, 2022-23, ಹಾಗೂ 2024-25, ಹಣಕಾಸು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು;	ಪರಿಶಿಷ್ಟ ಜಾತಿ ಉಪ ಯೋಜನೆ(SCSP) ಮತ್ತು ಗಿರಿಜನ ಉಪಯೋಜನೆ(TSP) ಕಾಯ್ದೆ-2013ರ ಅಡಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ 2021-22, 2022-23, ಹಾಗೂ 2024-25, ಹಣಕಾಸು ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
ಆ)	ಸದರಿ ಹಣಕಾಸು ವರ್ಷಗಳ ಅವಧಿಗಳಲ್ಲಿ ಇಲಾಖೆಗೆ ಬಿಡುಗಡೆಯಾಗಿರುವ SCSPTSP ಅನುದಾನಗಳನ್ನು ಯಾವ ಯಾವ ಯೋಜನೆಗಳ ಜಾರಿಗೆ ವ್ಯಯಿಸಲಾಗಿದೆ;	ಅನ್ವಯಿಸುವುದಿಲ್ಲ
ಇ)	ಸದರಿ ಕಾಯ್ದೆಯ ಸೆಕ್ಷನ್ 17ರ ಅನ್ವಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯು 2021 ರಿಂದ 2025 ನೇ ಹಣಕಾಸು ವರ್ಷಗಳ ಅವಧಿಗಳಲ್ಲಿ ಪರಿಶಿಷ್ಟ ಸಮುದಾಯ ಹಾಗೂ ಸಾಮಾನ್ಯ ಸಮುದಾಯದ ಅಭಿವೃದ್ಧಿ ಅಂತರವನ್ನು ಗುರುತಿಸಿ ಸಂಬಂಧಿಸಿದ ಸಮುದಾಯ ಅಭಿವೃದ್ಧಿಅಭ್ಯಯಿಸಿ/ಸಮಾಲೋಚಿಸಿ ತಯಾರಿಸಿರುವ ಅನುದಾನ ವಿನಿಯೋಗಗಳಿಗೆ ಸಂಬಂಧಿಸಿದ ಉಪಯೋಜನೆ ಕಾರ್ಯಯೋಜನೆಗಳು ಏನು; (ಪ್ರತಿಗಳನ್ನುಒದಗಿಸುವುದು)	

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ)	ಸದರಿ ಕಾಯ್ದೆಯ ಸೆಕ್ಷನ್ 15 ಹಾಗೂ 16ರಡಿ ಕಡ್ಡಾಯ ಪಡಿಸಿರುವಂತೆ ಸದರಿ ಅನುದಾನದಡಿ ಬಿಡುಗಡೆಯಾಗಿರುವ ಹಣವನ್ನು ಕೇವಲ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ವ್ಯಕ್ತಿ ವಾಸಿಸುತ್ತಿರುವ ಕಾಲೋನಿ/ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಬಳಸಲು ಖಾತ್ರಿ ಪಡಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ಕೈಗೊಂಡಿರುವ ಕ್ರಮಗಳು ಏನು? (ಸಂಬಂಧಿಸಿದ ದಾಖಲೆ ಒದಗಿಸುವುದು)	ಅನ್ವಯಿಸುವುದಿಲ್ಲ

ಕಡತ ಸಂಖ್ಯೆ: ಸಿಐ 150 ಎಂಜಿಎಸ್ 2025

ಶ್ರೀ ಹೆಚ್.ಪಿ.ಸುಧಾಮ್ ದಾಸ್ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೆ, ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ 2021-22, 2022-23 ಹಾಗೂ 2024-25 ಹಣಕಾಸು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನ ಹಾಗೂ ಈ ಅನುದಾನಗಳನ್ನು ಯಾವ ಯಾವ ಯೋಜನೆಗಳ ಜಾರಿಗೆ ವ್ಯಯಿಸಲಾಗಿದೆ ಹಾಗೂ ಅನುದಾನ ವಿನಿಯೋಗಗಳಿಗೆ ಸಂಬಂಧಿಸಿದ ಉಪಯೋಜನೆಯ ಕಾರ್ಯಯೋಜನೆಗಳ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆನು. ನಾನು ಕೇಳಿರುವ ಪ್ರಶ್ನೆಗೆ, ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಗಿರಿಜನ ಉಪಯೋಜನೆ (ಟಿಎಸ್‌ಪಿ) ಕಾಯ್ದೆ – 2013 ರ ಅಡಿಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ 2021-22, 2022-23 ಹಾಗೂ 2024-25 ಹಣಕಾಸು ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ ಎಂಬುದಾಗಿ ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿರುತ್ತದೆ. ಈ ಕುರಿತಾದ ಸರ್ಕಾರವು ಮಾಡಿರುವ ವೆಚ್ಚದ ಕುರಿತಾಗಿ ಯಾವುದೇ ಪ್ರಶ್ನೆಯು ಉದ್ಭವಿಸುವುದಿಲ್ಲ. ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಉತ್ತರ ನೀಡಿದ್ದಕ್ಕಾಗಿ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):- ಮಾನ್ಯ ಸಭಾಪತಿಯವರೆ, ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಪೂರ್ಣವಾದ ಉತ್ತರವನ್ನು ಒದಗಿಸಲಾಗಿದೆ. ಪುನಃ ಅವರು ನಿರ್ದಿಷ್ಟವಾದ ಪ್ರಶ್ನೆಗಳಿಗೆ ಉತ್ತರವನ್ನು ಬಯಸಿದರೆ, ಅದನ್ನೂ ಸಹ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಹೆಚ್.ಪಿ.ಸುಧಾಮ್ ದಾಸ್:– ಮಾನ್ಯ ಸಭಾಪತಿಯವರೆ, ಹಣಕಾಸು ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ ಎಂದು ಹೇಳಿದರೆ, ಇಲಾಖೆಯಿಂದ ನಿರ್ದಿಷ್ಟವಾದ ಅನುದಾನವು ಬಿಡುಗಡೆಯಾಗಬೇಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:– ಮಾನ್ಯ ಸಭಾಪತಿಯವರೆ, ಇಲಾಖೆಯವರು 2022 ರಿಂದ ಈಚೆಗೆ ತಾವು ಯೋಜನೆಯನ್ನು ಮಾಡದಿರುವುದಾಗಿ ಹಾಗೂ ಅನುದಾನವನ್ನು ಒದಗಿಸಬೇಡಿ ಎಂಬುದಾಗಿ ಹೇಳಿದ್ದಾರೆ. ಇಲಾಖೆಯವರು ಅನುಮೋದನೆಯನ್ನು ನೀಡಿದರೆ, ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಟೆಂಡರ್ ಕರೆಯುವುದರ ಬಗ್ಗೆ ಸದಸ್ಯರು ಕೇಳಿದ್ದಾರೆ. ಇನ್ನುಳಿದಂತೆ ಸದಸ್ಯರು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಜಿಲ್ಲಾವಾರು ಉತ್ತರವನ್ನು ಒದಗಿಸಲಾಗಿದೆ. ಅದೇ ರೀತಿಯಾಗಿ ಅನುದಾನ ಹಂಚಿಕೆ ಕುರಿತಾಗಿ ಪ್ರಶ್ನೆಯನ್ನು ಕೇಳಿದ್ದು, ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆಯಿಂದ ನಮಗೆ ಯಾವುದೇ ಮಾಹಿತಿಯು ಬಂದಿರುವುದಿಲ್ಲ. ಈ ಹಿಂದೆ ಅಧಿಕಾರದಲ್ಲಿದ್ದ ಸರ್ಕಾರವು ಒಂದು ನಿರ್ಣಯವನ್ನು ತೆಗೆದುಕೊಂಡಿತ್ತು. ಇದಾದ ಮೇಲೆ ಪ್ರಸ್ತಾವನೆಯನ್ನು ಬಾಕಿ ಇಡಲಾಗಿತ್ತು. ಇಲಾಖೆಯಿಂದ ಪ್ರಸ್ತಾವನೆಯು ಬಂದ ನಂತರ ನಾವು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

ಜಿಶ್ರೀ ಹೆಚ್.ಪಿ.ಸುಧಾಮ್ ದಾಸ್:– ಮಾನ್ಯ ಸಭಾಪತಿಯವರೆ, ಇಲಾಖೆಗೆ ಅನುದಾನದ ಅವಶ್ಯಕತೆ ಇಲ್ಲ ಎಂದು ತೆಗೆದುಕೊಂಡಿರುವ ನಿರ್ಣಯದ ಪ್ರತಿಯನ್ನು ನೀಡಿದರೆ ಸಾಕು.

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್:– ಮಾನ್ಯ ಸಭಾಪತಿಯವರೆ, ಅದೂ ಸಹ ನಮಗೆ ಇಲಾಖೆಯಿಂದಲೇ ಬರಬೇಕು.

ಪ್ರಶ್ನೆ ಸಂಖ್ಯೆ: 233

ಸಭಾಪತಿಯವರು:– ಶ್ರೀ ಮಂಜುನಾಥ್ ಭಂಡಾರಿಯವರೇ, ನೀವು ಕೇಳಿರುವ ಪ್ರಶ್ನೆಯು ಕೃಷಿ ಸಚಿವರಿಗೆ ವರ್ಗಾವಣೆಗೊಂಡಿದೆ. ಮುಂದಿನ ಪ್ರಶ್ನೆ ಶ್ರೀಮತಿ ಬಲ್ಕೀಸ್ ಬಾನು ರವರದ್ದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ: 252

ಸಹಕಾರ ಸಂಘಗಳು ಉತ್ಪಾದಿಸುವ ವಸ್ತುಗಳ ಮಾರಾಟ ಮತ್ತು ಸರಬರಾಜು ಕುರಿತು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ರಾಜ್ಯದಲ್ಲಿರುವ ಜಿಲ್ಲಾ ಕೈಗಾರಿಕಾ ಉತ್ಪಾದನಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘಗಳು ಎಷ್ಟು:	ರಾಜ್ಯದಲ್ಲಿ ಒಟ್ಟು 21 ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ಇರುತ್ತವೆ.
ಆ)	ಸದರಿ ಸಂಘಗಳು ಉತ್ಪಾದಿಸುವ ವಸ್ತುಗಳನ್ನು ಸರ್ಕಾರವೇ ಖರೀದಿಸಿ, ಮಾರಾಟ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:	ಸದರಿ ಸಂಘಗಳು ಉತ್ಪಾದಿಸುವ ವಸ್ತುಗಳನ್ನು ಸರ್ಕಾರವೇ ಖರೀದಿಸಿ, ಮಾರಾಟ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಇ)	ಹೌದಾದಲ್ಲಿ ಈ ಕುರಿತು ಕೈಗೊಂಡ ಕ್ರಮಗಳೇನು?	ಅನ್ವಯಿಸುವುದಿಲ್ಲ.

ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ನಾನು ಸಹಕಾರ ಸಚಿವರಿಗೆ ಕೇಳಿರುವ ಪ್ರಶ್ನೆಗೆ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಉತ್ತರಿಸಿದ್ದಾರೆ. ನಾನು ಕೇಳಿರುವ ಪ್ರಶ್ನೆಗೆ ಎರಡು-ಮೂರು ಸಾಲುಗಳಲ್ಲಿ ಸಚಿವರು ಉತ್ತರಿಸಿದ್ದಾರೆ. ರಾಜ್ಯದಲ್ಲಿ ಒಟ್ಟು 21 ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ ಇರುತ್ತವೆ ಎಂದು ತಿಳಿಸಿದ್ದಾರೆ. ಸಣ್ಣ ಕೈಗಾರಿಕಾ ಉತ್ಪಾದನಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘಗಳಿರುತ್ತವೆ. ಸದರಿ ಸಂಘಗಳು ಉತ್ಪಾದಿಸುವ ವಸ್ತುಗಳನ್ನು ಸರ್ಕಾರವೇ ಖರೀದಿಸಿ ಮಾರಾಟ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ "ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ" ಎಂದು ತಿಳಿಸಿದೆ. ರೈತ ಉತ್ಪಾದಿಸುವ ಬೆಳೆಗಳಿಗೆ ಕೃಷಿ ಇಲಾಖೆಯಿಂದ ಬೆಂಬಲ ಬೆಲೆ ಕೊಡುವುದರಿಂದ ಹಿಡಿದು, ಮಾರುಕಟ್ಟೆ ವ್ಯವಸ್ಥೆಯಿಂದ ಹಿಡಿದು ಎಲ್ಲಾ ರೀತಿಯ ಹಣಕಾಸಿನ ಸಹಕಾರವನ್ನು ಸಹಕಾರ ಇಲಾಖೆಯಿಂದ ರೈತನಿಗೆ ನೀಡಲಾಗುತ್ತಿದೆ. ಅದೇ ರೀತಿಯಾಗಿ ತೋಟಗಾರಿಕೆ ಇಲಾಖೆಯಿಂದಲೂ ಸಹ ಅಲ್ಲಿರತಕ್ಕ ತೋಟ ಮಾಡುವ ಎಲ್ಲಾ ರೈತರಿಗೂ ಸಹಕಾರವನ್ನು ನೀಡಲಾಗುತ್ತಿದೆ. ಇಡೀ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಎಂದರೂ 250 – 300 ಕೈಗಾರಿಕಾ ಘಟಕಗಳು ಹಾಗೂ 25 ಕೈಗಾರಿಕಾ ಉತ್ಪಾದನಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘಗಳಿವೆ. 1980 ನೇ ಇಸ್ವಿಯಲ್ಲಿ ಇದು ಪ್ರಾರಂಭವಾಗಿದೆ. ಇಲ್ಲಿಯವರೆಗೆ ಸರ್ಕಾರದಿಂದ ಪ್ರಾರಂಭಗೊಂಡ ಬೇರೆ ಬೇರೆ ರೀತಿಯ ಸಹಕಾರ ಸಂಘಗಳಲ್ಲಿ ಬೇರೆ ಬೇರೆ ಎಲ್ಲಾ ರೀತಿಯ ಸಹಾಯಧನ ನೀಡುವುದು ಇರುತ್ತದೆ. ಇಲ್ಲಿ ಯುವಕರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ, ಅವರದೇ ಆದ ತಮ್ಮ ಸ್ವಂತ ಶಕ್ತಿಯಿಂದ ಕೈಗಾರಿಕಾ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿದ್ದಾರೆ. ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಬಹಳ ಅಸ್ಪಷ್ಟವಾದ ಉತ್ತರವನ್ನು ನೀಡಿದೆ. ಹೀಗಾಗಿ ಇದು ಸರಿಯಾಗಿಲ್ಲ. ಸರ್ಕಾರ ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ಕೈಗಾರಿಕಾ ಉತ್ಪಾದನಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘಗಳಿಗೆ ಬೆಂಬಲ ಬೆಲೆಯನ್ನು ನೀಡಬೇಕು ಹಾಗೂ ಬೀಜದ ಹಣವನ್ನೂ ಸಹ ನೀಡಬೇಕು. ಬೇರೆ ಬೇರೆ ಇಲಾಖೆಯ ಸಹಕಾರ ಸಂಘಗಳಿಗೆ ಯಾವ ರೀತಿಯ ಸೌಲಭ್ಯಗಳನ್ನು ನೀಡಲಾಗುತ್ತಿದೆಯೋ, ಅದೇ ರೀತಿಯಾದ ಸೌಲಭ್ಯಗಳನ್ನು ನೀಡಬೇಕೆಂದು ಸಚಿವರನ್ನು ಕೋರುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪೂರ:- (ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು):- ಮಾನ್ಯ ಸಭಾಪತಿಯವರೆ, ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಬಹಳ ಸ್ಪಷ್ಟವಾದ ಉತ್ತರವನ್ನು ನೀಡಲಾಗಿದೆ. ಕೆ.ಐ.ಪಿ.ಪಿ. ಕಾಯ್ದೆಯು ಜಾರಿಗೆ ಬಂದ ಮೇಲೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಎಲ್ಲರೂ ಸಹ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು. ನಮ್ಮ ರಾಜ್ಯದಲ್ಲಿ ಒಟ್ಟು 21 ಜಿಲ್ಲಾ ಕೈಗಾರಿಕಾ ಉತ್ಪಾದನಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘಗಳು ಇವೆ. ಆ ಪೈಕಿ ಕೇವಲ ಒಂದು ಮಾತ್ರವೇ ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಇನ್ನುಳಿದ ಸಹಕಾರ ಸಂಘಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. 1999 ನೇ ಸಾಲಿನಲ್ಲಿ ಕೆ.ಐ.ಪಿ.ಪಿ. ಕಾಯ್ದೆಯು ಜಾರಿಗೆ ಬಂದ ನಂತರ, ಅವರುಗಳು ನೇರವಾಗಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕೆ ಹೊರತು ನಾವು ಯಾರಿಗೂ ಸಹ ನೇರವಾಗಿ ಏನನ್ನೂ ನೀಡುವುದಕ್ಕೆ ಅವಕಾಶವಿರುವುದಿಲ್ಲ. ಹಾಲಿ ಇರುವ ವ್ಯವಸ್ಥೆಯ ಬಗ್ಗೆ ನಾವು ಉತ್ತರವನ್ನು ನೀಡಿದ್ದೇವೆ. ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ. ಸದಸ್ಯರು ಪ್ರಸ್ತಾಪಿಸಿದಂತೆ, ನಮ್ಮ ಇಲಾಖೆಯಿಂದ ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ, ಎನ್ನುವುದನ್ನು ಪರಿಶೀಲಿಸಿ ಅದನ್ನು ಸದಸ್ಯರಿಗೆ ತಿಳಿಸುತ್ತೇವೆ.

(ಮುಂದು)

(640) 12.08.2025 01.00 BKP-KS (ಸಭಾಪತಿಯವರ ಉಪಸ್ಥಿತಿ)

ಶ್ರೀಮತಿ ಬಲ್ಕೀಸ್ ಬಾನು(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿನಗಳಲ್ಲಿ ಸರ್ಕಾರಿ ನೌಕರಿಯನ್ನು ಯುವಕರಿಗೆ ಕೊಡಲಿಕ್ಕೆ ಆಗುತ್ತಿಲ್ಲ. ಯುವಕರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಇಂಜಿನೀಯರಿಂಗ್ ಪದವೀಧರರು ಕೂಡ ಒಂದು ಸಣ್ಣ ಮತ್ತು ಅತಿಸಣ್ಣ ಕೈಗಾರಿಕಾ ಘಟಕಗಳನ್ನು ಪ್ರಾರಂಭ ಮಾಡಿದ್ದಾರೆ. ಅವರೆಲ್ಲರೂ ಕೈಗಾರಿಕಾ ಸಹಕಾರ ಸಂಘದ ಸದಸ್ಯರಾಗಿ ಜಿಲ್ಲಾ ಮಟ್ಟದಲ್ಲಿ ಒಂದು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ್ದಾರೆ. ಈ ರಾಜ್ಯದಲ್ಲಿ ಒಂದು ಫೆಡರೇಷನ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಮಾಡಿರುವಂತಹದ್ದು ಇದೆ. ಯಾವುದೇ ರೀತಿಯಲ್ಲಿ ಸಹಕಾರ ಇಲಾಖೆಯಿಂದಲೂ ಕೂಡ ಕೊನೆಯ ಪಕ್ಷ ಸಭೆಗಳನ್ನು ಕೂಡಲಿಕ್ಕೆ ಅವಕಾಶ ಇರುವುದಿಲ್ಲ. ಇವರಿಗೆ ಯಾವುದೇ ರೀತಿಯ ಪ್ರೋತ್ಸಾಹ ಸಹ ಇರುವುದಿಲ್ಲ. ಇದಕ್ಕಿಂತ ಹಿಂದೆ ಅಂದರೆ ಪ್ರಾರಂಭದಲ್ಲಿ ಇದಕ್ಕೆ ಒಬ್ಬ ಐ.ಎ.ಎಸ್. ಅಧಿಕಾರಿಯವರು ಇದಕ್ಕೆ ಅಧ್ಯಕ್ಷರಾಗುತ್ತಿದ್ದರು. 1987 ರಲ್ಲಿ ಚುನಾಯಿತ ಪ್ರತಿನಿಧಿಯೊಬ್ಬರು ಇದಕ್ಕೆ ಅಧ್ಯಕ್ಷರಾಗುವುದಕ್ಕೆ ಬದಲಾವಣೆಯನ್ನು ತಂದರು.

ಮಾನ್ಯ ಸಭಾಪತಿಯವರೆ, ಈ ರೀತಿಯ ತೀರ್ಮಾನವನ್ನು ಸರ್ಕಾರ ಏತಕ್ಕೆ ತೆಗೆದುಕೊಂಡಿತು ಎಂದರೆ ಮೊದಲು KSIMC (Karnataka State Industrial Marketing Corporation) ಎಂದು ಇತ್ತು. ಅಲ್ಲಿ ತುಮಕೂರು ಜಿಲ್ಲೆಯಲ್ಲಿ ಆಗಿರುವಂತಹ ಯಾವುದೋ ಒಂದು malpractices and misappropriation ಆಗಿದ್ದರಿಂದ, ಇಡೀ ರಾಜ್ಯದಲ್ಲಿ ಈ DS&MS (District Supply and Marketing Society) ಗೆ ನೇರವಾಗಿ ಸರಬರಾಜು ಮಾಡುವುದನ್ನು ನಿಲ್ಲಿಸಿಬಿಟ್ಟಿತು.

ಮಾನ್ಯ ಸಭಾಪತಿಯವರೆ, ತಮ್ಮಲ್ಲಿ ಒಂದು ಮನವಿ ಏನೆಂದರೆ, ಇವರಿಗೆ ಕನಿಷ್ಠ ಪಕ್ಷ ಸರ್ಕಾರದಿಂದ ೫೦ ಲಕ್ಷದವರೆಗೆ ನೇರ ಸರಬರಾಜು ಮಾಡುವಂತಹ ಅವಕಾಶವನ್ನು ಮಾಡಿಕೊಡಬೇಕು, ಇಲ್ಲವೆಂದರೆ ಪ್ರತಿ ಜಿಲ್ಲೆಯಲ್ಲಿರುವಂತಹ ಸಣ್ಣ ಕೈಗಾರಿಕೆಗಳು ನಶಿಸಿ ಹೋಗುತ್ತವೆ. ಯುವಕರಿಗೆ ನಿರುದ್ಯೋಗ ಜಾಸ್ತಿಯಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಸಹಾಯಕ್ಕೆ ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪೂರ:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದಂತೆ ಮೊದಲು ಜಿಲ್ಲಾ ಪಂಚಾಯತ್ ಮತ್ತು ವಿಶ್ವ ಯೋಜನೆಯಡಿಯಲ್ಲಿ ಷೇರು ಕ್ಯಾಪಿಟಲ್ ಹಾಕಿ ಇವುಗಳನ್ನೆಲ್ಲಾ ತಯಾರು ಮಾಡಿರುವಂತಹದ್ದಾಗಿದೆ. KTPP (The Karnataka Transparency in Public Procurements) Act ಬರುವುದಕ್ಕಿಂತ ಮುಂಚೆ ಎಲ್ಲವೂ ಅವರಿಗೆ ಸರಿಯಾಗಿಯೇ ಇತ್ತು. ಈ ಆಕ್ಟ್ ಬಂದ ಮೇಲೆ ಇವರು ನೇರವಾಗಿಯೇ ಭಾಗವಹಿಸಬಹುದಾಗಿದೆ. ನನಗೆ ತಿಳಿದ ಮಟ್ಟಿಗೆ ಒಂದು ಸರಿಯಾಗಿ ನಡೆಯುತ್ತಿದೆ. ಮಾನ್ಯ ಸದಸ್ಯರು ಏನು ಹೇಳಿದರು ಎಂದರೆ ೫೦ ಲಕ್ಷ ರೂಪಾಯಿಗಳವರೆಗೆ ಸಬ್ಸೀಡಿ ಕೊಡಬೇಕೆಂದು ಹೇಳಿದರು. ನಮ್ಮ ಇಲಾಖೆಯಿಂದ ಏನೇನು ಸಾಧ್ಯವಾಗುತ್ತದೋ ಎಂದು ನೋಡಿಕೊಂಡು ಅದನ್ನು ನಾವು ಒದಗಿಸಲಿಕ್ಕೆ ಸಾಧ್ಯವಾಗುತ್ತದೆ. At present, ಇದಕ್ಕೆ ಅವಕಾಶ ಮಾಡಲಿಕ್ಕೆ ಏನೂ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ದಿನಾಂಕ:12ನೇ ಆಗಸ್ಟ್-2025, ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 121 ಪ್ರಶ್ನೆಗಳ ಪೈಕಿ 78 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರಗಳನ್ನು ಲಗತ್ತಿಸಲಾಗಿದೆ)

ಸಭಾಪತಿಯವರು:- ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

03. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

ಅ) ವಿಷಯ:- "ರಾಜ್ಯದಲ್ಲಿ ಕಳೆದ 30 ವರ್ಷಗಳಲ್ಲಿ 98 ಕಾರ್ಮಿಕರು ಶೌಚದ ಗುಂಡಿಗೆ ಬಿದ್ದು ಸಾವನ್ನಪ್ಪಿರುವ ಬಗ್ಗೆ.

\- - - -

ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೊಟ್ಟಿದ್ದಕ್ಕೆ ತಮಗೆ ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದಲ್ಲಿ ಕಳೆದ 30 ವರ್ಷಗಳಲ್ಲಿ 98 ಕಾರ್ಮಿಕರು ಶೌಚದ ಗುಂಡಿಗೆ ಬಿದ್ದು ಸಾವನ್ನಪ್ಪಿರುವ ಬಗ್ಗೆ ದಿನಾಂಕ 04.08.2025ರ "ಸಂಯುಕ್ತ ಕರ್ನಾಟಕ" ದಿನಪತ್ರಿಕೆಯಲ್ಲಿ ವರದಿ ಪಕಟವಾಗಿರುತ್ತದೆ.

ಸಫಾಯಿ ಕರ್ಮಚಾರಿಗಳು ಒಳಚರಂಡಿ ಹಾಗೂ ಶೌಚದ ಗುಂಡಿಗಳನ್ನು ಸ್ವಚ್ಛಗೊಳಿಸಲು ತಮ್ಮ ಕೈಗಳನ್ನು ಬಳಸುತ್ತಿರುವ ಕಾರಣ ರಾಜ್ಯಾದ್ಯಂತ ಒಳಚರಂಡಿಗಳಲ್ಲಿ ಕೆಲಸ ಮಾಡುವ ಸಂದರ್ಭಗಳಲ್ಲಿ ಉಸಿರುಗಟ್ಟಿ 1993 ರಿಂದ ಇಲ್ಲಿಯವರೆಗೆ 98 ಜನ ಕಾರ್ಮಿಕರು ಸಾವನ್ನಪ್ಪಿರುವ ವರದಿ ನಿಜಕ್ಕೂ ಆತಂಕಕಾರಿ ವಿಷಯವಾಗಿರುತ್ತದೆ. ಶೌಚಗುಂಡಿಗಳನ್ನು ಕೈಗಳಿಂದ ಸ್ವಚ್ಛಗೊಳಿಸುವುದನ್ನು 1993 ಮತ್ತು 2013ರಲ್ಲಿ ಎರಡೆರಡು ಬಾರಿ ಸರ್ಕಾರ ನಿಷೇಧ ಹೇರಿ ಆದೇಶ ಹೊರಡಿಸಿದ್ದರೂ ಇಂತಹ ಹೀನಾಯ ಪರಿಸ್ಥಿತಿ ಇನ್ನೂ ಮುಂದುವರೆದಿರುವುದು ವ್ಯವಸ್ಥೆಯ ಲೋಪವೇ ಆಗಿರುತ್ತದೆ.

ಸ್ವಚ್ಛ ಭಾರತ ಅಭಿಯಾನದಡಿ ನೈರ್ಮಲ್ಯ ಕಾರ್ಮಿಕರಿಗೆ ಹಲವು ಸಲಹೆ ಸೂಚನೆಗಳನ್ನು ನೀಡಿದ್ದರೂ ಅವುಗಳನ್ನು ಉಲ್ಲಂಘಿಸಲಾಗಿದೆ. ಯಂತ್ರಗಳಿಂದ ಸಾಧ್ಯವಿರುವಲ್ಲಿ ಮನುಷ್ಯರನ್ನು ಬಳಸಿ ಸ್ವಚ್ಛಗೊಳಿಸುವುದು ಅಮಾನವೀಯ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ.

ರಾಜ್ಯದಲ್ಲಿ ಶೌಚ ಗುಂಡಿಗೆ ಬಿದ್ದು ಸಾವನ್ನಪ್ಪಿರುವ 98 ಪ್ರಕರಣಗಳಲ್ಲಿ 46 ಪ್ರಕರಣಗಳು ಬೆಂಗಳೂರಿನಲ್ಲಿ ಘಟಿಸಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿರುತ್ತದೆ. ದಯಮಾಡಿ ಸರ್ಕಾರ ಇನ್ನಾದರೂ ಇಂತಹ ಪ್ರಕರಣಗಳು ಎಲ್ಲಿಯೂ ಮರುಕಳಿಸದಂತೆ ಅಗತ್ಯ ಯಂತ್ರೋಪಕರಣಗಳ ಬಳಕೆಗೆ ಸ್ಪಷ್ಟ ಆದೇಶ ಹೊರಡಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಪೌರಾಡಳಿತ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ಅಧಿಕಾರಿಗಳ ಬಳಿ ಚರ್ಚೆ ಮಾಡಿ ನಂತರ ಅವರಿಗೆ ವಿವರವಾದ ಮಾಹಿತಿಯನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ವಿಷಯ:– "ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಪ್ರವೇಶ ದರ. ವಿಶ್ವವಿಖ್ಯಾತ ಕೃಷ್ಣರಾಜ ಸಾಗರ (ಕೆ.ಆರ್.ಎಸ್.) ಬೃಂದಾವನ ಪ್ರವೇಶ ದರ, ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದ ಪ್ರವೇಶ ದರ ಹಾಗೂ ಬೋಟಿಂಗ್ ದರಗಳನ್ನು ಹೆಚ್ಚು ಮಾಡಿರುವ ಕುರಿತು.

– – – –

ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇತ್ತೀಚೆಗೆ ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಪ್ರವೇಶ ದರ ಹಾಗೂ ವಿಶ್ವವಿಖ್ಯಾತ ಕೃಷ್ಣರಾಜ ಸಾಗರ (ಕೆ.ಆರ್.ಎಸ್.) ಬೃಂದಾವನ ದರ ಹೆಚ್ಚಳ ಮಾಡಿರುವ ಸಂಗತಿ ಸಾರ್ವಜನಿಕ ಟೀಕೆಗೆ ಗುರಿಯಾದ ಬೆನ್ನಲ್ಲೆ ಇದೀಗ ಪಕ್ಷಿ ಕಾಶಿ ಎಂದು ಹೆಸರಾಗಿರುವ ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದ ಪ್ರವೇಶ ದರ ಹಾಗೂ ಬೋಟಿಂಗ್ ದರಗಳನ್ನು ಹೆಚ್ಚು ಮಾಡಿರುವುದು ಪ್ರವಾಸಿಗರಿಗೆ `ಬರೆ ಎಳೆದಂತಾಗಿರುವ ಕುರಿತು ರಾಜ್ಯದ ಹಲವು ಪತ್ರಿಕೆಗಳು ವರದಿ ಮಾಡಿರುತ್ತವೆ.

ಮೈಸೂರು ಸಾಂಸ್ಕೃತಿಕ ನಗರಿಯಾಗಿದ್ದು, ವಿಶ್ವವಿಖ್ಯಾತ ದಸರಾ ಸೇರಿದಂತೆ ಅನೇಕ ಪ್ರವಾಸಿ ಸ್ಥಳಗಳು ಜನಾಕರ್ಷಣೀಯ ಸ್ಥಳಗಳಾಗಿ ಮಾರ್ಪಾಟುಗೊಂಡಿವೆ. ವಾರಾಂತ್ಯದಲ್ಲಿ, ಸರದಿ ರಜೆ ಸಾಲುಗಳಲ್ಲಿ ಜನ ಮೈಸೂರಿಗೆ ಭೇಟಿ ನೀಡುವುದು ಸಾಮಾನ್ಯ ಸಂಗತಿಯಾಗಿದೆ. ಇಂತಹ ಜನಾಕರ್ಷಕ ಸ್ಥಳಗಳ ಪವೇಶ ದರವನ್ನು ಸರ್ಕಾರ ಏಕಾಏಕೀ ಹೆಚ್ಚಳ ಮಾಡುವುದು 'ಸರಿಯಾದ ಕ್ರಮವಲ್ಲ. ಶೇಕಡ 20 ರಷ್ಟು ಟಿಕೇಟ್ ದರವನ್ನು ಹೆಚ್ಚಿಸುವ ಮೂಲಕ ಸರ್ಕಾರ ಪ್ರವಾಸಿಗರ ಜೇಬಿಗೆ ಕತ್ತರಿ ಹಾಕುವಂಥ ಪ್ರಯತ್ನ ಮಾಡಿದೆ ಎಂದರೆ ತಪ್ಪಾಗಲಾರದು.

ವೀಕ್ಷಣೆಗೆ ಬರುವಂಥ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳ ನೆಪವೊಡ್ಡಿ ಪ್ರವೇಶದರ ಏರಿಕೆಗೆ ಮುಂದಾಗಿರುವುದು ಜನ ವಿರೋಧಿ ನೀತಿಯಾಗಿದೆ. ಆದಕಾರಣ ತಕ್ಷಣವೇ ಸರ್ಕಾರ ಮೈಸೂರು ಚಾಮರಾಜೇಂದ್ರ ಮೃಗಾಲಯ, ಕೆ.ಆರ್.ಎಸ್. ಬೃಂದಾವನ ಮತ್ತು ಶ್ರೀರಂಗಪಟ್ಟಣದ ರಂಗನತಿಟ್ಟು ಪಕ್ಷಿ ಕಾಶಿ ಹಾಗೂ ಬೋಟಿಂಗ್ ಸಲುವಾಗಿ ಹೆಚ್ಚಿಸಿರುವ ದರವನ್ನು ಹಿಂಪಡೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀಎನ್.ಎಸ್. ಬೋಸ್‌ರಾಜು (ಸಭಾನಾಯಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ:– "ಕಳೆಗುಂದಿದ ಸಂಸ್ಕೃತ ವಿ.ವಿ. ಹೊಸ ಕ್ಯಾಂಪಸ್', ಮರಡಿಗುಡ್ಡೆಯ 100 ಎಕರೆಯಲ್ಲಿ ಕಟ್ಟಡ ನಿರ್ಮಾಣಗೊಂಡರೂ ಇಲ್ಲ ಉದ್ಘಾಟನೆ ಭಾಗ್ಯವಿಲ್ಲದೇ ವಿದ್ಯಾರ್ಥಿಗಳು ಅತಂತ್ರಗೊಂಡಿರುವ ಬಗ್ಗೆ.

– – – –

ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. 'ವಿಜಯವಾಣಿ' ಕನ್ನಡ ದಿನಪತ್ರಿಕೆಯಲ್ಲಿ **"ಕಳೆಗುಂದಿದ ಸಂಸ್ಕೃತ ವಿ.ವಿ ಹೊಸ ಕ್ಯಾಂಪಸ್," ಮರಡಿಗುಡ್ಡೆಯ 100 ಎಕರೆಯಲ್ಲಿ ಕಟ್ಟಡ ನಿರ್ಮಾಣಗೊಂಡರೂ ಇಲ್ಲ ಉದ್ಘಾಟನೆ ಭಾಗ್ಯ! ವಿದ್ಯಾರ್ಥಿಗಳು ಅತಂತ್ರ"** ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಣೆಯಾಗಿರುವ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ದೇವ ಭಾಷೆ ಸಂಸ್ಕೃತವು ರಾಜ್ಯದಲ್ಲಿ ಶಿಕ್ಷಣಕ್ಕೆ ತನ್ನದೇ ಆದಂತಹ ವಿಶೇಷ ಕೊಡುಗೆಯನ್ನು ನೀಡಿದೆ. ಆದರೆ, ಅದಕ್ಕೆ ಇಂಬು ಕೊಡುವಂತೆ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಯಾಗಿ, ಅದಕ್ಕೊಂದು ಹೊಸ ಕಟ್ಟಡ ನಿರ್ಮಾಣಗೊಂಡು ವರ್ಷಗಳೇ ಕಳೆದರೂ ಲೋಕಾರ್ಪಣೆ ಭಾಗ್ಯ ಲಭಿಸದೇ ಇರುವುದರಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವುದು ದುರ್ದೈವದ ಸಂಗತಿಯಾಗಿದೆ.

ಮಾಗಡಿ ತಾಲೂಕಿನ ತಿಪ್ಪಸಂದ್ರ ಹೋಬಳಿ ಕೆಂಪಯ್ಯನ ಪಾಳ್ಯದ ಮರಡಿಗುಡ್ಡೆಯಲ್ಲಿನ 100 ಎಕರೆ ಪ್ರದೇಶದಲ್ಲಿ ರಾಜ್ಯದ ಏಕೈಕ ಸಂಸ್ಕೃತ ವಿಶ್ವವಿದ್ಯಾಲಯದ ನೂತನ ಕಟ್ಟಡ ನಿರ್ಮಾಣಕ್ಕೆ 2022ರಲ್ಲಿ ಸಾಲಿನಲ್ಲಿ ಅಂದಿನ ಬಿಜೆಪಿ ನೇತೃತ್ವದ ಸರ್ಕಾರವಿದ್ದಾಗ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರು ರಾಮನಗರದಲ್ಲಿ ಭೂಮಿಪೂಜೆ ನೆರವೇರಿಸಿದ್ದರು. ಅದಕ್ಕೆ ನೀಡಲಾದ 25 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಕಟ್ಟಡಗಳಲ್ಲಿ ಬಾಲಕ, ಬಾಲಕಿಯರ ವಸತಿ ನಿಲಯ, ಆಡಳಿತ ಕಚೇರಿ, ತರಗತಿಗಳ ಕೊಠಡಿಗಳಿದ್ದು, ಅಲ್ಲಿ ಸಂಸ್ಕೃತ ಕಾವ್ಯಯೋಗ, ಆಯುರ್ವೇದ, ಸಾಹಿತ್ಯಗಳಲ್ಲಿ ಸ್ನಾತಕ, ಸ್ನಾತಕೋತ್ತರ ಪದವಿ, ಪಿ.ಎಚ್‌ಡಿ, ಕೋರ್ಸ್‌ಗಳಿಗಾಗಿ ಕಟ್ಟಡ ಪೂರ್ಣಗೊಂಡಿದೆ. 100 ಎಕರೆ ಜಮೀನು ಸಮತಟ್ಟಾಗಿರುವ ಕಾರಣದಿಂದ ಗುರುಕುಲ ಪದ್ಧತಿ, ಏಕಕಾಲದಲ್ಲಿ 1,000 ಮಂದಿಗೆ ಯೋಗ ಹಾಗೂ ಆಯುರ್ವೇದಿಕ ತರಬೇತಿ ನೀಡಲು ಅಲ್ಲಿಯೇ ಇನ್ನೊಂದಿಷ್ಟು ಜಾಗದ ಅಗತ್ಯತೆ ಕೂಡ ಇದೆ ಎನ್ನಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿನ ರಾಷ್ಟ್ರೀಯ ಹೆದ್ದಾರಿಯಿಂದ ಸಂಸ್ಕೃತ ವಿ.ವಿಯವರೆಗೆ ತಲುಪಲು ಮಣ್ಣಿನ ರಸ್ತೆ ಇದ್ದು, ಈಗ ಉತ್ತಮವಾದ ರಸ್ತೆ ನಿರ್ಮಾಣವು ಕೂಡ ತುರ್ತು ಅಗತ್ಯವಾಗಿರುತ್ತದೆ ಎಂದು ವರದಿಯಾಗಿದೆ.

ಸದ್ಯಕ್ಕೆ ಸಂಸ್ಕೃತ ವಿವಿ ನಡೆಸಿಕೊಂಡು ಹೋಗಲು ಬೇಕಾದ ಅವಶ್ಯಕ ಕಟ್ಟಡಗಳು ನಿರ್ಮಾಣಗೊಂಡು ತಲೆ ಎತ್ತಿದ್ದರೂ ಅವುಗಳ ಬಳಕೆ ಇಲ್ಲದೆ ನಿರುಪಯೋಗಿಯಾಗಿದೆ. ಅಗತ್ಯ ಕಾವಲು ಇಲ್ಲದೆ ಅನಾಥವಾದ ಕಾರಣ ವಿ.ವಿಯ ಕಟ್ಟಡದ ಕಿಟಕಿ, ಬಾಗಿಲುಗಳು ನಿರ್ವಹಣೆ ಕೊರತೆಯಿಂದ ಹಾಳಾಗುತ್ತಿರುವುದಲ್ಲದೇ, ಅವಲ್ಲ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟಡಗಳು, ಅಕ್ರಮ ಚಟುವಟಿಕೆಗಳ ತಾಣವಾಗಿಯೂ ದುರ್ಬಳಕೆಯಾಗುತ್ತಿವೆ ಎಂಬುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹಾಗೆಯೇ, ಅಲ್ಲಿ ಕತ್ತಲಾಗುತ್ತಿದಂತೆ ಕ್ಯಾಂಪಸ್ ನಲ್ಲಿಯ ಬೆಲೆಬಾಳುವ ಆಯುರ್ವೇದದ ಮರಗಳು ಕಳ್ಳತನದಿಂದ ಕಟಾವು ಆಗುತ್ತಿವೆ ಎಂಬ ವಿಷಯ ವರದಿಯಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ವಿಚಾರವನ್ನು ತೀವವಾಗಿ ಪರಿಗಣಿಸಿ, ಸಂಸ್ಕೃತ ವಿಶ್ವವಿದ್ಯಾಲಯದ ಸಂರಕ್ಷಣೆಗಾಗಿ ಅಗತ್ಯ ಕ್ರಮಗಳನ್ನು ಕೈಕೊಂಡು, ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಮೂಲಕ ವಿಶ್ವವಿದ್ಯಾಲಯ ಕಟ್ಟಡಗಳ ಉದ್ಘಾಟನೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರಿಗೆ ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

(ಮುಂದು.)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(641) 12.08.2025 01.10 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಈ) ವಿಷಯ:- "ಹೊಸ ವಿದ್ಯುತ್ ಸಂಪರ್ಕಕ್ಕೆ ಒಸಿ ಬಿಸಿ" ಕುರಿತು

***

ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

"ಹೊಸ ವಿದ್ಯುತ್ ಸಂಪರ್ಕಕ್ಕೆ ಒಸಿ ಬಿಸಿ" ಎಂಬ ಅಡಿಬರಹದಡಿ ಹಲವಾರು ಪತ್ರಿಕೆಗಳ ವರದಿಯಲ್ಲಿ ಪ್ರಕಟವಾಗಿರುವಂತೆ ರಾಜ್ಯದಲ್ಲಿ ಹೊಸ ವಿದ್ಯುತ್ ಸಂಪರ್ಕಗಳಿಗೆ ಸ್ವಾಧೀನಾನುಭವ ಪತ್ರ (ಒ.ಸಿ.) ಕಡ್ಡಾಯಗೊಳಿಸಿರುವುದರಿಂದ, ಕಟ್ಟಡ ನಿರ್ಮಾಣ ಹಾಗೂ ಕೈಗಾರಿಕೋದ್ಯಮಕ್ಕೆ ಹೊಸ ಸಮಸ್ಯೆ ಶುರುವಾಗಿದೆ. ವಿದ್ಯುತ್ ವಿತರಣಾ ಕಂಪನಿಗಳು (ಬೆಸ್ಕಾಂ, ಎಸ್ಕಾ ಇತರೆ) ವಿದ್ಯುತ್ ಸಂಪರ್ಕ ನೀಡುವುದಕ್ಕೆ ನಿರಾಕರಿಸುತ್ತಿದ್ದು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶವು ಕಟ್ಟಡ ಮಾಲೀಕರ ಜೊತೆಗೆ ಇಂಧನ ಇಲಾಖೆಗೂ ಸಂಕಷ್ಟ ತಂದೊಡ್ಡಿದೆ.

ಒ.ಸಿ. ಕಡ್ಡಾಯದಿಂದ 2 ಲಕ್ಷಕ್ಕೂ ಹೆಚ್ಚು ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಸಿಗದೆ ತೊಂದರೆ ಅನುಭವಿಸುವಂತಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ 3 ಲಕ್ಷಕ್ಕೂ ಅಧಿಕ ಜನರು ಮನೆ/ಕಟ್ಟಡ ನಿರ್ಮಾಣ ಕಾರ್ಯಗಳನ್ನು ಅರ್ಧಕ್ಕೆ ನಿಲ್ಲಿಸಬೇಕಾದ ಪರಿಸ್ಥಿತಿ ಎದುರಾಗಿದೆ.

ಸರ್ಕಾರವೇ ಪ್ರತಿಯೊಬ್ಬರಿಗೂ ಸೂರು ಒದಗಿಸುವ ಜವಾಬ್ದಾರಿ ಹೊಂದಿದ್ದು, ಈಗಿನ ಕಾಲಘಟ್ಟದಲ್ಲಿ ವಿದ್ಯುತ್ ಸೌಲಭ್ಯವೂ ಗಾಳಿ-ಬೆಳಕಿನಷ್ಟೇ ಅತ್ಯಗತ್ಯವಾದ ಮೂಲಭೂತ ಅವಶ್ಯಕತೆಯಾಗಿದೆ. ಬಡವರು-ಜನಸಾಮಾನ್ಯರು ತಮ್ಮ ಸಾಮರ್ಥ್ಯಕ್ಕನುಗುಣವಾಗಿ ತಮ್ಮ ಬಿ-ಖಾತೆ ನಿವೇಶನಗಳಲ್ಲಿ ನಿರ್ಮಿಸಿಕೊಂಡಿರುವ ಸಣ್ಣ ಮನೆಗಳಿಗೂ ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗದೆ ಇರುವುದು ದುರಂತವೇ ಸರಿ.

ನಾನು ಶೂನ್ಯವೇಳೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುವುದೇನೆಂದರೆ ಸದರಿ ಆದೇಶಕ್ಕೂ ಮುನ್ನ ಅರ್ಜಿ ಸಲ್ಲಿಸಿದವರಿಗೆ ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಲು ಆದೇಶ ಹೊರಡಿಸುವುದು ಹಾಗೂ ದೊಡ್ಡ ದೊಡ್ಡ ವಸತಿ ಸಮುಚ್ಚಯ, ವಾಣಿಜ್ಯ ಕಟ್ಟಡ ಹೊರತು ಪಡಿಸಿ ಇನ್ನಿತರ ಕಟ್ಟಡಗಳಿಗೆ ಯಾವುದೇ ಅಡೆತಡೆಗಳಿಲ್ಲದೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಕೂಡಲೇ ಸೂಕ್ತ ವ್ಯವಸ್ಥೆ ಮಾಡುವುದು, ಅಗತ್ಯವಿದ್ದಲ್ಲಿ ನ್ಯಾಷನಲ್ ಬಿಲ್ಡಿಂಗ್ ಕೋಡ್-2016ರ ಆದೇಶಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ದಿನಾಂಕ 25.06.2025ರಲ್ಲಿ ದೇಶದ ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಿದ್ದು ಆ ನಿರ್ದೇಶನದಲ್ಲಿ, 'Hence, buildings and matters like norms for Floor Area Ratio/Floor Space Index, setback, ground coverage, parking, green area, fire regulation etc. as well as other aspects covered in National building Code are within the exclusive legislative and executive jurisdiction of the

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

States.' ಎಂದು ತಿಳಿಸಿರುವಂತೆ ಪ್ರಸ್ತುತ ಇರುವ ಕಾಯ್ದೆಗೆ ತಿದ್ದುಪಡಿ ತಂದು ಜನಸಾಮಾನ್ಯರ ಮತ್ತು ಬಡವರ ಹಿತ ಕಾಪಾಡುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೆ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉ) ವಿಷಯ:- ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ (ಸಿ.ಎಸ್.ಆರ್ ಅನುದಾನದಡಿ) ಬೆಂಗಳೂರು ನಗರ ಜಿಲ್ಲೆ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಸರ್ಕಾರಿ ಶಾಲೆಗಳನ್ನು ತುರ್ತಾಗಿ ದುರಸ್ತಿ ಪಡಿಸುವ ಕುರಿತು

***

ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 28.07.2025ರಂದು "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಶಿಕ್ಷಣ ಇಲಾಖೆಯು ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿಯಲ್ಲಿ ಅಂದರೆ ಸಿಎಸ್ಆರ್ ಅನುದಾನದಡಿಯಲ್ಲಿ 150 ಸರ್ಕಾರಿ ಶಾಲೆಗಳಿಗೆ ರೂ.300 ಕೋಟಿ ವೆಚ್ಚದಲ್ಲಿ ದುರಸ್ತಿಯ ಕಾಯಕಲ್ಪ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಲಾಗಿದೆ. ರಾಜ್ಯದಲ್ಲಿ ಸುಮಾರು 46,757 ಸರ್ಕಾರಿ ಶಾಲೆಗಳಿದ್ದು, ತುರ್ತಾಗಿ 22,000 ಶಾಲೆಗಳ ದುರಸ್ತಿಯಾಗಬೇಕಾಗಿದೆ ಎಂದು ವರದಿಯಾಗಿದೆ. ಖಾಸಗಿ ಕಂಪನಿಯಾದ ಇನ್ಫೋಸಿಸ್ ಒಂದೇ ಸುಮಾರು ರೂ.250 ಕೋಟಿಗಳ ದೇಣಿಗೆ ನೀಡುತ್ತಿದೆ. ಬೆಂಗಳೂರಿನ ಇನ್ನೂ ಹಲವಾರು ಕಂಪನಿಗಳು ಸುಮಾರು ರೂ.100 ಕೋಟಿಗಳಿಗಿಂತಲೂ ಹೆಚ್ಚಿಗೆ ದೇಣಿಗೆ ನೀಡುತ್ತಿವೆ. ಬೆಂಗಳೂರು ನಗರ ಜಿಲ್ಲೆಯ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಹೊಂದಿಕೊಂಡಂತೆ ಅನೇಕ ಸರ್ಕಾರಿ ಶಾಲೆಗಳು ಗ್ರಾಮಾಂತರ ಪ್ರದೇಶಗಳಲ್ಲಿವೆ. ಅವುಗಳಲ್ಲಿ ಅತ್ಯಂತ ಅಪಾಯದ ಅಂಚಿನಲ್ಲಿರುವ ಶಾಲೆಯ ಕಟ್ಟಡಗಳನ್ನು ದುರಸ್ತಿಪಡಿಸಬೇಕಾಗಿದೆ. ಕೆಲವು ಶಾಲೆಯ ಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡಗಳನ್ನು ನಿರ್ಮಿಸಬೇಕಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬೆಂಗಳೂರು ಉತ್ತರ ಶೈಕ್ಷಣಿಕ ವಲಯ-1ರಲ್ಲಿ ಬರುವ ಬ್ಯಾಡರಹಳ್ಳಿ (ಹೊಸದಾಗಿ ಕಟ್ಟಡ ನಿರ್ಮಿಸಬೇಕಾಗಿರುವುದು), ಆಂದ್ರಹಳ್ಳಿ, ತಿಪ್ಪೇನಹಳ್ಳಿ, ಹೊಸಹಳ್ಳಿಯ ಅಂಗನವಾಡಿ ಕಟ್ಟಡ ಹಾಗೂ ಬೆಂಗಳೂರು ದಕ್ಷಿಣ ಶೈಕ್ಷಣಿಕ ವಲಯ-1ರ ವ್ಯಾಪ್ತಿಗೆ ಬರುವ ಗಂಗಪ್ಪನಹಳ್ಳಿ, ಚಿಕ್ಕೆಲ್ಲೂರು ದಾಖಲೆ ಎಸ್.ಸಿ. ಕಾಲೋನಿ, ತಾವರೆಕೆರೆ ಗ್ರಾಮ, ಗಣಪತಿಹಳ್ಳಿ ಜನತಾ ಕಾಲೋನಿ, ತಾತಗುಣಿ, ರಾಚನಮಡು, ಗಾಣಕಲ್ಲು, ಚಿಕ್ಕೇಗೌಡನಪಾಳ್ಯ, ನಾಗೇಗೌಡನಪಾಳ್ಯ, ತಿಗಳರಪಾಳ್ಯ, ಚನ್ನನಾಯಕನಪಾಳ್ಯ ಮತ್ತು ದೊಡ್ಡಬಿದರಕಲ್ಲು ಹೀಗೆ ಈ ಹಳ್ಳಿಗಳಲ್ಲಿರುವ ಸರ್ಕಾರಿ ಶಾಲೆಗಳ ಕಟ್ಟಡಗಳನ್ನು ತುರ್ತಾಗಿ ದುರಸ್ತಿ/ನಿರ್ಮಾಣ ಮಾಡಿ, ಆ ಶಾಲೆಗಳಿಗೆ ತುರ್ತಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಶೂನ್ಯವೇಳೆಯಲ್ಲಿ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೆ, ಸಂಬಂಧ ಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ) ವಿಷಯ:- ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕೊಂಕನಹಳ್ಳಿ ಅಂಬಿಗರ ಚೌಡಯ್ಯನವರ ಧ್ವಜದ ಕಟ್ಟೆ ಕುರಿತು

***

ಡಾ: ತಳವಾರ ಸಾಬಣ್ಣ (ನಾಮನಿರ್ದೇಶಿತರು):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕೊಂಕನಹಳ್ಳಿ ಗ್ರಾಮದಲ್ಲಿ ಕಳೆದ 15 ದಿನಗಳ ಕೆಳಗೆ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಧ್ವಜದ ಕಟ್ಟೆ ಹಾಗೂ ನಾಮಫಲಕವನ್ನು ಗ್ರಾಮದ ಹನುಮಾನ್ ದೇವಾಲಯದ ಪಕ್ಕದಲ್ಲಿ ನೆಟ್ಟಿರುವುದನ್ನು ಸಹಿಸಿಕೊಳ್ಳದ ಮಳಖೇಡ ಪಿಎಸ್ಐ ಅವರು ಗ್ರಾಮದ ಹಿರಿಯರ ಮೇಲೆ ಒತ್ತಡ ಹಾಕಿ ಧ್ವಜವನ್ನು ತೆರವುಗೊಳಿಸುವಂತೆ ಒತ್ತಾಯಿಸುತ್ತಿದ್ದಾರೆ. ಗ್ರಾಮದ ಸಮಾಜದಲ್ಲಿ ಸದಾ ಮುಂದೆ ನಿಂತು ಎಲ್ಲಾ ಕಾರ್ಯಗಳಿಗೂ ಮುಂದಾಳತ್ವ ವಹಿಸಿಕೊಂಡು ಬರುತ್ತಿದ್ದ ಶ್ರೀ ಹಣಮಂತಪ್ಪ ಭಾವನೋರ ಇವರಿಗೆ ಪಿಎಸ್ಐ ನಿರಂತರವಾಗಿ ಕಿರುಕುಳ ಕೊಟ್ಟಿರುವುದರ ಪರಿಣಾಮವಾಗಿ ಮನನೊಂದು ಹಣಮಂತಪ್ಪನವರು ವಿಷ ಸೇವಿಸಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಇದಕ್ಕೆ ಪಿಎಸ್ಐ ಅವರೇ ನೇರ ಹೊಣೆಗಾರರಾಗಿದ್ದು ಅವರನ್ನು ಸೇವೆಯಿಂದ ವಜಾ ಮಾಡುವವರೆಗೂ ಮಳಖೇಡ ಪೊಲೀಸ್ ಠಾಣೆಯ ಎದು ತಾಲ್ಲೂಕಿನ ಕೋಲಿ/ಕಬ್ಬಲಿಗ ಸಮಾಜ ಬಾಂಧವರು ಹೋರಾಟ ಮಾಡುತ್ತಿದ್ದಾರೆ. ಇವರಿಗೆ ಪೊಲೀಸರು ಸೂಕ್ತ ಭದ್ರತೆ ಒದಗಿಸಬೇಕು. ಈ ಹಿನ್ನೆಲೆಯಲ್ಲಿ ಮಳಖೇಡ ಪಿಎಸ್ಐ ಅವರನ್ನು ತಕ್ಷಣವೇ ಸೇವೆಯಿಂದ ವಜಾಗೊಳಿಸಿ, ಕೊಂಕನಹಳ್ಳಿ ಗ್ರಾಮದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಧ್ವಜದ ಕಟ್ಟೆ ಹಾಗೂ ನಾಮಫಲಕವನ್ನು ತೆರವುಗೊಳಿಸದೆ ಹಾಗೆಯೇ ಇರುವಂತೆ ಮಾಡಿ ಕೋಲಿ/ಕಬ್ಬಲಿಗ ಸಮಾಜಕ್ಕೆ ನ್ಯಾಯ ಒದಗಿಸಬೇಕೆಂದು ಮಾನ್ಯ ಗೃಹಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೆ, ಸಂಬಂಧ ಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಋ) ವಿಷಯ:- ರಾಜ್ಯದ ಎಲ್ಲಾ ಮಲ್ಟಿಪ್ಲೆಕ್ಸ್ ಮತ್ತು ಚಿತ್ರಮಂದಿರಗಳಲ್ಲಿ ಏಕರೂಪದ ದರ ಜಾರಿಗೊಳಿಸಿ ಸರ್ಕಾರ ಆದೇಶಿಸಿದ್ದರೂ, ಕೆಲವು ಮಲ್ಟಿಪ್ಲೆಕ್ಸ್‌ಗಳಲ್ಲಿ ಸರ್ಕಾರ ಆದೇಶಕ್ಕೆ ಕಿಮ್ಮತ್ತು ನೀಡದೆ ತಮಗೆ ಇಷ್ಟ ಬಂದಂತೆ ದರ ನಿಗಧಿಪಡಿಸಿರುವ ಕುರಿತು

***

ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ದಿನಾಂಕ 11.08.2025ರ ಸೋಮವಾರ "ಸಂಯುಕ್ತ ಕರ್ನಾಟಕ" ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ರಾಜ್ಯದ ಎಲ್ಲಾ ಮಲ್ಟಿಪ್ಲೆಕ್ಸ್ ಮತ್ತು ಚಿತ್ರಮಂದಿರಗಳಲ್ಲಿ ಏಕರೂಪದ ದರ ಜಾರಿಗೊಳಿಸುವಂತೆ ಸರ್ಕಾರ ಆದೇಶಿಸಿದ್ದು, ಸಿನಿಮಾ ಪ್ರದರ್ಶನದ ಟಿಕೆಟ್ ದರ ರೂ.200ಕ್ಕೂ ಹೆಚ್ಚು ಮೀರಬಾರದು ಎಂದು ಆದೇಶಿಸಿತ್ತು. ಆದರೆ ಇದೀಗ ಸರ್ಕಾರದ ಆದೇಶಕ್ಕೂ ಬೆಲೆ ಕೊಡದೇ ಮನಬಂದಂತೆ ದರ ಏರಿಸಿದೆ. ರಾಜ್ಯಾದ್ಯಂತ ಆಗಸ್ಟ್ 14ರಂದು ತೆರೆ ಕಾಣಲಿರುವ ರಜನಿಕಾಂತ್ ಅಭಿನಯದ ಕೂಲಿ ಚಿತ್ರಕ್ಕೆ ರೂ.2000 ದರ ನಿಗದಿ ಪಡಿಸಲಾಗಿದ್ದು, ಬೆಂಗಳೂರು ಜನತೆಯ ಆಕ್ರೋಶಕ್ಕೆ ಇದು ಕಾರಣವಾಗಿದೆ. ಇದು ನಿಜಕ್ಕೂ ಜನರ ಮೇಲೆ ಬರೆ ಎಳೆದಂತಾಗಿದೆ. ತಮಿಳುನಾಡಿನಲ್ಲಿಯೆ ತಮಿಳು ಭಾಷೆ ಪ್ರತಿ ಚಿತ್ರಕ್ಕೆ ರೂ.200 ಮಾತ್ರ ನಿಗದಿಯಾಗಿದ್ದು ಕರ್ನಾಟಕದಲ್ಲಿ ಮಾತ್ರ ಯಾಕೆ ದುಪ್ಪಟ್ಟು ಎಂಬುದು ಯಕ್ಷಪ್ರಶ್ನೆಯಾಗಿದೆ. ಇದು ಸರ್ಕಾರದ ಆದೇಶದ ವಿರುದ್ಧವಾಗಿ ತೆಗೆದುಕೊಂಡ ನಿರ್ಧಾರವಾಗಿದೆ. ಇದರಿಂದ ಕರ್ನಾಟಕದಲ್ಲಿನ ಚಲನಚಿತ್ರಗಳಿಗೆ ಬೆಲೆ ಇಲ್ಲದಂತಾಗಿ, ಪರಭಾಷೆ ಚಲನಚಿತ್ರಗಳಿಗೆ ಮಾನ್ಯತೆ ನೀಡಿದಂತಾಗಿದೆ. ಇದರಿಂದ ಅನ್ಯಭಾಷಾ ಚಿತ್ರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದಂತಾಗಿದೆ. ಇದು ನಿಜಕ್ಕೂ ಕರ್ನಾಟಕದಲ್ಲಿ ನಡೆಯುತ್ತಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿರುವುದು ನಿಜಕ್ಕೂ ಆಶ್ಚರ್ಯವಾಗಿದೆ. ಇದು ಹೀಗೆ ಮುಂದುವರೆದಲ್ಲಿ, ಸರ್ಕಾರದ ಆದೇಶಕ್ಕೆ ಕಿಮ್ಮತ್ತು ಇಲ್ಲದಂತಾಗಿ, ಮಲ್ಟಿಪ್ಲೆಕ್ಸ್‌ಗಳು ತಮಗೆ ಇಷ್ಟ ಬಂದ ಹಾಗೇ ದರಗಳನ್ನು ನಿಗದಿ ಪಡಿಸಿ, ಜನಸಾಮಾನ್ಯರ ಬಳಿ ಸುಲಿಗೆ ಮಾಡುವುದರಲ್ಲಿ ಮುಂದುವರೆಯುತ್ತಿರುತ್ತದೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ವಿಧಿಸುವ ಈ ರೀತಿಯ ದರದ ಹಾವಳಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರವು ಸೂಕ್ತ ಕ್ರಮ ಕೈಗೊಂಡು ಮಲ್ಟಿಪ್ಲೆಕ್ಸ್‌ಗಳ ದರದ ಹಾವಳಿಯನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವ ಸಂಬಂಧ ಶೂನ್ಯವೇಳೆಯಲ್ಲಿ ಚರ್ಚಿಸಬಯಸುತ್ತೇನೆ.

ಶ್ರೀ ಶಿವರಾಜ್ ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):- ಮಾನ್ಯ ಸಭಾಪತಿಯವರೇ, ಇದು ನನ್ನ ಇಲಾಖೆಗೆ ಬರುವುದಿಲ್ಲ. ವಾರ್ತಾ ಇಲಾಖೆಗೆ ಸಂಬಂಧಿಸಿರುವುದರಿಂದ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

ಸಭಾಪತಿಯವರು:- ಆಗಲಿ. ಉತ್ತರ ತರಿಸಿಕೊಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎ) ವಿಷಯ:- ಭೂ ಪರಿವರ್ತಿತ ಜಮೀನಿನ ಏಕವಿನ್ಯಾಸ ನಕ್ಷೆಗಾಗಿ ಜಿಲ್ಲಾ ಕೇಂದ್ರಕ್ಕೆ ಪ್ರಯಾಣ ಬೆಳೆಸುವ ಸರ್ಕಾರಿ ಆದೇಶವು ಗ್ರಾಮೀಣ ಜನರನ್ನು ಹೈರಾಣುಗೊಳಿಸಿರುವ ಬಗ್ಗೆ.

***

ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

"ಬಿಸಿ ತುಪ್ಪವಾದ ಸರ್ಕಾರದ ಹೊಸ ಆದೇಶ! ಏಕವಿನ್ಯಾಸ ನಕ್ಷೆಗೆ ಪರದಾಟ?" ಎಂಬ ಶೀರ್ಷಿಕೆಯಡಿ "ವಿಜಯ ಕರ್ನಾಟಕ" ಹಾಗೂ "ಉದಯವಾಣಿ" ದಿನಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಭೂಪರಿವರ್ತಿತ ಜಮೀನಿನ ಏಕ ವಿನ್ಯಾಸ ನಕ್ಷೆಗಾಗಿ ಜಿಲ್ಲಾ ಕೇಂದ್ರ ಸ್ಥಾನಕ್ಕೆ ಪಯಣ ಬೆಳೆಸಬೇಕೆನ್ನುವ ಸರ್ಕಾರಿ ಆದೇಶವು ಗ್ರಾಮೀಣ ಜನರನ್ನು ಹೈರಾಣಗೊಳಿಸಿದೆ. ಈವರೆಗೆ ಸ್ಥಳೀಯ ಮಟ್ಟದಲ್ಲಿ ನಡೆಯುತ್ತಿದ್ದ ಈ ಪ್ರಕ್ರಿಯೆಯನ್ನು ಬದಲಾಯಿಸಿ ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ತಂದಿರುವುದರಿಂದ ತುರ್ತಾಗಿ ನಡೆಯುತ್ತಿದ್ದ ಕೆಲಸ ಈಗ ತಿಂಗಳು ಕಳೆದರೂ ನಡೆಯುತ್ತಿಲ್ಲ ಎಂಬ ಆರೋಪ ಭುಗಿಲೆದ್ದಿದೆ.

ಕರಾವಳಿ ಜಿಲ್ಲೆಗಳು ಭೌಗೋಳಿಕ ನೆಲೆಯಲ್ಲಿ ತುಂಡು ಭೂಮಿ ಹೊಂದಿದೆ. ರಾಜ್ಯದ ಇತರೆ ಜಿಲ್ಲೆಗಳಿಗಿಂತ ವಿಭಿನ್ನ ಆಸ್ತಿ ಇಲ್ಲಿಯದು. ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆಗೊಂಡ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ಸಂಸ್ಥೆಯಿಂದ ನೋಂದಾಯಿತ ಅನುಭವಿ ಪದವೀಧರ ಖಾಸಗಿ ವಾಸ್ತುಶಿಲ್ಪಿಗಳಿಂದ ಏಕವಿನ್ಯಾಸ ನಕ್ಷೆ ತಯಾರಿಸಿ 0.25 ಎಕರೆ ತನಕ ಗ್ರಾಮ ಪಂಚಾಯತಿ, 0.25ರಿಂದ ಒಂದು ಎಕರೆವರೆಗೆ ತಾಲೂಕು ಪಂಚಾಯಿತಿಯಿಂದ ಅನುಮೋದನೆ ಪಡೆಯಲಾಗುತ್ತಿತ್ತು. ಸ್ಥಳೀಯ ಸರ್ಕಾರವಾಗಿರುವ ಗ್ರಾಮ ಪಂಚಾಯಿತಿಗೆ ಅಲ್ಲಿನ ವಾಸ್ತವ ಚಿತ್ರಣ ತಿಳಿದಿರುವುದರಿಂದ ಹಾಗೂ ಜನರಿಗೆ ಹತ್ತಿರದಲ್ಲೇ ಸೇವೆ ಸಿಗುತ್ತಿದ್ದುದರಿಂದ ಯಾವುದೇ ತೊಂದರೆಗಳಿಲ್ಲದೆ ಸುವ್ಯವಸ್ಥಿತವಾಗಿ ಏಕವಿನ್ಯಾಸ ನಕ್ಷೆಗೆ ಅನುಮೋದನೆ ಸಿಗುತ್ತಿತ್ತು.

ನಗರಾಭಿವೃದ್ಧಿ ಇಲಾಖೆಯು ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ 190033/2023ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 15.11.2023ರಂದು ನೀಡಿರುವ ದೈನಂದಿನ ಆದೇಶದ ಮೇರೆಗೆ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 4(ಕೆ)ರಡಿ ಈಗ ನಿಯಮವನ್ನು ರೂಪಿಸಲಾಗಿದ್ದು, ರಾಜ್ಯದ ಜನತೆಗೆ ಇದು ಹೊರೆಯಾಗಿದೆ.

ಆದ್ದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದು ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರಗಿರುವ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ನಗರಾಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಪ್ರತ್ಯೇಕ ಗ್ರಾಮಾಂತರ ಯೋಜನಾ ಕಾಯ್ದೆ ರೂಪಿಸಿ ಸರಳ ನಿಯಮಗಳನ್ನು ಅಳವಡಿಸುವ ಮೂಲಕ ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಬೇಕಾಗಿ ಶೂನ್ಯವೇಳೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(642) 12-08-2025 (1.20) ಕೆಜಿ:ಎಂಡಿ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏ) ವಿಷಯ:- ಕೇಂದ್ರ ಸರ್ಕಾರವು ಸಾಕಷ್ಟು ಯೂರಿಯಾ ಮತ್ತು ಡಿಎಪಿ ರಸಗೊಬ್ಬರವನ್ನು ಪೂರೈಸಿದ್ದು, ರಾಜ್ಯ ಸರ್ಕಾರವು ರೈತರಿಗೆ ಸಮರ್ಪಕವಾಗಿ ಪೂರೈಸುವ ಕುರಿತು.

\- - -

ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲು ಅನುಮತಿಸಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ಯೂರಿಯಾ ಮತ್ತು ಡಿಎಪಿ ರಸಗೊಬ್ಬರವು ನಿರೀಕ್ಷೆಗೂ ಮೀರಿ ಪೊರೈಸಿದರೂ ಸಹ ರಾಜ್ಯ ಸರ್ಕಾರವು ರೈತರಿಗೆ ಸಮರ್ಪಕವಾಗಿ ವಿತರಣೆ ಮಾಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ರೈತರು ಮಾತನಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ವರ್ಷ ರಾಜ್ಯದೆಲ್ಲೆಡೆ ಮುಂಗಾರು ಮಳೆ ಬೇಗ ಆರಂಭವಾಗಿ ಏಕಕಾಲದಲ್ಲಿ ಎಲ್ಲೆಡೆ ಬಿತ್ತನೆ ಚಟುವಟಿಕೆಗಳು ಆರಂಭಿಸಿರುವ ನಮ್ಮ ರೈತರಿಗೆ ರಾಜ್ಯ ಸರ್ಕಾರವು ಅಗತ್ಯವಿರುವ ಯೂರಿಯಾ ಮತ್ತು ಬೀಜಗಳ ಪ್ರಮಾಣವನ್ನು ಮುಂಚಿತವಾಗಿಯೇ ಅಂದಾಜು ಮಾಡಿ ಗೋದಾಮುಗಳಲ್ಲಿ ಸರಿಯಾಗಿ ದಾಸ್ತಾನು ಮಾಡಿ ವಿತರಣೆ ಮಾಡದೇ ನಿರ್ಲಕ್ಷ್ಯ ಮಾಡಿರುವುದು ಖಂಡನೀಯ ವಿಷಯವಾಗಿದೆ.

ರೈತನೇ ರಾಷ್ಟ್ರದ ಬೆನ್ನೆಲುಬು, ರಾಷ್ಟ್ರಕ್ಕೆ ಅನ್ನ ನೀಡುವ ರೈತನಿಗೆ ಸರಿಯಾದ ಸಮಯಕ್ಕೆ ರಸಗೊಬ್ಬರ ಮತ್ತು ಉತ್ತಮ ಗುಣಮಟ್ಟದ ಬೀಜಗಳನ್ನು ಸರ್ಕಾರವು ಪೂರೈಸಿದರೆ ಈ ನಾಡಿಗೆ ಬೇಕಾಗುವಷ್ಟು ದವಸ ಧಾನ್ಯಗಳನ್ನು ಬೆಳೆಯುವ ಸಾಮರ್ಥ್ಯ ನಮ್ಮ ರೈತರಿಗಿದೆ. "ಒಕ್ಕಲಿಗ ಒಕ್ಕದಿದ್ದರೇ ಬಿಕ್ಕುವುದು ಜಗವೆಲ್ಲ" ಎಂಬ ಹಿರಿಯರ ನಾಡನುಡಿಯನ್ನು ನಾವೆಲ್ಲರೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ.

ಇಂದು ರೈತನಿಗೆ ಸಕಾಲದಲ್ಲಿ ಗೊಬ್ಬರ ಸಿಗದೇ ಪರದಾಡುವ ಪರಿಸ್ಥಿತಿ ಎಲ್ಲೆಡೆ ಉದ್ಭವವಾಗಿದೆ. ಸರಿಯಾದ ಸಮಯದಲ್ಲಿ ಬೀಜ ಮತ್ತು ಗೊಬ್ಬರ ಸಿಗದೇ ರೈತರ ಆರ್ಥಿಕ ವರಮಾನ ಕುಂಠಿತಗೊಂಡಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆದ್ದರಿಂದ, ರಾಜ್ಯ ಸರ್ಕಾರವು ತಕ್ಷಣವೇ ಎಚ್ಚೆತ್ತುಕೊಂಡು ಗೊಬ್ಬರದ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ತಡ ಮಾಡದೇ ಈ ಕೂಡಲೇ ನಮ್ಮ ರೈತರಿಗೆ ಸಮರ್ಪಕವಾಗಿ ರಸಗೊಬ್ಬರವನ್ನು ಮತ್ತು ಉತ್ತಮ ಗುಣಮಟ್ಟದ ಬೀಜಗಳನ್ನು ಪೊರೈಸುವಂತೆ ತಮ್ಮ ಮೂಲಕ ಕೃಷಿ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎನ್..ಚೆಲುವರಾಯ ಸ್ವಾಮಿ (ಕೃಷಿ ಸಚಿವರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿರವರು ಪ್ರಸ್ತಾಪಿಸಿದಂತಹ ಎಲ್ಲಾ ವಿಷಯದ ಬಗ್ಗೆ ಸರ್ಕಾರ ಗಮನಹರಿಸಿದೆ. ಇಲ್ಲಿ ಮುಖ್ಯವಾಗಿ ಯೂರಿಯಾದ ವಿಷಯದ ಬಗ್ಗೆ ಕೇಳಿದ್ದಾರೆ. ನಾವು ಈ ವರ್ಷ ಕೇಂದ್ರ ಸರ್ಕಾರಕ್ಕೆ 12.95 ಲಕ್ಷ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೆಟ್ರಿಕ್ ಟನ್‌ಗಳ ಯೂರಿಯಾ ಬೇಡಿಕೆಯನ್ನು ಕಳುಹಿಸಿದ್ದೆವು. ಕೇಂದ್ರ ಸರ್ಕಾರ ಈ ವರ್ಷ 11,17,000 ಮೆಟ್ರಿಕ್ ಟನ್‌ಗಳ allocation ಅನ್ನು ಕೊಟ್ಟಿದ್ದರು. ಆದರೆ, ಏಪ್ರಿಲ್ ತಿಂಗಳಿನಿಂದ ಜುಲೈ ತಿಂಗಳವರೆಗೆ ಬರಬೇಕಾಗಿದ್ದಂತಹ allocation ಏನಿತ್ತು, ಅದರಲ್ಲಿ ಕೇಂದ್ರ ಸರ್ಕಾರ 1,27,000 ಮೆಟ್ರಿಕ್ ಟನ್‌ಗಳಷ್ಟು ಕಡಿಮೆ ಸರಬರಾಜು ಮಾಡಿದ್ದಾರೆ. ಈಗ ಆಗಸ್ಟ್‌ನಲ್ಲಿ ಇಲ್ಲಿಯವರೆಗೆ ಬರಬೇಕಾಗಿದ್ದ ಎರಡೂ ತಿಂಗಳದ್ದು ಸೇರಿ 2,84,000 ಮೆಟ್ರಿಕ್ ಟನ್‌ಗಳು ಕಡಿಮೆಯಾಗಿದೆ. ಇದಕ್ಕೆ ಪೂರಕವಾಗಿ ಈ ಹಿಂದೆ ಕೇಂದ್ರ ಸರ್ಕಾರವು ಡಿಎಪಿಯನ್ನು ಕಡಿಮೆ ಬಳಸಬೇಕೆಂಬ ಆಲೋಚನೆ ಏನಿತ್ತು, ಅದರಂತೆ ರಾಜ್ಯ ಸರ್ಕಾರ ಮತ್ತು ನಮ್ಮ ಇಲಾಖೆಯು ಅದಕ್ಕೆ ಪೂರಕವಾದಂತಹ ರೀತಿಯಲ್ಲಿ ರೈತರನ್ನು convince ಮಾಡಿ ಎಲ್ಲಾ ಶಾಸಕರನ್ನು ಡಿ.ಸಿ.ಯವರ ಮೂಲಕ ಸಚಿವರನ್ನು request ಮಾಡಿ 70,000 ಮೆಟ್ರಿಕ್ ಟನ್‌ಗಳ ಡಿಎಪಿಯನ್ನು ಕಡಿಮೆ ಬಳಸಿದರು. ಆ ಸಂದರ್ಭದಲ್ಲಿ ರೈತರು ಯಾರು ಸಹ, ಈ ಸಮಸ್ಯೆಗೆ ಸಂಬಂಧಿಸಿದಂತೆ ಯಾವುದೇ ಗಲಾಟೆಗೆ ಹಾಗೂ ಒತ್ತಡಕ್ಕೆ ಬರಲಿಲ್ಲ. ಅದೇರೀತಿ ಕೇಂದ್ರ ಸರ್ಕಾರಕ್ಕೆ ಯೂರಿಯಾವನ್ನು ಕಡಿಮೆ ಬಳಸಬೇಕೆಂಬ concept ಇತ್ತು. ನಾವು ಸಹ ಕೇಂದ್ರ ಸರ್ಕಾರ ಬೇರೆ ಹಾಗೂ ರಾಜ್ಯ ಸರ್ಕಾರ ಬೇರೆ ಎಂಬಂತೆ ರೈತರ ವಿಚಾರದಲ್ಲಿ ಹೋಗುವುದು ಬೇಡವೆಂದು ನಾವು ಅದೇ ರೀತಿಯಲ್ಲಿ ರೈತರಿಗೆ convince ಮಾಡಿ alternate nano urea ಇದೆ, ಒಂದು ಭೂಮಿಯ ಸತ್ವ ಹಾಳಾಗುತ್ತದೆ, ಬೆಳೆಯ ಇಳುವರಿ ಕಡಿಮೆಯಾಗುತ್ತದೆ, ಆ ಆಹಾರವನ್ನು ಉಪಯೋಗಿಸುವುದರಿಂದ ಜನರ ಆರೋಗ್ಯ ಕೆಡುತ್ತದೆ, ಈ ಎಲ್ಲಾ ಕಾರಣಗಳಿಂದ ಕೇಂದ್ರ ಸರ್ಕಾರ ICR (Implementation Completion and Results) report ಹಾಗೂ ಹಲವಾರು scientists report ಪ್ರಕಾರ ಮಾಡಿದ್ದರು. ಆದರೆ, ದುರಾದೃಷ್ಟ ಕೇಂದ್ರದಲ್ಲಿ ಬಿಜೆಪಿಯ ಸರ್ಕಾರ ಇದ್ದು, ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ಆ ಸದನದ ವಿರೋಧ ಪಕ್ಷದ ನಾಯಕರು ಮತ್ತು ಈ ಸದನದ ಕೆಲವು ಸದಸ್ಯರು ನನ್ನ ಬಳ ಕೇಳಿದ್ದರೆ ಆಗುತ್ತಿತ್ತು. ಅವರು ಆ ರೀತಿ ಏನು ಮಾತನಾಡದೆಯೇ ನೇರವಾಗಿ ಯೂರಿಯಾವನ್ನು ಸರಬರಾಜು ಮಾಡುತ್ತಿಲ್ಲ, ರಸಗೊಬ್ಬರವನ್ನು ಕೊಡುತ್ತಿಲ್ಲವೆಂದು ಹೇಳಿದರು. ಆಗ ನಾನು ಇರುವ ಸತ್ಯ ಸಂಗತಿಯನ್ನು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದಲ್ಲಿ ಶ್ರೀ ಶಿವರಾಜ್ ಸಿಂಗ್ ಚೌಹಾಣ್‌ರವರು ಕೃಷಿ ಸಚಿವರಾದ ಮೇಲೆ ಸಾಕಷ್ಟು ವಿಚಾರದಲ್ಲಿ ಅವರು ನಮಗೆ ಪೂರಕವಾಗಿ ಕೆಲಸ ಮಾಡಿದ್ದಾರೆ. ಅದು ಯಾವುದೇ ತರಹದ ರೈತರ ವಿಚಾರ ಬಂದಾಗ ಅವರು ಸ್ಪಂದಿಸಿದ್ದಾರೆ.

ಇತ್ತೀಚೆಗೆ, 'ಮಾವಿನ ಹಣ್ಣು' ವಿಚಾರ ಬಂದಂತಹ ಸಂದರ್ಭದಲ್ಲಿ ನಾನು ನಮ್ಮ ಮುಖ್ಯಮಂತ್ರಿಯವರಿಗೆ ಕ್ಯಾಬಿನೇಟ್‌ನಲ್ಲಿ ಅದರ ಜವಾಬ್ದಾರಿಯನ್ನು ವಹಿಸಿದಾಗ, ಅವರು ಫೋನ್ ಮೂಲಕ ಮಾತನಾಡಿದ ತಕ್ಷಣವೇ, ಮರುದಿವಸವೇ video conference ಮಾಡಿ ಅವರು ಅದಕ್ಕೆ ಮಂಜೂರಾತಿ ಕೊಟ್ಟರು. ಹಾಗಾಗಿ, ನನಗೂ ಒಂದು ರೀತಿಯಲ್ಲಿ...

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಟಿ.ಎ.ಶರವಣ (ವಿಧಾನ ಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಮ್ಮ ನಾಯಕರಾದ ಹಾಗೂ ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಈ ಬಗ್ಗೆ ಫೋನ್ ಮಾಡಿ ಅದಕ್ಕೆ ಸಹಕಾರ ನೀಡಿದ್ದರು ಎಂಬ ವಿಚಾರವನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎನ್.ಚೆಲುವರಾಯ ಸ್ವಾಮಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ನಾಯಕರು ಮಾನ್ಯ ಕೇಂದ್ರ ಕೃಷಿ ಸಚಿವರು approve ಮಾಡಿದ ಮೇಲೆ, ಇವರು ಹೆಸರು ತೆಗೆದುಕೊಳ್ಳುವುದಕ್ಕೆ ಫೋನ್ ಮಾಡಿದ್ದರು. ಮಾನ್ಯ ಸದಸ್ಯರು ಸುಮ್ಮನೆ ಕುಳತುಕೊಳ್ಳಬೇಕು. ಆಯಿತು, ಹೇಳುತ್ತೇನೆ. ಅವರ ನಾಯಕರನ್ನು ಸಚಿವರನ್ನಾಗಿ ಮಾಡಿರುವುದು ಸಹಾಯ ಮಾಡುವುದಕ್ಕೆ, ಸಹಾಯ ಮಾಡಿದರೆ ತಪ್ಪು ಏನಿದೆ?

ಶ್ರೀ ಟಿ.ಎ.ಶರವಣ:- ಮಾನ್ಯ ಸಭಾಪತಿಯವರೇ, ಅದನ್ನೇ ಹೇಳಿ ಎಂದು ಹೇಳಿದೆ ಅಷ್ಟೇ.

ಶ್ರೀ ಎನ್.ಚೆಲುವರಾಯ ಸ್ವಾಮಿ:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಮಾನ್ಯ ಸದಸ್ಯರಾದ ಟಿ.ಎ.ಶರವಣರವರು ದಯಮಾಡಿ ಸುಮ್ಮನೆ ಇರಬೇಕು. ಮಾನ್ಯ ಸದಸ್ಯರನ್ನು ಎಂಎಲ್‌ಸಿ ಮಾಡಿದ್ದಾರೆ. ಹಾಗಾಗಿ, ಅವರ ಪರವಾಗಿ ಮಾನ್ಯ ಸದಸ್ಯರು ಇರಬೇಕಾಗುತ್ತದೆ. ನಾನು ಅದನ್ನು ತಪ್ಪು ಎಂದು ಹೇಳುವುದಿಲ್ಲ. ನಾನು ಮಾತನಾಡುವಾಗ ಅವರು ದಯಮಾಡಿ disturb ಮಾಡಬಾರದು. ನಾವು ಹೇಳುವಾಗ ವಿಚಾರ flow ಆಗಿ ಇರುತ್ತದೆ. ಹಾಗಾಗಿ, ಮಾನ್ಯ ಸದಸ್ಯರು ದಯಮಾಡಿ ಕುಳತುಕೊಳ್ಳಬೇಕು. ನಾನು ಯಾವ ವಿಚಾರವನ್ನು ಹೇಳುತ್ತಿದ್ದೆ, ಆ ವಿಚಾರವನ್ನು ಬಿಟ್ಟು ಮುಂದಕ್ಕೆ ಹೋಗಬೇಕಾಗುತ್ತದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಸಮಾಧಾನವಾಗಿರಲಿ.

ಈ ಎಲ್ಲಾ ವಿಚಾರಗಳು ಚರ್ಚೆಗೆ ಬಂದಮೇಲೆ ಮಾನ್ಯ ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿರವರು ಇರಬಹುದು ಹಾಗೂ ಕೇಂದ್ರ ಸಚಿವರಾದ ಮಾನ್ಯ ಪ್ರಹ್ಲಾದ್ ಜೋಷಿಯವರು ಇರಬಹುದು, ಇವರು ಕೇಂದ್ರ ಸರ್ಕಾರದ ಕೃಷಿ ಸಚಿವರನ್ನು ಭೇಟಿ ಮಾಡಿದ್ದಾರೆ. ಆಗ ಅವರು ಅಲ್ಲಿಂದಲೇ 1,35,000 ಮೆಟ್ರಿಕ್ ಟನ್‌ಗಳಷ್ಟು ರಸಗೊಬ್ಬರನ್ನು ಶೀಘ್ರದಲ್ಲಿಯೇ ಸರಬರಾಜು ಮಾಡುತ್ತೇವೆಂದು ಮಾತು ಕೊಟ್ಟಿದ್ದಾರೆ. ಆದರೆ, ನಮಗೆ ಜುಲೈ ತಿಂಗಳ ಅಂತ್ಯದವರೆಗೆ ಕೇವಲ 30,000 ಮೆಟ್ರಿಕ್ ಟನ್ ಮಾತ್ರ ಬಂದಿದೆ. ಆದರೆ, ಬಾಕಿ ಬರಲಿಲ್ಲ. ಈಗ 2,28,000 ಮೆಟ್ರಿಕ್ ಟನ್ ರಸಗೊಬ್ಬರ ಈ ತಿಂಗಳ 15ರೊಳಗೆ ಬರಬೇಕಾಗಿದೆ. ಈಗ 65,000 ಮೆಟ್ರಿಕ್ ಟನ್ ಮಾತ್ರ ಬಂದಿದೆ. ಜುಲೈ ಮತ್ತು ಅಗಸ್ಟ್ ತಿಂಗಳದ್ದೂ ಸೇರಿ ಒಟ್ಟು 2,85,000 ಮೆಟ್ರಿಕ್ ಟನ್ shortage ಇದೆ. ಒಂದು ಕಡೆ ರಸಗೊಬ್ಬರವನ್ನು ಕಡಿಮೆ ಬಳಸಿ ಎಂದು ಹೇಳುವ ಕೇಂದ್ರ ಸರ್ಕಾರದ ಆಲೋಚನೆಯನ್ನು ನಾವು ಒಪ್ಪಿದ್ದೇವೆ. ಆದರೆ, ಅವರು ಸರಬರಾಜು ಮಾಡುತ್ತಿಲ್ಲ. ಅವರು panic ಆಗಿ ಜನರು ಹೆಚ್ಚು ಒತ್ತಡಕ್ಕೆ ಬಂದಂತಹ ಸಂದರ್ಭದಲ್ಲಿ, ಇದು ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ರಸಗೊಬ್ಬರವನ್ನು ಸರಬರಾಜು ಮಾಡುವುದು, import ಮಾಡುವುದು, produce ಮಾಡುತ್ತಿರುವುದು, rate fix ಮಾಡುವುದು ಎಲ್ಲಾ ಕೇಂದ್ರ ಸರ್ಕಾರದ್ದು ಆಗಿದೆ. ಇದರಲ್ಲಿ ನಮ್ಮ ಪಾತ್ರ ಏನಿಲ್ಲ. ಆ ಕಂಪನಿಗಳು ಸಹ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

retail shops ಗೆ 80% ಸರಬರಾಜು ಮಾಡುತ್ತವೆ. ರೈತರು ಅವರ ಅಂಗಡಿಗಳಲ್ಲಿ ರಸಗೊಬ್ಬರಗಳನ್ನು ತೆಗೆದುಕೊಳ್ಳುತ್ತಾರೆ, ಅವರು ಸರಿಯಾದ ರೀತಿಯಲ್ಲಿ ಸಪ್ಲೈ ಮಾಡಲಿಲ್ಲ ಅಥವಾ Black Market ನಲ್ಲಿ ಮಾರಾಟ ಮಾಡುತ್ತಾರೆ ಅಥವಾ ಬೇರೆ use ಗೆ ಹೋಗುತ್ತಾರೆ ಎಂದಾಗ ಮಾತ್ರ ನಾವು ಅವರ ವಿರುದ್ಧ ಕೇಸ್‌ನ್ನು ಹಾಕಬಹುದು. ಅಂತಹ ಸಂದರ್ಭದಲ್ಲಿ ಅವರ ಅಂಗಡಿಯನ್ನು seize ಮಾಡಿ ವಸೂಲಿ ಮಾಡಬಹುದು. ನಮಗೆ ಇಷ್ಟು ಪವರ್ ಮಾತ್ರ ಇದೆ. ಇನ್ನೂ buffer stock ಗೆ ತೆಗೆದುಕೊಳ್ಳುವಂತಹದ್ದನ್ನು ನಾವು PACS (Primary Agricultural Credit Societies) ಗೆ ಕೊಡುತ್ತೇವೆ. ಈಗಲೂ ಸಹ ನಮ್ಮ ಬಳಿ 400 ಕೋಟಿ ರೂಪಾಯಿಗಳ ಹಣ sufficient ಆಗಿದೆ. Shortage ಬಂದಂತಹ ಸಂದರ್ಭದಲ್ಲಿ ನಾವು ಏನು ಮಾಡುವುದಕ್ಕೆ ಆಗುತ್ತಿಲ್ಲ. ಆದರೂ ಸಹ, ನಾವು ರೈತರ ವಿಚಾರದಲ್ಲಿ ರಾಜಕಾರಣವನ್ನು ಬೆರೆಸುವುದು ಬೇಡ, ನಾವು ಕೇಂದ್ರ ಸರ್ಕಾರದ ಕಡೆಗೆ ಸುಮ್ಮನೆ ಡಿಮ್ಯಾಂಡ್ ಮಾಡಿ ಸಮಸ್ಯೆಯನ್ನು ತೋರಿಸುವುದು ಬೇಡ ಎಂದು, ವಾಸ್ತವಾಗಿರುವುದನ್ನು ಜನರಿಗೆ ಮನವರಿಕೆ ಮಾಡಿಕೊಟ್ಟು ಇದನ್ನು ಸರಿಪಡಿಸಬೇಕೆಂದು ಎಲ್ಲಾ ಡಿ.ಸಿ.,ಯವರ ಮತ್ತು ಸಿ.ಇ.ಓ.,ರವರ ಸಭೆಗಳಲ್ಲಿಯೂ ಸಹ ನಾನು ಮತ್ತು ಮಾನ್ಯ ಮುಖ್ಯಮಂತ್ರಿಯವರು request ಮಾಡಿ ನಮ್ಮ ಇಲಾಖೆಯ ಅಧಿಕಾರಿಗಳು ಸಹ ಇದಕ್ಕೆ coordination ಮಾಡಿ, pamphlet ಮಾಡಿ ಎಲ್ಲಾ ತರಹ ಸಮಸ್ಯೆಗಳು smooth ಆಗಿ ಹೋಗುತ್ತಿದ್ದಾಗ, ಅವರ ಹೋರಾಟದಿಂದ ಅವರು ನನ್ನ ಮೇಲೆಯೋ ಅಥವಾ ಸರ್ಕಾರದ ಮೇಲೆಯೋ ಏನೋ ಒಂದು ಭಾರವನ್ನು ಹೊರಿಸುತ್ತೇವೆಂದು ಹೋಗುವುದಕ್ಕೆ ಹೋಗಿ ಇವತ್ತು ಈ ಒಂದಷ್ಟು ಸಮಸ್ಯೆ ಇದೆ. ಆದರೆ, ಈ ಸಮಸ್ಯೆಗೆ ಪರಿಹಾರವನ್ನು ಕೇಂದ್ರ ಸರ್ಕಾರವೇ ಕೊಡಬೇಕೇ ವಿನಃ ನಾವಲ್ಲ. ನಮಗೆ ಕೊಟ್ಟಿರುವುದನ್ನು ನಾವು ಪ್ರತಿನಿತ್ಯ ಇಲ್ಲಿಯವರೆಗೆ ಕೊಟ್ಟಿದ್ದೇವೆ. ನಾನು, ನಮ್ಮ ಕಾರ್ಯದರ್ಶಿಯವರು, ಆಯುಕ್ತರವರು, ಮಾನ್ಯ ಮುಖ್ಯಮಂತ್ರಿಯವರು ಹಾಗೂ ಮುಖ್ಯ ಕಾರ್ಯದರ್ಶಿಯವರು ಪತ್ರಗಳನ್ನು ಕೇಂದ್ರಕ್ಕೆ ಬರೆದಿದ್ದೇವೆ. ನಾವು ದೆಹಲಿಗೆ ಹೋದಾಗ ಪ್ರತಿ ಬಾರಿಯೂ ಕೇಂದ್ರ ಸಚಿವರಾದ ಶ್ರೀ ಶಿವರಾಜ್ ಸಿಂಗ್ ಚೌಹಾಣ್‌ರವರನ್ನು ಭೇಟಿ ಮಾಡಿ ಬಂದಿದ್ದೇವೆ. ಕೇಂದ್ರ ಸಚಿವರಾದ ಶ್ರೀ ಜೆ.ಪಿ.ನಡ್ಡಾರವರು ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡುವುದಕ್ಕೆ ನಮಗೆ ಟೈಮ್ ಕೊಡಲಿಲ್ಲ. ದೆಹಲಿಗೆ ಬಂದು ಭೇಟಿ ಮಾಡುತ್ತೇವೆ ಎಂದರೂ ಸಹ, ಟೈಮ್ ಕೊಡಲಿಲ್ಲ. ಇದಲ್ಲದೇ, video conference ನಲ್ಲಿ ಪ್ರತಿ ಮಂಗಳವಾರದಂದು Central ನಿಂದ ನಮ್ಮ Director of Chemicals and Fertilizers ರವರು ಬರುತ್ತಾರೆ. ಆ ಟೈಮ್‌ನಲ್ಲಿ ನಮ್ಮ ಇಲಾಖೆಯ ಆಯುಕ್ತರವರು ಹಾಗೂ ನಿರ್ದೇಶಕರವರು ಇರುವ ವಿಚಾರವನ್ನು ಪ್ರತಿವಾರವು ಪ್ರಸ್ತಾಪ ಮಾಡುತ್ತಿದ್ದಾರೆ. ಎಷ್ಟೇ ಆದರೂ ಸಹ, ರಸಗೊಬ್ಬರವನ್ನು ಕಳುಹಿಸುತ್ತಿದ್ದಾರೆ. ಆದರೆ, ಪ್ರತಿಬಾರಿಯೂ ಕಡಿಮೆ ಬರುತ್ತಿದೆ. ಈಗಲೂ ಸಹ ನಮಗೆ ಜುಲೈ ಮತ್ತು ಆಗಸ್ಟ್ ತಿಂಗಳ ಬೇಡಿಕೆ 2,85,000 ಮೆಟ್ರಿಕ್ ಟನ್ ಬರಬೇಕಾಗಿದೆ. ಇದು ಬೇಡಿಕೆ ಅಷ್ಟೇ. ನಾವು extra

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳುವುದಿಲ್ಲ. ನಮಗೆ ಕಡಿಮೆ allocation, ಒಂದು ಲಕ್ಷ ಮೆಟ್ರಿಕ್ ಟನ್ ಕೊಟ್ಟರು. ನಾವು ಅದನ್ನು ಪ್ರಶ್ನೆ ಮಾಡುವುದಿಲ್ಲ.

(ಮುಂದು)

(643) 12-08-2025/1.30/ಎಂವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು) (ಮುಂದು):-

ನಾವು ಅದನ್ನೂ ಸಹ ಪ್ರಶ್ನೆ ಮಾಡುತ್ತಿಲ್ಲ. ನಾವು ಏನು allocation ಕೊಟ್ಟಿದ್ದೇವೆ. ಅವರು ಅಷ್ಟನ್ನು ಕೊಟ್ಟರೆ, ನಾವು ಬಹುಶಃ ಈ ರಾಜ್ಯದಲ್ಲಿ excess ಆಗಿ ಕೊಡಬೇಕೆಂದು ರೈತರ ಬೇಡಿಕೆ ಇದೆ. ಈಗ advance ಆಗಿ ಮುಂಗಾರು ಆಗಿದೆ. ಮತ್ತೆ ಒಂದು ತಿಂಗಳ ಮುಂಚೆ ಡ್ಯಾಂ ನೀರನ್ನು ಬಿಟ್ಟಿದ್ದಾರೆ. ಮತ್ತೆ ಜೋಳದ ಬೆಳೆಗೆ ಎರಡು ಲಕ್ಷ ಹೆಕ್ಟೇರ್ ಪ್ರದೇಶ ಜಾಸ್ತಿಯಾಗಿದೆ. ಇಷ್ಟೆಲ್ಲಾ ಸಮಸ್ಯೆ ಇದ್ದರೂ ಸಹ ಇದೇ ಎರಡು ಟೀಮ್ ಅಂದರೆ, ಇದೇ ಮುಖ್ಯಮಂತ್ರಿ, ಇದೇ ಕೃಷಿ ಸಚಿವರು, ಇದೇ ಅಧಿಕಾರಿಗಳು ಇದನ್ನು ಸಮರ್ಪಕವಾಗಿ ಮಾಡಿದ್ದೇವೆ. ಅವತ್ತು ಎರಡು ವರ್ಷದಲ್ಲಿ ಯಾವುದೂ ಸಹ shortage of supply ಇರಲಿಲ್ಲ. ಆದರೆ, ಈ ವರ್ಷ shortage of supply ಇದೆ. ಅವತ್ತು ಇದ್ದಂತಹ ಚಲುವರಾಯಸ್ವಾಮಿಯೇ ಇವತ್ತಿನ ಚಲುವರಾಯಸ್ವಾಮಿ. ಆದರೆ, ಇವತ್ತು ಈ ರೀತಿಯ ಸಮಸ್ಯೆ ಎಂದು ಹೇಳಿ, ಜನರಿಗೆ ಸ್ವಲ್ಪ ಆತಂಕ ಹುಟ್ಟಿಸುವಂಥದ್ದನ್ನು ಬಿಟ್ಟು, ಅವರು ಸಹ ನಮ್ಮ ಹಾಗೆ ಈಗ ಕೇಂದ್ರ ಸರ್ಕಾರದ ಜವಾಬ್ದಾರಿ ಶೇಕಡಾ ೨೦ರಷ್ಟು ಇರುವುದರಿಂದ ಅವರುಗಳು ಸಹ ಸಮಾಧಾನವಾಗಿ ಹೇಳಿಕೆಗಳನ್ನು ಕೊಟ್ಟು ಅವರ ಬಳಿ ಮಾತನಾಡಿದ್ದರೆ ಬಹುಶಃ ಈ ಸಮಸ್ಯೆ ಬಗೆಹರಿಯುತ್ತಿತ್ತು. ನಾನು ಈಗಲೂ ಸಹ ಇಡೀ ದಿವಸ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಾ, ಪ್ರಯತ್ನ ಮಾಡುತ್ತಿದ್ದೇನೆ. ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಏನು ಬಾಕಿ ಇದೆ, ಅದನ್ನು ಕೇಂದ್ರ ಸರ್ಕಾರದವರು ಸರಬರಾಜು ಮಾಡಿದರೆ, ನಾವು ಇನ್ನೊಂದಷ್ಟು ಉತ್ತಮವಾಗಿ ಸರಬರಾಜು ಮಾಡುತ್ತೇವೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ,...

(ಗೊಂದಲ)

Mr. CHAIRMAN:- No discussion, no discussion. Please, ಒಂದು ನಿಮಿಷ ಕೇಳಿ. ಇದರಲ್ಲಿ discussion ಇರುವುದಿಲ್ಲ. ಅವರು ಉತ್ತರ ಕೊಟ್ಟ ಮೇಲೆ ಮುಗಿದು ಹೋಗುತ್ತದೆ. ಅದಕ್ಕೆ discussion ಇರುವುದಿಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರು ಕೇಂದ್ರ ಸರ್ಕಾರದ ಕಡೆ ತೋರಿಸಿದರು. ಅವರು ಪ್ರಥಮವಾಗಿ ಹೇಳುವಾಗ ಅವತ್ತಿನಿಂದ ಇಲ್ಲಿಯವರೆಗೆ ನಮ್ಮ ಗೋಡೌನ್‌ಗಳಲ್ಲಿ ದಾಸ್ತಾನು ಇದೆ ಎಂದು ಹೇಳಿದರು. ಆದರೆ, ಅದನ್ನು ಏಕೆ ಹಂಚಲಿಲ್ಲವೆಂದು ಕೇಳಿದ್ದು.

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು):– ಮಾನ್ಯ ಸಭಾಪತಿಯವರೇ, ಇದನ್ನು ಅವರು ಸಹಿಸುವುದಕ್ಕೆ ಆಗಲಿಲ್ಲವೆಂದರೆ, ಅವರು ಟೀಕೆ ಮಾಡಿದರೆ Ok.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ನಾನು ಟೀಕೆಯನ್ನೇ ಮಾಡಿಲ್ಲ. ಇದು ಟೀಕೆ ಅಲ್ಲ. ಮಾನ್ಯ ಸಚಿವರು ಮೊದಲಿಗೆ ದಾಸ್ತಾನು ಇದೆ ಎಂದು ಹೇಳಿದರು. ಆದರೆ, ಹಂಚಿಕೆಯಾಗಿಲ್ಲ. ಅದನ್ನು ಏಕೆ ಹಂಚಿಕೆ ಮಾಡಿಲ್ಲ?

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ:– ಮಾನ್ಯ ಸಭಾಪತಿಯವರೇ, ಈಗ ದಾಸ್ತಾನು ಎಲ್ಲೆಲ್ಲಿ ಇದೆ. ಅಂತಹ ಕಡೆಗಳಲ್ಲಿ ಕೊಡುತ್ತಿದ್ದೇವೆ. ಆದರೆ, shortage of supply ಇದೆ. ಹಾಗಾದರೆ, ಈಗ ದಾಸ್ತಾನು ಮುಗಿದು ಹೋಗಿದೆ ಎಂದು ಹೇಳಬೇಕೇ?

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದೆ ಎಂದು ಹೇಳಿದ್ದಾರೆ. ಆದರೆ, ಹೇಗೆ shortage ಆಯಿತು?

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ:– ಮಾನ್ಯ ಸಭಾಪತಿಯವರೇ, ಈಗ sufficient supply ಆಗಿಲ್ಲ. ಅದಕ್ಕೆ ಕೊಡಬೇಕಾದಂತಹ allocation ಕೊಟ್ಟಿಲ್ಲ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ರೈತರ ಅವಶ್ಯಕತೆಗಳಿಗೆ ಅನುಗುಣವಾಗಿ ಕೊಡಬೇಕಾಗಿತ್ತು.

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ:– ಮಾನ್ಯ ಸಭಾಪತಿಯವರೇ, ದಯವಿಟ್ಟು ಅವರು ನಾನು ಹೇಳುವುದನ್ನು ಕೇಳಲಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಚಾರ. ನಾವು ಅವರನ್ನು blame ಮಾಡುತ್ತಿಲ್ಲ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು):– ಮಾನ್ಯ ಸಭಾಪತಿಯವರೇ, ತಾವು ಸ್ವಲ್ಪ ಅವರಿಗೆ ಹೇಳಿ. ಬಹಳ ತಪ್ಪು ಮಾಹಿತಿ ಹೋಗುತ್ತಿದೆ. ಈಗ ರಾಜ್ಯಕ್ಕೆ ಕೇಂದ್ರದಿಂದ ಎಷ್ಟು ಬರಬೇಕಾಗಿತ್ತು ಈಗ ಎಷ್ಟು ಬಂದಿದೆ ಮತ್ತು ಏನಾಗಿದೆ ಎಂದು ಹೇಳುವುದನ್ನು ಕೇಳುವುದಕ್ಕೆ ಅವರಿಗೆ patience ಇರಲಿ.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ನನ್ನದೊಂದು ಸಲಹೆ ಇದೆ.

(ಗೊಂದಲ)

ಸಭಾಪತಿಯವರು:– ನಾನು ಹೇಳುವುದನ್ನು ಅವರು ಕೇಳಬೇಕಲ್ಲವೇ?

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, I am not blaming him.

(ಗೊಂದಲ)

ಸಭಾಪತಿಯವರು:– ನಾನು ಅವರಿಗೆ ಹೇಳುತ್ತಿರುವುದಕ್ಕೆ ಕಿಮ್ಮತ್ತಿಲ್ಲ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:– ಮಾನ್ಯ ಸಭಾಪತಿಯವರೇ, **(ಗೊಂದಲ)** ಅದನ್ನು ರಾಜ್ಯ ಸರ್ಕಾರ ಕೊಡುತ್ತಿಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಅದು ಕೇಂದ್ರ ಸರ್ಕಾರದ ಪಾಲಿಸಿ.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ನನ್ನದು ಒಂದು ಸಲಹೆ ಇದೆ. ಇದು ಕೃಷಿಗೆ ಸೇರಿರುವ ವಿಚಾರವಾಗಿರುವುದರಿಂದ ದಯಮಾಡಿ scarcity of fertilizer ಏಕೆ ಆಯಿತು? ಅದಕ್ಕೆ ಪರಿಹಾರ ಏನು? ನಾವು ಈ ಹಿಂದೆ ಆಹಾರ ಪದಾರ್ಥಗಳನ್ನು ಬೆಳೆದಂತಹ ಸಂದರ್ಭದಲ್ಲಿ ಇಷ್ಟೊಂದು ಉತ್ಪಾದನೆ ಇರಲಿಲ್ಲ.

ಸಭಾಪತಿಯವರು:– ಶೂನ್ಯ ವೇಳೆಯಲ್ಲಿ ಈ ರೀತಿ ಮಾಡಿದರೆ ಏನು ಮಾಡುವುದು. ಶೂನ್ಯ ವೇಳೆಯಲ್ಲಿ ಚರ್ಚೆ ಇದೆಯೇ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):– ಮಾನ್ಯ ಸಭಾಪತಿಯವರೇ, ಅವರು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಗೋವುಗಳ ಸಾಕಾಣಿಕೆಗೆ ಪ್ರೋತ್ಸಾಹ ನೀಡಲಿ. ಗೊಬ್ಬರದಿಂದ ಭೂಮಿ ಕಲುಷಿತಗೊಂಡು ವಿಷಪೂರಿತವಾಗುತ್ತಿದೆ. ಇದು ತಪ್ಪು ಅಲ್ಲವೇ?

(ಗೊಂದಲ)

ಸಭಾಪತಿಯವರು:– ಶೂನ್ಯ ವೇಳೆಯಲ್ಲಿ ಏನೇನೋ ಮಾತನಾಡುತ್ತೀರಿ. ನಾನು ನಿಮ್ಮನ್ನು ಹೊರಗೆ ಹಾಕಲೇನು? ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವಂತಿಲ್ಲ. ಇದು ನಿಮಗೆ ತಿಳಿಯುತ್ತಿಲ್ಲವೇ? ನಿಮಗೆ ಸ್ವಲ್ಪ common sense ಬೇಕಲ್ಲವೇ?

(ಗೊಂದಲ)

ಶ್ರೀ ಎಸ್.ಎಲ್.ಭೋಜೇಗೌಡ:– ಮಾನ್ಯ ಸಭಾಪತಿಯವರೇ, ಇದಕ್ಕೆ ಏನಾದರೂ ಬೇರೆ ವ್ಯವಸ್ಥೆ ಮಾಡಲಿ. ಗೋವುಗಳನ್ನು ಸಾಕಿ ಅವುಗಳ ಸಗಣಿಯಿಂದ ಗೊಬ್ಬರವನ್ನು ಮಾಡಿಸಿ, ಇದನ್ನು ಕಡಿಮೆ ಮಾಡಿಸಲಿ. ಅಂದರೆ, ಗೋವುಗಳನ್ನು ಸಾಕಿ ಎಂದು ಹೇಳುತ್ತೇನೆ. ಭೂಮಿಗೆ ಈ ರೀತಿ ಮಾಡಬೇಡಿ ಎಂಬುದು ನನ್ನ ಸಲಹೆಯಾಗಿದೆ.

(ಗೊಂದಲ)

ಸಭಾಪತಿಯವರು:– ಮಾನ್ಯ ಭೋಜೇಗೌಡರೆ, ಇದು ಶೂನ್ಯ ವೇಳೆ.

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ:– ಮಾನ್ಯ ಸಭಾಪತಿಯವರೇ, ಇದು ಪೂರಕವಾಗಿ ಇದೆ. ಈಗ ಬಿ.ಜೆ.ಪಿ.ಯವರು ರಾಜಕೀಯ ಮಾಡುವುದನ್ನು ಬಿಟ್ಟರೆ ಮಾಡುತ್ತೇವೆ.

(ಗೊಂದಲ)

ಸಭಾಪತಿಯವರು:– ಮಾನ್ಯ ಚಲುವರಾಯಸ್ವಾಮಿಯವರೆ, ತಾವು ಮಂತ್ರಿಗಳಾಗಿ ತಮಗೆ ಬುದ್ಧಿ ಇದೆ ಅಲ್ಲವೇ? ಸ್ವಲ್ಪ common sense ಬೇಕು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐ) ವಿಷಯ:- ಕೋಲಾರ ಜಿಲ್ಲೆ, ಕೆ.ಜಿ.ಎಫ್ ನಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ವಿತರಿಸಲು ತಂದಿದ್ದ ಪರಿಕರಗಳು ಕಳಪೆ ಗುಣಮಟ್ಟದಿಂದ ಕೂಡಿದೆಯೆಂದು ರೈತರು ಸ್ವೀಕರಿಸಲು ನಿರಾಕರಿಸಿರುವ ಬಗ್ಗೆ.

ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆ, ಕೆ.ಜಿ.ಎಫ್.ನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿತರಿಸಲು ತಂದಿದ್ದ ಪಂಪ್, ಮೋಟಾರ್, ಪ್ಯಾನಲ್ ಬೋರ್ಡ್, ಕೇಬಲ್ ವೈಯರ್ ಸೇರಿದಂತೆ ಪರಿಕರಗಳು ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಆರೋಪಿಸಿರುವ ರೈತರು ಅದನ್ನು ಪಡೆಯಲು ನಿರಾಕರಿಸಿದ್ದಾರೆ. ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಿಗೆ ಉಚಿತವಾಗಿ ಕೊಳವೆಬಾವಿ ಸೌಲಭ್ಯ ಒದಗಿಸುವ ಗಂಗಾ ಕಲ್ಯಾಣ ಯೋಜನೆಯಡಿ ಸಬ್‌ಮರ್ಸಿಬಲ್ ಪಂಪ್‌ಸೆಟ್‌ಗಳ ಪೂರೈಕೆ, ಅಳವಡಿಕೆ ಮತ್ತು ವಿದ್ಯುದ್ಧೀಕರಣ, ಅಲ್ಪಕಾಲ ಬಾಳಿಕೆ ಬರುವ ಮತ್ತು ಕಡಿಮೆ ಬೆಲೆಯ ಉಪಕರಣ ಅಳವಡಿಸಿರುವ ಪಂಪ್‌ಸೆಟ್‌ಗಳನ್ನು ಪೂರೈಸಲು ಮುಂದಾಗಿದ್ದು, ಇದರಿಂದ ರೊಚ್ಚಿಗೆದ್ದ ರೈತರು ಪ್ರತಿಭಟನೆ ನಡೆಸಿದ್ದಾರೆ. ಕಳೆದ ಆರು ವರ್ಷಗಳ ಹಿಂದೆ ಕೆ.ಜಿ.ಎಫ್ ತಾಲ್ಲೂಕಿನ ರೈತರು ಗಂಗಾ ಕಲ್ಯಾಣ ಯೋಜನೆಯಡಿ ತಾಲ್ಲೂಕಿನ 13 ರೈತರು ಅರ್ಜಿಗಳನ್ನು ಸಲ್ಲಿಸಿದ್ದರು. ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದವರು ಕೊಳವೆ ಬಾವಿ ಕೊರೆಸಲು ಫೀಲ್ಡ್ ಆಫೀಸರ್‌ಗೆ ಕಾರ್ಯಾದೇಶ ನೀಡಲು ರೂ.25,000/- ಪಡೆದುಕೊಂಡಿದ್ದರು. ಕೊಳವೆಬಾವಿ ಕೊರೆಸುವ ಸಂದರ್ಭದಲ್ಲಿ ರೂ.25,000/- ಡೀಸೆಲ್ ಖರೀದಿಗೆ ಪಡೆದುಕೊಂಡಿರುವುದಾಗಿ ಕೆ.ಜಿ.ಎಫ್ ತಾಲ್ಲೂಕಿನ ರೈತರು ಆರೋಪಿಸಿದ್ದಾರೆ.

ಗಂಗಾ ಕಲ್ಯಾಣ ಯೋಜನೆ ಸಂಪೂರ್ಣ ಸಬ್ಸಿಡಿ ಯೋಜನೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಅಲ್ಪಸಂಖ್ಯಾತರು ಮತ್ತು ಸಣ್ಣ ರೈತರಿಗೆ ಕೊಳವೆಬಾವಿಗೆ ಪಂಪ್ ಮತ್ತು ವಿದ್ಯುದ್ಧೀಕರಣವನ್ನು ಒದಗಿಸಲಾಗುತ್ತದೆ. ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ವ್ಯಕ್ತಿಗಳು ಮತ್ತು ಫಲಾನುಭವಿಗಳ ಗುಂಪುಗಳಿಗೆ ಅಂತರ್ಜಲವನ್ನು ಬಳಸಿಕೊಳ್ಳುವ ಮೂಲಕ ನೀರಾವರಿ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ವೈಯಕ್ತಿಕ ಕೊಳವೆಬಾವಿ ಕೊರೆಸಲು ಸರ್ಕಾರವು ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಿಗೆ 3.75 ಲಕ್ಷ ರೂಪಾಯಿಗಳನ್ನು ಮತ್ತು ಇತರ ಜಿಲ್ಲೆಗಳಿಗೆ 2.25 ಲಕ್ಷ ರೂಪಾಯಿಗಳನ್ನು ಸರಕಾರ ನಿಗದಿಪಡಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಸರ್ಕಾರದ ಯೋಜನೆಗಳು ನ್ಯಾಯಯುತವಾಗಿ ಜನರಿಗೆ ತಲುಪಬೇಕು ಹಾಗೂ ಉತ್ತಮ ಗುಣಮಟ್ಟದ ಪರಿಕರಗಳನ್ನು ನೀಡಬೇಕಾಗಿರುತ್ತದೆ. ಈ ಕೂಡಲೇ ಇದನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒ) ವಿಷಯ:- ನೆಲಮಂಗಲದ "ಅರಿಶಿನಕುಂಟೆ ಮತ್ತು ಬಿನ್ನಮಂಗಲದ ಕೆರೆಗಳ ಕಾಯಕಲ್ಪ" ದ ಬಗ್ಗೆ.

ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ದಿನಾಂಕ 06.08.2025ರಂದು "ಅರಿಶಿನಕುಂಟೆ ಮತ್ತು ಬಿನ್ನಮಂಗಲದ ಕೆರೆಗಳಿಗೆ ಬೇಕಿದೆ ಕಾಯಕಲ್ಪ" ಎಂದು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಒಂದು ಕಾಲದಲ್ಲಿ ಪರಿಶುದ್ಧವಾಗಿ, ಪ್ರಶಾಂತವಾಗಿ, ರಮಣೀಯತೆಯಿಂದ ಸೆಳೆಯುತ್ತಿದ್ದ ನೆಲಮಂಗಲದ ಅರಿಶಿನಕುಂಟೆ ಮತ್ತು ಬಿನ್ನಮಂಗಲದ ಕೆರೆಗಳೆರಡೂ ಇದೀಗ ಸಂಪೂರ್ಣ ಮಲಿನಗೊಂಡು ದುರ್ವಾಸನೆ ಬೀರುತ್ತಿದೆ. ನಗರದ ಹಲವು ಕಡೆಗಳಿಂದ ಚರಂಡಿ ಮತ್ತು ರಾಜಕಾಲುವೆಯ ಮೂಲಕ ಹರಿಯುವ ಕಲುಷಿತ ನೀರು ಮತ್ತು ಶೌಚಾಲಯದ ಮಲಮೂತ್ರವು ಈ ಕೆರೆಗಳ ಒಡಲು ಸೇರುತ್ತಿದ್ದು, ಬಳಕೆಗೆ ಬಾರದಾಗಿದೆ.

ಅಂದು ಪೂರ್ವಿಕರು ಜನ ಜಾನುವಾರುಗಳ ಹಿತದೃಷ್ಟಿಯಿಂದ ನಿರ್ಮಿಸಿದ್ದ ಕೆರೆಗಳ ನೀರು ಕೃಷಿಗೆ, ಜಾನುವಾರುಗಳಿಗೆ, ಪ್ರಾಣಿ-ಪಕ್ಷಿಗಳಿಗೆ ನೀರುಣಿಸುತ್ತಿತ್ತು. ಬಟ್ಟೆ ಬರೆ, ಪಾತ್ರೆ ಪಗಡೆಗಳನ್ನು ತೊಳೆಯಲು ಸ್ಥಳೀಯರು ಈ ಕೆರೆಯ ನೀರನ್ನು ಬಳಸುತ್ತಿದ್ದರು. ಆದರೆ, ಈಗ ಯಾರೂ ಇತ್ತ ಸುಳಿಯದೆ ಕೆರೆ ಮತ್ತಷ್ಟೂ ಕಲ್ಮಶಗೊಳ್ಳುವುದಕ್ಕೆ ಕಾರಣವಾಗುತ್ತಿದೆ. ಸೋಂಕು ರೋಗಗಳ ಭೀತಿ ಕಾಡುತ್ತಿದೆ ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಈ ಕುರಿತು ಸಂಬಂಧಿಸಿದ ಅಧಿಕಾರಿಗಳಿಂದ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):- ಮಾನ್ಯ ಸಭಾಪತಿಯವರೇ, ಈ ಎರಡೂ ಕೆರೆಗಳ ಬಗ್ಗೆ ನಗರಸಭಾ ನೆಲಮಂಗಲ ಪೌರಾಡಳಿತದವರು ಸಣ್ಣ ನೀರಾವರಿ ಇಲಾಖೆಗೆ ದಿನಾಂಕ 01.02.2023ರಲ್ಲಿ ಒಂದು ಪತ್ರ ಬರೆದಿದ್ದರು. ಅಂದರೆ, ತ್ಯಾಜ್ಯ ನೀರು ಬಂದು ಸೇರುತ್ತಿದೆ ಎಂದು. ಅದಕ್ಕೆ ಅದನ್ನು ಶುದ್ಧೀಕರಣ ಮಾಡಿ ಈ ಎರಡೂ ಕರೆಗಳನ್ನು beautification ಮಾಡಬೇಕು, ಇದು town limits ಗೆ ಬರುತ್ತದೆಂದು. ಹಾಗಾಗಿ, ನಾವು ಈ ಎರಡನ್ನೂ 7ನೇ ನವೆಂಬರ್ 2023ರಂದು ಎರಡು ಕೆರೆಗಳನ್ನು ಇಲಾಖೆಗೆ handover ಮಾಡಿದ್ದೇವೆ. ಹಾಗಾಗಿ, ಆ ಇಲಾಖೆಯವರು ಇದರ ಬಗ್ಗೆ ವಿವರಣೆ ಕೊಡಬೇಕಾಗುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(644) 12.08.2025 01.40 LL-AK (ಸಭಾಪತಿಯವರ ಉಪಸ್ಥಿತಿ)

ಓ) ವಿಷಯ:- ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಅಪೂರ್ಣಗೊಂಡಿರುವ ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಕುರಿತು

\- - -

ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ 4.27 ಲಕ್ಷ ಕುಟುಂಬಗಳು ಅರ್ಜಿ ಸಲ್ಲಿಸಿ ಏಳೆಂಟು ವರ್ಷ ಕಳೆದರೂ ವಸತಿ ಸಿಕ್ಕಿಲ್ಲ. ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) ಮಾರ್ಗಸೂಚಿ ಅನ್ವಯ 2016-17 ಸಮೀಕ್ಷೆ ಕೈಗೊಂಡಿತ್ತು. ಅದರನ್ವಯ 4,19,550 ನಿವೇಶನರಹಿತ ಹಾಗೂ 7,820 ವಸತಿರಹಿತ 4,27,370 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಸಲ್ಲಿಸಿವೆ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಕಾಲಮಿತಿಯಲ್ಲಿ ಮನೆ ಸಿಗದೆ ಅರ್ಜಿದಾರರು ಪರದಾಡುತ್ತಿದ್ದಾರೆ. ಪ್ರಧಾನಮಂತ್ರಿ ಆವಾಸ್ ಯೋಜನೆ, ವಾಜಪೇಯಿ ವಸತಿ ಯೋಜನೆ ಮತ್ತು ಅಂಬೇಡ್ಕರ್ ವಸತಿ ಯೋಜನೆ ಸಮನ್ವಯದೊಂದಿಗೆ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ರಾಜೀವ್ ಗಾಂಧಿ ವಸತಿ ನಿಗಮ (ಆರ್‌ಜಿಎಚ್‌ಸಿಎಲ್), ವಸತಿ ಸೌಲಭ್ಯ ಕಲ್ಪಿಸಲು 80,542 ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದೆ. ಶೇ.85 ಮನೆಗಳ ನಿರ್ಮಾಣವಾಗಿಲ್ಲ. ರಾಜೀವ್ ಗಾಂಧಿ ವಸತಿ ನಿಗಮದಿಂದ ವಿಶೇಷ ವರ್ಗದ ಅಡಿ ತೃತೀಯಲಿಂಗಿಗಳು, ಅಂಗವಿಕಲರು, ವಿಧವೆಯರು, ಎಚ್.ಐ.ವಿ. ಪೀಡಿತರು, ಕುಷ್ಠರೋಗದಿಂದ ಗುಣಮುಖರಾದವರಿಗೆ ಮತ್ತು ಬೀದಿಬದಿ ವ್ಯಾಪಾರಿ ಫಲಾನುಭವಿಗಳಿಗಾಗಿ 1,488 ಮನೆಗಳನ್ನು ನಿರ್ಮಿಸಲಾಗುತ್ತಿದ್ದು, ಕೇವಲ 384 ಮನೆಗಳು ಪೂರ್ಣಗೊಂಡಿದ್ದು, 1.104 ಮನೆಗಳ ನಿರ್ಮಾಣದ ಹಂತದಲ್ಲಿವೆ. ಅರ್ಜಿದಾರರೇ ನಿರ್ಮಿಸಿಕೊಳ್ಳಲು 1,055 ಮನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇದರಲ್ಲಿ 300 ಮನೆಗಳು ಪೂರ್ಣಗೊಂಡರೆ, 59 ಪ್ರಗತಿ ಹಂತದಲ್ಲಿವೆ. 696 ಮನೆಗಳು ಇನ್ನೂ ಪ್ರಾರಂಭವಾಗಿಲ್ಲ. ಲಕ್ಷ ಬಹುಮಹಡಿ ವಸತಿ ಯೋಜನೆಯಡಿಯಲ್ಲಿ ಬಡ ಕುಟುಂಬಗಳಿಗೆ ವಸತಿ ಸೌಲಭ್ಯ ಒದಗಿಸಲು 2017ರಲ್ಲಿ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯನ್ನು ಕಾರ್ಯಗತಗೊಳಿಸಿದ್ದು, ಸರ್ಕಾರ 1,057 ಎಕರೆ ಜಮೀನನ್ನು ಉಚಿತವಾಗಿ ಕೊಟ್ಟಿತ್ತು. ಪ್ರಸ್ತುತ 64 ಯೋಜನಾ ಪ್ರದೇಶಗಳಲ್ಲಿ 514 ಎಕರೆಯಲ್ಲಿ 45,124 ಮನೆಗಳನ್ನು Z+ ಯಿಂದ S+ 14 ಮಾದರಿಯಡಿ ಮೂಲಸೌಕರ್ಯ ಸೌಲಭ್ಯದೊಂದಿಗೆ 5,508 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಇದರಲ್ಲಿ ಕೇವಲ 6,689 ಮನೆಗಳು ಪೂರ್ಣಗೊಂಡಿವೆ. ಇನ್ನೂ 38,435 ಮನೆಗಳು ಅಪೂರ್ಣವಾಗಿವೆ. 2016-17ನೇ ಸಾಲಿನಲ್ಲಿ ಸಮೀಕ್ಷೆಯಂತೆ 413 ಕೊಳೆಗೇರಿ ಪ್ರದೇಶಗಳಲ್ಲಿ 64,707 ಕಚ್ಚಾ/ಸೆಮಿಪಕ್ಕಾ/ ಗುಡಿಸಲು ಹೊಂದಿರುವ ವಸತಿರಹಿತರು ಇದ್ದಾರೆ. ಇಲ್ಲಿಯೂ ಸಹ 8,549 ಮನೆಗಳು ಪೂರ್ಣಗೊಂಡಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ತುರ್ತಾಗಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಆಗ್ರಹಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ವಿಷಯದ ಬಗ್ಗೆ ದಿನಾಂಕ:12.08.2025 ರಂದು ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಸಂಪಾದಕೀಯದ ನಕಲು ಪ್ರತಿಯನ್ನು ಲಗತ್ತಿಸಿರುತ್ತೇನೆ. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಔ) ವಿಷಯ:- ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವ ಕುರಿತು

\- - -

ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ದಿನಾಂಕ 11.08.2025ರ "ಹೊಸದಿಗಂತ" ದಿನಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸುಳ್ಳು, ಸುದ್ದಿ ಹರಡುತ್ತಿರುವುದು ವಿಷಾದನೀಯ. ಇದು ತಪ್ಪು ಮಾಹಿತಿಯಿಂದ ಕೂಡಿದ್ದು, ಈ ವಿಷಯವನ್ನು ಗೃಹ ಇಲಾಖೆ ಗಂಭೀರವಾಗಿ ಪರಿಗಣಿಸಬೇಕಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಸ್ವಾತಂತ್ರ ಹೋರಾಟಗಾರರ ನಡುವೆ ಇದ್ದ ಸಮನ್ವಯಕ್ಕೆ ಹಲವು ಸಾಕ್ಷಿಗಳು ಇವೆ. ಡಾ॥ ಕೇಶವ್ ಬಲಿರಾಂ ಹೆಗಡೆವಾರ್ ಅವರು ಸಂಘವನ್ನು ಸ್ಥಾಪಿಸಿದ ನಂತರ ಕೇವಲ 15 ವರ್ಷಗಳಲ್ಲಿ ಅದನ್ನು ಬಲಿಷ್ಠ ಸಂಘಟನೆಯನ್ನಾಗಿ ಬೆಳೆಸಿದರು. ಸಮಾಜ ಸುಧಾರಣೆ ಮತ್ತು ಸೇವೆಯ ಮೂಲಕ ಸಂಘಟನೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ಆಯಾಮ ನೀಡಿದರು. ಡಾ॥ ಕೇಶವ್ ಬಲಿರಾಂ ಹೆಗಡೆವಾರ್‌ರವರು ಚಿಕ್ಕಂದಿನಿಂದಲೇ ಹಲವು ಕ್ರಾಂತಿಕಾರಿ ಚಿಂತನೆಗಳ ಮೂಲಕ ಬ್ರಿಟಿಷರ ನಿದ್ದೆಗಡೆಸಿದ್ದರು. ಯುಗಾಂತರ ಹಾಗೂ ಅನುಶೀಲನ ಸಮಿತಿಯಂತಹ ಕ್ರಾಂತಿಕಾರಿ ಸಂಘಟನೆಗಳಲ್ಲಿ ಪಾಂಡುರಂಗ ಖಾನಕೋಜಿ, ಅರವಿಂದರು, ವಾರೀಂದ್ರ, ಘೋಷ್, ತೈಲೋಕ್ಯನಾಥ ಚಕ್ರವರ್ತಿ, ಅರವಿಂದರು, ಮೊದಲಾದವರ ಜೊತೆ ಸಹವರ್ತಿಗಳಾಗಿ ಕಾರ್ಯನಿರ್ವಹಿಸಿದ್ದರು. 1928ರಲ್ಲಿ ಭಾರತಕ್ಕೆ ಬಂದ ಸೈಮನ್ ಕಮಿಷನ್ ವಿರುದ್ಧವಾಗಿ ನಾಗ್ಪುರದಲ್ಲಾದ ಹರತಾಳ ಪ್ರದರ್ಶನಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕರ ಮುಂದಾಳಾಗಿದ್ದರು. ಭಗತ್ ಸಿಂಗ್, ರಾಜ್‌ಗುರು, ಮದನ ಮೋಹನ ಮಾಲವೀಯರವರು ಕೂಡ ಸಂಘದ ಕಾರ್ಯಕರ್ತರ ಜೊತೆಗೆ ನಂಟನ್ನು ಹೊಂದಿದ್ದರು. ಪ್ರಥಮ ಮಹಾಯುದ್ಧದ ವೇಳೆ ಸಂಪೂರ್ಣ ಭಾರತದ ಸೈನಿಕರ ಛಾವಣಿಗಳಲ್ಲಿ ರಾಸ್ ಬಿಹಾರಿ ಬೋಸ್ ಹಾಗೂ ಶಚೀಂದ್ರ ಸನ್ಯಾಲ್ ಅವರ ನೇತೃತ್ವದಲ್ಲಿ 1915ರಲ್ಲಿ ನಡೆದ ಕ್ರಾಂತಿಯಲ್ಲಿ ಮಧ್ಯ ಭಾರತದ ಪ್ರಮುಖರಾಗಿ ಡಾ॥ ಕೇಶವ್ ಬಲಿರಾಂ ಹೆಗಡೆವಾರ್ ಅವರು ಕಾರ್ಯ ನಿರ್ವಹಿಸಿದ್ದರು. ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸುವಲ್ಲಿ ಕೂಡ ಸಂಘದ ಪಾತ್ರವಿದ್ದು ಎಂ.ಎಸ್. ಗೋಲ್ವಾಲ್ಕರ್ (ಗುರೂಜಿ) ಅವರು ರಾಜ ಹರಿಸಿಂಗ್ ಅವರನ್ನು ಮನವೊಲಿಸಿದ್ದರು. ಹೈದರಬಾದನ್ನು ಭಾರತದೊಂದಿಗೆ ಸೇರಿಸಿಕೊಳ್ಳಲು ಸಂಘದ ಸ್ಥಾನೀಯ ಕಾರ್ಯಕರ್ತರ ಪಾತ್ರ ಬಹುಮುಖ್ಯವಾಗಿದೆ. ಗೋವಾ ಮತ್ತು ದಾದರ್‌ನಗರ ಹವೇಲಿಯನ್ನು ಪೋರ್ಚುಗೀಸರಿಂದ ಬಿಡುಗಡೆಗೊಳಿಸುವಲ್ಲಿ ಕೂಡ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರ ಪಾತ್ರ ಮಹತ್ವದ್ದಾಗಿದೆ. ಚೆಂಗಲ್ ಸತ್ಯಾಗ್ರಹದಲ್ಲಿ ಜೈಲುಪಾಲಾದ ಡಾ॥ ಕೇಶವ್ ಬಲಿರಾಂ ಹೆಗಡೆವಾರ್ ಅಲ್ಲಿಯೇ ಬೌದ್ಧಿಕ ನಡೆಸಿ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚನ್ನು ಹೆಚ್ಚಿಸಿದರು. 1925ರ ವಿಜಯ ದಶಮಿಯಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸ್ಥಾಪಿಸುವಾಗ ಡಾ॥ ಕೇಶವ್ ಬಲಿರಾಂ ಹೆಗಡೆವಾರ್ ಅವರ ಉದ್ದೇಶ ಸ್ವರಾಜ್ಯವೇ ಆಗಿತ್ತು. ಸಂಘದ ಸ್ವಯಂ ಸೇವಕರಿಗೆ ನೀಡಲಾಗುತ್ತಿದ್ದ ಪ್ರತಿಜ್ಞೆಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಲು ತನು-

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನ, ಧನ ಪ್ರಾಮಾಣಿಕವಾಗಿ ಜೀವನ ಪರ್ಯಂತ ಪ್ರಯತ್ನಿಸುತ್ತೇನೆ ಎಂಬ ಸಂಕಲ್ಪ ಇರುತ್ತಿತ್ತು ಎಂಬುದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅ೦) ವಿಷಯ:- ರಾಜ್ಯದ ವಿವಿಧ ಭಾಗಗಳಲ್ಲಿ ಹಸುಗಳ ಹತ್ಯೆ, ಕತ್ತು ಕೊಯ್ಯುವುದು, ಕೆಚ್ಚಲು ಕತ್ತರಿಸುವಂತಹ ಅಮಾನುಷ ಕೃತ್ಯಗಳು ನಡೆದಿರುವ ಕುರಿತು

\- - -

ಶ್ರೀ ಸಿ.ಟಿ. ರವಿ(ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಇಂದಿನ "ಕನ್ನಡಪ್ರಭ" ದಿನಪತ್ರಿಕೆಯಲ್ಲಿ "ಮತ್ತೆ ಗೋವುಗಳ ತಲೆ ಕತ್ತರಿಸಿ ದುಷ್ಕರ್ಮಿಗಳಿಂದ ಹೀನ ಕೃತ್ಯ" ಎಂಬ ಶಿರೋನಾಮೆಯಡಿ ಪ್ರಕಟವಾಗಿರುವ ವರದಿಯನ್ನು ಪ್ರಸ್ತಾಪಿಸಲು ಬಯಸುತ್ತೇನೆ.

ರಾಜ್ಯದ ವಿವಿಧೆಡೆ ಹಸುಗಳ ಹತ್ಯೆ, ಕತ್ತು ಕೊಯ್ಯುವುದು, ಕೆಚ್ಚಲು ಕತ್ತರಿಸುವಂಥ ಅಮಾನುಷ ಕೃತ್ಯಗಳು ಮುಂದುವರಿದಿದ್ದು, ಇದೀಗ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನ ಅರಳಸಂದ್ರ ಗ್ರಾಮದಲ್ಲಿ ಎರಡು ಹಳ್ಳಕಾರ್ ನಾಟಿ ಹೋರಿಗಳ ಕತ್ತು ಕೊಯ್ದಿರುವ ದುಷ್ಕೃತ್ಯ ಬೆಳಕಿಗೆ ಬಂದಿದೆ. ಬೆಂಗಳೂರು-ತುಮಕೂರು ರಾಷ್ಟ್ರೀಯ ಹೆದ್ದಾರಿ 48 ರಿಂದ 2 ಕಿಲೋ ಮೀಟರ್ ದೂರದ ಕುಮುದ್ವತಿ ನದಿಗೆ ಅಡ್ಡಲಾಗಿ ಅರಳಸಂದ್ರದ ಬಳಿ ನಿರ್ಮಿಸಿರುವ ಸೇತುವೆಯ ಮೇಲೆ ಕತ್ತು ಕೊಯ್ದ ಸ್ಥಿತಿಯಲ್ಲಿ ಎರಡು ಹೋರಿಗಳು ಪತ್ತೆಯಾಗಿವೆ. ಸ್ಥಳದಲ್ಲಿ ಯಾವುದೇ ರಕ್ತದ ಕಲೆಗಳು ಇಲ್ಲದಿರುವುದನ್ನು ಗಮನಿಸಿದಲ್ಲಿ, ಬೇರೆ ಕಡೆ ಕತ್ತು ಕೋಯ್ದು ಈ ಸ್ಥಳದಲ್ಲಿ ಎಸೆದುಹೋಗಿರುವುದು ಖಚಿತವಾಗಿದೆ. ಇದೇ ಸ್ಥಳದಲ್ಲಿ ಈ ಹಿಂದೆಯೂ ಸಹ ಸತ್ತ ಹಸುಗಳನ್ನು ಎಸೆದು ಹೋಗಿದ್ದ ಘಟನೆ ನಡೆದಿದೆ. ಈ ಹತ್ಯೆಗಳು ಅಕ್ರಮವಾಗಿ ಗೋವು ಸಾಗಣೆ ಮಾಡುವವರ ಕೃತ್ಯವೇ ಆಗಿದೆ.

ರಾಜ್ಯದಲ್ಲಿ ಪದೇ ಪದೆ ಈ ರೀತಿ ಹಸುಗಳ ಮೇಲೆ ವಿಕೃತಿ ಮೆರೆಯುವ ಪ್ರಕರಣಗಳು ನಡೆಯುತ್ತಲೇ ಇವೆ. ಬೆಂಗಳೂರು, ಚಿಕ್ಕಮಗಳೂರು ಸೇರಿದಂತೆ ಇಡೀ ರಾಜ್ಯಾದ್ಯಂತ ಹಸುವಿನ ಕೆಚ್ಚಲು ಕೊಯ್ದ ಪ್ರಕರಣಗಳು ಮಾಸುವ ಮುನ್ನವೇ ಮತ್ತೆ ಈ ಪ್ರಕರಣ ನಡೆದಿರುವುದು ಬಹುಸಂಖ್ಯಾತ ಹಿಂದೂಗಳ ಭಾವನೆಯನ್ನು ಕೆರಳಿಸುವ ಹುನ್ನಾರವಾಗಿದೆ. ರಾಜ್ಯ ಸರ್ಕಾರ ಈ ರೀತಿ ಗೋವುಗಳ ಮೇಲೆ ವಿಕೃತಿ ಮೆರೆಯುವವರನ್ನು ಬಂಧಿಸಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

04. ಮಾನ್ಯ ಸಹಕಾರ ಸಚಿವರನ್ನು ಸಚಿವ ಸಂಪುಟ ಸ್ಥಾನದಿಂದ ವಜಾಗೊಳಿಸಿರುವ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೋರಿ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರಿಂದ ಉತ್ತರ ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ.

ಸಭಾಪತಿಯವರು:- ಹೌದು.

ಶ್ರೀ ಸಲೀಂ ಅಹ್ಮದ್(ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಇದು ಯಾವ ವಿಷಯ?

ಸಭಾಪತಿಯವರು:- ಈ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ಪ್ರಸ್ತಾಪ ಮಾಡಿದ್ದರು. ಹಾಗಾಗಿ, ಈಗ ಅವರಿಗೆ ಅವಕಾಶ ನೀಡಿರುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾಗಿದ್ದಂತಹ ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣನವರು...

ಶ್ರೀ ಸಲೀಂ ಅಹ್ಮದ್:- ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನಾವು ಆಗಲೇ ಹೇಳಿರುತ್ತೇವೆ. ಅಲ್ಲದೇ, ಈ ವಿಷಯವನ್ನು ಪ್ರಸ್ತಾಪ ಮಾಡುವ ವೇದಿಕೆ ಇದಲ್ಲ. ಇದು Governor ರವರ Secretary ಯ statement ನ್ನು...

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ನಾನು ಆಗಲೇ ಈ ವಿಷಯವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಸಭಾನಾಯಕರು ಬಂದ ನಂತರ ತಮಗೆ ಅವಕಾಶ ನೀಡುತ್ತೇನೆಂದು ಹೇಳಿರುತ್ತೀರಿ.

ಸಭಾಪತಿಯವರು:- ಈ ಬಗ್ಗೆ ನಾನು ಈಗಾಗಲೇ ಮಾತು ಕೊಟ್ಟಿರುತ್ತೇನೆ.

ಶ್ರೀ ಸಲೀಂ ಅಹ್ಮದ್:- ಮಾನ್ಯ ಸಭಾಪತಿಯವರೇ, ಈ ಬಗ್ಗೆ ಅವರು ಮೊದಲು ಲಿಖಿತ ರೂಪದಲ್ಲಿ ತಮಗೆ ನೋಟಿಸ್ ನೀಡಲಿ. ಆ ನಂತರ, ಈ ವಿಷಯ ಚರ್ಚೆ ಮಾಡೋಣ.

ಸಭಾಪತಿಯವರು:- ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯ ಪ್ರಸ್ತಾಪಿಸಲು ನಾನು ಈಗಾಗಲೇ ಅನುಮತಿ ನೀಡಿರುತ್ತೇನೆ. ಆದುದರಿಂದ, ಅವರು ಈಗ ಮಾತನಾಡಲಿ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಮಾನ್ಯ ಕ್ಯಾತ್ಸಂದ್ರ ಎನ್. ರಾಜಣ್ಣನರನ್ನು ಸಂಪುಟದಿಂದ ವಜಾಗೊಳಿಸಲಾಗಿದೆ ಎಂದು ಇಂದಿನ ಎಲ್ಲಾ ದಿನಪತ್ರಿಕೆಗಳಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರದಿಯಾಗಿರುತ್ತದೆ. **(ಗೊಂದಲ)** ಈ ವಿಷಯ ಎಲ್ಲಾ ದಿನಪತ್ರಿಕೆಗಳಲ್ಲಿ ವರದಿಯಾದ ನಂತರ, ಯಾವ ಕಾರಣಕ್ಕೆ ಅವರನ್ನು ವಜಾಗೊಳಿಸಲಾಗಿದೆ ಎನ್ನುವಂತಹದ್ದನ್ನು ಜನರಿಗೆ ತಿಳಿಸಬೇಕಾಗುತ್ತದೆ. ಒಬ್ಬ ಶಾಸಕರಾದರೆ, ಅವರು ಕ್ಷೇತ್ರಕ್ಕೆ ಸೀಮಿತರಾಗಿರುತ್ತಾರೆ. ಆದರೆ, ಒಬ್ಬ ಮಂತ್ರಿಯಾದವರು ಇಡೀ ರಾಜ್ಯಕ್ಕೆ ಸೀಮಿತರಾಗಿರುತ್ತಾರೆ. ಆ ರೀತಿ ಅವರು ಇಡೀ ರಾಜ್ಯಕ್ಕೆ ಮಂತ್ರಿಗಳಾಗಿರುವುದರಿಂದ, ಯಾವ ಕಾರಣಕ್ಕೆ ಅವರನ್ನು ವಜಾಗೊಳಿಸಲಾಗಿದೆ ಎನ್ನುವಂಥದ್ದನ್ನು ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥದ್ದು ಸೂಕ್ತವಾದ ವಿಷಯವಾಗಿರುತ್ತದೆ. ಈ ರೀತಿ ಯಾವುದೇ ಘಟನೆ ನಡೆದಾಗ ಸದನದಲ್ಲಿ ಪ್ರಸ್ತಾಪವಾಗಬೇಕು. ಉದಾಹರಣೆಗೆ, ಈ ಹಿಂದೆ ಬಾಬಾ ಸಾಹೇಬ್ ಡಾ॥ ಬಿ.ಆರ್. ಅಂಬೇಡ್ಕರ್‌ರವರು ರಾಜೀನಾಮೆ ಕೊಟ್ಟಾಗ ಪಾರ್ಲಮೆಂಟ್‌ನಲ್ಲಿ ಅವರು ನಿಂತು ಯಾವ ಕಾರಣಕ್ಕಾಗಿ ರಾಜೀನಾಮೆ ನೀಡುತ್ತಿದ್ದೇನೆಂದು ಹೇಳುತ್ತಾರೆ. ಇದು ಪದ್ಧತಿ ಇದೆ. ಒಂದು ವೇಳೆ ಮಾನ್ಯ ಸಚಿವರು ವೈಯಕ್ತಿಕವಾಗಿ ರಾಜೀನಾಮೆ ಕೊಟ್ಟರೆ, ಅದನ್ನು ಕೇಳುವಂಥ ಪ್ರಶ್ನೆ ಇರುವುದಿಲ್ಲ. ಆದರೆ, ವಜಾಗೊಳಿಸಲಾಗಿದೆ ಎಂದರೆ ಅದಕ್ಕೆ ಕಾರಣವೇನು? ಹಲವು ಸಂದರ್ಭಗಳಲ್ಲಿ ಮಾನ್ಯ ಸಚಿವರನ್ನು ವಜಾಗೊಳಿಸಬಹುದಾಗಿರುತ್ತದೆ. ಮಾನ್ಯ ಸಚಿವರು ಭ್ರಷ್ಟಾಚಾರದಲ್ಲಿದ್ದರಾ? ಆ ಕಾರಣಕ್ಕೆ ಏನಾದರೂ ಅವರನ್ನು ವಜಾಗೊಳಿಸಲಾಗಿದೆಯೇ? ಅಥವಾ ಏನೋ ಮಾಡಬಾರದಂತಹ ಹೀನ ಕೃತ್ಯವನ್ನೇನಾದರೂ ಅವರು ಮಾಡಿದ್ದರಾ? ಆ ಕಾರಣಕ್ಕೆ ಅವರನ್ನು ವಜಾಗೊಳಿಸಲಾಗಿದೆಯೇ? ಅಥವಾ ದಿನಪತ್ರಿಕೆಗಳಲ್ಲಿ ವರದಿಯಾಗಿರುವಂತೆ, "ಕಾಂಗ್ರೆಸ್ ಉಸ್ತುವಾರಿ ಶ್ರೀ ರಣದೀಪ್ ಸಿಂಗ್ ಸುರ್ಜೇವಾಲಾರವರು ಮಾನ್ಯ ಸಚಿವರು ಮತ್ತು ಶಾಸಕರ ಸಭೆ ಕರೆದಿದ್ದರ ವಿರುದ್ಧ ಬಹಿರಂಗ ಆಕ್ರೋಶ ವ್ಯಕ್ತಪಡಿಸಿದ್ದರು" ಎಂದು ಹೇಳಿದ್ದರು. ಆ ಕಾರಣಕ್ಕೆ ಅವರನ್ನು ವಜಾಗೊಳಿಸಲಾಗಿದೆಯೇ? ರಾಜ್ಯದ 48 ರಾಜಕೀಯ ನಾಯಕರ ವಿರುದ್ಧ ಹನಿಟ್ರ್ಯಾಪ್ ಮಾಡಲಾಗಿದೆ ಎಂಬ ಮಾತನ್ನು ಅವರು ಹೇಳಿದ್ದರು. ಆ ಕಾರಣಕ್ಕೆ ಅವರನ್ನು ವಜಾಗೊಳಿಸಲಾಗಿದೆಯೇ? ಅಥವಾ ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಶ್ರೀ ಡಿ.ಕೆ. ಶಿವಕುಮಾರ್‌ರವರನ್ನು ಬದಲಾಯಿಸಬೇಕೆಂದು ಹೇಳಿದ್ದರು. ಆ ಕಾರಣಕ್ಕೆ ಅವರನ್ನು ವಜಾಗೊಳಿಸಲಾಗಿದೆಯೇ? ಅಥವಾ ರಾಜ್ಯದಲ್ಲಿ ಸಮುದಾಯಕ್ಕೆ ಒಬ್ಬರಂತೆ ಐದು ಡಿಸಿಎಂ ಹುದ್ದೆಗಳನ್ನು ಸೃಷ್ಟಿಸಬೇಕೆಂದಿದ್ದರು. ಆ ಕಾರಣಕ್ಕೆ ಅವರನ್ನು ವಜಾಗೊಳಿಸಲಾಗಿದೆಯೇ? ಈ ರೀತಿ ಅನೇಕ ವಿಚಾರಗಳು ಬರುತ್ತವೆ. ಇನ್ನೊಂದು ವಿಚಾರವೇನೆಂದರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನ ನಡೆದಿದೆ ಎಂದು ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಕೇಂದ್ರ ನಾಯಕರು ಬೆಂಗಳೂರಿಗೆ ಆಗಮಿಸಿ, ಇಲ್ಲಿ ಧರಣಿ ಮಾಡಿದ್ದರು. ಆ ಸಂದರ್ಭದಲ್ಲಿ ಮಾನ್ಯ ಸಚಿವರು ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ, ನಮ್ಮ ಸರ್ಕಾರ ಅಧಿಕಾರದಲ್ಲಿ ಇರುವಾಗಲೇ ವೋಟರ್ ಲಿಸ್ಟ್ ಆಗಿದೆ. ಇದನ್ನು ಏತಕ್ಕೆ ದೊಡ್ಡದು ಮಾಡುತ್ತೀರಿ? ನಮಗೂ ಕೂಡ ಇದರಲ್ಲಿ ಜವಾಬ್ದಾರಿ ಇದೆ ಎಂದು ಹೇಳಿದ್ದರು. ಅಂದರೆ, ಅವರು ಸತ್ಯ ಹೇಳಿದ್ದರು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):-

ನಮ್ಮ ಕಡೆ ಒಂದು ಗಾದೆ ಮಾತು ಹೇಳುತ್ತಾರೆ. ಅದನೇಂದರೆ, "ಸತ್ಯ ಹೇಳಿದವನನ್ನು ಹತ್ಯೆ ಮಾಡು" ಆ ರೀತಿ ಏನಾದರೂ ಸತ್ಯ ಹೇಳಿದ್ದಕ್ಕೆ ಹತ್ಯೆಯೇ ಇದು? ಯಾವ ಕಾರಣಕ್ಕೆ ಈ ರೀತಿ ಮಾಡಿದ್ದೀರಿ ಎನ್ನುವುದನ್ನು ಈ ಸಭೆಯ ಮೂಲಕ ಜನರಿಗೆ ತಿಳಿಸಬೇಕಾದಂತಹ ಒಂದು ಜವಾಬ್ದಾರಿ ಇದೆ. ಆದುದರಿಂದ, ದಯಮಾಡಿ ಈ ವಿಷಯವನ್ನು ತಿಳಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಭಾನಾಯಕರಲ್ಲಿ ವಿನಂತಿಸುತ್ತೇನೆ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಂತ್ರಿಗಳನ್ನು ನೇಮಕಾತಿ ಮಾಡುವಂಥದ್ದು, ರಾಜೀನಾಮೆ ತೆಗೆದುಕೊಳ್ಳುವಂಥದ್ದು, ವಜಾಗೊಳಿಸುವಂಥದ್ದು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿರುವಂತಹ ವಿಚಾರವಾಗಿರುತ್ತದೆ. ಆ ದಿಸೆಯಲ್ಲಿ ಇದನ್ನು ಮಾಡಿರುವಂಥದ್ದಾಗಿದೆ. ಹಾಗಾಗಿ, ಇದಕ್ಕೆ ವಿವರಣೆ ನೀಡಬೇಕಾದಂತಹ ಅವಶ್ಯಕತೆ ಇಲ್ಲವೆಂದು ನಾನು ತಿಳಿದುಕೊಂಡಿರುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಇದು ಜಾರಿಕೆಯ ಉತ್ತರವಾಗಿದೆ.

(ಗೊಂದಲ)

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತರಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಉತ್ತರ ಕೊಟ್ಟಾಗಿದೆ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಇದು ಮಾನ್ಯ ಮುಖ್ಯಮಂತ್ರಿಗಳ ಪರಮಾಧಿಕಾರ ಇರಬಹುದು. ಆದರೆ,

(ಗೊಂದಲ)

ಸಭಾಪತಿಯವರು:- ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

(646)12.8.2025/3.20/ಎಂ.ಎಂ-ವಿ.ಕೆ

(ಸದನವು ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆ 27 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಮಾನ್ಯ ಸಚಿವರಾದ ಶ್ರೀ ಕೆ.ಎನ್. ರಾಜಣ್ಣನವರ ಬಗ್ಗೆ ಪ್ರಸ್ತಾಪ ಮಾಡಿದ್ದೆ.

ಸಭಾಪತಿಯವರು:- ಇದಕ್ಕೆ ಉತ್ತರ ಕೊಟ್ಟಿದ್ದಾರಲ್ಲವೇ?

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಇದಕ್ಕೆ ಇನ್ನೂ ಉತ್ತರ ಕೊಟ್ಟಿಲ್ಲ. ನಾನು ಮಾತನಾಡುತ್ತಿರಬೇಕಾದರೆ ತಾವು ಸದನವನ್ನು adjourn ಮಾಡಿದಿರಿ. ನಾನು ಒಪ್ಪುತ್ತೇನೆ, 'It is the prerogative of the Chief Minister'. ಯಾವಾಗ ಎಂದರೆ ನೀವು ಸಚಿವರನ್ನು ನೇಮಕ ಮಾಡುವಾಗ. ಆದರೆ ಅವರೇ ರಾಜೀನಾಮೆ ಕೊಟ್ಟರೆ ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ವಜಾಗೊಳಿಸಲಾಗಿದೆ ಎಂದು ಬಂದಿರುವುದಕ್ಕೆ ಕಾರಣವನ್ನು ಸದನಕ್ಕೆ ಕೊಡಬೇಕಾಗುತ್ತದೆ. ಇದು ನಮ್ಮ ಹಕ್ಕು ಕೂಡ ಆಗಿದೆ. ನಾನು ಆಗಲೇ ಹೇಳಿದ್ದೇನೆ. ಶಾಸಕರಾದವರು ಕ್ಷೇತ್ರಕ್ಕೆ, ಮಂತ್ರಿಯಾದವರು ರಾಜ್ಯಕ್ಕೆ. ವಜಾಗೊಳಿಸುವುದಕ್ಕೆ ಕಾರಣವೇನೆಂದು ರಾಜ್ಯದ ಜನರು ಕೇಳುತ್ತಾರೆ. ಇವತ್ತು ಪತ್ರಿಕೆಯಲ್ಲಿ ಬೇರೆ ಬೇರೆ ವಿಧದಲ್ಲಿ ಬಂದಿದೆ. **[XXX]** ಆದೇಶ ಮಾಡಿದ್ದಾರೆ ಅದಕ್ಕೆ ವಜಾಗೊಳಿಸಲಾಗಿದೆ ಎಂದು ಬಂದಿದೆ. **[XXX]** ಸರ್ಕಾರವನ್ನು ನಡೆಸುವುದಿಲ್ಲ.

ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಇದು ಸಂಬಂಧವಿರುವ ವಿಷಯವಲ್ಲ. ಸರ್ಕಾರದ ಪರವಾಗಿ ಹೇಳಿದ್ದಾರೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಇದು ಸಂಬಂಧವಿರುವ ವಿಷಯವೇ ಆಗಿದೆ.

ಶ್ರೀ ಎನ್.ಎಸ್. ಬೋಸರಾಜು:- ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರದ ಪರವಾಗಿ ಎಲ್ಲವನ್ನೂ ಹೇಳಿದ್ದೇವೆ. ಇದು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿರುವಂತಹದ್ದು. ಅವರು ರಾಜೀನಾಮೆ ತೆಗೆದುಕೊಳ್ಳಬಹುದು, ನೇಮಕಾತಿ ಮಾಡಬಹುದು ಹಾಗೂ ವಜಾ ಮಾಡಬಹುದು. ಅದು ಅವರಿಗಿರುವಂತಹ discretionary power. ಅದರ ಪ್ರಕಾರ ಮಾಡಿರುವಂತಹದ್ದು. ಇದರ ಬಗ್ಗೆ ಇನ್ನೂ ಹೆಚ್ಚಿನ ವಿವರಣೆ ನೀಡುವ ಅವಶ್ಯಕತೆ ಇಲ್ಲವೆಂದು ಹೇಳುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ನಾನು ಅದನ್ನೇ ಕೇಳುತ್ತಿದ್ದೇನೆ. ಅದು ಅವರ ವಿವೇಚನೆಗೆ ಬಿಟ್ಟದ್ದೇ ಆಗಿದೆ. ಆದರೆ ಅದಕ್ಕೆ ಕಾರಣವನ್ನು ಹೇಳಬೇಕು. ಈಗ ನಾವೆಲ್ಲಾ ರೈತರು. ಗಂಧದ ಸಸಿಗಳನ್ನು ನೆಡುವಾಗ ಯಾರೂ ಕೇಳುವುದಿಲ್ಲ. ಆದರೆ ಅದನ್ನು ತೆಗೆಯಬೇಕಾದರೆ ಅದಕ್ಕೆ ಅನುಮತಿ ಬೇಕು. ಜೊತೆಗೆ ಕಾರಣವೂ ಬೇಕು. ಗಂಧದ ಮರಗಳು ದೊಡ್ಡದಾಗಿ ಬೆಳೆದಿವೆ. ರೈತನಾಗಿ ನಾನು ಅದನ್ನು ಕಡಿಯುವುದಕ್ಕೆ ಆಗುತ್ತದೆಯೇ? ಆಗುವುದಿಲ್ಲ. ಆ ರೀತಿ ನೀವು ಅವರನ್ನು ಸಚಿವರನ್ನಾಗಿ ತೆಗೆದುಕೊಳ್ಳುವಾಗ ನಾವು ಏನನ್ನೂ ಕೇಳಲಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ವಜಾಗೊಳಿಸಿದ ಮೇಲೆ ನಾವು ಅದನ್ನು ಕೇಳಬೇಕು. ಅದು ನಮ್ಮ ಹಕ್ಕು.

ಶ್ರೀ ಸಲೀಂ ಅಹಮದ್:- ನೀವು ಬೆಳಗ್ಗೆ ಉತ್ತರ ಬೇಕೆಂದು ಕೇಳಿದಿರಿ, ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಅದು ಉತ್ತರವಲ್ಲ. (**ಗೊಂದಲ**) ಅವರು ಭ್ರಷ್ಟಾಚಾರ ಮಾಡಿದ್ದಾರೆಯೇ? ಭ್ರಷ್ಟಾಚಾರ ಮಾಡಿದ್ದರೆ ಅವರನ್ನು ವಜಾಗೊಳಿಸುವುದಲ್ಲ, ಅರೆಸ್ಟ್ ಮಾಡಬೇಕು. ಅವರು ಭ್ರಷ್ಟಾಚಾರ ಮಾಡಿದ್ದಾರೆಯೇ ಎಂಬುದನ್ನು ತಿಳಿಸಿ.

ಡಾ: ಎಂ.ಸಿ. ಸುಧಾಕರ್ (ಉನ್ನತ ಶಿಕ್ಷಣ ಸಚಿವರು):- ಮಾನ್ಯ ಸಭಾಪತಿಯವರೇ, ಮಂತ್ರಿಯಾಗಿ ಆಯ್ಕೆ ಮಾಡುವ ವಿವೇಚನೆ ಮಾನ್ಯ ಮುಖ್ಯಮಂತ್ರಿಗಳಿಗಿದೆ. ಅವರನ್ನು ತೆಗೆಯುವಂತಹ ನಿರ್ಣಯ ಕೂಡ ಮಾನ್ಯ ಮುಖ್ಯಮಂತ್ರಿಗಳಿಗಿರುತ್ತದೆ. ವಿರೋಧ ಪಕ್ಷದ ನಾಯಕರನ್ನು ಕೇಳಿ ಮಂತ್ರಿಗಳನ್ನು ಆಯ್ಕೆ ಮಾಡುವುದಿಲ್ಲ.

(ಗೊಂದಲ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಕಾರಣ ಇದಲ್ಲ. **[xxx]** (**ಗೊಂದಲ**) ಮತಗಳ್ಳತನ ವಿಚಾರದಲ್ಲಿ ಮಾನ್ಯ ರಾಜಣ್ಣನವರು (**ಗೊಂದಲ**) ಮಾಡಿದರು ಎಂದು ಹೇಳಿದರು.

ಡಾ: ಎಂ.ಸಿ. ಸುಧಾಕರ್:- ಅದು ಪಕ್ಷದ ಮತ್ತು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟದ್ದು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಅದಕ್ಕೇನಾದರೂ ನೀವು ಅವರನ್ನು ತೆಗೆದಿದ್ದೀರಾ?

ಸಭಾಪತಿಯವರು:- ಒಂದು ನಿಮಿಷ ಕೇಳಿ.

(ಮುಂದು)

(647) 12.08.2025 3.30 ಹೆಚ್‌ವಿ.ವಿಕೆ (ಸಭಾಪತಿಯವರ ಉಪಸ್ಥಿತಿ)

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ(ಸಾರಿಗೆ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ವಿಧಾನಸಭಾ ಸದಸ್ಯರಾಗಿದ್ದ **[xxx]** ಅವರನ್ನು ಭಾರತೀಯ ಜನತಾ ಪಕ್ಷದವರು ಪಕ್ಷದಿಂದಲೇ ಉಚ್ಚಾಟನೆ ಮಾಡಿದ್ದಾರೆ. ಅದನ್ನು ನಾವು ಹೇಳಬಹುದಲ್ಲವೇ?

[xxx] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಸಭಾಪತಿಯವರೇ, ಅವರು ಮಂತ್ರಿಗಳಾಗಿರಲಿಲ್ಲ, ಶಾಸಕರಾಗಿದ್ದರು.

(ಗೊಂದಲ)

ಸಭಾಪತಿಯವರು:- ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ.

(ಗೊಂದಲ)

ಶ್ರೀ ರಾಮಲಿಂಗಾ ರೆಡ್ಡಿ:- ಮೊನ್ನೆ ಭಾರತದ ಉಪರಾಷ್ಟ್ರಪತಿಗಳಾಗಿದ್ದ **[XXX]** ಅವರನ್ನು ಸಹ ಭಾರತೀಯ ಜನತಾ ಪಕ್ಷ ವಜಾ ಮಾಡಿದೆ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಅವರು ರಾಜಿನಾಮೆ ಕೊಟ್ಟಿದ್ದರು. ವಜಾ ಮಾಡಲಿಲ್ಲ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎನ್.ರಾಜಣ್ಣನವರ ರಾಜಿನಾಮೆಯನ್ನು ಸರ್ಕಾರ ತೆಗೆದುಕೊಂಡಿದ್ದರೆ ನಾವು ಇದರ ಬಗ್ಗೆ ಮಾತನಾಡುತ್ತಿರಲಿಲ್ಲ. ಅವರು ರಾಜಿನಾಮೆ ಕೊಡುವುದಕ್ಕೆ ಬಂದು; ಅದನ್ನು ಇವರು ತೆಗೆದುಕೊಂಡಿದ್ದರೆ ಈ ಪ್ರಸಂಗವೇ ಬರುತ್ತಿರಲಿಲ್ಲ. ನಾವು ಸುಮ್ಮನೆ ಕುಳಿತುಕೊಳ್ಳುತ್ತಿದ್ದೆವು.

ಡಾ॥ಎಂ.ಸಿ.ಸುಧಾಕರ್(ಉನ್ನತ ಶಿಕ್ಷಣ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಇವರ ಪಕ್ಷದ ಉಪಾಧ್ಯಕ್ಷರು ಒಂದು ವಾರದ ಮುಂಚೆ ನಮ್ಮ ಅವಧಿಯನ್ನು ಪೂರೈಸುತ್ತೇವೆಂದು ಹೇಳಿದ್ದರು.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಅವರನ್ನು ಏತಕ್ಕೋಸ್ಕರ ವಜಾ ಮಾಡಲಾಯಿತು ಎನ್ನುವುದೇ ನಮ್ಮ ಪ್ರಶ್ನೆಯಾಗಿದೆ.

(ಗೊಂದಲ)

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ಎಂ.ಸಿ.ಸುಧಾಕರ್:– ಸನ್ಮಾನ್ಯ ಸಭಾಪತಿಯವರೇ, ಇವರ ಪಕ್ಷದ ಉಪ ರಾಷ್ಟ್ರಪತಿಯವರು ಒಂದು ವಾರಕ್ಕೆ ಮುಂಚೆ "ನನ್ನ ಅವಧಿಯನ್ನು ಪೂರೈಸುತ್ತೇನೆ" ಎಂದು ಹೇಳಿದ್ದರು. ರಾತ್ರೋರಾತ್ರಿ ಅವರ ಬದಲಾವಣೆಯಾಗುತ್ತದೆ ಎಂದರೆ, ಯಾರು ಯಾವ ರೀತಿಯಲ್ಲಿ ಒತ್ತಡ ತಂದಿದ್ದರು ಎನ್ನುವುದನ್ನು ಅವರು ತಿಳಿಸಬೇಕಾಗಿದೆ.

ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ಸದನದ ಬಗ್ಗೆ ಪ್ರಶ್ನೆ ಮಾಡಿದರೆ ನನಗೇನೂ ಚಿಂತೆ ಇಲ್ಲ.

ಸಭಾಪತಿಯವರು:– ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಅವರು ಉತ್ತರವನ್ನು ಕೊಟ್ಟಿದ್ದಾರೆ. ಇದೇ ರೀತಿ ಉತ್ತರವನ್ನು ಕೊಡಿ ಎಂದು ಹೇಳುವುದಕ್ಕೆ ನನ್ನಿಂದಲೂ ಆಗುವುದಿಲ್ಲ. ಮಾನ್ಯ ಸಚಿವರು ರಾಜಿನಾಮೆ ಕೊಟ್ಟಿದ್ದಾರೆ ನಾವು ಅದನ್ನು ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. It is the prerogative power of the Chief Minister ಎಂದು ಹೇಳಿದ್ದಾರೆ

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಅವರು ರಾಜಿನಾಮೆ ಕೊಟ್ಟಿಲ್ಲ. ಅವರನ್ನು ಉಚ್ಚಾಟಿಸಲಾಗಿದೆ. ಒಬ್ಬ ಮಂತ್ರಿಯನ್ನು ಯಾವಯಾವ ಕಾರಣಕ್ಕಾಗಿ ಉಚ್ಚಾಟಿಸಲಾಗುತ್ತದೆ ಅಥವಾ ವಜಾಗೊಳಿಸಲಾಗಿದೆ. ವಜಾಗೊಳಿಸಬೇಕಾದರೆ ಕಾರಣಗಳು ಇರುತ್ತವೆ. ಅವರು corruption charges ನಲ್ಲಿ ಇರಬೇಕು. ಇಲ್ಲದಿದ್ದರೆ ಅವರದ್ದು ಏನಾದರೂ scandal ಇರಬೇಕು. ಹೀಗೆ ಯಾವ ಕಾರಣದ ಹಿನ್ನೆಲೆಯಲ್ಲಿ ಅವರನ್ನು ವಜಾಗೊಳಿಸಲಾಗಿದೆ ಎನ್ನುವುದನ್ನು ಅವರು ಹೇಳಬೇಕಾಗುತ್ತದೆ.

ಡಾ॥ಎಂ.ಸಿ.ಸುಧಾಕರ್:– ಸನ್ಮಾನ್ಯ ಸಭಾಪತಿಯವರೇ, "ಉಚ್ಚಾಟನೆ" ಮತ್ತು "ಕೈ ಬಿಡಲಾಗಿದೆ" ಎನ್ನುವ ಪದಗಳನ್ನು ಇಂಗ್ಲೀಷ್‌ನಲ್ಲಿ ಹೇಗೆ ಹೇಳಲಾಗುತ್ತದೆ? Removal ಎನ್ನುವುದಕ್ಕೆ ಕನ್ನಡ ಭಾಷೆಯಲ್ಲಿ ಏನು ಹೇಳುತ್ತಾರೆ? ಉಚ್ಚಾಟನೆ ಎನ್ನುವುದಕ್ಕೆ expulsion ಎಂದು ಹೇಳುತ್ತಾರೆ. ಇಲ್ಲಿ expulsion ಎಂದು ಇದೆಯೇ? ಅವರು "ಉಚ್ಚಾಟನೆ" ಎಂದು ಹೇಳುತ್ತಿದ್ದಾರೆ. ಘನತೆವೆತ್ತ ರಾಜ್ಯಪಾಲರ ಕಛೇರಿಯಿಂದ ಬಂದಿರುವ ಪತ್ರದಲ್ಲಿ removal ಎಂದು ಇದೆ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಕಛೇರಿಯಿಂದ ಬಂದಂತಹ ಪತ್ರದಲ್ಲಿ removed ಎಂದು ಇದೆ. ಇದರ ಅರ್ಥ "ತೆಗೆದು ಹಾಕಲಾಗಿದೆ" ಎಂದು.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್(ಭಾರಿ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಸಚಿವರು):– ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳನ್ನು ನೇಮಿಸುವ ಅಧಿಕಾರ ಮತ್ತು ತೆಗೆದು ಹಾಕುವಂತಹ ಅಧಿಕಾರ ಮಾನ್ಯ ಮುಖ್ಯಮಂತ್ರಿಗಳಿಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳನ್ನು ನೇಮಕ ಮಾಡುವ ಅಧಿಕಾರ ಅವರಿಗಿದೆ. ಆದರೆ, ಅವರನ್ನು ಅಧಿಕಾರದಿಂದ ತೆಗೆದು ಹಾಕುವುದಕ್ಕೆ ಕಾರಣವನ್ನು ಹೇಳಬೇಕಾಗುತ್ತದೆ. ಇದನ್ನು ನಾನು ಕೇಳುತ್ತಿಲ್ಲ; ರಾಜ್ಯದ ಜನತೆ ಹೇಳುತ್ತಿದ್ದಾರೆ.

ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು):– ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಜನತೆಗೆ ಎಲ್ಲವೂ ತಿಳಿದಿದೆ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ನಾವು ಇರುವುದೇ ಅವರಿಗಾಗಿ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:– ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳನ್ನು ನೇಮಿಸುವ ಅಧಿಕಾರ ಮತ್ತು ತೆಗೆದು ಹಾಕುವಂತಹ ಅಧಿಕಾರ ಮಾನ್ಯ ಮುಖ್ಯಮಂತ್ರಿಗಳಿಗಿರುತ್ತದೆ. ತೆಗೆದು ಹಾಕಿದ್ದಾರೆ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಅವರಿಗಿರುವ ಅಧಿಕಾರದ ಬಗ್ಗೆ ನಾವು ಪ್ರಶ್ನೆ ಮಾಡುತ್ತಿಲ್ಲ. ಆದರೆ, ಕಾರಣ ಬೇಕಾಗಿದೆ.

ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು):– ಸನ್ಮಾನ್ಯ ಸಭಾಪತಿಯವರೇ, ಕಾರಣ ಅವರಿಗ್ಯಾಕೆ ಬೇಕು?

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಕಾರಣ ಕೇಳುವುದಕ್ಕಾಗಿಯೇ ನಾವು ಇಲ್ಲಿರುವುದು. ನಾವು ಏತಕ್ಕೋಸ್ಕರ ಇಲ್ಲಿರುವುದು? ನಾವು ಕಾರಣ ಕೇಳುವುದಕ್ಕಾಗಿಯೇ ಇಲ್ಲಿರುವುದು. ನೀವು ಏತಕ್ಕೋಸ್ಕರ ಕಾರಣ ಕೇಳುತ್ತೀರಿ ಎನ್ನುವ ಅಧಿಕಾರ ಅವರಿಗಿಲ್ಲ.

(ಗೊಂದಲ)

ಶ್ರೀ ಎನ್.ಎಸ್.ಬೋಸ್‌ರಾಜು:– ಸನ್ಮಾನ್ಯ ಸಭಾಪತಿಯವರೇ, ಜನರು ನಮಗೆ ಆಶೀರ್ವಾದ ಮಾಡಿ ಕಳುಹಿಸಿಕೊಟ್ಟಿದ್ದಾರೆ. ನಮ್ಮನ್ನು ಇಲ್ಲಿ ಕೂಡಿಸಿದ್ದಾರೆ, ಅವರನ್ನು ಅಲ್ಲಿ ಕೂಡಿಸಿದ್ದಾರೆ. ನಾವು ಜನರಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ಜನರಿಗೆ ಏನು ಉತ್ತರ ಹೇಳಬೇಕೆನ್ನುವುದು ನಮಗೆ ಗೊತ್ತಿದೆ. ಜನರು ಏತಕ್ಕೋಸ್ಕರ ಅವರನ್ನು ಆ ಕಡೆ ಕೂರಿಸಿದ್ದಾರೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗಿದೆ. ಅವರು ಕೇಳುವ ರೀತಿಯಲ್ಲಿ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಇವರುಗಳು ಈ ರೀತಿಯಾಗಿ ಅವರ ಮೇಲೆ ಗದಾಪ್ರಹಾರ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಗ್ಗೆಯಿಂದ ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ನಮಗೊಂದು ಅವಕಾಶವನ್ನು ಮಾಡಿಕೊಡಿ ಎಂದು ಕೇಳಿಕೊಳ್ಳುತ್ತಿದ್ದರು. ತಾವು ಅವಕಾಶವನ್ನು ಮಾಡಿಕೊಟ್ಟು, ಮಾನ್ಯ ಸಭಾನಾಯಕರು ಬಂದು ಉತ್ತರವನ್ನು ಕೊಡುತ್ತಾರೆಂದು ಹೇಳಿದ ನಂತರ, ಮಾನ್ಯ ಸಭಾ ನಾಯಕರು ಬಂದು ಒಂದು ಸಾರಿ ಉತ್ತರ ಕೊಟ್ಟರು, ಎರಡು ಸಾರಿ ಉತ್ತರ ಕೊಟ್ಟರೂ ಸಹ ಅವರಿಗೆ ಸಮಾಧಾನವಾಗದಿದ್ದರೆ, ಈ ವಿಚಾರವನ್ನು ಅವರು ಬೇರೆ ರೂಪದಲ್ಲಿ ತೆಗೆದುಕೊಂಡು ಬರಬಹುದು. ಅದನ್ನು ಬಿಟ್ಟು ಯಾರು ಏನು ಮಾಡಿದರು; ಹೇಗೆ ಮಾಡಿದರು; ಯಾಕೆ ಮಾಡಿದರು ಎಂದು ಕೇಳಿದರೆ ಹೇಗೆ?

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಅವರು ಒಂದು ಸಾರಿ, ಎರಡು ಸಾರಿ, ಮೂರು ಸಾರಿ ಉತ್ತರ ಕೊಟ್ಟಿರುವುದು ಒಂದೇ ಉತ್ತರವಾಗಿದೆ.

ಶ್ರೀ ಸಲೀಂ ಅಹಮದ್:- ಸನ್ಮಾನ್ಯ ಸಭಾಪತಿಯವರೇ, ಅವರು ಹತ್ತು ಸಾರಿ, ನೂರು ಸಾರಿ ಕೇಳಿದರೂ ನಾವು ಒಂದೇ ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಕೇಶವ ಪ್ರಸಾದ್ ಎಸ್:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎನ್.ರಾಜಣ್ಣನವರ ಮೇಲೆ ಇರುವಂತಹ ಗುರುತರ ಆಪಾದನೆಯೇನು? ಎಸ್.ಟಿ., ಸಮುದಾಯಕ್ಕೆ ಸೇರಿದ ಒಬ್ಬ ಮಂತ್ರಿಯನ್ನು ಈ ರೀತಿ ನಡೆಸಿಕೊಳ್ಳುವುದು ಸರಿಯಲ್ಲ.

(ಗೊಂದಲ)

ಸಭಾಪತಿಯವರು:- ಈಗ ಮಾನ್ಯ ಹೆಚ್.ವಿಶ್ವನಾಥ್‌ರವರು ಮಾತನಾಡಬೇಕು.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್(ನಾಮ ನಿರ್ದೇಶಿತರು):- ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರದಲ್ಲಿ ಸಹಕಾರ ಸಚಿವರಾಗಿದ್ದ, ಹಿಂದುಳಿದ ವರ್ಗಕ್ಕೆ ಸೇರಿದಂತಹ ಮಾನ್ಯ ಕೆ.ಎನ್.ರಾಜಣ್ಣನವರನ್ನು ಸರ್ಕಾರದಿಂದ ಕಿತ್ತು ಹಾಕಲಾಗಿದೆ. ನಾನು "ಕಿತ್ತು ಹಾಕಲಾಗಿದೆ" ಎನ್ನುವ ಪದ ಪ್ರಯೋಗ ಮಾಡುತ್ತಿದ್ದೇನೆ. ಅವರನ್ನು ಸರ್ಕಾರದಿಂದ ಕಿತ್ತು ಹಾಕುವುದಕ್ಕೆ ಕಾರಣವೇನು? ಯಾಕೆಂದರೆ ಅದು ಅಷ್ಟು ಸುಲಭವಲ್ಲ. ಕಿತ್ತು ಹಾಕಿದರೆ ಏನು ಆಯಿತು ಎನ್ನುವುದು ಸರಿಯಲ್ಲ. ಇತ್ತೀಚಿನ ವರ್ಷಗಳಲ್ಲಿ ಏನಾಗುತ್ತಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಭಾರತೀಯ ಜನತಾ ಪಕ್ಷವಿರಬಹುದು, ಕಾಂಗ್ರೆಸ್ ಪಕ್ಷವಿರಬಹುದು, ಜನತಾ ದಳ(ಎಸ್)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಕ್ಷವಿರಬಹುದು, ಯಾವುದೇ ರಾಜಕೀಯ ಪಕ್ಷವಾಗಿರಬಹುದು ಆ ಪಕ್ಷದ ವರಿಷ್ಠ ನಾಯಕನನ್ನು ಯಾವುದೇ ಕಾರಣಕ್ಕೂ ಟೀಕೆ ಮಾಡಬಾರದು. ಒಂದು ವೇಳೆ ಟೀಕೆ ಮಾಡಿದರೆ, ಟೀಕೆ ಮಾಡಿದವನ ಕಥೆ ಮುಗಿತು. ನಾನು ಜನತಾ ದಳ(ಎಸ್) ಪಕ್ಷವನ್ನು ಬಿಡುವಂತಹ ಸಂದರ್ಭದಲ್ಲಿ ರಾಜಭವನ ಹತ್ತಿರ "ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವುದು ರಾಕ್ಷಸ ರಾಜಕಾರಣ" ಎನ್ನುವ ಮಾತನ್ನು ಹೇಳಿದ್ದೆ. ಆಗ ನಾನು "ರಾಕ್ಷಸ ರಾಜಕಾರಣ" ಎನ್ನುವ ಪದವನ್ನು ಉಪಯೋಗಿಸಿದ್ದೆ. Why? Why means; ಯಾವುದೇ ಮುಖಂಡರು ಆ ಪಕ್ಷದ ವರಿಷ್ಠರ ವಿರುದ್ಧ ಮಾತನಾಡುವುದಕ್ಕೆ ಆಗುವುದಿಲ್ಲ.

ಇವತ್ತು ಮಾನ್ಯ **[XXX]** ವಿರುದ್ಧ ಮಾತನಾಡಿರುವುದೇ ಇದಕ್ಕೆ ಕಾರಣ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಹಾಗಾದರೆ, ನಮ್ಮ ನಮ್ಮ ನಾಯಕರು ಮಾಡಿರುವುದೆಲ್ಲ ಸರಿಯೆಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಅವರು ಏನೇ ಮಾಡಿದರೂ 'Yes' ಎಂದು ಹೇಳುವುದಕ್ಕೆ ಇದು "ಹೌದಪ್ಪ"ನ ಸರ್ಕಾರವೂ ಅಲ್ಲ, "ಹೌದಪ್ಪ"ನ ರಾಜಕೀಯ ಪಕ್ಷಗಳೂ ಅಲ್ಲ. ಅವರು ಮಂತ್ರಿಗಳಾಗಿರುವವರೆಗೂ he was the property of the State, he was the property of both the Houses. ಅವರನ್ನು ಏಕಾಏಕಿ ತೆಗೆದು ಹಾಕಿದ ಮೇಲೆ ಅದರ ಬಗ್ಗೆ ಪ್ರಶ್ನೆ ಮಾಡುವಂತಹ ……..

ಶ್ರೀ ಸಲೀಂ ಅಹಮದ್:– ಸನ್ಮಾನ್ಯ ಸಭಾಪತಿಯವರೇ, ನನ್ನ ಆಕ್ಷೇಪಣೆ ಏನೆಂದರೆ, ಮಾನ್ಯ ಸದಸ್ಯರು ಮಾತನಾಡುತ್ತಾ, ಮಾನ್ಯ **[XXX]** ಹೆಸರನ್ನು ತೆಗೆದಿದ್ದಾರೆ. ಅವರ ಹೆಸರನ್ನು ಏತಕ್ಕೋಸ್ಕರ ತೆಗೆದುಕೊಳ್ಳಬೇಕು?

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, ಪತ್ರಿಕೆಗಳಲ್ಲಿ ಬಂದಿದೆ.

ಸಭಾಪತಿಯವರು:– ಮಾನ್ಯ ಹೆಚ್.ವಿಶ್ವನಾಥ್‌ರವರು ಮಾತನಾಡಲಿ. ಮಾನ್ಯ ಸದಸ್ಯರೇ, ಅವರ ಹೆಸರನ್ನು ಉಲ್ಲೇಖ ಮಾಡಬೇಡಿ.

ಶ್ರೀ ಎಂ.ಬಿ.ಪಾಟೀಲ್:– ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು removal ಎಂದು ಹೇಳಿದ್ದಾರೆ. ಅದು ಅವರ ಹಕ್ಕಾಗಿದೆ. ಮಂತ್ರಿಗಳನ್ನು ನೇಮಿಸುವುದು ಮತ್ತು ತೆಗೆಯುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಪರಮಾಧಿಕಾರವಿದೆ. ಇದರ ಮಧ್ಯೆ ಮಾನ್ಯ **[XXX]** ಹೆಸರನ್ನು ಇವರು ಮಧ್ಯೆ ಏತಕ್ಕೋಸ್ಕರ ತರುತ್ತಿದ್ದಾರೆ? ಮಾನ್ಯ ಕೆ.ಎನ್.ರಾಜಣ್ಣನವರು **[XXX]** ಟೀಕೆ ಮಾಡಿರುವುದಕ್ಕಾಗಿ ತೆಗೆದಿರುವುದು ಎಂದು ಹೇಳಿದ್ದಾರೆಯೇ?

(ಗೊಂದಲ)

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಎಂ.ಸಿ.ಸುಧಾಕರ್:– ಮಾನ್ಯ ಕೆ.ಎನ್.ರಾಜಣ್ಣನವರ ವಿಚಾರದಲ್ಲಿ ಎಲ್ಲಿಯೂ ಮಾನ್ಯ **[XXX]** ಹೆಸರು ಪ್ರಸ್ತಾಪವಾಗಿಲ್ಲ. ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಪ್ರಸ್ತಾಪ ಮಾಡಿರುವುದನ್ನು ಕಡತದಿಂದ ತೆಗೆಯಬೇಕೆನ್ನುವುದು ನಮ್ಮ ಮನವಿಯಾಗಿದೆ. ದಯವಿಟ್ಟು ಆ ಕ್ಲಿಪ್ ಅನ್ನು ತಾವು ಗಮನಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸಭಾಪತಿಯವರು:– ಆ ಹೆಸರನ್ನು ಕಡತದಿಂದ ತೆಗೆಯಿರಿ.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:– ಸನ್ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಸಂವಿಧಾನದ ಬಗ್ಗೆ ಮಾತನಾಡುತ್ತೇವೆ. ಮಾತನಾಡುವಾಗ, ಸಂವಿಧಾನವನ್ನು ಧಿಕ್ಕರಿಸಿ ಮಾತನಾಡುತ್ತೇವೆ. ಸಭಾಪತಿಯವರೇ, you are the custodian of the House. ನಾನು ಮಂತ್ರಿ, ಅವರು ಮಂತ್ರಿ ಎಂದು ಎದ್ದು ನಿಂತು ಮಾತನಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ. ನಾನು ಮಾತನಾಡುತ್ತಿದ್ದೇನೆ, I am the Hon'ble Member of this House. But ಅವರು ಯಾರೂ ಇದನ್ನು ಕಡಿತಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರುಗಳು ಏನಾದರೂ ಹೇಳುವುದಿದ್ದರೆ ಕೊನೆಯಲ್ಲಿ ಹೇಳಲಿ.

ಸಭಾಪತಿಯವರು:– ನಾನು ಅದನ್ನು ಪ್ರತಿದಿನ ಹೇಳುತ್ತೇನೆ. ಯಾರೂ ಕೇಳುವುದಿಲ್ಲ.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:– ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ನಾನು ಮಾನ್ಯ **[XXX]** ಅಥವಾ ಕಾಂಗ್ರೆಸ್ ಪಕ್ಷವನ್ನಾಗಲೀ ನಾನು ಟೀಕೆ ಮಾಡುತ್ತಿಲ್ಲ. ಯಾವುದೇ ರಾಜಕೀಯ ಪಕ್ಷದ ನೇತಾರರು ಅದೇ ರಾಜಕೀಯ ಪಕ್ಷದ ಸಾಮಾನ್ಯ ಸದಸ್ಯನೊಬ್ಬ ಆ ನೇತಾರನನ್ನು ಸಕಾರಣಕ್ಕಾಗಿ ಟೀಕೆ ಮಾಡಿದರೆ, ಅವನ ಕಥೆ ಮುಗಿದಂತೆ. Where is Democracy? ನಾವು Internal Democracy ಎಂದು ಹೇಳುತ್ತೇವೆ. Where is Internal Democracy?

ಶ್ರೀ ಎಂ.ಬಿ.ಪಾಟೀಲ್:– ಸನ್ಮಾನ್ಯ ಸಭಾಪತಿಯವರೇ, "ಆಪರೇಷನ್ ಕಮಲ" ಆದಾಗಲೂ Democracy ಇತ್ತಲ್ಲವೇ? ಆಗ ಡೆಮಾಕ್ರಸಿ ಎನ್ನುವುದು ಎಲ್ಲಿಗೆ ಹೋಗಿತ್ತು? ಎಲ್ಲರನ್ನು ಮುಂಬೈಗೆ ಕರೆದುಕೊಂಡು ಹೋದಾಗ, ಆ ಡೆಮಾಕ್ರಸಿ ಎಲ್ಲಿಗೆ ಹೋಗಿತ್ತು? I compliment you for giving such a nice catchy word.

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎನ್.ಎಸ್.ಬೋಸರಾಜು:- ಸನ್ಮಾನ್ಯ ಸಭಾಪತಿಯವರೇ, "ಆಪರೇಷನ್ ಕಮಲ" ಮಾಡುವಾಗ ಸಂವಿಧಾನ ಎಲ್ಲಿಗೆ ಹೋಗಿತ್ತು? ಅವರು ಇದರ ಬಗ್ಗೆಯೂ ಮಾತನಾಡಬೇಕು. ಅವರೇ ಇದನ್ನು ಪ್ರಾರಂಭ ಮಾಡಿರುವುದು.

ಶ್ರೀ ಅಡಗೂರು ಹೆಚ್.ವಿಶ್ವನಾಥ್:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಬಿ.ಪಾಟೀಲ್ I think you are the Senior Minister. ನಾನು ಯಾವುದೇ ಪಕ್ಷವನ್ನು ಉದ್ದೇಶಿಸಿ ಮಾತನಾಡುತ್ತಿಲ್ಲ. **[XXX]** is the leader of the Indian National Congress. Why should I not tell his name?

(ಮುಂದುವರಿದಿದೆ)

(648) 12.8.2025 3.40 ಪಿಕೆ:ಬಿಎನ್ಎಸ್

ಶ್ರೀ ಅಡಗೂರ್ ಹೆಚ್.ವಿಶ್ವನಾಥ್(ಮುಂದು)

[XXX] is the leader of National Congress Party. Why should I not tell his name? No, ತಾವು ಪದೇ ಪದೇ ಎದ್ದು ಈ ರೀತಿ ಮಾತನಾಡಬಾರದು. ಈಗ, ನನ್ನ ಪಕ್ಷದ ವಿಚಾರ ನೀವು ಮಾತನಾಡಬಾರದು; ನಿಮ್ಮ ಪಕ್ಷದ ವಿಚಾರ ನಾನು ಮಾತನಾಡಬಾರದು ಎಂದು ಹೇಳುವಂತಹ ಪರಿಸ್ಥಿತಿ ಬಂದಿದೆ. No, ಯಾವುದೇ ರಾಜಕೀಯ ಪಕ್ಷಗಳಾಗಲಿ they are the property of the State and the people. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಪಕ್ಷಗಳು ಒಬ್ಬರದೇ ಆಗಿರುವುದಿಲ್ಲ.

ಶ್ರೀ ಎಂ.ಬಿ.ಪಾಟೀಲ್:- ಮಾನ್ಯ ಸಭಾಪತಿಗಳೆ, ಮಾನ್ಯ **[XXX]** ಕೇವಲ ಎಐಸಿಸಿ ಅಧ್ಯಕ್ಷರು ಎಂದು ಹೇಳಿದರು. He is not the AICC President. He is the Opposition Leader of Lok Sabha. ಈಗ ಮಾನ್ಯ **[XXX]** ಎಐಸಿಸಿ ಅಧ್ಯಕ್ಷರಲ್ಲ. ಈ ಬದಲಾವಣೆಗಳು ನಿಮಗೆ ಗೊತ್ತಿದೆ ಎಂದು ಭಾವಿಸುತ್ತೇನೆ. Why the Hon'ble Member is bringing his name here? ಮಾನ್ಯ ರಾಜಣ್ಣನವರು **[XXX]** ವಿರುದ್ಧವಾಗಿ ಮಾತನಾಡಿದ್ದಕ್ಕೆ ಅವರನ್ನು ತೆಗೆದುಹಾಕಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆಯೇ? ಅಥವಾ ಮಾನ್ಯ ರಾಜಣ್ಣನವರು ಏನಾದರೂ ಮಾನ್ಯ **[XXX]** ಹೆಸರು ಹೇಳಿದ್ದಾರೆಯೇ? ಹೀಗಿರುವಾಗ ಇಲ್ಲಿ **[XXX]** ಹೆಸರನ್ನು ಏಕೆ ಹೇಳುತ್ತಿದ್ದೀರಿ?

ಶ್ರೀ ಅಡಗೂರು ಹೆಚ್.ವಿಶ್ವನಾಥ್:- ಮಾನ್ಯ ಸಭಾಪತಿಗಳೆ, ಒಂದು ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು, **[XXX]** ಹೇಳಿದ್ದರಿಂದಲೇ ಮಾನ್ಯ ರಾಜಣ್ಣನವರನ್ನು ತೆಗೆದು ಹಾಕಿದ್ದೇನೆ ಎಂದು ಹೇಳಿದರೆ, ಮಾರನೆಯ ದಿನ ಮಾನ್ಯ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಇರುತ್ತಾರೆಯೇ? ಇಲ್ಲ. ನಾವು ಈಗ

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಣ್ಣು ಕಟ್ಟಿಕೊಂಡು ಹೋಗುತ್ತಿದ್ದೇವೆ. ಅದನ್ನು ತೆರೆದು ನೋಡಬೇಕು. ಕಣ್ಣು ತೆರೆದು ಈ ಮನೆಯನ್ನು ನೋಡಬೇಕು ಪ್ರಪಂಚವನ್ನು ನೋಡಬೇಕು, ಶಾಸನಗಳನ್ನು ನೋಡಬೇಕು. ಆದರೆ ಈಗ ಅದು ಯಾವುದೂ ಆಗುತ್ತಿಲ್ಲ. ಈಗಾಗಲೇ ಒಬ್ಬ ಪರಿಶಿಷ್ಟ ಪಂಗಡದಿಂದ ಬಂದಿದ್ದ, ಹಿಂದುಳಿದ ವರ್ಗಗಳ ಸಚಿವರಾಗಿದ್ದ ಮಾನ್ಯ ನಾಗೇಂದ್ರರವರು ನಿಮ್ಮನ್ನು ಬಿಟ್ಟು ಹೋದರು. ಇನ್ನು ಮಾನ್ಯ ಜಾರಕಿಹೊಳಿಯವರು ಇದ್ದಾರೆ, ಅವರನ್ನೂ ತೆಗೆದುಹಾಕಿಬಿಡಿ. ಇದು ಬಹಳ ಅವಸರದಲ್ಲಿ ತೆಗೆದುಕೊಂಡ ತೀರ್ಮಾನವಾಗಿದೆ ಎಂದು ಜನರಿಗೆ ಅನಿಸುತ್ತಿದೆ. ಅನವಶ್ಯಕವಾಗಿ ತೆಗೆದುಕೊಂಡ ತೀರ್ಮಾನ ಇದಾಗಿದೆ ಎಂದೆನಿಸುತ್ತಿದೆ. ನಾವು ಇಲ್ಲಿ ಮಾನ್ಯ ರಾಜಣ್ಣನವರ ಪರವಾಗಿ ಮಾತನಾಡುತ್ತಿಲ್ಲ. ಕಾನೂನು, ಸಂಸದೀಯ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿದ್ದೇವೆ. Sri Rajanna is not the material here. It is the decision taken by the super Authority of A.I.C.C. ನಾನು ನಿಮ್ಮ ಜೊತೆ 40 ವರ್ಷ ಇದ್ದೆ. ನಾನು ಮೂರು ಪಾರ್ಟಿ ಜೊತೆಯೂ ಇದ್ದೆ. ಮಾಧ್ಯದವರು, ನೀವು 40 ವರ್ಷ ಕಾಂಗ್ರೆಸ್ ಪಕ್ಷದ ಜೊತೆ ಇದ್ದಿರಿ, ಈಗ ಜೆಡಿ(ಎಸ್) ಪಕ್ಷದ ಜೆಂಡಾ ಹಿಡಿದುಕೊಂಡಿರಿ, ಇದು ಹೇಗೆ ಸಾಧ್ಯ ಎಂದು ಕೇಳಿದರು. ಆಗ ನಾನು, ನನ್ನ ಜೆಂಡಾ ಬದಲಾವಣೆ ಆಗಬಹುದು; ಆದರೆ ನನ್ನ ಅಜೆಂಡಾ ಬದಲಾವಣೆ ಆಗುವುದಿಲ್ಲ ಎಂದು ಹೇಳಿದ್ದೆ. ಕೊನೆಯ ಮನುಷ್ಯನ ಕಷ್ಟ-ಸುಖಗಳಿಗೆ, ದುಃಖ-ದುಮ್ಮಾನಗಳಿಗೆ ತಲುಪುವಂತಹ ನನ್ನ ಅಜೆಂಡಾ ಬದಲಾವಣೆಯಾಗುವುದಿಲ್ಲ ಎಂದು ಹೇಳಿದ್ದೆ.

ಶ್ರೀ ಸಲೀಂ ಅಹಮದ್ (ಆಡಳಿತ ಪಕ್ಷದ ಮುಖ್ಯ ಸಚೇತಕರು):- ನಿಮ್ಮ ಅಜೆಂಡಾ ಬದಲಾವಣೆಯಾಗಿಲ್ಲ; ಆದರೆ ನಿಮ್ಮ ಸಿದ್ಧಾಂತದಲ್ಲಿ ಬದಲಾವಣೆ ಆಗಿದೆಯೇ? ಭಾರತೀಯ ಜನತಾ ಪಾರ್ಟಿಯ ಸಿದ್ಧಾಂತವನ್ನು ನೀವು ಒಪ್ಪುತ್ತೀರಾ? ಅದಕ್ಕೆ ನೀವು ಉತ್ತರ ಕೊಡಬೇಕು. ನಿಮ್ಮ ಅಜೆಂಡಾ ಏನು ಎಂದು ಜನರಿಗೆ ಗೊತ್ತಾಗಲಿ.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:- ಮಾನ್ಯ ಸಭಾಪತಿಗಳೆ, ಕೊನೆಯ ಮನುಷ್ಯನ ಕಷ್ಟ ಕಾರ್ಪಣ್ಯಗಳಿಗೆ, ದುಃಖ-ದುಮ್ಮಾನಗಳಿಗೆ ತಲುಪಿ ಅವನ ಕಣ್ಣೀರನ್ನು ಒರೆಸುವುದೇ ನನ್ನ ಅಜೆಂಡಾ ಆಗಿದೆ. ಈ ಅಜೆಂಡಾ ಯಾವ ಪಾರ್ಟಿಯಲ್ಲಿ ಇಲ್ಲ? ಆ ಅಜೆಂಡಾ ಬಿಜೆಪಿಯಲ್ಲಿ ಇಲ್ಲವೇ? ಬಿಜೆಪಿ ಯಾರ ಕಣ್ಣೀರನ್ನೂ ಒರೆಸುತ್ತಿಲ್ಲವೇ? ಕಾಂಗ್ರೆಸ್‌ನವರೇ ಎಲ್ಲರ ಕಣ್ಣೀರನ್ನು ಒರೆಸುತ್ತಿದ್ದಾರೆಯೇ?

ಶ್ರೀ ಎ. ವಸಂತ್ ಕುಮಾರ್:- ಮಾನ್ಯ ಸಭಾಪತಿಗಳೆ, ಒಂದೊಂದು ಜೆಂಡಾಕ್ಕೂ ಒಂದೊಂದು ಸಿದ್ಧಾಂತ ಇದೆ. ಅದರದೇ ಆದ ತತ್ವ-ಸಿದ್ಧಾಂತಗಳಿವೆ. ನೀವು ಹಿಡಿದಿರುವಂತಹ 3 ಜೆಂಡಾಗಳಲ್ಲಿ 3 ವಿಭಿನ್ನವಾದ ತತ್ವ-ಸಿದ್ಧಾಂತಗಳಿವೆ. ನೀವು ಯಾವುದನ್ನು ಒಪ್ಪುತ್ತೀರಿ ಎನ್ನುವುದನ್ನು ಸದನಕ್ಕೆ ಸ್ಪಷ್ಟಪಡಿಸಬೇಕು.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:- ಈಗ ಯಾವ ಪಕ್ಷ ಸಿದ್ಧಾಂತದ ಪ್ರಕಾರ ನಡೆಯುತ್ತಿದೆ? ಕಾಂಗ್ರೆಸ್ ಪಕ್ಷ ಸಿದ್ಧಾಂತದ ಪ್ರಕಾರ ನಡೆಯುತ್ತಿದೆಯೇ?

ಶ್ರೀ ಎ.ವಸಂತ ಕುಮಾರ್:- ಖಂಡಿತವಾಗಿ ನಡೆಯುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):- ಮಾನ್ಯ ಸಭಾಪತಿಗಳೆ, ಆಪರೇಷನ್ ಕಮಲ ಎಂದು ಪ್ರಾರಂಭ ಮಾಡಿದವರು ಯಾರು? ಯಾವ ಸಂವಿಧಾನದ ನಿಯಮದಡಿ ಆಪರೇಷನ್ ಕಮಲ ಎನ್ನುವುದನ್ನು ಮಾಡಿದಿರಿ? ಅದರ ಬಗ್ಗೆ ಹೇಳಿ.

ಶ್ರೀ ಸಲೀಂ ಅಹಮದ್:- ಮಾನ್ಯ ಸಭಾಪತಿಗಳೆ, ಕಳೆದ ಸಲ ನಾವು ಬಜೆಟ್ ಮಂಡಿಸಿದಾಗ ಇದೇ ಮಾನ್ಯ ವಿಶ್ವನಾಥ್‌ರವರು, ಇಷ್ಟು ಒಳ್ಳೆಯ ಬಜೆಟ್ ನೋಡಿ ನನಗೆ ಕುಣಿಯಬೇಕು ಎಂದೆನಿಸುತ್ತಿದೆ, ಅಷ್ಟು ಒಳ್ಳೆಯ ಬಜೆಟ್ ಅನ್ನು ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ್ದಾರೆ ಎಂದು ಹೇಳಿದ್ದರು.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:- ನೀವು ಹೇಳಿದ್ದು ನನಗೆ ಕೇಳಿಸುತ್ತಿಲ್ಲ. ನನಗೆ ವಯಸ್ಸಾಯಿತು.

ಶ್ರೀ ಸಲೀಂ ಅಹಮದ್:- ಯಾವುದು ಕೇಳಿಸಬಾರದು ಅದು ಕೇಳಿಸುತ್ತದೆ; ಯಾವುದು ಕೇಳಿಸಬೇಕು ಅದು ನಿಮಗೆ ಕೇಳುವುದಿಲ್ಲ.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:- ಮಾನ್ಯ ಸಭಾಪತಿಗಳೆ, ಸರ್ಕಾರ ಸಾಂವಿಧಾನಿಕವಾಗಿ, ಯಾವ ಕಾರಣಕ್ಕೋಸ್ಕರ ಒಬ್ಬ ಮಂತ್ರಿಯನ್ನು ತೆಗೆದು ಹಾಕಿದರು? ಮಂತ್ರಿ ಎಂದರೆ, he is the Government. Cabinet Minister is the Government. ಅವರನ್ನು ಯಾವ ಕಾರಣಕ್ಕೋಸ್ಕರ ತೆಗೆದಿರಿ ಎಂದು ಜನರಿಗೆ ತಿಳಿಸಬೇಕಾಗುತ್ತದೆ. That too a person belonging to Scheduled Tribe. ಅವರು ತಮ್ಮ ಇಲಾಖೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದರು. ಒಳ್ಳೆಯ ಸಹಕಾರಿಗಳಾಗಿದ್ದರು. ಅಂಥವರನ್ನು ನೀವು ಏಕಾಏಕಿ ಕಿತ್ತು ಹಾಕಿದ್ದು ಏಕೆ? ಅವರಿಗೆ ಗೌರವ ಇಲ್ಲವೇ? ಇವತ್ತು ರಾಜ್ಯದಲ್ಲೆಲ್ಲಾ, including the media, ರಾಜಣ್ಣನವರನ್ನು ಸಂಪುಟದಿಂದ ಕಿತ್ತು ಹಾಕಿದರಂತೆ ಎಂದು ಹೇಳುತ್ತಿದ್ದಾರೆಯೇ ಹೊರತು, ರಾಜಣ್ಣನವರನ್ನು ಮಂತ್ರಿ ಸ್ಥಾನದಿಂದ ಬಿಡುಗಡೆ ಮಾಡಿದ್ದಾರೆ ಎಂದು ಯಾರೂ ಕೂಡ ಹೇಳುತ್ತಿಲ್ಲ. ಹಿಂದುಳಿದ ವರ್ಗದಿಂದ ಬಂದ ಒಬ್ಬ ಮಂತ್ರಿಯನ್ನು ಯಾವುದೇ ಕಾರಣವಿಲ್ಲದೇ ಏಕೆ ತೆಗೆದುಹಾಕಿದ್ದೀರಿ ಎಂದು ರಾಜ್ಯದ ಜನಕ್ಕೆ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಎಂ.ಬಿ.ಪಾಟೀಲ್:- ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳಿಗೆ ಮಂತ್ರಿಯನ್ನಾಗಿ ತೆಗೆದುಕೊಳ್ಳುವ ಅಥವಾ ಬಿಟ್ಟುಬಿಡುವ ಪರಮಾಧಿಕಾರ ಇರುತ್ತದೆ. ಅದಕ್ಕೆ ಕಾರಣ ಹೇಳುವ ಅವಶ್ಯಕತೆ ಇಲ್ಲ.

ಸಭಾಪತಿಯವರು:- ವಿರೋಧ ಪಕ್ಷದವರು ರೀಸನ್ ಕೇಳಿದರು, ಅದಕ್ಕೆ ಆಡಳಿತ ಪಕ್ಷದವರು ಉತ್ತರ ಕೊಟ್ಟಿದ್ದೀರಿ. ಅಲ್ಲಿಗೆ ಮುಗಿಯಿತು. ಮತ್ತೆ ಕೇಳುವುದೇನಿದೆ?

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಗಳೆ, ವಿರೋಧ ಪಕ್ಷದವರು ಬಯಸುತ್ತಿರುವ ಉತ್ತರ ಕೊಡುವುದಕ್ಕೆ ನಾವು ತಯಾರಿಲ್ಲ. ಅವರು ಹೇಳಿದಂತೆ ನಾವು ಕೇಳಬೇಕಾಗಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಗಳೆ, ನಾನು ಕೇವಲ ಎರಡು ನಿಮಿಷ ಮಾತನಾಡುತ್ತೇನೆ. ತಾವೇ ಮಾಡಿದ್ದ ಸಹಕಾರ ಸದನ ಸಮಿತಿಯಲ್ಲಿ ಹಿರಿಯ ಸಚಿವರಾಗಿದ್ದ ಮಾನ್ಯ ರಾಜಣ್ಣನವರ ಜೊತೆ ನಾವು 5 ಜನ ಶಾಸಕರು ಕೆಲಸ ಮಾಡಿದೆವು. ಕಾಂಗ್ರೆಸ್ಸಿನ 3 ಶಾಸಕರು, ಜೆಡಿಎಸ್‌ನ ಒಬ್ಬರು ಮತ್ತು ಬಿಜೆಪಿಯ 2 ಶಾಸಕರಿದ್ದೆವು. ಸಹಕಾರಿ ಕ್ಷೇತ್ರದಲ್ಲಿ ಮಾನ್ಯ ರಾಜಣ್ಣನವರಿಗೆ ಎಷ್ಟು ಗಾಢವಾದ ಅನುಭವ ಇದೆ ಎನ್ನುವುದನ್ನು ಆ 6 ತಿಂಗಳ ಅವಧಿಯಲ್ಲಿ ಕಂಡುಕೊಂಡೆವು. ನಡೆದಿರುವಂತಹ ಘಟನೆಯ ಕುರಿತು ವಿರೋಧ ಪಕ್ಷದವರು ಸರ್ಕಾರದಿಂದ ಏಕೆ ಕೇಳಬಯಸುತ್ತಿದ್ದಾರೆಂದರೆ ಒಬ್ಬ ಮಂತ್ರಿಯನ್ನು ವಜಾ ಮಾಡಬೇಕು ಎಂದರೆ ಆ ಮಂತ್ರಿಯ ಮೇಲೆ ಏನಾದರೂ ದೊಡ್ಡ ಆರೋಪ ಇದ್ದು, ಅದು ಇಡೀ ರಾಜ್ಯದ ಜನರ ಮನಸ್ಸಿನಲ್ಲಿ, ಈ ಮಂತ್ರಿ ತಪ್ಪು ಮಾಡಿದ್ದಾರೆ ಎನ್ನುವ ಭಾವನೆ ಬರುತ್ತದೆ ಎನ್ನುವ ಉದ್ದೇಶದಿಂದ ತೆಗೆದು ಹಾಕಬಹುದು. ಎರಡನೆಯದಾಗಿ, ಇಡೀ ಕ್ಯಾಬಿನೆಟ್ ಅನ್ನು ಪುನರ್‌ರಚನೆ ಮಾಡುವಂಥದ್ದೋ ಅಥವಾ ವಿಸ್ತರಣೆ ಮಾಡುವ ಸಂದರ್ಭದಲ್ಲಿ ಕೆಲವು ಮಂತ್ರಿಗಳನ್ನು ಬಿಡುವಂಥದ್ದು ಅಥವಾ ಕೆಲವು ಮಂತ್ರಿಗಳನ್ನು ಸೇರಿಸುವಂಥದ್ದು ನಮ್ಮ ವ್ಯವಸ್ಥೆಯಲ್ಲಿ ಇದೆ. ಈಗ ಏಕಾಏಕಿ ಒಬ್ಬ ಎಸ್.ಟಿ. ವರ್ಗದಿಂದ ಬಂದಿದ್ದ, ಮೊನ್ನೆ ತಾನೆ 75 ವರ್ಷದ ಆಚರಣೆ ಮಾಡಿಕೊಂಡ ವ್ಯಕ್ತಿಯ . . .

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್:- ಮಾನ್ಯ ಸಭಾಪತಿಗಳೆ, ಈಗ ಇವರು ಎಸ್‌ಟಿ/ಎಸ್‌ಸಿ ಎಂದು ಮಾತನಾಡುತ್ತಾರೆ. ಆದರೆ, **[XXX]** ಅವರ ಘಟನೆ ಆದಾಗ, ಅವರನ್ನು ತೆಗೆದು ಹಾಕಬೇಕೆಂದು ಇವರೇ ಹಿಂದೆ ಬಿದ್ದಿದ್ದರು. ಈಗ ಇದ್ದಕ್ಕಿದ್ದ ಹಾಗೆ ಎಸ್‌ಸಿ/ಎಸ್‌ಟಿ ಎಂದು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಂ.ಸಿ.ಸುಧಾಕರ್(ಉನ್ನತ ಶಿಕ್ಷಣ ಸಚಿವರು):- ಆವತ್ತು **[XXX]** ಅವರ ಮೇಲೆ Enforcement Directorate (E.D.)ರವರು ರೇಡ್ ಮಾಡಿದಾಗ ನೀವು ಅವರ ಬಗ್ಗೆ ಮಾತನಾಡಲಿಲ್ಲ. ಅವರು ಸಹ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರು.

(ಗೊಂದಲ)

ಶ್ರೀ ಆಡಗೂರ್ ಹೆಚ್.ವಿಶ್ವನಾಥ್:- ಮಾನ್ಯ ಸಭಾಪತಿಗಳೆ, ಮಾನ್ಯ **[XXX]** ಅವರ ಮೇಲೆ ಆಪಾದನೆ ಇತ್ತು. He was in jail. ಮಾನ್ಯ ರಾಜಣ್ಣನವರು ಜೈಲಿಗೆ ಹೋಗಿದ್ದರೇ? ಮಾನ್ಯ ರಾಜಣ್ಣನವರ ಮೇಲೆ ಯಾವ ಆಪಾದನೆ ಇದೆ? ಮಾನ್ಯ **[XXX]** ಮೇಲೆ, ಯಾವುದೋ ಒಂದು ಕಾರ್ಪೊರೇಷನ್‌ನ ಹಣವನ್ನು ದುರುಪಯೋಗಪಡಿಸಿಕೊಂಡಿದ್ದರು ಎನ್ನುವ ಆಪಾದನೆ ಇತ್ತು.

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(649) 12-8-2025 3.50 ಡಿಎಸ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ಮುಂದು):-

ಅವರು ಜೈಲಿಗೆ ಕೂಡ ಹೋಗಿದ್ದಂಥವರು, ಇಲ್ಲಿ ಏನು ಇಲ್ಲ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಶ್ರೀ ಬಿ.ನಾಗೇಂದ್ರರವರ ಬಗ್ಗೆ ಏಕೆ ಹೇಳುತ್ತಿದ್ದೀರಿ? ಅವರೂ ಸಹ ಪರಿಶಿಷ್ಟ ಜನಾಂಗಕ್ಕೆ ಸೇರಿದವರು.

ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):- ಅವರ ಬಗ್ಗೆಯೂ ಮಾತನಾಡಬೇಕೇ?

ಶ್ರೀ ಕೆ.ಎಸ್.ನವೀನ್:- **[xxx]** ರವರ ಮೇಲೆ ಅಪಾದನೆ ಇತ್ತು ಎಂದು ಮಾನ್ಯ ಮುಖ್ಯಮಂತ್ರಿಯವರೇ ಹೇಳಿದ್ದಾರೆ.

ಶ್ರೀ ಎನ್. ಎಸ್. ಬೋಸರಾಜು:- ಈಗ ಹೇಳುತ್ತಿದ್ದೀರಿ, ಜನರಿಗೆಲ್ಲಾ ಗೊತ್ತಾಗುತ್ತದೆ.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:- ಮಾನ್ಯ ಸಭಾನಾಯಕರೇ, don't mess the things. ಶ್ರೀ ಕೆ.ಎನ್. ರಾಜಣ್ಣರವರ ಮೇಲೆ ಏನು ಅಪಾದನೆ ಇದೆ ಎಂಬುದನ್ನು ಹೇಳಿ? ಶ್ರೀ ಕೆ.ಎನ್. ರಾಜಣ್ಣರವರು ಏನಾದರೂ ಜೈಲಿಗೆ ಹೋಗಿದ್ದಾರೆಯೇ?

ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):- ಅವರ ಮೇಲೆ ಅಪಾದನೆಗಳೇನು ಇಲ್ಲ.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:- ಮಾನ್ಯ ಎಂ.ಬಿ.ಪಾಟೀಲ್ರವರೇ, you are messing the things.

ಶ್ರೀ ಎಂ.ಬಿ.ಪಾಟೀಲ್:- ಮಾನ್ಯ ಸಭಾಪತಿಯವರೇ, removal ಗೆ reason ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರಿಗೆ ಪರಮಾಧಿಕಾರವಿದೆ. ನನ್ನನ್ನು ಹಿಡಿದು ಎಲ್ಲರಿಗೂ ತೆಗೆದುಕೊಳ್ಳಬಹುದು, ತೆಗೆದುಕೊಂಡಿದ್ದಾರೆ. ನಾಳೆ ಬೇರೆಯವರನ್ನು ತೆಗೆದು ಹಾಕಬಹುದು. ಕಾರಣ ಹೇಳಬೇಕು ಎಂದು ಎಲ್ಲಿದೆ? ಶ್ರೀ ಕೆ.ಎನ್.ರಾಜಣ್ಣರವರ ಮೇಲೆ ಆಪಾದನೆ ಇದೆ ಎಂದು ಹೇಳಿದ್ದಾರೆಯೇ? ಏನು ಹೇಳಿಲ್ಲ. ಅದು ಪರಮಾಧಿಕಾರ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಬಾಬಾ ಸಾಹೇಬ್ ಡಾ॥ ಬಿ.ಆರ್.ಅಂಬೇಡ್ಕರ್ರವರು ರಾಜೀನಾಮೆ ಕೊಟ್ಟ ಮೇಲೂ ಸದನದಲ್ಲಿ ಬಂದು ಏಕೆ

[xxx] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜೀನಾಮೆ ಕೊಟ್ಟಿದ್ದಾರೆ ಎಂಬುದನ್ನು ಅವರು ಹೇಳುತ್ತಾರೆ. ಏಕೆ ರಾಜೀನಾಮೆ ಕೊಟ್ಟಿದ್ದಾರೆ ಎಂದು ಸದನ ಕೇಳುತ್ತದೆ. ಸದನಕ್ಕೆ ಅವರು ಉತ್ತರ ಕೊಡುತ್ತಾರೆ. ಇದು ಪದ್ಧತಿಯಾಗಿದೆ. ಆದರೆ ಅವರು ಹಾರಿಕೆಯ ಉತ್ತರ ಕೊಟ್ಟು ಈ ರೀತಿ ತಪ್ಪಿಸಿಕೊಳ್ಳುವುದು ಸರಿಯಲ್ಲ. ಇದು ಬಿಡಿ, ಬಹಳಷ್ಟು ಸಚಿವರುಗಳು ರಾಜೀನಾಮೆ ಕೊಟ್ಟಿರುವಂಥದ್ದು ಇದೆ.

ಡಾ॥ ಎಂ.ಸಿ.ಸುಧಾಕರ (ಉನ್ನತ ಶಿಕ್ಷಣ ಸಚಿವರು):– ಶ್ರೀ ಲಾಲ್ ಬಹುದ್ದೂರ್ ಶಾಸ್ತ್ರೀ ಯವರು train accident ಆಯಿತೆಂದು ರಾಜೀನಾಮೆ ಕೊಟ್ಟರು. ರಾಜಕೀಯ ನೈತಿಕತೆ ಅವತ್ತು ಎಷ್ಟು ಇತ್ತು ಇವತ್ತು ಯಾವ ರೀತಿ ಅಧೋಗತಿಗೆ ಬಂದಿದೆ. ನೀವು ರಾಜಕೀಯ ನೈತಿಕತೆಯ ಬಗ್ಗೆ ಹೇಳಿ?

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಕಾಂಗ್ರೆಸ್‌ಗೆ ಅವಮಾನ. ಇದಕ್ಕೆ ಸರ್ಕಾರ ಉತ್ತರ ಕೊಡಲೇಬೇಕು. ಇದಕ್ಕೆ ಕಾರಣ ಏನು ಎಂಬುದನ್ನು ಹೇಳಲೇಬೇಕು.

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಮತ್ತು ಮುಜರಾಯಿ ಸಚಿವರು):– ಮಾನ್ಯ ಸಭಾಪತಿಯವರೇ, ಉಪ ರಾಷ್ಟ್ರಪತಿಗಳಾದ **[XXX]** ರವರು ರಾಜೀನಾಮೆ ಕೊಟ್ಟರು. ಅವರಿಗೆ ಅವಕಾಶವೇ ಕೊಡಲಿಲ್ಲ?

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಇದಕ್ಕೆ ಉತ್ತರ ಕೊಡಬೇಕು. He is the property of the House.

ಶ್ರೀ ರಾಮಲಿಂಗಾರೆಡ್ಡಿ:– ಮಾನ್ಯ ಸಭಾಪತಿಯವರೇ, ಉಪ ರಾಷ್ಟ್ರಪತಿಗಳಾದ **[XXX]** ರವರು ರಾಜೀನಾಮೆ ಕೊಟ್ಟಿದ್ದಾರಲ್ಲಾ ಕೇಂದ್ರ ಸರ್ಕಾರವು ಕೂಡ ಉತ್ತರ ಕೊಡಬೇಕಾಗಿತ್ತಲ್ಲಾ, ಅದರ ಬಗ್ಗೆ ಮಾನ್ಯ ವಿಶ್ವನಾಥ್‌ರವರು ಮಾತನಾಡಬೇಕು.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಅವರು ಹೇಳಿಕೆ ಕೊಟ್ಟಿರುವುದು ಎಲ್ಲಾ ಪತ್ರಿಕೆಗಳಲ್ಲಿ ಬರುತ್ತಿದೆ. ಅದಕ್ಕೆ ಉತ್ತರ ಕೊಡಬೇಕಲ್ಲವೇ? ಹೌದು ಎಂದು ಹೇಳಿ. It is the prerogative of the Chief Minister ಎಂದು ಹೇಳಿಬಿಟ್ಟರೆ ಹೇಗೆ?

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಮಾನ್ಯ ವಿಶ್ವನಾಥ್‌ರವರು ಬಾಂಬೆ ಬಾಯ್ಸ್ ಎನ್ನುವ ಪುಸ್ತಕ ಬರೆಯುತ್ತೇನೆಂದು ಹೇಳಿದ್ದರು, ಅವರು ಬರೆದಿಲ್ಲ.

[xxx] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:– ಮಾನ್ಯ ಸಭಾಪತಿಯವರೇ, ಅವರು ನಾನು ಒಟ್ಟಿಗೆ ಹೋಗಿದ್ದೆವು.

ಶ್ರೀ ಪುಟ್ಟಣ್ಣ:– ಅದನ್ನೇ ಹೇಳಿದ್ದು. ಹೇಗೆ ಹೋಗಿದ್ದೆವು, ಏಕೆ ಹೋಗಿದ್ದೇವೆ ಎಂಬುದನ್ನೆಲ್ಲಾ ಹೇಳಿ, ಅವರಿಗೆ ಗೊತ್ತಾಗಲಿ.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:– ಸಮ್ಮಿಶ್ರ ಸರ್ಕಾರವನ್ನು ಕೆಡುವುದಕ್ಕೆ ನಾವು ನೀವೆಲ್ಲಾ ಒಟ್ಟಿಗೆ ಬಾಂಬೆಗೆ ಹೋಗಿದ್ದೆವು.

ಶ್ರೀ ಪುಟ್ಟಣ್ಣ:– ನಿಮಗೇನು ಆಯಿತು, ನಮಗೇನು ಆಯಿತು ಎಂಬುದನ್ನು ಹೇಳಿ?

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:– ಮಾನ್ಯ ಸಭಾಪತಿಯವರೇ, ಅವರು ನಮ್ಮ ಜೊತೆಗೆ ಇದ್ದವರು. ಬಾಂಬೆ ಬಾಯ್ಸ್ ಎನ್ನುವ ಪುಸ್ತಕವನ್ನು ಬರೆದಿಟ್ಟಿದ್ದೇನೆ. ಆದರೆ ಅದನ್ನು ರಿಲೀಸ್ ಮಾಡಬೇಡಿ ಎಂದು ಮೂರು ಪಕ್ಷದ ನಾಯಕರು ದುಂಬಾಲು ಬಿದ್ದಿದ್ದಾರೆ.

ಶ್ರೀ ಎಂ.ಬಿ.ಪಾಟೀಲ್:– ಒಳ್ಳೆಯ ಪಬ್ಲಿಷರ್ ಬೇಕಾದರೆ ನಿಮಗೆ ನಾನು ಕರೆದುಕೊಂಡು ಬರುತ್ತೇನೆ. ಆ ಪುಸ್ತಕ ಉತ್ತಮವಾಗಿ ಸೇಲ್ ಆಗುತ್ತದೆ.

ಶ್ರೀ ಅಡಗೂರ್ ಹೆಚ್.ವಿಶ್ವನಾಥ್:– ನಿಜ, ಸೇಲ್ ಆಗುತ್ತದೆ. ಅದು ಎಲ್ಲರಿಗೂ ಗೊತ್ತಿದೆ.

ಸಭಾಪತಿಯವರು:– ನೀವು ಪ್ರಶ್ನೆ ಕೇಳಿದ್ದೀರಿ, ಅವರು ಉತ್ತರ ಹೇಳಿದ್ದಾರೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಅಂದರೆ ಕಾಂಗ್ರೆಸ್‌ನಲ್ಲಿ ಸತ್ಯ ಹೇಳಿದವರ ಹತ್ಯೆನಾ? ಈಗ ಅದು ಮನದಟ್ಟಾಯಿತೇ?

(ಗೊಂದಲ)

ಡಾ॥ ಎಂ.ಸಿ.ಸುಧಾಕರ:– ಮಾನ್ಯ ಸಭಾಪತಿಯವರೇ, **[XXX]** ಅವರೂ ಸತ್ಯವನ್ನು ಹೇಳಿದ್ದಾರೆ.

(ಗೊಂದಲ)

ಸಭಾಪತಿಯವರು:– ಸಾಕು ಬಿಡಿ, ಎಲ್ಲರೂ ಕುಳಿತುಕೊಳ್ಳಿ. ಒಂದು ನಿಮಿಷ ನಾನು ಮಾತನಾಡುವುದನ್ನು ಕೇಳಿ. ನೀವು ಪ್ರಶ್ನೆ ಕೇಳಿದ್ದೀರಿ, ಅವರು ಉತ್ತರ ಹೇಳಿದ್ದಾರೆ. ಹೀಗೆ ಉತ್ತರ ಹೇಳಿ ಎಂದು ನಾನು ಹೇಳುವುದಕ್ಕೆ ಬರುವುದಿಲ್ಲ. ಹೀಗೆ ಪ್ರಶ್ನೆ ಕೇಳಿ ಎಂದು ಹೇಳುವುದಕ್ಕೆ ಬರುವುದಿಲ್ಲ. ನೀವು ಪ್ರಶ್ನೆ ಕೇಳಿದ್ದೀರಿ, ಅವರು ಉತ್ತರ ಹೇಳಿದ್ದಾರೆ, ಇಷ್ಟಕ್ಕೆ ಮುಗಿಸಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅವರಿಂದ ಉತ್ತರ ಕೊಡಿಸಿ.

ಸಭಾಪತಿಯವರು:– ನಾನು ಹೇಳುವುದಿಲ್ಲ.

[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಇಲ್ಲದಿದ್ದರೆ ಉತ್ತರವನ್ನು ಅವರು ಕೊಡಿಸಲಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

೦೮. ನಿಯಮ ೩೩೦ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ವಶಪಡಿಸಿಕೊಳ್ಳಲಾದ ಜಮೀನುಗಳಿಗೆ ಭೂ ಪರಿಹಾರ ಪಾವತಿಯನ್ನು ಬಟವಾಡೆ ಮಾಡುವಾಗ ಉಂಟಾಗಿರುವ ಲೋಪದೋಷಗಳ ಬಗ್ಗೆ.

ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಆ ಉತ್ತರ ಅಷ್ಟೊಂದು ಸಮಂಜಸವಾಗಿಲ್ಲ ಎನ್ನುವ ವಿಚಾರವನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ.

ಸಭಾಪತಿಯವರು:- ತಾವು ಮಾತನಾಡಿ, ಮತ್ತೆ ಕಡ್ಡಿ ಕೊರೆಯುವ ಕೆಲಸ ಬಿಡಿ.

ಶ್ರೀ ಎಸ್. ಎಲ್. ಭೋಜೇಗೌಡ:- ನಮ್ಮ ಸಭಾಪತಿಯವರ ಗದಾಪ್ರಹಾರ ನನ್ನ ಮೇಲೆ ಹೇಗಿದೆ ಎಂಬುದನ್ನು ಎಲ್ಲಾ ಸದಸ್ಯರುಗಳು ಗಮನಹರಿಸಬೇಕು. ಆದರೆ ಪ್ರೀತಿಯಿಂದ ಎಂಬುದು ಕೆಲವರಿಗೆ ಗೊತ್ತಾಗುತ್ತದೆ, ಇನ್ನು ಕೆಲವರು ಬಂದವರೆಲ್ಲಾ 24 ಗಂಟೆ ಭೋಜೇಗೌಡರು ಕಡ್ಡಿ ಆಡಿಸುವುದೇ ಕೆಲಸ ಎಂದು ತಿಳಿದರೆ ನನ್ನ ಪರಿಸ್ಥಿತಿ ಏನಾಗಬೇಕು?

ಸಭಾಪತಿಯವರು:- ನಿಮಗೆ ಏನಾಗುವುದಿಲ್ಲ, ಮಾತನಾಡಿ.

ಶ್ರೀ ಎಸ್. ಎಲ್. ಭೋಜೇಗೌಡ:- ಮಾನ್ಯ ಸಭಾಪತಿಯವರೇ, ನೀವು ನನ್ನ ರಕ್ಷಣೆಗೆ ಇದ್ದೀರಲ್ಲಾ?

ಸಭಾಪತಿಯವರು;- ಇದ್ದೇನೆ.

ಶ್ರೀ ಎಸ್. ಎಲ್. ಭೋಜೇಗೌಡ:- ಮಾನ್ಯ ಸಭಾಪತಿಯವರೇ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ವಶಪಡಿಕೊಳ್ಳಲಾದ ಜಮೀನು ಸರ್ಕಾರಿ ಮತ್ತು ಖಾಸಗಿ ಜಮೀನಿಂದ ಕೂಡಿದ್ದು, ಭೂ ವ್ಯವಹಾರಗಳು ಸಂಕೀರ್ಣ ಕಂದಾಯ ದಾಖಲೆಗಳ ಪರಿಶೋಧನೆಯನ್ನು ಒಳಗೊಂಡಿರುವುದರಿಂದ ಕಂದಾಯ ಮತ್ತಿತರ ದಾಖಲೆಗಳ ಆಧಾರದ ಮೇಲೆ ಜಮೀನಿನ ಹಕ್ಕನ್ನು ಸ್ಥಾಪಿಸುವುದು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಯಾರ ಜಮೀನು ಮಂಡಳಿಯಿಂದ ವಶಪಡಿಸಿಕೊಳ್ಳಲ್ಪಟ್ಟಿತೋ ಆ ವ್ಯಕ್ತಿಗಳು ಪರಿಹಾರವನ್ನು ಕೋರುವುದಕ್ಕಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳಿಂದ ತಯಾರಿಸಲಾದ ಪಟ್ಟಿಯ ಪ್ರಕಾರ ದಾಖಲೆಗಳನ್ನು ಸಲ್ಲಿಸಬೇಕು. ಅರ್ಜಿದಾರರಿಂದ ಈ ಪಟ್ಟಿಗಳ ಪ್ರಕಾರ ಸ್ವೀಕರಿಸಲಾದ ದಾಖಲೆಗಳ ಪರಿಶೀಲನೆಯ ನಂತರ ವಿಶೇಷ ಭೂಸ್ವಾಧೀನಾಧಿಕಾರಿಗಳು ಕೋರಿಕೆಗಳನ್ನು ಸಂಸ್ಕರಿಸಿ ಅರ್ಜಿದಾರರಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಹಾರವನ್ನು ಬಟವಾಡೆ ಮಾಡುವರು. ಆದರೆ ಭೂ ಪರಿಹಾರ ಪಾವತಿಗಳ ಪರಿಶೀಲನೆಯ ಪ್ರಕಾರ ತಿಳಿದು ಬಂದಿದ್ದೇನೆಂದರೆ, ಭೂ ಪರಿಹಾರದ ಕಡೆಗೆ ರೂ.79.29 ಕೋಟಿಯನ್ನು ಪಾವತಿ ಮಾಡುವಾಗ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಉಲ್ಲಂಘನೆಗಳಾಗಿರುವುದು ಕಂಡು ಬಂದಿರುತ್ತದೆ. ಅದರಂತೆ ಮಂಡಳಿಯಿಂದ ಜಮೀನಿನ ಸ್ಥಿತಿಯ ಪರಿಶೀಲನೆಯಾಗದ ಕಾರಣದಿಂದ ರೂ.1.84 ಕೋಟಿ ತಪ್ಪು ಪಾವತಿಯಲ್ಲಿ ಪರಿಣಮಿಸುವಂತೆ, ಒಂದೇ ಜಮೀನಿಗೆ ಸಾಕಷ್ಟು ಭಾರಿ ಭೂ ಪರಿಹಾರದ ಪಾವತಿ ಮಾಡಲಾಗಿದ್ದು, ಈ ರೀತಿಯ ಪ್ರಕರಣಗಳು ಸಾಕಷ್ಟು ಕಡೆ ಕಂಡು ಬಂದಿರುತ್ತದೆ. ಭೂ ಪರಿಹಾರ ಪಾವತಿಯನ್ನು ಬಟವಾಡೆ ಮಾಡುವಾಗ ಆದ ಲೋಪಗಳು ಸಾಕಷ್ಟಿದೆ. ಈ ಎಲ್ಲಾ ವಿಚಾರಗಳ ಕುರಿತಾಗಿ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಿಂದ ಉತ್ತರವನ್ನು ಬಯಸುತ್ತಿದ್ದೇನೆ.

ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ಇವರು ನಿಯಮ-330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 26 ಕ್ಕೆ ಉತ್ತರ.

*****

ಪ್ರಶ್ನೆ:

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ವಶಪಡಿಸಿಕೊಳ್ಳಲಾದ ಜಮೀನು ಸರ್ಕಾರಿ ಮತ್ತು ಖಾಸಗಿ ಜಮೀನಿನಿಂದ ಕೂಡಿದ್ದು, ಭೂ ವ್ಯವಹಾರಗಳು ಸಂಕೀರ್ಣ ಕಂದಾಯ ದಾಖಲೆಗಳ ಪರಿಶೋಧನೆಯನ್ನು ಒಳಗೊಂಡಿರುವುದರಿಂದ ಕಂದಾಯ ಮತ್ತಿತರ ದಾಖಲೆಗಳ ಆಧಾರದ ಮೇಲೆ ಜಮೀನಿನ ಹಕ್ಕನ್ನು ಸ್ಥಾಪಿಸುವುದು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಯಾರ ಜಮೀನು ಮಂಡಳಿಯಿಂದ ವಶಪಡಿಸಿಕೊಳ್ಳಲ್ಪಟ್ಟಿತೋ ಆ ವ್ಯಕ್ತಿಗಳು ಪರಿಹಾರವನ್ನು ಕೋರುವುದಕ್ಕಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳಿಂದ ತಯಾರಿಸಲಾದ ಪಟ್ಟಿಯ ಪ್ರಕಾರ ದಾಖಲೆಗಳನ್ನು ಸಲ್ಲಿಸಬೇಕು. ಅರ್ಜಿದಾರರಿಂದ ಈ ಪಟ್ಟಿಗಳ ಪ್ರಕಾರ ಸ್ವೀಕರಿಸಲಾದ ದಾಖಲೆಗಳ ಪರಿಶೀಲನೆಯ ನಂತರ ವಿಶೇಷ ಭೂಸ್ವಾಧೀನಾಧಿಕಾರಿಗಳು ಕೋರಿಕೆಗಳನ್ನು ಸಂಸ್ಕರಿಸಿ ಅರ್ಜಿದಾರರಿಗೆ ಪರಿಹಾರವನ್ನು ಬಟಾವಾಡೆ ಮಾಡುವರು. ಆದರೆ ಭೂಪರಿಹಾರ ಪಾವತಿಗಳ ಪರಿಶೀಲನೆಯ ಪ್ರಕಾರ ತಿಳಿದುಬಂದಿದ್ದೇನೆಂದರೆ, ಭೂಪರಿಹಾರದ ಕಡೆಗೆ ರೂ.79.29 ಕೋಟಿಯನ್ನು ಪಾವತಿ ಮಾಡುವಾಗ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಉಲ್ಲಂಘನೆಗಳಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಮಂಡಳಿಯಿಂದ ಜಮೀನಿನ ಸ್ಥಿತಿಯ ಪರಿಶೀಲನೆಯಾಗದ ಕಾರಣದಿಂದ, ರೂ.1.84 ಕೋಟಿ ತಪ್ಪು ಪಾವತಿಯಲ್ಲಿ ಪರಿಣಮಿಸುವಂತೆ, ಒಂದೇ ಜಮೀನಿಗೆ ಸಾಕಷ್ಟು ಭಾರಿ ಭೂ ಪರಿಹಾರದ ಪಾವತಿ ಮಾಡಲಾಗಿದ್ದು, ಈ ರೀತಿಯ ಪ್ರಕರಣಗಳು ಸಾಕಷ್ಟು ಕಡೆ ಕಂಡು ಬಂದಿರುತ್ತದೆ. ಭೂಪರಿಹಾರ ಪಾವತಿಯನ್ನು ಬಟವಾಡೆ ಮಾಡುವಾಗ ಆದ ಲೋಪಗಳು ಸಾಕಷ್ಟಿದೆ. ಈ ಎಲ್ಲಾ ವಿಚಾರಗಳ ಕುರಿತಾಗಿ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಬಳಿ ಪ್ರಸ್ತಾಪಿಸಲು ಅನುಮತಿ ನೀಡುವಂತೆ ಕೋರುತ್ತೇನೆ.

ಉತ್ತರ:

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಜಮೀನುಗಳಿಗೆ ಇರುವ ಬೇಡಿಕೆಗಳಿಗೆ ಅನುಗುಣವಾಗಿ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಕಾರ್ಯಪಾಲಕ ಅಭಿಯಂತರರು, ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನುಗಳನ್ನು ಗುರುತಿಸಿದ ನಂತರ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಪ್ರಾಥಮಿಕ ಅಧಿಸೂಚನೆ ಹಾಗೂ ಅಂತಿಮ ಅಧಿಸೂಚನೆ ಹೊರಡಿಸಿ ನಿಯಮಾನುಸಾರ ದರ ನಿಗದಿಪಡಿಸಿ ಸಂಬಂಧಪಟ್ಟ ಭೂಮಾಲೀಕರುಗಳಿಗೆ ಕಂದಾಯ ದಾಖಲೆಗಳನ್ವಯ ಜಮೀನಿನ ಮಾಲೀಕತ್ವದ ಅನುಸಾರ ಪರಿಹಾರ ವಿತರಣೆ ಮಾಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾಧೀನಪಡಿಸಿದ ಜಮೀನುಗಳ ಮಾಲೀಕರುಗಳಿಗೆ ತಮ್ಮ ಜಮೀನುಗಳ ಮಾಲೀಕತ್ವವನ್ನು ಧೃಡಪಡಿಸುವ ಬಗ್ಗೆ ನಿರ್ದಿಷ್ಟಪಡಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಸಂಬಂಧಪಟ್ಟ ವಿಶೇಷ ಭೂಸ್ವಾಧೀನಾಧಿಕಾರಿಗಳು ಭೂಮಾಲೀಕರುಗಳಿಗೆ ನೋಟೀಸ್ ನ್ನು ನೀಡಿ ಸ್ವಾಧೀನಪಡಿಸಿದ ಜಮೀನುಗಳ ಹಕ್ಕನ್ನು ಖಾತರಿಪಡಿಸುವ ಕಂದಾಯ ದಾಖಲೆಗಳೊಂದಿಗೆ, ಭೂಮಾಲೀಕರುಗಳ ಗುರುತನ್ನು ನಿರ್ದಿಷ್ಟಪಡಿಸುವ ದಾಖಲೆಗಳಾದ ಆಧಾರ್ ಕಾರ್ಡ್, ಬ್ಯಾಂಕ್ ಖಾತೆಗಳ ವಿವರ, ಭೂಮಾಲೀಕರುಗಳ ಭಾವಚಿತ್ರ, ಮತ್ತಿತರೆ ಅವಶ್ಯ ದಾಖಲೆಗಳನ್ನು ಪಡೆಯಲಾಗುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು ಭೂಪರಿಹಾರ ವಿತರಣೆಯ ಅಧಿಕಾರಿಗಳಾಗಿದ್ದು, ಸ್ವಾಧೀನಪಡಿಸಿದ ಜಮೀನುಗಳ ಪ್ರಾಥಮಿಕ ಅಧಿಸೂಚನೆ ಹಾಗೂ ಅಂತಿಮ ಅಧಿಸೂಚನೆಯನ್ವಯ ಭೂಮಾಲೀಕರುಗಳಿಗೆ ಸದರಿಯವರ ವಿಸ್ತೀರ್ಣದ ಜಮೀನಿನ ಸೂಕ್ತ ದಾಖಲೆಗಳನ್ನು ಪಡೆದು ಹಕ್ಕನ್ನು ಹಾಗೂ ಅನುಭವದಲ್ಲಿರುವ ವಿಸ್ತೀರ್ಣವನ್ನು ಧೃಢಪಡಿಸಿಕೊಂಡು ಭೂಮಾಲೀಕರು ಒಪ್ಪಿದಲ್ಲಿ ಒಪ್ಪಂದದ ಐತೀರ್ಪಿನ ಮೊತ್ತವನ್ನು ಹಾಗೂ ಭೂಮಾಲೀಕರು ಸದರಿ ಒಪ್ಪಂದದ ಐತೀರ್ಪಿನ ಮೊತ್ತವನ್ನು ಒಪ್ಪದೇ ಇದ್ದಲ್ಲಿ ಅಥವಾ ಯಾವುದೇ ನ್ಯಾಯಾಲಯದ ವ್ಯಾಜ್ಯಗಳಿದ್ದಲ್ಲಿ ನಿಯಮಾನುಸಾರ ಸಾಮಾನ್ಯ ಐತೀರ್ಪನ್ನು ರಚಿಸಿ ನ್ಯಾಯಾಲಯಕ್ಕೆ ರೇವಣಿ ಮಾಡಲಾಗುತ್ತದೆ.

ಆದಾಗ್ಯೂ, ಮಂಡಳಿಯು ಸ್ವಾಧೀನಪಡಿಸಿದ ಕೆಲವು ಯೋಜನಾ ಪ್ರದೇಶಗಳ ಪರಿಹಾರ ವಿತರಣೆಯಲ್ಲಿ ಲೋಪಗಳು ಉಂಟಾಗಿರುವುದು ಕಂಡುಬಂದಿದ್ದು ಅಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ವಿಶೇಷ ಭೂಸ್ವಾಧೀನಾಧಿಕಾರಿಗಳ ಮೇಲೆ ಶಿಸ್ತು ಕ್ರಮಕ್ಕೆ ಶಿಫಾರಸ್ಸಿನೊಂದಿಗೆ ಪ್ರಥಮ ವರ್ತಮಾನ ವರದಿ (FIR) ಯನ್ನು ಭೂಪರಿಹಾರ ಪಡೆದ ಹಾಗೂ ನೀಡಿದ ವ್ಯಕ್ತಿಗಳ / ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ದಾಖಲಿಸುವುದು ಹಾಗೂ ಕೂಡಲೇ ಈಗಾಗಲೇ ವಿತರಿಸಿದ ಭೂಪರಿಹಾರವನ್ನು ಹಿಂಪಡೆಯುವ ಬಗ್ಗೆ ನ್ಯಾಯಾಲಯದಲ್ಲಿ ರಿಕವರಿ ಸೂಟ್‌ನ್ನು ದಾಖಲಿಸುವುದು, ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದರಿಂದ ಗಮನಾರ್ಹ ಪ್ರಮಾಣದಲ್ಲಿ ಈ ತರಹದ ಪ್ರಕರಣಗಳು ಕಡಿಮೆಯಾಗಿರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿ ಧಾರವಾಡ ರವರ ವ್ಯಾಪ್ತಿಯ ಕೆಲಗೇರಿ, ಮಮ್ಮಿಗಟ್ಟಿ, ಕೋಟೂರು, ಬೇಲೂರು ಇತ್ಯಾದಿ ಕೈಗಾರಿಕಾ ಪ್ರದೇಶಗಳಲ್ಲಿ ಒಂದೇ ಜಮೀನಿಗೆ ಎರಡು ಬಾರಿ ಪರಿಹಾರ ವಿತರಣೆಯಾಗಿರುವ ಪ್ರಕರಣ ಬೆಳಕಿಗೆ ಬಂದಿದ್ದು, ಈ ಬಗ್ಗೆ ಮಂಡಳಿಯಿಂದ ತನಿಖೆ ನಡೆಸಿರುವಂತೆ ಮೇಲ್ನೋಟಕ್ಕೆ ಒಟ್ಟು ಮೊಬಲಗು ರೂ.19,99,55,000/- ಗಳ ಎರಡನೇ ಬಾರಿ ಹೆಚ್ಚುವರಿಯಾಗಿ ಪರಿಹಾರ ಪಾವತಿಸಿರುವುದು ಕಂಡುಬಂದಿದ್ದು, ಆ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದ ಮೇಲೆ ಪ್ರಕರಣ ದಾಖಲಾಗಿ ಸದರಿಯವರಿಗೆ ಸೆರೆವಾಸ ಶಿಕ್ಷೆ ವಿಧಿಸಲಾಗಿರುತ್ತದೆ ಹಾಗೂ ಸದರಿ ಪ್ರಕರಣದ ವಿಚಾರಣೆಯು ಸಹ ಚಾಲ್ತಿಯಲ್ಲಿರುತ್ತದೆ. ಮುಂದುವರೆದು, ಒಂದೇ ಜಮೀನಿಗೆ ಎರಡನೇ ಬಾರಿ ಪರಿಹಾರ ಪಾವತಿಸಿರುವ ಮೊತ್ತವನ್ನು ಹಿಂಪಡೆಯುವ (ರಿಕವರಿ) ಪ್ರಕ್ರಿಯೆ ಕೂಡ ಚಾಲ್ತಿಯಲ್ಲಿದ್ದು, ಸದರಿ ಪ್ರಕರಣ ಮೇಲೆ ಜಾರಿ ನಿರ್ದೇಶನಾಲಯವು (ED) ಸಹ ತನಿಖೆ ನಡೆಸಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದುವರೆದು, ರಾಮನಗರ ಜಿಲ್ಲೆ ವ್ಯಾಪ್ತಿಯ ಬನ್ನಿಕುಪ್ಪೆ ಗ್ರಾಮದಲ್ಲಿಯೂ ಸಹ ಒಟ್ಟು ಮೊಬಲಗು ರೂ.1,58,00,000/- ಗಳು ಎರಡನೇ ಬಾರಿ ಪರಿಹಾರ ಪಾವತಿಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ. ಹಿಂದೆ ಸಣ್ಣ ನೀರಾವರಿ ಇಲಾಖೆಯಿಂದ ಸ್ವಾಧೀನಪಡಿಸಿ ಪರಿಹಾರ ವಿತರಿಸಿದ ಜಮೀನನ್ನು ಸದರಿ ಇಲಾಖೆಯು ಅಧಿಸೂಚಿತ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೇ ಇರುವುದರಿಂದ ಹಾಗೂ ಈ ಬಗ್ಗೆ ಕಂದಾಯ ದಾಖಲೆಗಳಲ್ಲಿ **"ಸಣ್ಣ ನೀರಾವರಿ ಇಲಾಖೆಯಿಂದ ಭೂಸ್ವಾಧೀನ"** ಎಂದು ನಮೂದಾಗದೇ ಇದ್ದುದರಿಂದ ಹಾಗೂ ಮಂಡಳಿಯ ಕೈಗಾರಿಕಾ ಪ್ರದೇಶದ ಅಭಿವೃದ್ಧಿಗಾಗಿ ಸ್ವಾಧೀನಪಡಿಸಿದ ಜಮೀನಿನ ವ್ಯಾಪ್ತಿಯಲ್ಲಿ ಬಂದಿದ್ದರಿಂದ ಈ ಹಿಂದೆ ಪರಿಹಾರ ವಿತರಿಸಿದ ಜಮೀನಿಗೆ ಮತ್ತೊಮ್ಮೆ ಪರಿಹಾರ ವಿತರಣೆಯಾಗಿರುತ್ತದೆ.

ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿ, ಮಾನ್ಯ ನ್ಯಾಯಾಲಯದ ಆದೇಶದಂತೆ ಎರಡನೇ ಬಾರಿ ಪರಿಹಾರ ಪಡೆದ ಭೂಮಾಲೀಕರು ರೂ.75.00 ಲಕ್ಷವನ್ನು ಪ್ರಾರಂಭಿಕವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಠೇವಣಿಕರಿಸಿರುತ್ತಾರೆ. ಉಳಿದಂತೆ ಬಾಕಿ ಉಳಿದ ಮೊಬಲಗನ್ನು ಮರು ಪಾವತಿ ಪಡೆಯುವ ಬಗ್ಗೆ ಆರ್.ಎಫ್.ಎ. 675, 676 ಮತ್ತು 677/2019 ರಂತೆ ಪ್ರಕರಣ ಅಂತಿಮ ಆದೇಶ ಹೊರಡಿಸಲು ಬಾಕಿ ಇರುತ್ತದೆ ಹಾಗೂ ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಶಿಫಾರಸ್ಸು ಮಾಡಲಾಗಿದೆ.

ಈ ತರಹ ಸಂದರ್ಭಗಳು ಉದ್ಭವವಾಗದಂತೆ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಪರಿಹಾರ ವಿತರಣೆಯ ಸಂದರ್ಭಗಳಲ್ಲಿ ಜಾಗರೂಕತೆಯಿಂದ ಯಾವುದೇ ತಪ್ಪಿಗೆ ಅವಕಾಶವಿಲ್ಲದಂತೆ ಪರಿಹಾರ ವಿತರಣೆ ಮಾಡಲು ಹಲವಾರು ಸುತ್ತೋಲೆಗಳ ಮೂಲಕ, ಪ್ರತಿ ಯೋಜನಾ ಅನುದಾನ ಬಿಡುಗಡೆ ಪತ್ರಗಳಲ್ಲಿಯೂ ಸಹ ಹಾಗೂ ಹಲವಾರು ಸಭೆಗಳಲ್ಲಿ ಹಾಗೂ ಪ್ರಗತಿ ಪರಿಶೀಲನಾ ಸಭೆಗಳಲ್ಲಿಯೂ ಸಹ ಸೂಚಿಸಲಾಗಿರುತ್ತದೆ.

ಸಂಖ್ಯೆ: ಸಿಐ 447 ಐಎಪಿ 2025

(ಎಂ.ಬಿ.ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಈ ಹಿಂದೆ ಅಂದರೆ ನಾವು ಬರುವುದಕ್ಕಿಂತ ಮುಂಚೆ ಹಿಂದಿನ ಸರ್ಕಾರದಲ್ಲಿ ಅಂದಿನ ಸಚಿವರಾಗಲಿ, ಬೇರೆ ಯಾರು ಕಾರಣಕರ್ತರು ಎಂದು ನಾನು ಹೇಳುವುದಿಲ್ಲ. ಇಬ್ಬರು SLAOs (Special Land Acquisition Officer) ಮತ್ತೊಬ್ಬರು ಸೇರಿಕೊಂಡು fake identity ಯನ್ನು ಮಾಡಿದ್ದರು. ಮಾನ್ಯ ಸದಸ್ಯರು 79 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಅದು 79 ಕೋಟಿ ರೂಪಾಯಿಗಳಲ್ಲ. ಸುಮಾರು 19.99 ಕೋಟಿ ರೂಪಾಯಿಗಳು. ಅದೇನೇ ಇರಲಿ, ಇದು ಕೂಡ ದೊಡ್ಡ ಮೊತ್ತವಾಗಿದೆ. ಇವತ್ತಿನ ದಿವಸ ಅವರು ಧಾರವಾಡದಲ್ಲಿ fake identity ಯನ್ನು ಮಾಡಿಕೊಂಡು ರೈತರಿಗೆ ಭೂ ಪರಿಹಾರ ಸಿಕ್ಕಿದೆ. ಎರಡನೇ ಬಾರಿಗೆ ಅವರು fraud ಮಾಡಿದಂತಹ ಉದಾಹರಣೆ ಇದೆ. ತದನಂತರ ಇ.ಡಿ. ತನಿಖೆ ನಡೆಯುತ್ತಿದೆ. ಈಗ ಒಬ್ಬರು ಜೈಲಿನಲ್ಲಿದ್ದಾರೆ. ಅದರ ಮೇಲೆ ಇ.ಡಿ. ತನಿಖೆ ನಡೆಯುತ್ತಿದೆ. ಇವೆಲ್ಲಾ ಹೇಗೆ ನಡೆಯುತ್ತಿದೆ ಎಂದರೆ ಬಹಳಷ್ಟು ಕಂದಾಯದಿಂದ, ಈಗ ಕಂದಾಯ ಸಚಿವರಾದ ಶ್ರೀ ಕೃಷ್ಣಬೈರೇಗೌಡರವರು ಬಂದ ಮೇಲೆ ಇವತ್ತಿನ ದಿವಸ ಎಲ್ಲಾ ಆಧಾರ್ ಸಂಖ್ಯೆಗೆ ಲಿಂಕ್ ಮಾಡಿ ಇವೆಲ್ಲಾ ಮಾಡುತ್ತಿದ್ದಾರೆ. (ಮುಂದು)

(650) 12/08/2025 4:00 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಂ.ಬಿ.ಪಾಟೀಲ್ (ಮುಂದು):-

ರಾಜ್ಯದ ನಮ್ಮ ಅಥವಾ ಬೇರೆ ಇನ್ಯಾವುದೇ ಜಿಲ್ಲೆಗಳಲ್ಲಿನ ಉದಾಹರಣೆಗಳನ್ನು ಗಮನಿಸಿದಾಗ, ಎಷ್ಟೋ ಸಂದರ್ಭಗಳಲ್ಲಿ ಮಾಲೀಕರೊಬ್ಬರ ಹೆಸರಿನಲ್ಲಿ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗುತ್ತಿತ್ತು. ಆಗ ಯಾವುದೂ ಸಹ ಪರಿಶೀಲನೆಯಾಗುತ್ತಿರಲಿಲ್ಲ. ಯಾರದೋ ಫೋಟೋ ಇಟ್ಟುಕೊಂಡು, ಅದು ನನ್ನದೇ ಜಮೀನು ಎಂದು ಹೇಳಿ ಜಮೀನು ಮಾರಾಟ ಮಾಡಿರುವ ಸಾವಿರಾರು ಉದಾಹರಣೆಗಳಿವೆ. ನಮ್ಮ ಜಿಲ್ಲೆಯಲ್ಲಿಯೇ ಸುಮಾರು 20ಕ್ಕೂ ಹೆಚ್ಚು ಪ್ರಕರಣಗಳು ಇದ್ದವು. ನಾನು ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿ ಇವತ್ತಿನ ದಿವಸ ದೂರನ್ನು ನೀಡಿದ್ದೇನೆ. ಇವತ್ತಿನ ದಿವಸ ಶ್ರೀ ಕೃಷ್ಣ ಭೈರೇಗೌಡ ರವರು ಕಂದಾಯ ಸಚಿವರಾದ ಮೇಲೆ ಇವುಗಳೆಲ್ಲವೂ ನಿಂತು ಹೋಗಿವೆ. ಈ ಹಿಂದೆ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಯಾವುದೇ ಪರಿಶೀಲನಾ ಪ್ರಕ್ರಿಯೆ ಇರುತ್ತಿರಲಿಲ್ಲ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಮಾಡಿದ ನೋಂದಣಿಯನ್ನು ಪತ್ತೆ ಹಚ್ಚಲಾಗಿದ್ದು, ಇದರ ಬಗ್ಗೆ ಜಾರಿ ನಿರ್ದೇಶನಾಲಯದವರು ತನಿಖೆ ನಡೆಸುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತೊಂದೆಡೆ, ಸಣ್ಣ ನೀರಾವರಿ ವಿಚಾರದ ಬಗ್ಗೆ ಹೇಳುವುದಾದರೆ, ಇದರಲ್ಲಿ ನೋಡಿದಾಗ, ನಿಜವಾಗಿಯೂ ಸಹ ವಿಶೇಷ ಭೂ ಸ್ವಾಧೀನಾಧಿಕಾರಿಯ ತಪ್ಪು ಇಲ್ಲ. ಸಣ್ಣ ನೀರಾವರಿ ಇಲಾಖೆಯವರು ಭೂ ಸ್ವಾಧೀನ ಪಡಿಸಿಕೊಂಡಾಗ ಜಮೀನನ್ನು ಇಲಾಖೆಯ ಹೆಸರಿಗೆ ಬದಲಾವಣೆ ಮಾಡಿಕೊಂಡಿಲ್ಲ. ಆದರೆ, ಅವರು ಜಮೀನಿನ ಹೆಸರಿನ ಬದಲಾವಣೆಯನ್ನು ಮಾಡಿಕೊಳ್ಳಬೇಕಾಗಿತ್ತು. ಹೀಗೆ ಜಮೀನಿನ ಹೆಸರಿನ ಬದಲಾವಣೆ ಮಾಡಿಕೊಳ್ಳದಿದ್ದಾಗ, ರೈತರು ಭೂ ಪರಿಹಾರವನ್ನು ಪುನಃ ಕೇಳಿದ್ದಾರೆ. ಆಗ ಅವರಿಗೆ ಭೂ ಪರಿಹಾರವನ್ನು ನೀಡಲಾಗಿದೆ. ಅವರು ಬೇರೆ ಉದ್ದೇಶದಿಂದ ಮಾಡಿದ್ದಾರೆ ಎಂತಲ್ಲ. ಜಮೀನಿನ ಹೆಸರಿನ ವರ್ಗಾವಣೆ ಮಾಡುವುದು ಸಣ್ಣ ನೀರಾವರಿ ಇಲಾಖೆಯ ಕೆಲಸವಾಗಿತ್ತು. ಇವರು ಹೆಸರು ಬದಲಾವಣೆ ಮಾಡಿಕೊಂಡಿಲ್ಲವೆಂದಾದಾಗ, ಅದು ರೈತರ ಹೆಸರಿನಲ್ಲಿಯೇ ಮುಂದುವರೆಯಿತು. ಹೀಗಾಗಿ ಅವರು ಭೂ ಪರಿಹಾರವನ್ನು ಕೇಳಿ, ಪಡೆದುಕೊಂಡಿದ್ದಾರೆ. ಇಲ್ಲಿ ಎರಡೂ ರೀತಿಯ ಉದಾಹರಣೆಗಳಿವೆ. ಕಾಲ-ಕಾಲಕ್ಕೆ ಇಂತಹ ಬಹಳಷ್ಟು ಉದಾಹರಣೆಗಳು ಬರುತ್ತಿವೆ. ಇವತ್ತಿಗೂ ಸಹ ಈ ರೀತಿಯ ಪ್ರಕರಣಗಳಾಗುತ್ತಿವೆ. ಕಂದಾಯ ಇಲಾಖೆಯವರು ಬಹಳಷ್ಟು ಸುಧಾರಣಾ ಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಎಲ್ಲವನ್ನೂ ತಡೆಗಟ್ಟಲು ಸಾಧ್ಯವಾಗಿದೆ. ನಮ್ಮ ಇಲಾಖೆಯಲ್ಲಿಯೂ ಸಹ ಏಕ ಗವಾಕ್ಷಿ ಪದ್ಧತಿಯಲ್ಲಿ ಬಹಳಷ್ಟು ಬದಲಾವಣೆಗಳನ್ನು ತರುತ್ತಿದ್ದೇವೆ. ಮೈಕ್ರೋಸಾಫ್ಟ್ ಮುಖಾಂತರ ಎಲ್ಲಾ ಇಲಾಖೆಗಳನ್ನು ಲಿಂಕ್ ಮಾಡಿಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಕೆ.ಐ.ಎ.ಡಿ.ಬಿ. ಸಂಸ್ಥೆಯಲ್ಲಿಯೂ ಸಹ ಇವತ್ತಿನ ದಿವಸ ಗಣಕೀಕೃತದ ವ್ಯವಸ್ಥೆಯನ್ನು ಮಾಡಲಾಗಿದೆ. ಯಾವ ಎಸ್.ಎಲ್.ಎ.ಓ. ಏನು ಮಾಡಿದ್ದಾರೆ; ಎಷ್ಟು ಹಣ ಪಾವತಿ ಮಾಡಲಾಗಿದೆ ಹಾಗೂ ಇದನ್ನು ಯಾರಿಗೆ ಮಾಡಲಾಗಿದೆ, ಯಾವ ಜಮೀನು ಬಾಕಿ ಎಂಬಿತ್ಯಾದಿಯಾದ ಮಾಹಿತಿಗಳನ್ನೂ ಸಹ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಭವಿಷ್ಯದಲ್ಲಿ ಈ ರೀತಿಯ ತಪ್ಪುಗಳು ಆಗುವುದಕ್ಕೆ ಸಾಧ್ಯವೇ ಇಲ್ಲ. ಅಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಈ ಎರಡೂ ಪ್ರಕರಣಗಳು ಜಾರಿ ನಿರ್ದೇಶನಾಲಯದ ಬಳಿ ವಿಚಾರಣೆಯಲ್ಲಿವೆ. ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯೂ ಸಹ ಆಗುತ್ತದೆ.

ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):- ಇಲ್ಲಿ ಬಹಳ ಹಳೆಯ ಹಾಗೂ ಹೊಸದಾದ ಪ್ರಕರಣಗಳೂ ಸಹ ಇವೆ. ನಾನು 79 ಕೋಟಿ ರೂಪಾಯಿಗಳ ಬಗ್ಗೆ ಪ್ರಸ್ತಾಪಿಸಿದ್ದೇನೆ. ಇದು ನನ್ನಿಂದ ಬಂದ ಮಾಹಿತಿಯಾಗಿಲ್ಲ. ಲೆಕ್ಕ ಪರಿಶೋಧನಾ ವರದಿಯಲ್ಲಿ ಇದರ ಬಗ್ಗೆ ಉಲ್ಲೇಖಿಸಲಾಗಿದೆ. ಲೆಕ್ಕ ಪರಿಶೋಧಕರು ಇದನ್ನು ಗುರ್ತಿಸಿದ್ದಾರೆ. ಇಂತಿಂತಹ ಪ್ರಕರಣಗಳಲ್ಲಿ ಇಂತಿಷ್ಟು ಕೋಟಿ ರೂಪಾಯಿಗಳನ್ನು ಎರಡು ಬಾರಿ ಪಾವತಿಸಲಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಸದರಿ ವರದಿಯಲ್ಲಿ ಇಲಾಖಾಧಿಕಾರಿಗಳ ಶಾಮೀಲಾತಿಯಿಂದಾಗಿಯೇ ಇದು ಆಗಿದೆ ಎಂಬುದಾಗಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ. ಇದಕ್ಕೆ ಸಂಬಂಧಿತ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ ಎಂಬುದಾಗಿ ಸಚಿವರು ತಿಳಿಸಿದ್ದಾರೆ. ಆ ಪೈಕಿ ಕೆಲವರಿಗೆ ಶಿಕ್ಷೆಯೂ ಸಹ ಆಗಿದೆ ಎಂಬುದಾಗಿ ತಿಳಿಸಿದ್ದಾರೆ. ಆ ಪೈಕಿ ಕೆಲವು ಸಿಬ್ಬಂದಿಗಳು ಇನ್ನೂ ಸರ್ಕಾರಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇವೆಯಲ್ಲಿಯೇ ಮುಂದುವರೆದಿದ್ದಾರೆ. ಹೀಗಾಗಿ ನಾನು ಇಲ್ಲಿ ಕೇಳುವ ಪ್ರಶ್ನೆ ಏನೆಂದರೆ, 79 ಕೋಟಿ ರೂಪಾಯಿಗಳಷ್ಟು ಸರ್ಕಾರದ ಹಣ... ಇಲಾಖೆಯವರು 19 ಕೋಟಿ ರೂಪಾಯಿಗಳ ಅಂಕಿ-ಅಂಶಗಳನ್ನು ನೀಡಿದ್ದಾರೆ. ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ ಅದು 79 ಕೋಟಿ ರೂಪಾಯಿಗಳಾಗಿವೆ. ಈ ಅಂಶವನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿಯೂ (Public Accounts Committee) ಸಹ ಒಪ್ಪಿಕೊಂಡಿದ್ದಾರೆ. ಇದು ಯಾರದೇ ಕಾಲದಲ್ಲಿ ಆಗಿರಲಿ, ಅಧ್ಯಕ್ಷರು ಇದ್ದಾರೆ. ಹೀಗಾಗಿ ನಾವು ಅಧ್ಯಕ್ಷರನ್ನು ಕೇಳುತ್ತಿದ್ದೇವೆ. ಅಲ್ಲಿ ಯಾವ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರೋ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮುಖಾಂತರ ಸರ್ಕಾರದ ವತಿಯಿಂದ ಎರಡು ಬಾರಿ ಪಾವತಿ ಮಾಡಲಾದ 19 ಅಥವಾ 79 ಕೋಟಿ ರೂಪಾಯಿಗಳು ಎಷ್ಟೇ ಇರಲಿ, ಅದನ್ನು ವಸೂಲಿ ಮಾಡುವುದಕ್ಕೆ ಸರ್ಕಾರಕ್ಕೆ ಏನಾದರೂ ತೊಂದರೆ ಇದೆಯೇ? ತಪ್ಪಿತಸ್ಥರ ಪೈಕಿ ಕೆಲವರು ಇನ್ನೂ ಸೇವೆಯಲ್ಲಿದ್ದು, ಮತ್ತೂ ಕೆಲವರು ಸರ್ಕಾರಿ ಸೇವೆಯಿಂದ ನಿವೃತ್ತರಾಗಿದ್ದಾರೆ. ಹೀಗೆ ನಿವೃತ್ತಿ ಹೊಂದಿದವರ ಆಸ್ತಿಗಳಿಲ್ಲವೇ? ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಈ ರೀತಿಯಾಗಿ ಅಧಿಕಾರಿಗಳು ಏನೇ ಮಾಡಿದರೂ, ಅದನ್ನು ಸರ್ಕಾರವು ಬಿಟ್ಟುಕೊಟ್ಟರೆ ಹೇಗೆ? ಇಷ್ಟೊಂದು ಕೋಟ್ಯಾಂತರ ಮೊತ್ತದ ಹಣದ ವ್ಯವಹಾರ ನಡೆಯಬೇಕಾದರೆ, ಇಲಾಖೆಯ ಒಬ್ಬ ಹಿರಿಯ ಅಧಿಕಾರಿ ಅಭಿಪ್ರಾಯ ಅಥವಾ ಅನುಮತಿ ಇಲ್ಲದೇ ಹಣ ಬಿಡುಗಡೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಇಲಾಖೆಯ ಯಾವುದೇ ಹಿರಿಯ ಅಧಿಕಾರಿಗೆ ಇಲ್ಲಿ ಶಿಕ್ಷೆಯಾಗಲಿಲ್ಲ. ಇಲ್ಲಿ ಕೇವಲ ಲೆಕ್ಕಿಗ ಇತ್ಯಾದಿ ಕೆಳಹಂತದ ಸಿಬ್ಬಂದಿಗಳನ್ನು ಶಿಕ್ಷಿಸಿರುವುದು ಬಹಳ ಅಕ್ಷಮ್ಯ ಅಪರಾಧವಾಗಿದೆ. ಮಾನ್ಯ ಸಚಿವರು ಬಹಳ ಸಮರ್ಥರಿದ್ದಾರೆ. ಈ ರೀತಿಯ ತಪ್ಪುಗಳು ಯಾರದ್ದೇ ಅವಧಿಯಲ್ಲಿ ಆಗಿರಲಿ; ಸಚಿವರ ದಕ್ಷತೆಯಿಂದ ಅಲ್ಲಿರುವ ಅಧಿಕಾರಿಗಳಿಗೆ ತಾಕೀತು ಮಾಡಿ ತಕ್ಷಣವೇ ಅವರಿಂದ ಹಣ ವಸೂಲು ಆಗಬೇಕು. ಈ ರೀತಿಯಾಗಿ ಹಣ ದುರುಪಯೋಗ ಮಾಡಿದ್ದಕ್ಕಾಗಿ ಅವರಿಗೆ ಶಿಕ್ಷೆಯೂ ಸಹ ಆಗಬೇಕು. ಅವರುಗಳು ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದಾರೆ ಎಂದು ಸುಮ್ಮನೆ ಕುಳಿತರೆ; ಅಲ್ಲಿಗೆ ಪ್ರಕ್ರಿಯೆಯನ್ನು ನಿಲ್ಲಿಸುವುದಕ್ಕಾಗುವುದಿಲ್ಲ.

ಶ್ರೀ ಎಂ.ಬಿ.ಪಾಟೀಲ್:- ಮಾನ್ಯ ಸಭಾಪತಿಯವರೆ, ಇಲ್ಲಿ ಸುಮ್ಮನೆ ಆಗುವ ಪ್ರಶ್ನೆಯೇ ಇಲ್ಲ. ಜಾರಿ ನಿರ್ದೇಶನಾಲಯದವರು ಈ ಪ್ರಕರಣಗಳನ್ನು ತನಿಖೆ ಮಾಡುವಾಗ ಎಲ್ಲರಿಗೂ ನೋಟೀಸ್‌ಗಳನ್ನು ನೀಡಲಾಗಿತ್ತು. ಇದರ ಬಗ್ಗೆ ನಾವೂ ಸಹ ಸಂಪೂರ್ಣವಾಗಿ ಪರಿಶೀಲನೆ ಮಾಡಿದ್ದೇವೆ. ಆಗಿನ ವಿಶೇಷ ಜಿಲ್ಲಾಧಿಕಾರಿ ಏನು ಮಾಡುತ್ತಿದ್ದರು? ಜಾರಿ ನಿರ್ದೇಶನಾಲಯದವರು ವಿಶೇಷ ಜಿಲ್ಲಾಧಿಕಾರಿಗಳ ಹೇಳಿಕೆಯನ್ನೂ ಸಹ ಪಡೆದುಕೊಂಡಿದ್ದಾರೆ. ಜಾರಿ ನಿರ್ದೇಶನಾಲಯದವರೇ ಎಲ್ಲವನ್ನೂ ಪರಿಶೀಲನೆ ಮಾಡುತ್ತಿದ್ದಾರೆ. ಸ್ಥಳೀಯ ಭೂ ಸ್ವಾಧೀನಾಧಿಕಾರಿ ಮತ್ತು ಇತರೆ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಹಣ ಯಾರಿಗೆ ಬಿಡುಗಡೆ ಮಾಡಲಾಗುತ್ತಿದೆ ಎನ್ನುವ ಪಟ್ಟಿಯೇ ಬಂದಿರಲಿಲ್ಲ. This is for the kind information of the House. ಜಾರಿ ನಿರ್ದೇಶನಾಲಯದವರು ತನಿಖೆ ಮಾಡುತ್ತಿರುವ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನೂ ಸಹ ಉತ್ತರವನ್ನು ಕೊಡಬೇಕಾಗಿತ್ತು. ಸಚಿವನಾಗಿ ನಾನು ಇದನ್ನು ಮಾಡಿದ್ದೇನೆ. ಇಲಾಖೆಯ ಸ್ಥಳೀಯ ಅಧಿಕಾರಿಗಳು ಈ ರೀತಿಯ ತಪ್ಪು ಕೆಲಸಗಳನ್ನು ಮಾಡಿದ್ದಾರೆ. ಇದರಲ್ಲಿ ಇಲಾಖೆಯ ಮೇಲಿನ ಅಧಿಕಾರಿಗಳ ಯಾರದ್ದೂ ಪಾಲು ಇಲ್ಲ. ಜಾರಿ ನಿರ್ದೇಶನಾಲಯದವರು ವಿಶೇಷ ಜಿಲ್ಲಾಧಿಕಾರಿಗೂ ಸಹ ನೋಟೀಸ್ ಅನ್ನು ನೀಡಿ, ಅವರ ವಿಚಾರಣೆ ಮಾಡಿದ್ದಾರೆ. ಇವತ್ತಿನ ದಿವಸ ಜಾರಿ ನಿರ್ದೇಶನಾಲಯದವರು ಸಂಪೂರ್ಣವಾಗಿ ವಿಚಾರಣೆ ಮಾಡುತ್ತಿದ್ದಾರೆ. The matter is seized with the ED. ಇದರಲ್ಲಿ ಹಿರಿಯ ಅಧಿಕಾರಿಗಳು ಭಾಗಿಯಾಗಿದ್ದರೆ, ಅವರಿಗೂ ಸಹ ಶಿಕ್ಷೆಯಾಗುತ್ತದೆ. ಹಣ ವಸೂಲಾತಿ ಮಾಡಲಾಗುತ್ತಿದೆ. ಜಾರಿ ನಿರ್ದೇಶನಾಲಯದವರೇ ಶಿಕ್ಷೆಯನ್ನು ನೀಡುತ್ತಾರೆ. ಅಕ್ರಮದಲ್ಲಿ ಭಾಗಿಯಾದ ಸಿಬ್ಬಂದಿಗಳು ಸೇವೆಯಲ್ಲಿರಲಿ ಅಥವಾ ನಿವೃತ್ತರಾಗಿರಲಿ; ಅವರಿಂದ ವಸೂಲಾತಿ ಮಾಡುವ ಪ್ರಕ್ರಿಯೆಯನ್ನು ನಾವು ಮಾಡುತ್ತೇವೆ; ಇದರಲ್ಲಿ ಎರಡು ಮಾತಿಲ್ಲ. ಜಾರಿ ನಿರ್ದೇಶನಾಲಯದವರ ತನಿಖೆಯಲ್ಲಿ ಯಾರಾದರೂ ಹಿರಿಯ ಅಧಿಕಾರಿಗಳ ಅಥವಾ ಮಂತ್ರಿಗಳ ಹೆಸರು ಹೊರಗೆ ಬಂದರೆ, ಅವರಿಗೂ ಸಹ ಶಿಕ್ಷೆಯಾಗುತ್ತದೆ.

ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಇಲಾಖೆಯ ಮಂತ್ರಿಗಳ ಮೇಲೆ ಬಹಳ ವಿಶ್ವಾಸವಿದೆ. ಆದರೆ ಈ ಪ್ರಕ್ರಿಯೆಯು ತ್ವರಿತಗತಿಯಲ್ಲಾಗಬೇಕು. ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ ಇದೆ ಎಂದ ಮಾತ್ರಕ್ಕೆ ಸುಮ್ಮನೆ ಕುಳಿತುಕೊಳ್ಳಬಾರದು. ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿದ್ದರೆ, ಅದನ್ನು ತೆರವುಗೊಳಿಸುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಹಾಗೂ ಪ್ರಕ್ರಿಯೆಯು ತ್ವರಿತಗತಿಯಲ್ಲಾಗಬೇಕು. ಈ ಅಕ್ರಮದಲ್ಲಿ ಸಣ್ಣ ನೀರಾವರಿ ಇಲಾಖೆಯವರು ನುಣುಚಿಕೊಂಡು ಹೋಗಿದ್ದಾರೆ. ಸಣ್ಣ ನೀರಾವರಿ ಇಲಾಖೆಯವರು ಭೂ ಸ್ವಾಧೀನ ಪಡಿಸಿಕೊಂಡು ಪರಿಹಾರ ಧನ ನೀಡಿದ ನಂತರ ಜಮೀನನ್ನು ಇಲಾಖೆಯ ಹೆಸರಿಗೆ ಮಾಡಿಸಿಕೊಳ್ಳಬೇಕಾಗಿತ್ತು. ಆದರೆ, ಅವರು ಆ ರೀತಿಯಾಗಿ ಮಾಡಲಿಲ್ಲ. ಅದನ್ನು ಭೂ ಮಾಲೀಕರ ಹೆಸರಿಗೆ ಬಿಟ್ಟಿದ್ದರ ಫಲವಾಗಿ ಈ ಇಲಾಖಾಧಿಕಾರಿಗಳಿಂದ ಪುನಃ ಪರಿಹಾರ ಧನ ಪಾವತಿ ಮಾಡುವಂತಾಗಿದೆ. ಸಣ್ಣ ನೀರಾವರಿ ಮಂತ್ರಿಗಳಾದ ಸಭಾನಾಯಕರೂ ಸಹ ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ಸಣ್ಣ ನೀರಾವರಿ ಇಲಾಖಾಧಿಕಾರಿಗಳನ್ನೂ ಸಹ ಇದರಲ್ಲಿ ಒಳಪಡಿಸಬೇಕು. ಇವರುಗಳಿಗೂ ಸಹ ನೋಟೀಸ್ ನೀಡುವಂತಾಗಬೇಕು. ಇವರಿಂದಲೂ ಸಹ ಹಣ ವಸೂಲಾತಿ ಮಾಡುವಂತಾಗಬೇಕು. ಒಟ್ಟಾರೆಯಾಗಿ ಅತೀ ಶೀಘ್ರದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸಚಿವರಲ್ಲಿ ಕೋರುತ್ತೇನೆ.

ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೆ, ಇದು ಕೇವಲ ಇಷ್ಟಕ್ಕೆ ಮಾತ್ರವೇ ಸೀಮಿತವಾಗಿಲ್ಲ. ಬಾಗಲಕೋಟೆ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತದ ವತಿಯಿಂದ ಕೆನಾಲ್ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪ್ರಕ್ರಿಯೆ ಆದಾಗ ಇಂತಹ ಹತ್ತಾರು ಪ್ರಕರಣಗಳು ಅಲ್ಲಿ ಆಗಿವೆ. ಇದರ ಬಗ್ಗೆ ಸಚಿವರಿಗೂ ಸಹ ಗೊತ್ತಿದೆ. ಅಲ್ಲಿನ ಇಲಾಖಾಧಿಕಾರಿಗಳು ಒಮ್ಮಿಂದೊಮ್ಮೆ ಶ್ರೀಮಂತರಾಗಿ, ಕಛೇರಿಗೆ ಬೇರೆ ರೀತಿಯಲ್ಲಿ ಅಡ್ಡಾಡಿದ ರೀತಿಯನ್ನು ನೋಡಿದಾಗ ಅಲ್ಲಿನವರಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಶ್ಚರ್ಯವಾಯಿತು. ಆಗ ಅವರುಗಳು ಇಲಾಖಾಧಿಕಾರಿಗಳನ್ನು ಗಮನಿಸಿದಾಗ ಅಲ್ಲಿನ ದಾಖಲಾತಿಗಳನ್ನು ಪರಿಶೀಲಿಸಿದರು. ಎಲ್ಲಾ ಹಂತಗಳಲ್ಲೂ ಹಾದುಹೋಗಬೇಕಾದ ದಾಖಲೆಗಳು ಅಲ್ಲೇ ಸೀಮಿತವಾಗಿ ಸ್ಥಗಿತಗೊಂಡಿರುವುದು ಹಾಗೂ ಭೂ ಮಾಲೀಕರುಗಳಿಗೆ ಪುನಃ ಮತ್ತೊಂದು ಬಾರಿ ಭೂ ಪರಿಹಾರ ಧನ ಪಾವತಿಯಾಗಿರುವ ಉದಾಹರಣೆಗಳು ಆಗಿ ಹೋಗಿವೆ. ಈ ರೀತಿಯಾದ ಪ್ರಕರಣಗಳು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿಯೂ ಸಹ ಆಗಿವೆ. ಇಂತಹ ಪ್ರಕರಣಗಳು ಸಚಿವರ ಗಮನಕ್ಕೂ ಸಹ ಬಂದಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಇತ್ತೀಚಿಗೆ ಪ್ರವಾಸೋದ್ಯಮ ಇಲಾಖೆಯಲ್ಲಿಯೂ ಸಹ ಇಂತಹುದೇ ರೀತಿಯ ಪ್ರಕರಣಗಳಾಗಿವೆ. BCM (Department of Backward Classes Welfare) ಇಲಾಖೆಯಲ್ಲಿಯೇ ಮೂರ್ನಾಲ್ಕು ಕೋಟಿ ರೂಪಾಯಿಗಳಷ್ಟು ಹಣ ಪುನಃ ಪಾವತಿಯಾಗಿದೆ. ಮತ್ತೊಂದು ಕಡೆ ಮೂರ್ನಾಲ್ಕು ಕೋಟಿ ರೂಪಾಯಿಗಳ ಭ್ರಷ್ಟಾಚಾರವೂ ಸಹ ಆಗಿದೆ.

ಶ್ರೀ ಎಂ.ಬಿ.ಪಾಟೀಲ:- ಮಾನ್ಯ ಸಭಾಪತಿಯವರೆ, ಶ್ರೀ ಪಿ.ಹೆಚ್.ಪೂಜಾರ್ ರವರು ಹೇಳುವ ಅಂಶಗಳು ಸತ್ಯವಾಗಿವೆ. ನಾನು ಈ ಹಿಂದೆ ನೀರಾವರಿ ಸಚಿವನಾಗಿಯೂ ಕೆಲಸ ಮಾಡಿದ್ದೇನೆ. ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಬಹಳ ದೊಡ್ಡ ಪ್ರಮಾಣದಲ್ಲಿ ನೀರಾವರಿ ಯೋಜನೆಗಳು ಬರುತ್ತಲೇ ಇವೆ. ಇಂತಹ ಯೋಜನೆಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆಗಳಾಗುತ್ತಲೇ ಇವೆ. ತಮಗೆ ತಿಳಿದಂತೆ, 4-8 ಲಕ್ಷ ಜಮೀನುಗಳಿಗೆ ಕಡಿಮೆ ಇಲ್ಲದಂತೆ ಯಾವುದಕ್ಕೂ ಸಹ ಇಂಡೀಕರಣವಾಗಿಲ್ಲ; ದಾಖಲಾತಿಗಳು ವರ್ಗಾವಣೆಗೊಳ್ಳದೇ, ಭೂ ಮಾಲೀಕರ ಹೆಸರುಗಳಲ್ಲಿಯೇ ಜಮೀನು ಇದೆ. ನಾನು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡ ನಂತರ ಈ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದೇನೆ. ಈ ರೀತಿಯ ಪ್ರಕರಣಗಳು ಬೆಳಕಿಗೆ ಬಂದ ನಂತರ, ನನ್ನ ಅಧಿಕಾರಾವಧಿಯಲ್ಲಿ ಸುಮಾರು 3-4 ಲಕ್ಷ ಜಮೀನುಗಳಿಗೆ ಇಂಡೀಕರಣ ಪ್ರಕ್ರಿಯೆ ಮಾಡಲಾಯಿತು. ಆ ನಂತರದಲ್ಲಿ ಶ್ರೀ ಗೋವಿಂದ ಕಾರಜೋಳ ಅವರ ಅಧಿಕಾರಾವಧಿಯಲ್ಲಿ ಇದನ್ನು ಮುಂದುವರೆಸಿಕೊಂಡು ಹೋಗಲಾಯಿತು. ಇವತ್ತಿನ ದಿವಸ ಸುಮಾರು 4-5 ಲಕ್ಷ ಜಮೀನುಗಳಿಗೆ ಇಂಡೀಕರಣ ಪ್ರಕ್ರಿಯೆ ಮಾಡಲಾಗಿದೆ. ಸರ್ಕಾರವು ಯೋಜನೆಗಳಿಗಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಮಾಡಿ, ಭೂ ಪರಿಹಾರವನ್ನು ನೀಡಿರುತ್ತದೆ. ಆದರೂ ಸಹ ಜಮೀನಿನ ಖಾತೆಯಲ್ಲಿ ಭೂ ಮಾಲೀಕರ ಹೆಸರುಗಳೇ ಮುಂದುವರೆದಿರುತ್ತವೆ. ಒಂದು ವೇಳೆ, ಇವರುಗಳು ಜಮೀನನ್ನು ಮಾರಾಟ ಮಾಡಿದರೆ ಅಥವಾ ಬ್ಯಾಂಕಿಗೆ ಹೋಗಿ ಬೋಜಾ ತೆಗೆದುಕೊಂಡರೆ, ಆಗ ಥರ್ಡ್ ಪಾರ್ಟಿ ಕ್ರೀಯೇಟ್ ಆಗುತ್ತದೆ. ಸದಸ್ಯರು ಪ್ರಸ್ತಾಪಿಸಿರುವ ಅಂಶಗಳೆಲ್ಲವೂ ಸತ್ಯವಾಗಿವೆ; ಆದರೆ ಇದಕ್ಕೆ ಪರಿಹಾರವೇನು? ಇಂಡೀಕರಣ ಪ್ರಕ್ರಿಯೆಯನ್ನು ಈ ಹಿಂದೆ ಪ್ರಾರಂಭ ಮಾಡಬೇಕಾಗಿತ್ತು, ಆದರೆ ಮಾಡಿರಲಿಲ್ಲ. ನಾನು ಅಧಿಕಾರಕ್ಕೆ ಬಂದ ಮೇಲೆ ಇದನ್ನು ಪ್ರಾರಂಭಿಸಲಾಯಿತು. ಇವತ್ತಿನ ದಿವಸ ಕಂದಾಯ ಇಲಾಖೆಯಲ್ಲಿಯೂ ಸಹ ಬಹಳಷ್ಟು ಸುಧಾರಣೆಗಳನ್ನು ತರಲಾಗುತ್ತಿದೆ. ಕಂದಾಯ ಸಚಿವರು ಎಲ್ಲವನ್ನೂ ಡಿಜಿಟಲೀಕರಣ ಮಾಡುತ್ತಿದ್ದಾರೆ. ಆಗ ಇಂತಹ ಪ್ರಕರಣಗಳೆಲ್ಲವೂ ತಪ್ಪುತ್ತವೆ. ಈ ಹಿಂದೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹ ಹಲವಾರು ಪ್ರಕರಣಗಳಾಗಿವೆ; ಇದು ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಸದಸ್ಯರು ನೀಡಿರುವ ಸಲಹೆಯಂತೆ, ಪ್ರಕರಣವನ್ನು ತ್ವರಿತಗತಿಯಲ್ಲಿ ವಿಲೇ ಮಾಡುವ ಸಂಬಂಧ ನಾನು ಅಡ್ವೋಕೇಟ್ ಜನರಲ್‌ರವರೊಂದಿಗೆ ಮಾತನಾಡುತ್ತೇನೆ. ನಮ್ಮ ಇಲಾಖೆಯ ಕಾನೂನು ಕೋಶಕ್ಕೂ ಸಹ ಇದನ್ನು ಫಾಲೋ-ಅಪ್ ಮಾಡುವಂತೆ ತಿಳಿಸುತ್ತೇನೆ. ತಡೆಯಾಜ್ಞೆಗಳಿದ್ದರೆ, ಅವುಗಳನ್ನು ತೆಗವುಗೊಳಿಸುವ ಸಂಬಂಧ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ. ತಪ್ಪಿತಸ್ಥರಿಂದ ಹಣ ವಸೂಲಾತಿ ಮಾಡುವ ಪ್ರಕರಣಗಳನ್ನು ಬಹಳ ಗಂಭೀರವಾಗಿ ಪರಿಗಣಿಸಲಾಗುವುದು. ಸಣ್ಣ ನೀರಾವರಿ ಇಲಾಖೆಯ ಭೂ ಸ್ವಾಧೀನ ಪ್ರಕರಣಗಳ ಬಗ್ಗೆ ಹೇಳಬೇಕೆಂದರೆ, ನಿಜವಾಗಿಯೂ ಸಹ ವಿಶೇಷ ಭೂ ಸ್ವಾಧೀನಾಧಿಕಾರಿಯ ತಪ್ಪು ಇಲ್ಲ, on the face of it. ದಾಖಲಾತಿಯಲ್ಲಿ ಯಾರ ಹೆಸರು ತೋರಿಸಿರುತ್ತದೆಯೋ, ಅವರಿಗೆ ಭೂ ಪರಿಹಾರವನ್ನು ಪಾವತಿಸಲಾಗಿರುತ್ತದೆ. ಹೀಗಾಗಿ ಈ ತಪ್ಪುಗಳು ಅವರಿಂದಾಗಿ ಆಗಿಲ್ಲ. ಇಂತಹ ಪ್ರಕರಣಗಳೂ ಸಹ ಆಗುತ್ತವೆ. ನನ್ನ ಮೇಲ್ನೋಟಕ್ಕೆ ವಿಶೇಷ ಭೂ ಸ್ವಾಧೀನಾಧಿಕಾರಿಯು ನಿರಪರಾಧಿಯಾಗಿರುತ್ತಾನೆ. ವಿಚಾರಣೆಯಾದ ನಂತರ ಸತ್ಯಾಸತ್ಯತೆಗಳು ತಿಳಿಯುತ್ತವೆ. ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳ ಬಗ್ಗೆಯೂ ಸಹ ವಿಚಾರಣೆಯಾಗಿರುತ್ತದೆ; ಆದರೆ ಇದರ ಬಗ್ಗೆ ಮಾಹಿತಿ ಇಲ್ಲ. ಸದಸ್ಯರಿಗೆ ಬೇಕಾಗಿದ್ದಲ್ಲಿ ಅದನ್ನು ಪಡೆದು ನೀಡಲಾಗುವುದು. ಸದಸ್ಯರು ಪ್ರಸ್ತಾಪಿಸಿರುವ ಅಂಶವು ಬಹಳ ಸತ್ಯವಾಗಿದೆ.

(ಮುಂದು)

(651)12-08-2025/4-10/bkp-ks (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಂ.ಬಿ. ಪಾಟೀಲ್(ಮುಂದು)

ಇವತ್ತಿನ ದಿವಸ ಕಂದಾಯ ಇಲಾಖೆ ಹಾಗೂ ನಮ್ಮ ಇಲಾಖೆಯನ್ನು ಡಿಜಿಟಲೀಕರಣಗೊಳ್ಳುತ್ತಿವೆ. ಇಲಾಖೆಯಲ್ಲಿ reforms ಅನ್ನು ಮಾಡುತ್ತಿದ್ದೇವೆ ಹಾಗೂ ಬರುವಂತಹ ದಿನಗಳಲ್ಲಿ ಎಲ್ಲವೂ ತಪ್ಪಬೇಕು. ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಹೇಳಿದ ಹಾಗೆ UKP (Upper Krishna Project) ಯ ವಿಚಾರ ಬಹಳ ದೊಡ್ಡ ಪ್ರಮಾಣದಲ್ಲಿದೆ. ಲಕ್ಷಗಟ್ಟಲೇ ಪ್ರಕರಣಗಳಿವೆ. ನಾವು ಇಲ್ಲಿ ಒಂದು ಪ್ರಕರಣದ ಬಗ್ಗೆ ಮಾತನಾಡುತ್ತೇವೆ. ಲಕ್ಷಗಟ್ಟಲೆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಇಂದೀಕರಣವಾಗಿರಲಿಲ್ಲ. ರೈತರು ಮಾರಾಟ ಮಾಡಿಕೊಂಡರೆ ಮುಗಿದೇ ಹೋಯಿತು, ಅಗ ಥರ್ಡ್ ಪಾರ್ಟಿ ಕ್ರೀಯೇಟ್ ಅಗುತ್ತದೆ ಅಥವಾ ಅವರು ಬ್ಯಾಂಕ್ ಲೋನ್ ತೆಗೆದುಕೊಂಡರೆ ನೀವು ಏನು ಮಾಡುತ್ತೀರಿ? ಇದೆಲ್ಲಾ ವಿಷಯಗಳಿವೆ, ಇವುಗಳಿಗೆಲ್ಲಾ ಸೂಕ್ತ ಪರಿಹಾರವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

06. ಗಮನ ಸೆಳೆಯುವ ಸೂಚನೆಗಳು

ಅ) ವಿಷಯ: ರಾಜ್ಯದಲ್ಲಿ ಪದವಿ ಮತ್ತು ಉನ್ನತ ವ್ಯಾಸಂಗ ಕೋರ್ಸ್‌ಗಳ ಪಠ್ಯಕ್ರಮಗಳನ್ನು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅದರಲ್ಲೂ ಕೇಂದ್ರ ಸರ್ಕಾರದ ಯು.ಪಿ.ಎಸ್.ಸಿ ಮತ್ತು ಎಸ್.ಎಸ್.ಸಿ. ಹಾಗೂ ಇತರೆ ನೇಮಕಾತಿಗಳಿಗೆ ಅನುಕೂಲವಾಗುವಂತೆ ಪರಿಷ್ಕೃತಗೊಳಿಸುವ ಕುರಿತು.

– – –

ಡಾ॥ ಧನಂಜಯ ಸರ್ಜಿ(ಪದವೀಧರರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಗೌರವಾನ್ವಿತ ಈ ಸದನದ ಗಮನವನ್ನು ಅದರಲ್ಲೂ ವಿಶೇಷವಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಕರ್ನಾಟಕ ಸರ್ಕಾರದ ಪದವಿ ಪೂರ್ವ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಂತಹ ಮಹತ್ವದ ವಿಚಾರದ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಸೆಳೆಯಬಯಸುತ್ತೇನೆ.

(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಎಸ್.ಎಲ್.ಭೋಜೇಗೌಡ ರವರು ಸಭಾಪೀಠವನ್ನು ಅಲಂಕರಿಸಿದರು)

ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಳ್ಳೆಯ ಅಂಕಗಳನ್ನು ತೆಗೆಯಬೇಕು, ಅಲ್ಲಿಂದ ಮುಂದಿನ ಒಳ್ಳೆಯ ಹುದ್ದೆಗಳಿಗೆ ಹೋಗುವ ನಿಟ್ಟಿನಲ್ಲಿ ಸುಮಾರು ಕನಸುಗಳನ್ನಿಟ್ಟುಕೊಂಡಿರುತ್ತಾರೆ. ಆ ಕನಸು ಹೇಗೆ ಇರುತ್ತದೆ ಎಂದರೆ ದೊಡ್ಡ ಕನಸನ್ನು ಕಾಣುತ್ತಿರುತ್ತಾರೆ. ಡಾ॥ ಅಂಬೇಡ್ಕರ್‌ರವರು ಹೇಳಿದ ಹಾಗೆ ಬೆಳಗಿನ ಜಾವದ ದೊಡ್ಡ ಕನಸನ್ನು ಕಾಣುವುದು ಬಹಳ ಸೂಕ್ತವೆಂದು, "ಸಣ್ಣ ಕನಸನ್ನು ಕಾಣುವುದು ಕ್ರೈಮ್" ಎಂದು ಶ್ರೀ ಅಬ್ದುಲ್ ಕಲಾಂ ರವರು ಹೇಳಿದ್ದಾರೆ. ಆ ನಿಟ್ಟಿನಲ್ಲಿ ನಮ್ಮ ಪರೀಕ್ಷಾ ಪದ್ಧತಿಯನ್ನು K.P.S.C. (Karnataka Public Service Commission), S.S.C. (Staff Selection Commission) ಮತ್ತು K.E.A. (Karnataka Examination Authority) ಕೆ.ಪಿ.ಎಸ್.ಸಿ. ಪರೀಕ್ಷಾ ಪದ್ಧತಿಯನ್ನು ನಾವು ನೋಡಿದರೆ ....

ಡಾ॥ ಎಂ.ಸಿ. ಸುಧಾಕರ್(ಉನ್ನತ ಶಿಕ್ಷಣ ಸಚಿವರು):–

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 33ರಲ್ಲಿ ವಿಶ್ವವಿದ್ಯಾಲಯಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಆಯಾ ವಿಶ್ವವಿದ್ಯಾಲಯಗಳು ನಡೆಸುವ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳಿಗೆ Board of Studies (ಅಧ್ಯಯನ ಮಂಡಲಿ) ಪಠ್ಯಕ್ರಮವನ್ನು ಸಿದ್ಧಪಡಿಸಲು ಅವಕಾಶ ಕಲ್ಪಿಸಲಾಗಿದೆ. ಅಧ್ಯಯನ ಮಂಡಳಿಯಲ್ಲಿ ಉದ್ಯಮ ಮತ್ತು ಪರಿಣಿತ ವಲಯದ ಸಂಪನ್ಮೂಲ ವ್ಯಕ್ತಿಗಳನ್ನು ಒಳಗೊಂಡಂತೆ ವಿಷಯ ತಜ್ಞರು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಗುಣಮಟ್ಟಕ್ಕನುಗುಣವಾಗಿ ಪಠ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿವೆ.

ಯುಜಿಸಿಯು ರಾಜ್ಯದ ವಿಶ್ವವಿದ್ಯಾಲಯಗಳಿಗೆ ಪಠ್ಯಕ್ರಮ ರಚನೆಗೆ ಮಾರ್ಗಸೂಚಿಗಳನ್ನು ಒದಗಿಸಿದ್ದು, ಇದರಲ್ಲಿ lectures, tutorials, laboratory work, field work, project work, and other components ಗಳನ್ನು ವಿವರಿಸಿದ್ದು, ಈ ಪಠ್ಯಕ್ರಮಗಳ ರಚನೆಯು ಸಮಗ್ರ ಶಿಕ್ಷಣ, ಪರಿಕಲ್ಪನಾತ್ಮಕ ತಿಳುವಳಿಕೆ, ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆ, ನೀತಿಶಾಸ್ತ್ರ, ಮತ್ತು ಮಾನವ ಮತ್ತು ಸಾಂವಿಧಾನಿಕ ಮೌಲ್ಯಗಳು, ಜೀವನ ಕೌಶಲ್ಯಗಳು, ವೈವಿಧ್ಯತೆ ಮತ್ತು ಭೌಗೋಳಿಕ ರಚನೆ ಆಧಾರದಲ್ಲಿ ಕಲಿಕೆಯ ಉದ್ದೇಶಗಳನ್ನು ಒಳಗೊಂಡಿರುತ್ತದೆ.

ರಾಜ್ಯ ಶಿಕ್ಷಣ ನೀತಿ ಆಯೋಗವು ಸರ್ಕಾರಕ್ಕೆ ನೀಡಿದ ಮಧ್ಯಂತರ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್‌ಇ 2023, ದಿನಾಂಕ: 08.05.2024ರಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಪಠ್ಯ ಕ್ರಮದಲ್ಲಿ ಈಗಾಗಲೇ ಕೆಲವು ಬದಲಾವಣೆಗಳನ್ನು ತರಲಾಗಿದ್ದು, ಪಠ್ಯಕ್ರಮ ರಚನೆಯಲ್ಲಿನ ಬದಲಾವಣೆಯ ಮೂಲಕ ಆಳವಾದ ಜ್ಞಾನ, ಔದ್ಯಮಿಕ ಆಧಾರಿತ ಕೋರ್ಸ್‌ಗಳನ್ನು ಮತ್ತು ಪ್ರಾದೇಶಿಕ ನಿರ್ದಿಷ್ಟ ವಿಷಯಗಳನ್ನು ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗೆ (Board of Studies) ಸ್ವಾಯತ್ತತೆಯನ್ನು ನೀಡುವುದನ್ನು ಕೇಂದ್ರೀಕರಿಸಲಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾಗುವಂತೆ ರಾಜ್ಯ ಶಿಕ್ಷಣ ನೀತಿಯಲ್ಲಿ Compulsory Skilled Course ಗಳನ್ನು ಮತ್ತು 02 Elective Paper ಗಳನ್ನು ಪರಿಚಯಿಸಿರುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ Main Subjects ಒಟ್ಟಿಗೆ Environmental Science, Constitutions Values, Skilled base Courses (ಕಲಿಕೆ ಜೊತೆ ಕೌಶಲ್ಯ) Apprenticeship-embedded degree courses ಗಳನ್ನು ಸಹ ಪಠ್ಯಕ್ರಮದ ಭಾಗವಾಗಿ ಪರಿಗಣಿಸಲಾಗಿದೆ. Elective Subjects ಗಳಿಂದ ವಿದ್ಯಾರ್ಥಿಗಳು ಒಂದು ವಿಷಯದಿಂದ ಮತ್ತೊಂದು ವಿಷಯ ಕಲಿಕೆಗೆ Trans-border ಅವಕಾಶವನ್ನು ಕಲ್ಪಿಸಿರುವುದರಿಂದ, ಇದು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚು ಸಹಕಾರಿಯಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ -1

सत्यमेव जयते

INDIA NON JUDICIAL

Government of Karnataka

Rs. 100

e-Stamp

Certificate No.	:	IN-KA92544901231126X
Certificate Issued Date	:	18-Jul-2025 01:45 PM
Account Reference	:	CSCACC (GV)/ kacsceg07/ KA-BARUB0055/ KA-GN
Unique Doc. Reference	:	SUBIN-KAKACSCEG0702324544120751X
Purchased by	:	COMMISSIONER DEPARTMENT OF AYUSH GOVT OF KARNATAKA
Description of Document	:	Article 4 Affidavit
Property Description	:	AFFIDAVIT
Consideration Price (Rs.)	:	0 (Zero)
First Party	:	COMMISSIONER DEPARTMENT OF AYUSH GOVT OF KARNATAKA
Second Party	:	CHAIR PERSON NCISM NEW DELHI
Stamp Duty Paid By	:	COMMISSIONER DEPARTMENT OF AYUSH GOVT OF KARNATAKA
Stamp Duty Amount(Rs.)	:	100 (One Hundred only)

DIGITAL SEVA KENDRA E-GOVERNANCE KARNATAKA R. VISHWANATH Reg. No. 111/11 NOTARY BANGALORE METROPOLITION AREA

Please write or type below this line

AFFIDAVIT

I, Vipin Singh I.F.S, Commissioner, Department of AYUSH, Government of Karnataka, Bangalore hereby affirm and declare to fulfil the shortage of both teaching and non-teaching staff cited in the conditional permission granted to the following Government Ayurveda College in Karnataka State.

...2

Statutory Alert:
1. The authenticity of this Stamp certificate should be verified at 'www.shcilestamp.com' or using e-Stamp Mobile App of Stock Holding. Any discrepancy in the details on this Certificate and as available on the website / Mobile App renders it invalid. ... of the certificate.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Taranath Government Ayurveda Medical College, Ananthpura Road, Bellary, Karnataka (Inst.Id-AYU0049) with 36 seats [instead of 60 seats] in UG (BAMS).

Regarding Teaching & Non-Teaching Staff:

The Directorate of AYUSH has initiated action to fulfil the deficiencies cited in the grant of conditional permission letter No: NCISM No. 4-4/KA/MARB/2025-26 AY, Dated: 30-06-2025 issued to the Taranath Government Ayurveda Medical College, Bellary.

The recruitment of teachers and no-teaching man power will be done before the commencement of academic year 2025-26.

In the interest of public and meritorious students, to encourage the Indian System of Medicine, it is requested to permit the intake of UG seats from 36 to 60 in Taranath Government Ayurveda Medical College, Ananthpura Road, Bellary, Karnataka (Inst.Id-AYU0049) ~~with 36 seats [instead of 60 seats] in UG (BAMS).~~

Commissioner
Ayurveda, Yoga & Nature Care
Unani, Siddha & Homoeopathy
(Ayush) Directorate, Dhanvantri Road
Bangalore - 560 009

R. VISHWANATH
Reg. No. 111/11
NOTARY
BANGALORE METIOPOLTION AREA

SWORN TO BEFORE ME

R. VISHWANATH, B.Sc., LL.B.
ADVOCATE AND NOTARY
No 14-80 12th Main 2nd Block
Near ESI Hospital & Sri Anjaneya Temple
Rajajinagar BANGALORE 560 010
Cell 9845 [illegible]

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಬಂಧ-2

YEARLY PERMISSION IN UG & PG AFTER 1ST APPEAL

ncism
॥ आयुषे सर्वलोकानाम् ॥

भारतीय चिकित्सा पद्धति राष्ट्रीय आयोग
आयुष मंत्रालय, भारत सरकार
कार्यालय: टी-19, पहली और दूसरी मंजिल, ब्लाक- IV, धन्वन्तरि भवन,
मार्ग न0-66, , पंजाबी बाग(पश्चिम), नई दिल्ली -110026

National Commission for Indian System of Medicine
Ministry of AYUSH, Govt. of India
Office: T-19, 1st & 2nd Floor, Block-IV, Dhanwantri Bhawan, Road No.-66, Punjabi Bagh (West), New Delhi-110026

दूरभाष/ Phone
सभापति / Chairman: 25221001
सचिव / Secretary: 25221006
कार्यालय /Office: 25221002/3
पंजीयन / Registration: 25221004
www.ncismindia.org
secretary@ncismindia.org

क्रमांक/ Ref. No. 4-4/KA/MARB/2025 -26 AY दिनांक/Dated:-04.08.2025

To,

The Principal,
Taranath Govt. Ayurvedic Medical College,
Ananthpura Road, Bellary-583101,
Karnataka
E-mail:- principaltgamc@gmai.com, 1947ayu0049@gmail.com

Subject:-Grant of Yearly Permission to Taranath Govt. Ayurvedic Medical College, Ananthpura Road, Bellary-583101, Karnataka (Inst. Id- AYU0049) with intake capacity of 60 seats in UG (BAMS) course and 31 Seats in 05 PG courses in subjects namely i) Rasa Shastra & Bhaisajya Kalpana-07 seats ii)Kayachikitsa- 07 seats (iii) Panchakarma -07 seats (iv) Shalya tantra -04 seats (v) Dravyaguna Vigyana-06 seats for the academic session 2025-26 under section 28 of NCISM Act, 2020 and relevant regulations thereunder with respect to appeal dated 22.07.2025 - regarding.

Sir/Madam,

1. This is with reference to your first appeal filed by the **Mr. Vipin Singh, Commissioner, Directorate of Ayush, Bengaluru, Karnataka vide letter no. AYUSH/55/DEV2/2025 dated 22.07.2025** to the Commission against the **Yearly Permission with Seat Reduction in UG & Yearly Permission in PG** issued to **Taranath Govt. Ayurvedic Medical College, Ananthpura Road, Bellary-583101, Karnataka (Inst. Id- AYU0049) with 36 seats [instead of 60 seats] in UG (BAMS) and 31 Seats in 05 PG course in the subject namely i) Rasa Shastra & Bhaisajya Kalpana-07 seats ii)Kayachikitsa- 07 seats (iii) Panchakarma -07 seats (iv) Shalya tantra -04 seats (v) Dravyaguna Vigyana-06 seats** due to non fulfillment of the basic eligibility criteria in terms of NCISM (Minimum Essential Standards, Assessment and Rating for Undergraduate Ayurveda colleges and Attached Teaching Hospitals) Regulations, 2024 and Minimum Essential Standards, Assessment and Rating for Postgraduate Institutions and Minimum Standards for Postgraduate Education in Ayurveda Regulations *2024*", and provisions under the NCISM Act, 2020 and relevant regulations thereunder and other shortcoming as mentioned in **Yearly Permission with Seat Reduction in UG & Yearly Permission in PG** letter of even no. dated 30.06.2025.

2. The submission made by the **Mr. Vipin Singh, Commissioner, Directorate of Ayush, Bengaluru, Karnataka** was placed before the Chairman, National Commission for Indian System of Medicine and it has been decided by the Chairman, NCISM to consider the appeal on the basis of an **affidavit submitted by Mr. Vipin Singh, Commissioner, Directorate of Ayush, Bengaluru, Karnataka vide ref. No. IN-KA92544901231126X dated 18.07.2025** wherein it is mentioned that the shortcomings/deficiencies shall be fulfilled at the earliest and requesting for Grant of Yearly permission to **Taranath Govt. Ayurvedic Medical College, Ananthpura Road, Bellary-583101, Karnataka (Inst. Id- AYU0049) with 100 seats in UG (BAMS) and 22 Seats in 04 PG courses in subjects namely (i) Ayurved Samhita, Sanskrit & Siddhanta-05 seats (ii) Kayachikitsa- 07 seats (iii) Swasthavritta-05 seats (iv) Panchakarma-05 seats as per the concerned acts & regulations for the academic session 2025-26.**

3. Further, the Chairman, NCISM directed the President, Medical Assessment and Rating Board for Indian System of Medicine, NCISM **vide letter no. 51-21/2025-26/Comm. Appeal/College (Ayu.) dated 04.08.2025** to grant Yearly Permission to **Taranath Govt. Ayurvedic Medical College, Ananthpura Road, Bellary-583101, Karnataka (Inst. Id- AYU0049) with intake capacity of 60 seats in UG (BAMS) and 31 Seats in 05 PG courses in subjects namely i) Rasa Shastra & Bhaisajya Kalpana-07 seats ii)Kayachikitsa- 07 seats (iii) Panchakarma -07 seats (iv) Shalya tantra -04 seats (v) Dravyaguna Vigyana-06 seats** under section 28 of NCISM Act, 2020 for the academic session 2025-26 as per the concerned acts & regulations.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"DECISION"

4. Therefore, in view of above, **Taranath Govt. Ayurvedic Medical College, Ananthpura Road, Bellary-583101, Karnataka (Inst. Id- AYU0049) is hereby granted with :-**

   a) **Yearly Permission in UG (BAMS) course with intake capacity of 60 seats in accordance with Regulation 54(3) of Minimum Essential Standards, Assessment and Rating for Undergraduate Ayurveda colleges 2024 and;**

   b) **Yearly permission in 05 PG courses with 31 seats in the subject namely i) Rasa Shastra & Bhaisajya Kalpana-07 seats ii)Kayachikitsa– 07 seats (iii) Panchakarma -07 seats (iv) Shalya tantra -04 seats (v) Dravyaguna Vigyana-06 seats for the academic session 2025-2026 in accordance with Regulation 15(7) of NCISM (Minimum Essential Standards, Assessment and Rating for Postgraduate Institutions and Minimum Standards for Postgraduate Education in Ayurveda) Regulation, 2024;**

5. **The aforementioned decision is issued under section 28 of NCISM Act, 2020 subject to the condition that following requirements shall be fulfilled:-**

   (i) It is further informed that minimum **15% of undergraduate seats of the permitted intake capacity of with 60 seats in UG (BAMS) course** and minimum 15% of postgraduate seats of the permitted intake capacity of **31 seats in 05 PG courses in the subject namely i) Rasa Shastra & Bhaisajya Kalpana-07 seats ii)Kayachikitsa– 07 seats (iii) Panchakarma -07 seats (iv) Shalya tantra -04 seats (v) Dravyaguna Vigyana-06 seats** shall be treated as all India quota. The counseling for seats under all India quota shall be conducted by respective counseling authority as designated by Central Government for A.Y. 2025-26 and counseling for the remaining 85% seats or as the case may be, shall be conducted by the concerned Counseling Authority of that State/UT. **The permission of the college stands withdrawn if the college fails to comply with the aforesaid direction of the Central Government/NCISM for all India quota or the students admitted thereunder.**

6. Admissions made in violation of the above conditions will be treated as invalid and action will be initiated under NCISM Act & Regulations there under.

7. Further, **as per Sub-section (7) of Section 29 of NCISM Act, 2020**, The Medical Assessment and Rating Board for Indian System of Medicine may conduct evaluation and assessment of any University or medical institution at any time, either directly or through any other expert, having integrity and experience in medical profession, without any prior notice and assess and evaluate the performance, standards and benchmarks of such University or medical institution and if the college is found to be not maintaining the Minimum Essential standards as specified in the concerned Acts & Regulations then **in accordance of Section 28 (1) (f) of NCISM Act, 2020 the issued permission of the college shall deemed to be withdrawn and denial of permission shall be issued by MARBISM for stoppage of admission for that particular academic year or the subsequent year.**

8. Discrepancies, if any, may be immediately brought to the notice of Medical Assessment and Rating Board for Indian System of Medicine, NCISM.

9. **The following requirements must be fulfilled and the compliance report must reach the Board by 31st December, 2025 to be considered for the issuance of permission for the academic session 2026-27 :-**

   i) All the requirements under the provisions of the NCISM Act, 2020 and relevant Regulations made thereunder should be fulfilled.
   ii) All the requirements of Minimum Standard of infrastructure and teaching & training facilities as specified in NCISM (Minimum essential standards, assessment and rating for undergraduate Ayurveda colleges and attached teaching hospitals) Regulations, 2024.
   iii) All the requirements of Minimum Standard of infrastructure and teaching & training facilities as specified in NCISM (Minimum Essential Standards, Assessment and Rating for Postgraduate Institutions and Minimum Standards for Postgraduate Education in Ayurveda) Regulations, 2024.
   iv) All the requirement of the National Commission for Indian System of Medicine (Minimum Standard of Undergraduate Ayurveda Education) Regulations, 2022.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

10. The fulfillment of the conditions given above may be made within the time period specified and compliance report should be submitted by the college to President, Medical Assessment and Rating Board for Indian System of Medicine. The Medical Assessment and Rating Board for Indian System of Medicine will verify that the conditions have been fulfilled for considering the permission for the academic session 2025-26.

11. **Please acknowledge the receipt of this letter.**

अध्यक्ष, आंकलन एवं रेटिंग बोर्ड
President, Medical Assessment and Rating Board
भारतीय चिकित्सा पद्धति राष्ट्रीय आयोग
National Commission for Indian System of Medicine
पंजाबी बाग (पश्चिम), नई दिल्ली-110026
Punjabi Bagh (West), New Delhi-110026

4/8/25

Prof. (Dr.) Narayan S. Jadhav
President, Medical Assessment and Rating Board for Indian System of Medicine
(NCISM)

Copy to:-

1. The Chairperson, NCISM, T-19, 1st& 2nd Floor, Block-IV, Dhanwantari Bhawan, Road No.66, Punjabi Bagh (West), New Delhi-110026 for information.
2. Secretary to the Govt. of India, Ministry of AYUSH, Ayush Bhawan, B-Block GPO Complex, INA, New Delhi 110023. **(secy-ayush@nic.in, aaccc-admn-ayush@gov.in, ep1section-ayush@gov.in)**
3. The Principal Secretary (H&FW), Department of health & Family Welfare Government of Karnataka Room No. 104 1st Floor, Vikas Souda, Bangalore-560001, Karnataka for information and necessary action **(prs-hfw@karnataka.gov.in)**
4. The Director Department of AYUSH, Ayurveda Yoga & Naturopathy, Unani, Siddha & Homoeopathy), Dhanwantri Road, Near Ananda Rao Circle Bengaluru-560009, Karnataka. **(directorayush@gmail.com, jdayushme@gmail.com)** for information.
5. The Registrar, Rajiv Gandhi University of Health Sciences, 4th 'T' Block, Jayanagar, Bangalore-560041, Karnataka. **(registrar@rguhs.ac.in)** for information.
6. Guard file.

Prof. (Dr.) Narayan S. Jadhav
President, Medical Assessment and Rating Board for Indian System of Medicine
(NCISM)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೆ, ನಾನು ಇದಕ್ಕೆ ಉತ್ತರವನ್ನು ಒದಗಿಸಿದ್ದೇನೆ. ಸದರಿ ಉತ್ತರವನ್ನು ನಾನು ಓದಬೇಕೆಂದು ಬಯಸಿದರೆ ಓದುತ್ತೇನೆ.

ವೈಸ್ ಛೇರ್ಮನ್:- ಮಾನ್ಯ ಸಚಿವರಾದ ತಾವು ಕೊಟ್ಟಂತಹ ಉತ್ತರ ಮಾನ್ಯ ಸದಸ್ಯರಿಗೆ ತೃಪ್ತಿಯಾಗಿದ್ದರೆ ಅವರು ಕುಳಿತುಕೊಳ್ಳುತ್ತಿದ್ದರು, ಅವರಿಗೆ ತೃಪ್ತಿಯಾಗದೇ ಇರುವುದರಿಂದ ನೀವು ನಿಮ್ಮ ಉತ್ತರವನ್ನು ಓದುವುದರ ಬದಲು ಈಗ ನಿಮ್ಮದೇ ಅದಂತಹ ಪದಗಳಲ್ಲಿ ಅದನ್ನು ವಿವರಿಸಬೇಕು.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಸದಸ್ಯರು ಇದರ ಬಗ್ಗೆ clarification ಅನ್ನು ಕೇಳಲಿ.

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೆ, ಸುಮಾರು ವಿದ್ಯಾರ್ಥಿ ಮಕ್ಕಳು ಸಾಕಷ್ಟು ಕನಸನ್ನು ಕಂಡಿರುತ್ತಾರೆ. ಆ ಕನಸಿನಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಿ ಪರೀಕ್ಷೆಗೆ ಓದಿರುತ್ತಾರೆ. ಬೆಂಗಳೂರು, ಧಾರವಾಡ, ಬಿಜಾಪುರದಲ್ಲಿ ವರ್ಷಾನುಗಟ್ಟಲೆ ಕುಳಿತುಕೊಂಡು, ಪರೀಕ್ಷೆಗೆ ಓದಿ ಒಳ್ಳೆಯ ಹುದ್ದೆಗೆ ಬರಬೇಕೆಂದು ಪ್ರಯತ್ನವನ್ನು ಪಡುತ್ತಾ ಇರುತ್ತಾರೆ. ಆದರೆ, ನಮ್ಮ ವಿಪರ್ಯಾಸ ಏನೆಂದರೆ ನಮ್ಮ B.A. (Bachelor of Arts), B.Sc. (Bachelor of Science), B.Com. (Bachelor of Commerce) ಹಾಗೂ ಇತರೆ ಪದವೀಧರರ ಪಠ್ಯಕ್ರಮಕ್ಕೂ, U.P.S.C. ಹಾಗೂ S.S.C., ಪರೀಕ್ಷೆಗಳಿಗೂ ಮತ್ತು K.E.A. ಹಾಗೂ K.P.S.C. ಪರೀಕ್ಷೆಗಳಿಗೂ ವ್ಯತ್ಯಾಸವಿದೆ ಆ ನಿಟ್ಟಿನಲ್ಲಿ ಒಂದು ಅಂಕಿ-ಅಂಶವನ್ನು ಇಲ್ಲಿ ಉಲ್ಲೇಖ ಮಾಡಲಿಕ್ಕೆ ಇಷ್ಟಪಡುತ್ತೇನೆ. 2024 ರಲ್ಲಿ S.S.C. ನಿಂದ ಏನು ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಯಿತು, ಅದರಲ್ಲಿ 10 ಲಕ್ಷ ವಿದ್ಯಾರ್ಥಿಗಳಲ್ಲಿ ದೆಹಲಿಯಲ್ಲಿ 759 ಜನರಿಗೆ ಉದ್ಯೋಗ ಸಿಕ್ಕಿದೆ. ಹರಿಯಾಣ ರಾಜ್ಯದಿಂದ 292 ಜನರಿಗೆ, ತಮಿಳುನಾಡು ರಾಜ್ಯದಿಂದ 119 ಜನರಿಗೆ ಉದ್ಯೋಗ ಸಿಕ್ಕಿದೆ. ಆದರೆ, ಕರ್ನಾಟಕ ರಾಜ್ಯದವರಿಗೆ ಕೇವಲ 40 ಜನರಿಗೆ ಉದ್ಯೋಗ ಸಿಕ್ಕಿದೆ. ಬಿಹಾರ ರಾಜ್ಯದಲ್ಲೂ ಕೂಡ 80 ಜನರಿಗೆ ಉದ್ಯೋಗ ಸಿಕ್ಕಿದೆ.

ವೈಸ್ ಛೇರ್ಮನ್:- ಡಾ॥ ಸರ್ಜಿಯವರೇ, ಇದರಲ್ಲಿ ತಮ್ಮ ಮೂಲ ಪ್ರಶ್ನೆ ಇರುವಂತಹದ್ದು ನಮ್ಮ ಪದವಿಯಲ್ಲಿ ಇರುವಂತಹ ಪಠ್ಯಕ್ರಮದಂತೆ ಸರಿಯಾದ ಕ್ರಮ ಇಲ್ಲದೆ, ಯು.ಪಿ.ಎಸ್.ಸಿ. ಮತ್ತು ಕೆ.ಪಿ.ಎಸ್.ಸಿ. ಪರೀಕ್ಷೆಗಳನ್ನು ಎದುರಿಸುವಂತಹ ಶಕ್ತಿ ಇಲ್ಲವೆಂದು, ಅದನ್ನು ಪರಿಷ್ಕೃತಗೊಳಿಸಬೇಕೆಂದು ಹೇಳುತ್ತಿದ್ದೀರಿ. ಅದಕ್ಕೋಸ್ಕರ ಏನು ಮಾಡಬೇಕೆಂದು ತಾವು ಸಚಿವರಿಗೆ ಹೇಳಬೇಕು. ಆಗ ಅವರು ತಮ್ಮ ಸಹಾಯಕ್ಕೆ ಬರುತ್ತಾರೆ. ದಯಮಾಡಿ, ಆ ನಿಟ್ಟಿನಲ್ಲಿ ಹೇಳಿ.

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೆ, ಅದೇ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಗ್ರೂಪ್-ಬಿ ಹುದ್ದೆಗೆ 180 ಜನರು ಹಾಗೂ ಗ್ರೂಪ್ -ಸಿ ಹುದ್ದೆಗೆ 410 ಜನರು ಕರ್ನಾಟಕದಿಂದ ಆಯ್ಕೆಯಾದರೆ, ಅದೇ ರೀತಿ ಗ್ರೂಪ್ - ಬಿ ಹುದ್ದೆಗೆ ಉತ್ತರ ಪ್ರದೇಶದಲ್ಲಿ 890, ಬಿಹಾರದಲ್ಲಿ 720 ಜನರು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇ ರೀತಿಯಲ್ಲಿ ಗ್ರೂಪ್-ಸಿ ಹುದ್ದೆಗೆ ಉತ್ತರ ಪ್ರದೇಶದಲ್ಲಿ 1580 ಜನರು, ಬಿಹಾರದಲ್ಲಿ 1,320 ಎಂದರೆ ಎಷ್ಟು ವ್ಯತ್ಯಾಸ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗುವಂತಹ ನಮ್ಮ ಮಕ್ಕಳ-ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಇದೆ ಎಂದು ನೋಡಿ. ಕರ್ನಾಟಕ ರಾಜ್ಯದಲ್ಲಿ ಕಳೆದ 5 ವರ್ಷಗಳ ಅಂಕಿ-ಅಂಶಗಳನ್ನು ನೋಡಿದರೆ ಸುಮಾರು 6570 ಹುದ್ದೆಗಳನ್ನು ಕಳದುಕೊಂಡಿದೆ. ನಮಗೆ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲೂ ಕೂಡ ಕೇವಲ 20 ಜನರು ಮಾತ್ರ ಆಯ್ಕೆಯಾಗಿದ್ದಾರೆ. ಅದೆಲ್ಲವನ್ನೂ ನೋಡಿದರೆ ಕಳೆದ 2022ರಲ್ಲಿ 20 ಸಾವಿರ ಹುದ್ದೆಗಳನ್ನು ಎಸ್.ಎಸ್.ಸಿ. ಪರೀಕ್ಷೆಗಳಲ್ಲಿ ಮತ್ತು 2023 ರಲ್ಲಿ 7,500 ಹುದ್ದೆಗಳು ಮತ್ತು 2024 ರಲ್ಲಿ 17,727 ಹುದ್ದೆಗಳು ಹಾಗೂ 2025 ರಲ್ಲಿ 14,582 ಹುದ್ದೆಗಳು ನಮಗೆ ಸಿಕ್ಕಿದೆ. ಆದರೆ, ಇಲ್ಲಿ ಕರ್ನಾಟಕದಲ್ಲಿ ಸೃಜನೆಯಾಗುವಂತಹ ಹುದ್ದೆಗಳ ಪ್ರಮಾಣವನ್ನು ನೋಡಿದರೆ, ಇದರಲ್ಲಿ ಅತಿಯಾಗಿ ಅಂದರೆ ಜಾಸ್ತಿ ಇದೆ. ಆದರೆ, ನಮ್ಮ ಪಠ್ಯಕ್ರಮ ಏನಿದೆ ಅದರಲ್ಲಿ ವ್ಯತ್ಯಾಸವಿರುವುದರಿಂದ ಹಾಗೂ ಪರೀಕ್ಷೆಯ syllabus ನಲ್ಲಿ ಮತ್ತು ಪರೀಕ್ಷಾ ಪದ್ಧತಿ ವ್ಯತ್ಯಾಸ ಇರುವುದರಿಂದ, ನಮ್ಮ ವಿದ್ಯಾರ್ಥಿಗಳು ರಾಜ್ಯದ ಕೆ.ಪಿ.ಎಸ್.ಸಿ ಮತ್ತು ಕೆ.ಇ.ಎ. ಪರೀಕ್ಷೆಗೆ concentrate ಮಾಡಿದವರು ಕೇಂದ್ರದ ಪರೀಕ್ಷೆಗಳಲ್ಲಿ ಯಾರು ಸಹ ಕ್ಲಿಕ್ ಆಗುತ್ತಿಲ್ಲ. ಅಂದರೆ, ಅವರಿಗೆ ಅಲ್ಲಿ ಅನ್ಯಾಯವಾಗುತ್ತಿದೆ. ಸಾವಿರಾರು ಮಕ್ಕಳು, ಲಕ್ಷಾಂತರ ಮಕ್ಕಳು-ವಿದ್ಯಾರ್ಥಿಗಳು ಇದಕ್ಕೆ ತಯಾರು ಆಗುತ್ತಿರುತ್ತಾರೆ. ನಮ್ಮ ಕೆ.ಪಿ.ಎಸ್.ಸಿ. ಮತ್ತು ಕೆ.ಇ.ಎ. ನಲ್ಲಿ ಇವತ್ತು ಆಯ್ಕೆಯಾದರೆ, ಅವರಿಗೆ ಹುದ್ದೆ 4-5 ವರ್ಷಗಳ ನಂತರ ಸಿಗುತ್ತದೆ. ಆ ನಿಟ್ಟಿನಲ್ಲಿ ಬಹಳ ಅನ್ಯಾಯವಾಗುತ್ತಿದೆ. ಕೇಂದ್ರ ಸರ್ಕಾರದಿಂದ ಸಿಗುವಂತಹ ಸಾವಿರಾರು ಹುದ್ದೆಗಳಿಗೆ ನಮ್ಮ ವಿದ್ಯಾರ್ಥಿಗಳು ಅರ್ಹರಾಗುತ್ತಿಲ್ಲ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ವೈಸ್ ಛೇರ್ಮನ್:- ಒಂದು ನಿಮಿಷ, ಇದರಲ್ಲಿ ತಾವು ಪಠ್ಯಕ್ರಮದ ವಿಚಾರವಾಗಿ ಪ್ರಸ್ತಾಪ ಮಾಡಿದ್ದೀರಿ. ನಮ್ಮ ಪಠ್ಯಕ್ರಮದಿಂದ ಈ ರೀತಿಯ್ಲಲಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎನ್ನುವುದರ ಬಗ್ಗೆ ಹತ್ತಾರು ಉದಾಹರಣೆಗಳನ್ನು ಕೊಟ್ಟು ಹೇಳಿದಿರಿ. ಆದರೆ, ಇದರ ಬಗ್ಗೆ ತಮ್ಮ ಹತ್ತಿರ ಏನಾದರೂ ಮಾಹಿತಿ ಇದ್ದರೆ, ಅಲ್ಲಿನ ಮಕ್ಕಳು ಈ ವಿಚಾರದಲ್ಲಿ ಯಶಸ್ವಿಯಾಗುವುದಕ್ಕೆ ನಿಮ್ಮ ಹತ್ತಿರ ಏನಾದರೂ materials ಇದ್ದರೆ ಹೇಳಿ, ಇಲ್ಲವೆಂದರೆ ಶಿಕ್ಷಣ ಸಚಿವರಿಗೆ ಉನ್ನತ ಶಿಕ್ಷಣ ತಜ್ಞರಿಂದ ಈ ಪಠ್ಯಕ್ರಮವನ್ನು ಬದಲಾವಣೆ ಮಾಡಬೇಕೆಂದು ನೀವು ಹೇಳಬೇಕು. ಆ ವಿಚಾರವನ್ನು ನೀವು ಹೇಳಲಿಲ್ಲ, ಹೇಳಿ.

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೆ, ನಾವು ಪಠ್ಯಕ್ರಮದ ವಿಷಯಗಳನ್ನು ಹೋಲಿಕೆ ಮಾಡಿ ನೋಡಿದರೆ ಕೇಂದ್ರ ಮತ್ತು ರಾಜ್ಯದ ಪಠ್ಯಕ್ರಮದಲ್ಲಿ ಸುಮಾರು ವ್ಯತ್ಯಾಸ ಕಂಡು ಬರುತ್ತದೆ.

ವೈಸ್ ಛೇರ್ಮನ್ :- ಇದರ ಬಗ್ಗೆ ಸಲಹೆಯನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೆ, ಮಾನಸಿಕ ಸಾಮರ್ಥ್ಯದ ಬಗ್ಗೆ, ತಾಂತ್ರಿಕ ಸಾಮರ್ಥ್ಯದ ಬಗ್ಗೆ, ಅದೇ ರೀತಿಯಲ್ಲಿ ಇಂಗ್ಲೀಷ್ ವ್ಯಾಕರಣದ ಬಗ್ಗೆ, ಪ್ರಚಲಿತ ಘಟನೆಗಳು ಮತ್ತು ಸಾಮಾನ್ಯ ಜ್ಞಾನದ ಬಗ್ಗೆ ಹಾಗೂ ಕಂಪ್ಯೂಟರ್ ಜ್ಞಾನದ ಬಗ್ಗೆ ಬಹಳಷ್ಟು ವ್ಯತ್ಯಾಸ ಇದೆ.

ಡಾ॥ ಎಂ.ಸಿ. ಸುಧಾಕರ್:- ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಸದಸ್ಯರು ಬಹಳ ಉಪಯುಕ್ತವಾದ ವಿಚಾರದ ಬಗ್ಗೆ ಗಮನಸೆಳೆಯುವಂತಹ ಕೆಲಸ ಮಾಡಿದ್ದಾರೆ. ಮೂಲತಃ ಅವರು ಹೇಳುವಂತಹ ಹಲವಾರು ವಿಚಾರಗಳು ನಮ್ಮ ಗಮನದಲ್ಲಿವೆ. ಆದ್ದರಿಂದಲೇ ಇವತ್ತು ಕೆಳ ಹಂತದಿಂದಲೇ ಇವತ್ತು career guidance ಬಗ್ಗೆ ಮಕ್ಕಳಲ್ಲಿ ಯಾವ ಯಾವ ಪರೀಕ್ಷೆಗಳನ್ನು ಬರೆಯಬೇಕು, ಕೇಂದ್ರದ ಸೇವೆಗಳು ಯಾವುದು ಇದೆ, ರಾಜ್ಯದ ಸೇವೆಗಳು ಯಾವುದು ಇದೆ, ಅದಕ್ಕೆ ನಾವು ಏನೇನು streams ತೆಗೆದುಕೊಳ್ಳಬೇಕು, ಅಂದರೆ ನಾವು ಯಾವ ಯಾವ ವಿಷಯಗಳನ್ನು ಆಯ್ಕೆ ಮಾಡಿಕೊಂಡರೆ ಮುಂದೆ ಯಾವ ಯಾವ ಪರೀಕ್ಷೆಗಳನ್ನು ಬರೆಯಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಬಗ್ಗೆ ಕಳೆದ ಎರಡು ವರ್ಷಗಳಿಂದ ನಾನು ಬಹಳ ಗಮನಹರಿಸಿದ್ದೇನೆ. ನಾನು ಕೂಡ ಮಾನ್ಯ ಶಾಲಾ ಶಿಕ್ಷಣ ಸಚಿವರ ಜೊತೆಗೆ ಮಾತನಾಡಿದ್ದೇನೆ. ಈಗ ನಮ್ಮ ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ 8,9, ಮತ್ತು 10ನೇ ತರಗತಿಗೆ ಏನು career guidance ಬಗ್ಗೆ ಏನೆಲ್ಲಾ ಅವಕಾಶಗಳಿವೆ, ಮತ್ತೆ, mentoring ಯಾರು ಯಾರು ಸಾಧಕರು ಇದ್ದಾರೆ, ಅವರ ಒಂದು ಹೇಳಿಕೆಗಳು, ಅವರು ಯಾವ ರೀತಿಯಲ್ಲಿ ಆ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದಾರೆ, ಅವರು ಯಾವ ರೀತಿಯಲ್ಲಿ ಪೊಲೀಸ್ ಆಫೀಸರ್‌ಗಳಾದರು, ಯಾವ ರೀತಿಯಲ್ಲಿ ಐ.ಎ.ಎಸ್. ಅಧಿಕಾರಿಗಳಾದರು, ಅವರುಗಳು ಏನೆಲ್ಲಾ ವಿಷಯಗಳ ಬಗ್ಗೆ ಅಧ್ಯಯನ ಮಾಡಿದರು ಎನ್ನುವುದರ ಬಗ್ಗೆ 8,9 ಮತ್ತು 10ನೇ ತರಗತಿಗೆ ಪಠ್ಯವನ್ನು ತಯಾರು ಮಾಡಿದ್ದಾರೆ. ನಾನು ಅದರ ಬಗ್ಗೆ ಅವರ ಜೊತೆ ಚರ್ಚೆ ಮಾಡುತ್ತಿದ್ದೇನೆ. ಮತ್ತೆ ನಾನು ಶಾಲಾ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳ ಜೊತೆ ಮಾತನಾಡಿದಾಗ ಅವರು" ಇಲ್ಲ ಸರ್, 6ನೇ ತರಗತಿಯಿಂದಲೇ ಹಂತ ಹಂತವಾಗಿ ಹೇಳಿದರು. ಅಂದರೆ ಕೆಳ ಹಂತದಿಂದಲೇ ತರಬೇಕು. ಏಕೆಂದರೆ, ವಿದೇಶಗಳಲ್ಲಿ ಬಹುಶಃ 6ನೇ ತರಗತಿಯಿಂದಲೇ ಮಕ್ಕಳು ತಾವು ಭವಿಷ್ಯದಲ್ಲಿ ನಾವು ಏನಾಗಬೇಕೆಂದು, ಅದಕ್ಕೆ ನಾವು ಏನು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು, ಏನೆಲ್ಲಾ ನಮ್ಮ ಮುಂದೆ ಅವಕಾಶಗಳಿವೆ ಎನ್ನುವುದರ ಬಗ್ಗೆ ಆ ಒಂದು ಸಣ್ಣ ವಯಸ್ಸಿನಲ್ಲಿಯೇ ಮಾನಸಿಕವಾಗಿ ತಯಾರು ಆಗುವುದನ್ನು ನಾವು ಗಮನಿಸಿದ್ದೇವೆ. ಅದು ಇವತ್ತು ನಮ್ಮಲ್ಲಿ ಇಲ್ಲ. ಅದನ್ನು ತರುವಂತಹದ್ದು ಒಂದು ಭಾಗವಾಗಿದೆ. ನಂತರ ಈಗ ಪದವಿಗಳನ್ನು ಆಯ್ಕೆ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಕೂಡ ಈಗ ಬಹಳಷ್ಟು ಜನರಿಗೆ ತಿಳುವಳಿಕೆ ಇದೆ. ಇವತ್ತು ಉದ್ಯೋಗವನ್ನು ಬಯಸುವಂತಹ ಉದ್ಯೋಗ ಆಧಾರಿತವಾಗಿ ಎಲ್ಲಿ ಉದ್ಯೋಗಗಳು ಹೆಚ್ಚು ಸಿಗುತ್ತವೆ, placement ಎಲ್ಲಿ ಸಿಗುತ್ತದೆ ಎನ್ನುವುದನ್ನು ಇವತ್ತು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವುದನ್ನು ನಾವು ನೋಡುತ್ತಿದ್ದೇವೆ..

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(652) 12.08.2025 04.20 ಎಸ್‌ವಿ-ವಿಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಡಾ: ಎಂ.ಸಿ. ಸುಧಾಕರ್ (ಮುಂದು):-

ನಾವೆಲ್ಲಾ ಓದುವಂಥ ಸಂದರ್ಭದಲ್ಲಿ ಪೋಷಕರು ಅದನ್ನು ಓದು, ಇದನ್ನು ಓದು ಎಂದು ಹೇಳಿದಾಗ ನಾವು ಅದನ್ನು blind ಆಗಿ ಮಾಡುತ್ತಿದ್ದೆವು. ಆದರೆ ಈಗಿನ ಮಕ್ಕಳು ಆ ರೀತಿಯಿಲ್ಲ. ಬಹಳಷ್ಟು ಅಧ್ಯಯನ ಮಾಡುತ್ತಾರೆ. ಈಗ ತಾವೆಲ್ಲರೂ ನೋಡಿರುತ್ತೀರಿ. ನಮ್ಮಲ್ಲಿ ಐ.ಎ.ಎಸ್. ಅಧಿಕಾರಿಗಳು, ಐ.ಪಿ.ಎಸ್. ಅಧಿಕಾರಿಗಳು ಇದ್ದಾರೆ. ಅವರಲ್ಲಿ regular degree ಮಾಡಿರುವವರಿದ್ದಾರೆ, ವೈದ್ಯರು, ಇಂಜಿನಿಯರ್‌ಗಳು, ಕೃಷಿ ವಿಜ್ಞಾನದಲ್ಲಿ ಪದವೀಧರರು ಇದ್ದಾರೆ. ಇವರೆಲ್ಲರೂ ಡಿಗ್ರಿ ಮಾಡಿಕೊಂಡ ನಂತರ ಬೇರೆ ಬೇರೆ ಆಯ್ಕೆಗಳನ್ನು ಮಾಡಿಕೊಂಡಿದ್ದಾರೆ. ಪಠ್ಯಗಳ ವಿಚಾರಕ್ಕೆ ಬಂದರೆ ಈಗ ಇರುವಂಥ ಪಠ್ಯಗಳು common ಆಗಿರುವಂಥ ಪಠ್ಯಗಳೇ ಆಗಿವೆ. ನಾನು ಈಗ ಐ.ಎ.ಎಸ್. ಪರೀಕ್ಷೆಗೆ ಏನು ಪಠ್ಯಗಳಿವೆ ಎನ್ನುವ ಮಾಹಿತಿಯನ್ನು ತೆಗೆದುಕೊಂಡೆ. ಅದರಲ್ಲಿ ಹೆಚ್ಚುವರಿಯಾಗಿ Indian Heritage and Culture ಇಡಲಾಗಿದೆ. ಇದರ ಮೂಲಕ ನಾವು ಪ್ರತ್ಯೇಕವಾಗಿ constitutional values ಹೇಳಿಕೊಡುತ್ತಿದ್ದೇವೆ. ಹೊಸ ಎಸ್.ಇ.ಪಿಯಲ್ಲಿ ಇವೆಲ್ಲವನ್ನೂ ನಾವು additional ಆಗಿ ಕೊಡುತ್ತಿದ್ದೇವೆ. open elective ಏನಿವೆ 128 ಕ್ರೆಡಿಟ್ಸ್ ಮೇಲೆ 150-160 ಕ್ರೆಡಿಟ್‌ವರೆಗೂ ಆ ವಿಶ್ವವಿದ್ಯಾಲಯಗಳ Board of Studies ನವರು ಸ್ಥಳೀಯವಾಗಿ ಅಲ್ಲಿ ಏನು ಅವಶ್ಯಕತೆಗಳಿವೆಯೋ ಅದಕ್ಕನುಗುಣವಾಗಿ ಅವರು ಹೊಸ ಪಠ್ಯಗಳನ್ನು ಅಥವಾ ಹೊಸ ವಿಷಯಗಳನ್ನು ಕ್ರೆಡಿಟ್ಸ್ ಕೊಟ್ಟು ಮಕ್ಕಳಿಗೆ ಹೇಳಿಕೊಡುವುದಕ್ಕೆ ಅವಕಾಶಗಳನ್ನು ಒದಗಿಸಿಕೊಟ್ಟಿದ್ದೇವೆ.

ಇದಲ್ಲದೆ, ನಾವು ಸುಮಾರು 18-19 ಸಂಸ್ಥೆಗಳ ಜೊತೆಯಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡಿದ್ದೇವೆ. ಉದಾಹರಣೆಗೆ ವಾಗ್ವಾನಿ ಫೌಂಡೇಷನ್‌ನವರ ಜೊತೆಯಲ್ಲಿ ಸುಮಾರು 2 ವರ್ಷಗಳಿಂದ ಒಡಂಬಡಿಕೆ ಮಾಡಿಕೊಂಡಿದ್ದು, ಸಂದರ್ಶನಕ್ಕೆ ಹೋದಾಗ ಯಾವ ರೀತಿಯಾಗಿ ಎದುರಿಸಬೇಕು, ಇಂಗ್ಲಿಷ್ ಪ್ರೊಫಿಷಿಯೆನ್ಸಿ ಯಾವ ರೀತಿಯಿರಬೇಕು, Problem solving ಯಾವ ರೀತಿಯಿರಬೇಕು, Critical thinking ಯಾವ ರೀತಿಯಿರಬೇಕು, ಇವೆಲ್ಲದರ ಬಗ್ಗೆ ನಾವು ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಅಳವಡಿಸುವಂಥ ಕೆಲಸ ಮಾಡುತ್ತಿದ್ದೇವೆ. ಈಗ ಮೈಕ್ರೊಸಾಫ್ಟ್ ಹಾಗೂ ಇನ್ಫೋಸಿಸ್ ಅವರ ಜೊತೆಯೂ ಒಡಂಬಡಿಕೆಯನ್ನು ಮಾಡಿಕೊಂಡಿದ್ದೇವೆ. Career guidance ಬಗ್ಗೆ LMS (Learning Management System) ನಲ್ಲಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಹಿತಿ ಕೊಡುವಂಥ ಕೆಲಸವನ್ನು ಮಾಡುತ್ತಿದ್ದೇವೆ. It's a very vast subject. ಸಿವಿಲ್ ಸರ್ವಿಸಸ್ ವಿಚಾರದಲ್ಲಿ ಪಠ್ಯದಲ್ಲಿ ಅಥವಾ 3-4 ವರ್ಷಗಳ ಕೋರ್ಸ್‌ಗಳಲ್ಲಿ ಎಲ್ಲವನ್ನೂ ಅಳವಡಿಸಿಕೊಳ್ಳುತ್ತೇವೆ ಎಂದರೆ ನಾವು ಎಲ್ಲಿಯೋ ಒಂದು ಕಡೆ ಗೊಂದಲವನ್ನು ಸೃಷ್ಟಿ ಮಾಡುತ್ತೇವೆ. ನಾನು ಯಾವುದೋ ಒಂದು ವೇದಿಕೆಯಲ್ಲಿ ಈ ವಿಷಯವನ್ನು ಚರ್ಚೆ ಮಾಡುವಾಗ ನಿವೃತ್ತ ಹಿರಿಯ ಅಧಿಕಾರಿಯೊಬ್ಬರು ಮಾತನಾಡುತ್ತಾ, "ನಮ್ಮ ಕರ್ನಾಟಕದಲ್ಲಿ ಕೇಂದ್ರದಲ್ಲಿರುವಂಥ ಅವಕಾಶಗಳ ಬಗ್ಗೆ ಮಾಹಿತಿ ಕೊರತೆ ಇದೆ" ಎಂದು ಹೇಳಿದರು.

ನಮ್ಮ ನೆರೆಯ ರಾಜ್ಯಗಳಲ್ಲಿ ಬಹಳಷ್ಟು ಜನ ಪರೀಕ್ಷೆಗಳನ್ನು ಬರೆದು ಪ್ರಯತ್ನ ಮಾಡುತ್ತಿದ್ದಾರೆ. ಒಂದು ವ್ಯತ್ಯಾಸದ ಬಗ್ಗೆ ಹೇಳುತ್ತೇನೆ. ಮಾನ್ಯ ಸದಸ್ಯರು ಬಿಹಾರದ ಬಗ್ಗೆ ಹೇಳಿದರು. ನಾನು ಬೇರೊಂದು ವಿಷಯದ ವಿಚಾರ ಸಂಕಿರಣಕ್ಕಾಗಿ ಬಿಹಾರಕ್ಕೆ ಹೋಗಿದ್ದೆನು. ನೀತಿ ಆಯೋಗ ಏನು ಹೇಳುತ್ತದೆಯೆಂದರೆ ಕರ್ನಾಟಕದಲ್ಲಿ density of Higher Education Institutions per lakh ಪ್ರಕಾರ national average is 30. ನಮ್ಮಲ್ಲಿ 66 ಇದೆ. ಬಿಹಾರದಲ್ಲಿ ಕೇವಲ 7 ಇದೆ. ಆದರೆ ಬಿಹಾರದವರು ದೆಹಲಿಗೆ ಹೋಗಿ ಕೋಚಿಂಗ್ ತೆಗೆದುಕೊಂಡು ಪರೀಕ್ಷೆಯನ್ನು ಬರೆಯುತ್ತಾರೆ. ಆದ್ದರಿಂದಲೇ ಇಂದು ಬಿಹಾರದವರು ಬಹಳಷ್ಟು ಜನ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಾಗಿದ್ದಾರೆ. ನಾವು ಬೇಸಿಕ್ ಲೆವೆಲ್‌ನಿಂದಲೇ ಗೊಂದಲಕ್ಕೆ ಒಳಗಾಗದೆ ಪಠ್ಯಗಳನ್ನು ಅಭ್ಯಸಿಸಬೇಕು. ಏಕೆಂದರೆ ಎಲ್ಲರೂ ಸಿವಿಲ್ ಸರ್ವಿಸಸ್‌ಗೆ ಹೋಗುತ್ತಾರೆಂದು ಇಲ್ಲ. Self-employment ತೆಗೆದುಕೊಳ್ಳುತ್ತಾರೆ. ನಮ್ಮ ಮುಂದೆ ಇವತ್ತು ಬೇರೆ ಬೇರೆ ಅವಕಾಶಗಳು ಸಾಕಷ್ಟಿವೆ. ಇವತ್ತು ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆ ಇರುವುದರಿಂದ ಅವರು ಅದನ್ನು ಸೇರಿಸುವುದಕ್ಕೆ ಯಾವುದೇ ಅಡಚಣೆ ಇರುವುದಿಲ್ಲ. ಆದರೆ ಎಲ್ಲವನ್ನೂ ಇಲ್ಲಿ ಸೇರಿಸಬೇಕೆಂದರೆ ಅದು ಬಹಳ ಕಷ್ಟಸಾಧ್ಯವಾದುದು.

ಆಗಲೇ ನಾನು ಒಬ್ಬ ಐ.ಎ.ಎಸ್. ಅಧಿಕಾರಿಯವರ ಜೊತೆ interact ಮಾಡುತ್ತಿದ್ದಾಗ ಅವರು ಹೇಳಿದರು. ನಾವು 6ನೇ ತರಗತಿಯಿಂದ 10ನೇ ತರಗತಿಯವರೆಗೆ ಹೆಚ್ಚು ಓದಿದ್ದು, ಎನ್.ಸಿ.ಇ.ಆರ್.ಟಿ. ಪಠ್ಯವನ್ನೇ basic knowledge ಆಗಿ ಕೇಳುತ್ತಾರೆ. ಅದನ್ನು ಬಿಟ್ಟು, ಸಾಮಾನ್ಯ ಜ್ಞಾನಕ್ಕಾಗಿ ದಿನಪತ್ರಿಕೆಗಳನ್ನು ಓದುತ್ತೀರೋ ಅಥವಾ ಬೇರೆ ಮಾಹಿತಿಯನ್ನು ಕಲೆಹಾಕಿ ಅಧ್ಯಯನ ಮಾಡುತ್ತೀರೋ ಅದು ಬೇರೆಯಾಗುತ್ತದೆ. ನಿಮಗೆ ತಿಳಿದಿರುವಂತೆ ಇವತ್ತು pass percentage ಏನಿದೆ? ಸಿವಿಲ್ ಸರ್ವೀಸಸ್ ಪರೀಕ್ಷೆಗಳಲ್ಲಿ ಯಾರೂ 70-80% ತೆಗೆದುಕೊಳ್ಳುವುದಿಲ್ಲ. ಶೇ.57ರಿಂದ ಶೇ.63 ಗರಿಷ್ಠ ಅಂಕಗಳು IAS, IFS ranking ಈ ಪರೀಕ್ಷೆಗಳಲ್ಲಿ ಬರುತ್ತದೆ. ಸಣ್ಣ ವಯಸ್ಸಿನಿಂದಲೇ career guidance ಬಗ್ಗೆ ಭವಿಷ್ಯದಲ್ಲಿ ಮಕ್ಕಳಿಗೆ ಏನು ಅವಕಾಶಗಳು ಬರಬಹುದು ಮತ್ತು ಯಾವ ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂಬುದರ ಬಗ್ಗೆ ಮಾಹಿತಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬಹುದು ಹಾಗೂ ತಯಾರಿ ಮಾಡಬಹುದು. ವಿಶ್ವವಿದ್ಯಾಲಯಗಳ ಹಂತದಲ್ಲಿಯೇ ಎಲ್ಲವನ್ನೂ ಮಾಡುವುದು ಬಹಳ ಕಷ್ಟವಾಗುತ್ತದೆ. ಮಕ್ಕಳಲ್ಲಿ ಬಹಳಷ್ಟು ಗೊಂದಲ ಉಂಟಾಗುತ್ತದೆ. ಆದ್ದರಿಂದ ಗೌರವಾನ್ವಿತ ಸದಸ್ಯರ ಕಳಕಳಿಯನ್ನು ನಾನು ಒಪ್ಪುತ್ತೇನೆ. ಎಲ್ಲವನ್ನೂ ಪಠ್ಯದಲ್ಲಿಯೇ ತರುತ್ತೇವೆ ಎನ್ನುವುದು ಕಷ್ಟಸಾಧ್ಯ.

VICE CHAIRMAN:– Text book is different and examination is different.

Dr. M.C.SUDHAKAR:– Common sense ಇದರಲ್ಲಿ ಬಹಳ ಇದೆ. ನಾವು ಯಾವ ರೀತಿ mind apply ಮಾಡುತ್ತೇವೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಇದು ಉತ್ತಮವಾದಂಥ ಸಲಹೆ. ಆದರೆ career guidance ಅನ್ನು ಸಣ್ಣ ವಯಸ್ಸಿನಿಂದಲೂ ಮಕ್ಕಳಿಗೆ ಅವರ ತಲೆಯಲ್ಲಿ ತುಂಬುವಂಥ ಕೆಲಸವಾಗಬೇಕು. ಅವರು ಅದರಲ್ಲಿ interest develop ಮಾಡಿಕೊಂಡು ಅವರು ಆ ವಿಷಯವನ್ನು ಆಯ್ಕೆ ಮಾಡಿಕೊಂಡು ಮುಂದೆ ಹೋಗುವುದು ಸೂಕ್ತ ಎನ್ನುವುದು ನನ್ನ ಒಂದು analysis.

ವೈಸ್ ಛೇರ್ಮನ್:– ಮಾನ್ಯ ಸಚಿವರೆ, ನನ್ನದೊಂದು ಸಲಹೆ. ಈ ನಾಡಿನಲ್ಲಿ ಸಾವಿರಾರು ಉತ್ತಮ ಶಿಕ್ಷಣ ತಜ್ಞರಿದ್ದಾರೆ. ಆ ಶಿಕ್ಷಣ ತಜ್ಞರ ಸಲಹೆಯನ್ನು ಕೂಡ ತಾವು ಪಡೆದುಕೊಳ್ಳಬೇಕಾಗುತ್ತದೆ. ಇನ್ನೊಂದು ಬಹಳ ಮುಖ್ಯವಾದ ವಿಚಾರ ತಾವು ಹೇಳಿದಿರಿ. ಚಿಕ್ಕಂದಿನಿಂದಲೇ ಮಕ್ಕಳನ್ನು ತಯಾರು ಮಾಡಬೇಕು. ಇನ್ನೊಂದು ಕಡೆ ೮, ೯ ನೇ ತರಗತಿ ವಿದ್ಯಾರ್ಥಿಗಳನ್ನು ಅವರ ಗುಣಮಟ್ಟ ಯಾವುದೇ ಇರಲಿ, ಪಾಸ್ ಮಾಡಬೇಕೆನ್ನುವ ವಿಚಾರವು ಬಹಳ ಗಂಭೀರವಾದುದು. ಇಲ್ಲಿ ಶಾಲಾ ಶಿಕ್ಷಣ ಸಚಿವರಿಲ್ಲ. ಇದ್ದಿದ್ದರೆ ಅವರಿಗೆ ಹೇಳುತ್ತಿದ್ದೆನು. ೮, ೯ನೇ ತರಗತಿಯಲ್ಲಿ ಗುಣಮಟ್ಟ ಇಲ್ಲ ಎಂದರೆ 10ನೇ ತರಗತಿಯಲ್ಲಿ how do you expect quality of education? ಇದರ ಬಗ್ಗೆ ಶಿಕ್ಷಣ ಸಚಿವರಿಬ್ಬರೂ ಸ್ವಲ್ಪ ಗಹನವಾದ ಚರ್ಚೆಯನ್ನು ಮಾಡುವ ಮುಖಾಂತರ ಒಂದು ಪರಿಹಾರವನ್ನು ಕಂಡುಹಿಡಿಯಬೇಕು.

ನಾನು ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವುದರಿಂದ ಹೇಳಬಯಸುತ್ತೇನೆ. ೮, ೯ ನೇ ತರಗತಿಯನ್ನು ಈ ರೀತಿ ಪಾಸ್ ಮಾಡುವುದರಿಂದ ಬಹಳಷ್ಟು ಮಕ್ಕಳಿಗೆ ತೊಂದರೆಯಾಗಿದೆ. ನೀವು ಮಕ್ಕಳಿಗೆ ಬೇರೆ ರೀತಿಯ mind setup ಆಗಬಾರದೆಂದು, ಅವರ ಪಾಲಕರಿಗೆ ನೋವಾಗಬಾರದೆಂದು ಮಾಡಿದ್ದೀರಿ. ಅಲ್ಲಿ quality of education ಹಾಳಾಗುತ್ತದೆ. ಅದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು.

ಡಾ: ಧನಂಜಯ ಸರ್ಜಿ:– ಮಾನ್ಯ ಸಚಿವರೆ, ತಾವು career guidance ಮಾಡುತ್ತೇವೆಂದು ಹೇಳಿದಿರಿ. ಅದು ಕೇವಲ ಮಾತಾಗದೆ, ಕೃತಿಯಲ್ಲಿಯೂ ಇರಬೇಕು. ತಮ್ಮ ಮೇಲೆ ನಂಬಿಕೆ ಖಂಡಿತವಾಗಿಯೂ ಇದೆ. ಜೊತೆಗೆ ಪರೀಕ್ಷಾ ಪಠ್ಯಕ್ರಮದಲ್ಲಿ...

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಸ್ ಛೇರ್ಮನ್:– ಬಹಳ ಸಮಯ ಆಯಿತು. ನೀವು ಕೇಳಿದ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. ಗಮನ ಸೆಳೆಯುವ ಸೂಚನೆಯಲ್ಲಿ ಸರ್ಕಾರದ ಗಮನ ಸೆಳೆಯುವುದು ಹೇಗೆ ಎಂದು ಮಾನ್ಯ ಸದಸ್ಯರು ಪುಸ್ತಕ ತೆಗೆದುಕೊಂಡು ಓದಬೇಕು.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೆ, ಆ ವಿಷಯದಲ್ಲಿ ತಾವೇ ನಮಗೆ ಮಾರ್ಗದರ್ಶಕರು.

(ಸದನವು ನಗೆಗಡಲಿನಲ್ಲಿ ತೇಲಿತು)

ಶ್ರೀ ಡಿ.ಎಸ್.ಅರುಣ್:– ಮಾನ್ಯ ಸಭಾಪತಿಯವರೆ, ತಾವು ಇಲ್ಲಿ ಕುಳಿತಾಗ ಬೇರೆ, ಅಲ್ಲಿ ಕುಳಿತಾಗ ಬೇರೆ.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೆ, ರಾಜಾ ವಿಕ್ರಮಾದಿತ್ಯನ ಒಂದು ಕಥೆ ನೆನಪಿಗೆ ಬರುತ್ತದೆ. ರಾಜಾ ವಿಕ್ರಮಾದಿತ್ಯನ ಸಿಂಹಾಸನ ಒಂದು ದಿಬ್ಬದಲ್ಲಿರುತ್ತದೆ. ಆ ದಿಬ್ಬದಲ್ಲಿ ದನ ಕಾಯುವವನು ಕುಳಿತುಕೊಂಡರೆ ರಾಜನ ರೀತಿಯೇ...

ವೈಸ್ ಛೇರ್ಮನ್:– ಮಾನ್ಯ ರವಿಯವರೇ, ನನ್ನನ್ನು ನೀವು ಯಾರಿಗೆ ಹೋಲಿಸುತ್ತಿದ್ದೀರಿ? ಈಗ ಈ ಪೀಠಾಧ್ಯಕ್ಷರನ್ನು ಯಾರಿಗೆ ಹೋಲಿಸುತ್ತಿದ್ದೀರಿ ಎಂದು ಹೇಳಿ.

(ಸದನದಲ್ಲಿ ನಗೆಯ ಅಲೆ)

ಶ್ರೀ ಸಲೀಂ ಅಹಮದ್:– ಮಾನ್ಯ ರವಿಯವರೇ, ಅವರು ಸಕಲ ಕಲಾ ವಲ್ಲಭರು.

ಶ್ರೀ ಎಸ್. ಕೇಶವಪ್ರಸಾದ್:– ಇಲ್ಲಿ ಎಲ್ಲರೂ ಗೋಪಾಲಕರೇ..

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ನಾನು ದನ ಕಾಯ್ದಿದ್ದೇನೆ. ನೀವು ಕಾಯ್ದಿಲ್ಲವೇ?

ವೈಸ್ ಛೇರ್ಮನ್:– ನಾನೂ ಕಾಯ್ದಿದ್ದೇನೆ.

ಶ್ರೀ ಸಿ.ಟಿ.ರವಿ:– ಇಲ್ಲಿ ಕುಳಿತಾಗ ಒಂದು ರೀತಿ, ಅಲ್ಲಿ ಹೋದಾಗ ಒಂದು ರೀತಿ ಇರುತ್ತೇವೆ.

ವೈಸ್ ಛೇರ್ಮನ್:– ನಿಮ್ಮ ಪ್ರಶಂಸೆಯ ಮಾತುಗಳಿಗೆ ಧನ್ಯವಾದಗಳು.

ಶ್ರೀ ಡಿ.ಎಸ್.ಅರುಣ್:– ಮಾನ್ಯ ಸಿ.ಟಿ.ರವಿಯವರು ನಿಮ್ಮ ಮೇಲಿರುವ ಅಪಾರವಾದ ಪ್ರೀತಿಯಿಂದಾಗಿ ಹಳೆಯ ಒಂದು ದ್ವೇಷಕ್ಕೆ ಈ ರೀತಿ ಹೇಳಿದ್ದಾರೆ.

ವೈಸ್ ಛೇರ್ಮನ್:– ಮಾನ್ಯ ಅರುಣ್ ಅವರೆ, ನಾನು ಚಿಕ್ಕವನಿದ್ದಾಗ ದನ ಕಾಯ್ದಿರುವುದು ಅವರಿಗೆ ಗೊತ್ತಿದೆ. ಅವರ ಬಳಿ ಹೇಳಿಕೊಂಡಿದ್ದೇನೆ. ಹಾಗಾಗಿ ಅವರು ಹೇಳಿದ್ದಾರೆ.

ಶ್ರೀ ಸಿ.ಟಿ.ರವಿ:– ಮಾನ್ಯ ಅರುಣ್ ಅವರೇ, ನೀವು ಶೆಟ್ರು ದುಡ್ಡು ಎಣಿಸಿಕೊಂಡು ಕುಳಿತುಕೊಂಡಿರಿ. ನಮಗೆ ದನವೇ ಇದ್ದದ್ದು ಕಾಯುವುದಕ್ಕೆ. ನಾವು ದನವನ್ನೇ ಕಾಯ್ದಿದ್ದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ: ಎಂ.ಸಿ.ಸುಧಾಕರ್:– ಮಾನ್ಯ ವೈಸ್ ಛೇರ್ಮನ್‌ರವರಿಗೂ ಮಾನ್ಯ ರವಿಯವರಿಗೂ ಆಗಿನಿಂದಲೇ ಅವಿನಾಭಾವ ಸಂಬಂಧವಿತ್ತು ಎನಿಸುತ್ತದೆ. ಯಾರು ಹೆಚ್ಚು ದನ ಕಾಯುತ್ತಾರೆ ಎಂದು.

ಶ್ರೀ ಟಿ.ಎ.ಶರವಣ:– ಮಾನ್ಯ ಸಚಿವರೆ, ಅವರಿಬ್ಬರು ಕುಚಿಕು–ಕುಚಿಕು ಗೆಳೆಯರು.

ಶ್ರೀ ಸಿ.ಟಿ.ರವಿ:– ನಾವಿಬ್ಬರೂ ಚೆನ್ನಾಗಿದ್ದೇವೆ. ದಯಮಾಡಿ ಅದಕ್ಕೆ ಯಾರೂ ಹುಳ ಹಿಂಡುವ ಕೆಲಸ ಮಾಡಬೇಡಿ.

ವೈಸ್ ಛೇರ್ಮನ್:– ಮಾನ್ಯ ರವಿಯವರೆ, ಇದಕ್ಕೆ ಪೂರಕವಾಗಿ ಹೇಳುತ್ತೇನೆ. ಇದೇ ಪೀಠದಲ್ಲಿ ಮಾನ್ಯ ಹೊರಟ್ಟಿಯವರು ಕುಳಿತಿದ್ದರು. ನಾನು ಬಂದ ಹೊಸದರಲ್ಲಿ ಸಭಾಪತಿಯವರು ಇಲ್ಲಿ ಕುಳಿತು ಹೇಳಿದರು. ನಾವು ಇಸ್ರೇಲ್‌ಗೆ ಹೋಗಿದ್ದೆವು, ಇಬ್ಬರು ಅಥವಾ ಮೂರು ಜನರು 5,000 ದನಗಳನ್ನು ಮೇಯಿಸುತ್ತಿದ್ದರು ಎಂದಾಗ ನಾನು ಅಲ್ಲಿ ಕುಳಿತು "ನಮ್ಮ ದುರ್ದೈವ, ಇಲ್ಲಿ ನಾವು 74 ಜನರಿಗೆ ನೀವೊಬ್ಬರೇ" ಎಂದು ಹೇಳಿದ್ದೆನು.

(ಮುಂದು)

(653) 12-08-2025 (4.30) ಕೆಜಿ:ವಿಕೆ (ವೇಸ್‌ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ನಾನು ಅದಕ್ಕೆ ಪೂರಕವಾಗಿ ಹೇಳುತ್ತೇನೆ. ತಾವು ಮಾನ್ಯ ಸಚಿವರಿಗೆ ಶಿಕ್ಷಣ ತಜ್ಞರ ಅಭಿಪ್ರಾಯವನ್ನು ತೆಗೆದುಕೊಳ್ಳಿ ಎಂದು ಸೂಚನೆಯನ್ನು ಕೊಟ್ಟಿದ್ದೀರಿ. ಮಾನ್ಯ ಸಚಿವರು ಮತ್ತು ತಾವು ಬಹಳ ಚೆನ್ನಾಗಿ ಹೇಳಿದ್ದೀರಿ. ನಾನು ಅದನ್ನು ತಿಳಿದುಕೊಂಡು ಹೇಳುತ್ತಿದ್ದೇನೆ.

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರೇ, ತಾವು ನಮ್ಮ senior ಹೇಳಿ.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಆ ರೀತಿ ಅಲ್ಲ. ನಾವೆಲ್ಲರೂ ಒಂದೇ. ಶಿಕ್ಷಣ ತಜ್ಞರು ಎಂದರೆ, ನನಗೆ ಒಂದು ತರಹ question mark ಆಗಿಬಿಟ್ಟಿದೆ. ಯಾರು ಶಿಕ್ಷಣ ತಜ್ಞರು? ಯಾರು define ಮಾಡಿದ್ದಾರೆ? ಯಾರನ್ನು ಕರೆಯಬೇಕು?

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರೇ, ಹುಡುಕಿ.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಎಲ್ಲರೂ ಕನ್ನಡಿ ಹಿಂದೆ ನಿಂತುಕೊಂಡು prepare ಮಾಡುತ್ತಾರೆ. ಯಾವುದೇ ಸರ್ಕಾರಗಳು ಬರಲಿ. ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಎಲ್ಲಾ ಕನ್ನಡಿ ಹಿಂದೆ ನಿಂತುಕೊಳ್ಳುವುದು, ಏನೋ ಬರೆಯುವುದು, ತುರುಕುವುದು; ಹಿಂದಕ್ಕೆ ಎಳೆದುಕೊಂಡು ಹೋಗುವುದು, ಮುಂದಕ್ಕೆ ಅಲ್ಲ.

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರೇ, ಅದು ಆಗಬಾರದು ಎಂದು ಹೇಳಿದ್ದು.

ಶ್ರೀ ಪುಟ್ಟಣ್ಣ:– ಮಾನ್ಯ ಸಭಾಪತಿಯವರೇ, ಅದು ಆಗಬಾರದು. ಯಾರು ಕೊಠಡಿಯಲ್ಲಿ ಪಾಠ ಮಾಡುತ್ತಾರೆ, ಯಾರು ಪ್ರತಿದಿವಸ ಪುಸ್ತಕ ಓದುತ್ತಾರೆ, ಅವರು ಶಿಕ್ಷಣ ತಜ್ಞರು. ಒಂದು article ಅನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರೆಯುವುದು ಅಥವಾ ಯಾರದೋ ಕೈಯಲ್ಲಿ ಬರೆಸುವುದು ಪೇಪರ್‌ನಲ್ಲಿ ತಮ್ಮ ಹೆಸರು ಹಾಕಿಸಿಕೊಳ್ಳುವುದು, ಅವರು ಶಿಕ್ಷಣ ತಜ್ಞರು. ಅದನ್ನು ತಂದು ನಮಗೆ-ನಿಮಗೆ ಕೊಡುವುದು. ಆ ಕಡೆ ಬರಲಿ. ಅವರು-ಅವರೇ ಕೆಲಸ ಮಾಡುತ್ತಾರೆ. ಈ ಕಡೆ ಬರಲಿ ಇವರು ಯಾರೋ ಮಾಡುತ್ತಾರೆ.

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರೇ, ತಮ್ಮ ಸಲಹೆಯನ್ನು ಮಾನ್ಯ ಸಚಿವರು ಮನಸಾರೆ ಸ್ವೀಕಾರ ಮಾಡುತ್ತಾರೆ.

ಶ್ರೀ ಪುಟ್ಟಣ್ಣ:- ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ. ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿಯವರು ಬಹಳ ಒಳ್ಳೆಯ ವಿಷಯವನ್ನು ತಂದಿದ್ದಾರೆ. ಸ್ಪರ್ಧಾತ್ಮಕವಾದ ಇಂತಹ ಯುಗದಲ್ಲಿ ನಮ್ಮ ರಾಜ್ಯದ ಮಕ್ಕಳಿಗೆ ಅನುಕೂಲವಾಗುವುದನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು ಎನುವುದು ಅವರ ಉದ್ದೇಶವಾಗಿದೆ. ಅದಕ್ಕೆ ಪೂರಕವಾಗಿ ಯಾರನ್ನು ಮಾಡಬೇಕು. ಅದಕ್ಕೆ ತಾವು ಶಿಕ್ಷಣ ತಜ್ಞರು ಎಂದು ಹೇಳಿದ್ದೀರಿ. ಇವರು ಯಾರನ್ನೂ ಹಿಡಿದುಕೊಂಡು ಬಂದು, ಇನ್ನೇನೂ ಮಾಡಿಬಿಟ್ಟಾರೋ ಎಂದು ನನಗೆ ಭಯವಾಯಿತು. ಅದಕ್ಕೆ ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿಯವರು ಹೇಳಿದ್ದನ್ನು ಸರಿಯಾಗಿ ಮಾಡಬೇಕೆಂದರೆ, ಯಾರು field ನಲ್ಲಿ ಕೆಲಸ ಮಾಡುತ್ತಿದ್ದಾರೆ, ಅದಕ್ಕೆ ಪೂರಕವಾಗಿ ಯಾರು ಸ್ಪರ್ಧಾತ್ಮಕವಾದಂತಹ ಪರೀಕ್ಷೆಗಳಿಗೆ ಮಕ್ಕಳನ್ನು ತಯಾರು ಮಾಡುತ್ತಿದ್ದಾರೆ, ಅಂತಹವರು ಇದರಲ್ಲಿ involvement ಆಗಬೇಕು. Practical ಆಗಿ ಇರಬೇಕು. ಅದಕ್ಕೆ ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ. ಮಾನ್ಯ ಸಚಿವರು London, America ಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿಯವರು ಒಳ್ಳೆಯ ವಿಷಯವನ್ನು ತಂದಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಒಳ್ಳೆಯ ನಿರ್ಧಾರವನ್ನು ಮಾಡಿ ಒಳ್ಳೆಯವರನ್ನು ತೆಗೆದಕೊಂಡು ಸರಿಯಾಗಿ ಮಾಡಲಿ ಎಂದು ಹೇಳುವುದಕ್ಕೆ ಇಚ್ಛೇಪಡುತ್ತೇನೆ.

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ.,

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರೇ, ತಮ್ಮ ಸಮಯ ಮುಗಿದಿದೆ.

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೇ, ನಾನು ವೈದ್ಯನಾಗಿ, ಎಲ್ಲರಿಗೂ ವೈದ್ಯ ಎಂದು ಹೇಳಿದ ತಕ್ಷಣ ಮೆಡಿಸಿನ್ ಕೂಡುವುದು ಅನಿಸುತ್ತದೆ. ಬೆಳಗ್ಗಿನ ಜಾವ ಒಳ್ಳೆಯ ನಿದ್ರೆ ಮಾಡುವುದು ಒಳ್ಳೆಯ ಮೆಡಿಸಿನ್. ಚೆನ್ನಾಗಿ ನಗುವುದು ಸಹ ಒಂದು ಒಳ್ಳೆಯ ಮೆಡಿಸಿನ್. ಹಾಗಾಗಿ, ತಾವು ಎಲ್ಲರನ್ನು ಚೆನ್ನಾಗಿ ನಗೆಸಿದ್ದೀರಿ. ಎಲ್ಲರನ್ನು ನಗಿಸಿ ಸಭೆಗೆ ಔಷಧಿಯನ್ನು ಕೊಟ್ಟಿದ್ದೀರಿ. ಆದರೆ, ನಾನು ಗಮನ ಸೆಳೆಯುವಂತಹ ಪ್ರಶ್ನೆ ಬಹಳ ಗಂಭೀರವಾಗಿದೆ. ಬಹಳಷ್ಟು ವಿದ್ಯಾರ್ಥಿಗಳ ಜೀವನ ಹಾಳಾಗುತ್ತಿದೆ. ವಿದ್ಯಾರ್ಥಿಗಳು ಸುಮ್ಮನೆ ಕುಳಿತುಕೊಂಡು ಓದುತ್ತಿದ್ದಾರೆ, ಅವರಿಗೆ ಕೆಲಸ ಸಿಗುತ್ತಿಲ್ಲ. ಅವರಿಗೆ 2 ರಿಂದ 3,4 ವರ್ಷಗಳು.,

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರೇ, ಅದರ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ತಾವು ಅದನ್ನು ಮತ್ತೆ ಏಕೆ ಹೇಳುತ್ತೀರಿ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಧನಂಜಯ ಸರ್ಜಿ:- ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ಕೆಲಸಗಳು ಆಗಬೇಕು. ಒಂದು syllabus incorporation ಆಗಬೇಕು. ಎರಡನೆಯದ್ದು State and Central ನ examination pattern almost 70 percent ಒಂದೇ ತರಹ ಇದ್ದರೆ, ಖಂಡಿತವಾಗಿ ಮಕ್ಕಳಿಗೆ ನ್ಯಾಯವನ್ನು ಕೊಟ್ಟಂತೆ ಆಗುತ್ತದೆ.

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರೇ, ಸಾಕು ಬಿಡಿ. ಮಾನ್ಯ ಸದಸ್ಯರಾದ ವೈ.ಎಂ.ಸತೀಶ್‌ರವರೇ, ತಾವು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ)ವಿಷಯ:– ಬಳ್ಳಾರಿ ನಗರದಲ್ಲಿರುವ ತಾರಾನಾಥ ಆಯುರ್ವೇದ ಕಾಲೇಜಿನಲ್ಲಿ ಬೋಧಕ ಹುದ್ದೆಗಳು ಖಾಲಿ ಇರುವುದರಿಂದ ಭಾರತೀಯ ವೈದ್ಯಕೀಯ ರಾಷ್ಟ್ರೀಯ ಆಯೋಗವು ವಿದ್ಯಾರ್ಥಿಗಳ ಪ್ರವೇಶವನ್ನು ಕಡಿಮೆ ಮಾಡಲು ಶಿಫಾರಸ್ಸು ಮಾಡಿರುವ ಬಗ್ಗೆ.

– – –

ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಬಳ್ಳಾರಿ ನಗರದಲ್ಲಿರುವ ತಾರಾನಾಥ ಆಯುರ್ವೇದ ಕಾಲೇಜಿನಲ್ಲಿ ಬೋಧಕ ಹುದ್ದೆಗಳು ಖಾಲಿ ಇರುವುದರಿಂದ ಭಾರತೀಯ ವೈದ್ಯಕೀಯ ರಾಷ್ಟ್ರೀಯ ಆಯೋಗವು ವಿದ್ಯಾರ್ಥಿಗಳ ಪ್ರವೇಶವನ್ನು ಕಡಿಮೆ ಮಾಡಲು ಶಿಫಾರಸ್ಸು ಮಾಡಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಮಾನ್ಯ ಸಭಾಪತಿಯವರೇ,

ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗವು ಬೋಧನಾ ಸಿಬ್ಬಂದಿಯ ಕೊರತೆಯಿಂದಾಗಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ಕಡಿಮೆ ಮಾಡಬೇಕೆಂದು ಶಿಫಾರಸ್ಸು ಮಾಡಿರುತ್ತದೆ.

ವಿದ್ಯಾರ್ಥಿಗಳ ಪ್ರವೇಶಾತಿಯ ಸೀಟನ್ನು ಹೆಚ್ಚಳ ಮಾಡುವಂತೆ ಕೋರಿ ಸದರಿ ಆಯೋಗದ ಅಧಿನಿಯಮ ಸಂಖ್ಯೆ 26(ಡಿ) ರಂತೆ ಮೇಲ್ಮನವಿಯನ್ನು ಸಲ್ಲಿಸಲಾಗಿತ್ತು.

ತದನಂತರ ಮಹಾವಿದ್ಯಾಲಯದಲ್ಲಿನ ಕೊರತೆಗಳನ್ನು ಶೀಘ್ರವಾಗಿ ನೀಗಿಸುವ ಬಗ್ಗೆ 'ನೋಟರೈಸ್ಡ್ ಅಫಿಡೆವಿಟ್ 'ಅನ್ನು ಆಯುಕ್ತಾಲಯದಿಂದ ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗಕ್ಕೆ ಸಲ್ಲಿಸಲಾಗಿರುತ್ತದೆ (ಅನುಬಂಧ-1 ರಲ್ಲಿ ಲಗತ್ತಿಸಿದೆ). ಅಫಿಡವಿಟ್‌ನ್ನು ಆಯೋಗವು ಮಾನ್ಯ ಮಾಡಿ ಪ್ರಸಕ್ತ 2025-26 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ 60 ಸೀಟುಗಳನ್ನು ಯಥಾವತ್ತಾಗಿ ಮುಂದುವರೆಸಲಾಗಿದೆ (ಅನುಬಂಧ-2 ರಲ್ಲಿ ಲಗತ್ತಿಸಿದೆ).

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿದ್ದೇನೆ. ನಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ಇಲಾಖೆಯಲ್ಲಿ ಬೋಧನಾ ಸಿಬ್ಬಂದಿಯ ಹಾಗೂ ಬೋಧಕೇತರ ಸಿಬ್ಬಂದಿಯ ಕೊರತೆಯಿಂದ seats sanction ಏನು ಆಗಿತ್ತು, ಅದರಲ್ಲಿ ಕಡಿತ ಮಾಡುವಂತಹ ಕ್ರಮವನ್ನು ನಮ್ಮ ರಾಷ್ಟ್ರೀಯ ಆಯೋಗದಿಂದ ಮಾಡುವಂತಹದ್ದು ಇತ್ತು. ಈಗ ನಾವು ಅವರ ಜೊತೆಗೆ ಸಂಪರ್ಕವನ್ನು ಮಾಡಿದ್ದು, ಒಂದು affidavit ಅನ್ನು ಕೊಟ್ಟಿದ್ದೇವೆ. ನಮ್ಮಲ್ಲಿ ಇದ್ದಂತಹ ಕೆಲವು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೋಧಕರು deputation ಮೇಲೆ ಬೇರೆ ಬೇರೆ ಕಡೆಗೆ ಹೋಗಿದ್ದರು. ಈಗ ಅವರನ್ನು ವಾಪಸ್ ಬರುವ ರೀತಿ ಮಾಡಿಕೊಂಡಿದ್ದೇವೆ. ನಮ್ಮಲ್ಲಿಯೇ depute ಮಾಡಿಕೊಂಡಿದ್ದೇವೆ. ನಾವು ಅವರಿಗೂ ಕೂಡ ಬಾಕಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದೇವೆ. ಆದ್ದರಿಂದ, ನಮ್ಮ ಯಾವುದೇ ಕಾಲೇಜಿನಲ್ಲಿ ಕಡಿತವಾಗಿಲ್ಲ. ಬಳ್ಳಾರಿ ಕಾಲೇಜಿನಲ್ಲಿದ್ದ 60 ಸೀಟುಗಳನ್ನು ಮುಂದುವರೆಸಿದ್ದಾರೆ. ಎಲ್ಲೂ ಸಹ ಕಡಿತವಾಗಿಲ್ಲ. ಆರ್ಥಿಕ ಇಲಾಖೆಯವರು 27 ಜನ ಸಿಬ್ಬಂದಿಯನ್ನು ಭರ್ತಿಮಾಡಿಕೊಳ್ಳುವುದಕ್ಕೆ ಅನುಮೋದನೆ ಕೊಟ್ಟಿದ್ದಾರೆ. ಹಾಗಾಗಿ, ಈ ವರ್ಷಕ್ಕೆ ತೊಂದರೆ ಇಲ್ಲ. ಬರುವ ವರ್ಷಕ್ಕೂ ಸಹ ತೊಂದರೆಯಾಗುವುದಿಲ್ಲ. ಈ ರೀತಿ ನೋಡಿಕೊಳ್ಳುವಂತಹ ವ್ಯವಸ್ಥೆಯನ್ನು ನಮ್ಮ ಇಲಾಖೆಯಿಂದ ಮಾಡಿದ್ದೇವೆ. ಈಗ ಯಾವುದೇ ಕಡಿತ ಆಗುತ್ತಿಲ್ಲ.

ಶ್ರೀ ವೈ.ಎಂ.ಸತೀಶ್:– ಮಾನ್ಯ ಸಭಾಪತಿಯವರೇ, ಬಳ್ಳಾರಿ ನಗರದಲ್ಲಿರುವ ತಾರಾನಾಥ ಮೆಡಿಕಲ್ ಕಾಲೇಜು ಅದು ಬಹಳ old establishment. ಅಲ್ಲಿ Bachelor of Medical Science…

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರೇ, ಮಾನ್ಯ ಸಚಿವರು 60 ಸೀಟುಗಳನ್ನು ಯಥಾವತ್ತಾಗಿ ಮುಂದುವರಿಸಲಾಗಿದೆ ಎಂದು clear ಆಗಿ ಹೇಳಿದ ಮೇಲೆ, ತಾವು ಮತ್ತೆ ಕೇಳುವುದು ಏನಿದೆ?

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಸಭಾಪತಿಯವರೇ, ಇದರಲ್ಲಿ ಉಪ ಪ್ರಶ್ನೆ ಕೇಳುವಂತಹದ್ದು ಏನಿಲ್ಲ.

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರೇ, ಮಾನ್ಯ ಸಚಿವರು 60 ಸೀಟುಗಳನ್ನು ಯಥಾವತ್ತಾಗಿ ಮುಂದುವರೆಸಲಾಗಿದ್ದು, ಕಡಿತ ಮಾಡಿಲ್ಲವೆಂದು ಹೇಳಿದ್ದಾರೆ. ತಾವು ಕಡಿತ ಮಾಡಿದ್ದೀರಿ ಎಂದು ಹೇಳಿದ್ದೀರಿ. ಮಾನ್ಯ ಸಚಿವರು ಕಡಿತ ಮಾಡಿಲ್ಲವೆಂದು ಹೇಳಿದ ಮೇಲೆ, ತಾವು ಬೇರೆ ಏನಾದರೂ ಇದ್ದರೆ ಕೇಳಬೇಕು.

ಶ್ರೀ ವೈ.ಎಂ.ಸತೀಶ್:– ಮಾನ್ಯ ಸಭಾಪತಿಯವರೇ, ಅದು ಕಡಿತವಾಗಿತ್ತು. ಅದು 60 ವಿದ್ಯಾರ್ಥಿಗಳಿಂದ 24 ವಿದ್ಯಾರ್ಥಿಗಳಿಗೆ ಬಂದಿತ್ತು. ಅದು ಆ ರೀತಿ ಬರುವುದಕ್ಕೆ ಏನು ಕಾರಣ? ಅಲ್ಲಿ teaching staff ಕಡಿಮೆ ಇತ್ತು. Action ತೆಗೆದುಕೊಂಡಿದ್ದು ಯಾವಾಗ?

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರೇ, ತಾವು ಪ್ರಶ್ನೆ ಕೇಳಿದ ಮೇಲೆ ತೆಗೆದುಕೊಂಡಿದ್ದಾರೆಯೇ?

ಶ್ರೀ ವೈ.ಎಂ.ಸತೀಶ್:– ಮಾನ್ಯ ಸಭಾಪತಿಯವರೇ, ಇಲ್ಲ. ಅಲ್ಲಿ ಕಡಿಮೆ ಮಾಡಿದ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಅಂದರೆ, ಕಳೆದ ವರ್ಷದಿಂದಲೇ ಸಿಬ್ಬಂದಿಯ ಕೊರತೆ ಇತ್ತು. Teaching staff ಕೊರತೆ ಇತ್ತು.

ವೈಸ್ ಛೇರ್ಮನ್‌ರವರು:– ಮಾನ್ಯ ಸದಸ್ಯರೇ, ತಾವು ಏನಾಗಬೇಕೆಂದು ಕೇಳಿ.

ಶ್ರೀ ವೈ.ಎಂ.ಸತೀಶ್:– ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು full teaching staff ಅನ್ನು ನೇಮಕ ಮಾಡಬೇಕು. ಆಮೇಲೆ ಇನ್ನೊಂದು ದುರಂತ ಇದರಲ್ಲಿ ಏನೆಂದರೆ, ಈ article ನಲ್ಲಿ ಬರೆದಿದ್ದಾರೆ. About Rs. 40 lakhs DMF (District Mineral Foundation) fund ನಿಂದ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಧ್ಯಕ್ಷರೇ, ಕಳೆದ ಬಾರಿ DMF fund ಬಗ್ಗೆ ಮಾತನಾಡಿದ್ದೆ. DMF ನಿಂದ 40 ಲಕ್ಷ ರೂಪಾಯಿಗಳಿಗೆ ಒಂದು ಎಕ್ಸರೆ ಮಿಷನ್‌ನ್ನು ಖರೀದಿ ಮಾಡಿ ಅದನ್ನು ತಾರಾನಾಥ ಮೆಡಿಕಲ್ ಕಾಲೇಜಿನಲ್ಲಿ install ಮಾಡಲಾಗಿದೆ. ಆದರೆ, ಅಲ್ಲಿ technician ಇಲ್ಲವೆಂದು ಅದನ್ನು ಬಳಸುವುದಕ್ಕೆ ಆಗುತ್ತಿಲ್ಲ. This is regarding shortage of staff. ಮಾನ್ಯ ಸಚಿವರು ಇದನ್ನು ಹಾಗೆ, ಹೀಗೆ ಮಾಡುವುದಲ್ಲ. ನಾನು shortage of staff ಮೇಲೆ ಮಾತನಾಡುತ್ತಿದ್ದೇನೆ. Shortage of teaching staff 60 to 24 ಗೆ ಹೋಯಿತು. ಅದು ಹೇಗೆ ಬಂತು? ಅವರು 24 ಗೆ reduce ಮಾಡಿದ ಮೇಲೆ affidavit ನ್ನು ಕೊಟ್ಟಿದ್ದಾರೆ. ಅಂದರೆ, ಕಳೆದ ವರ್ಷವೆ shortage ಇತ್ತು.

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಹೌದು. ಇದು ಹೋದ ವರ್ಷ ಅಲ್ಲ, ಇದು ಬಹಳ ವರ್ಷಗಳಿಂದ shortage ಇತ್ತು. ಅವರು ನಮಗೆ ನೋಟೀಸ್ ಕೊಟ್ಟ ನಂತರ ನಾವು ಅದನ್ನು ಸರಿಪಡಿಸುವುದಕ್ಕೆ ಹೇಳಿದ್ದೇವೆ. ಕೆಲವರು ನಮ್ಮಲ್ಲಿ deputation ಮೇಲೆ ಹೋಗಿರುವಂತಹ ಬೋಧಕರನ್ನು, ಉಪನ್ಯಾಸಕರನ್ನು ನಾವು ವಾಪಸ್ಸ್ ತೆಗೆದುಕೊಂಡಿದ್ದೇವೆ. Re-depute ಮಾಡುತ್ತಿದ್ದೇವೆ. ಹೆಚ್ಚುವರಿಯಾಗಿ ಇಲ್ಲಿಗೆ 27 ಜನರು ಬೇಕಾಗಿರುತ್ತದೆ, ಅದನ್ನು ಭರ್ತಿ ಮಾಡುವುದಕ್ಕೆ ಆರ್ಥಿಕ ಇಲಾಖೆಯಿಂದ ಅನುಮತಿಯನ್ನು ತೆಗೆದುಕೊಂಡಿದ್ದೇವೆ. ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಮೆರಿಟ್ ಮೇಲೆ ಮತ್ತು ಅರ್ಹತೆ ಮೇಲೆ ಬಡವರಿಗೆ ಸಿಗುವಂತಹ ಎಲ್ಲಾ ಸೀಟುಗಳನ್ನು ಉಳಿಸಿಕೊಂಡಿದ್ದೇವೆ. ಇದು ಬರುವ ವರ್ಷಕ್ಕೆ ಸಮಸ್ಯೆ ಆಗುವುದಿಲ್ಲವೆಂದು ಹೇಳಿದ್ದೇನೆ. ಅದು ಸಮಸ್ಯೆ ಇದ್ದಿದಕ್ಕೆ ಆಗಿದೆ. ನಾವು ಅದನ್ನು ಸರಿಪಡಿಸುವಂತಹ ಪ್ರಕಿಯೆಯನ್ನು ಮಾಡುತ್ತಿದ್ದೇವೆ. ಇನ್ನು ಮುಂದಕ್ಕೆ ಸಮಸ್ಯೆ ಇಲ್ಲದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ.

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರೇ, ಮಾನ್ಯ ಸಚಿವರ ಉತ್ತರ ಸ್ಪಷ್ಟವಾಗಿದೆ.

ಶ್ರೀ ವೈ.ಎಂ.ಸತೀಶ್:- ಮಾನ್ಯ ಸಭಾಪತಿಯವರೇ, ಸ್ಪಷ್ಟವಾಗಿದೆ. ಆದರೇ, ಒಂದೇ ಒಂದು ಮನವಿ ಇದೆ. ಎಕ್ಸರೆ ಮಿಷನ್‌ನನ್ನು ಬಳಸುವ technician ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅದರ ಬಗ್ಗೆ ಗಮನಕ್ಕೆ ತಂದಿದ್ದಾರೆ. ನಾನು ಅದರ ಬಗ್ಗೆ ಖಂಡಿತವಾಗಿ ವಿಚಾರಣೆ ಮಾಡುತ್ತೇನೆ.

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರಾದ ಕೆ.ಪ್ರತಾಪ್‌ಸಿಂಹ ನಾಯಕ್‌ರವರೇ, ತಾವು ನಿಯಮ 330ರ ಮೇರೆಗೆ ಕೇಳಿರುವಂತಹ ವಿಷಯಕ್ಕೆ ಉತ್ತರ ಬಂದಿದೆ. ಮಾನ್ಯ ತೋಟಗಾರಿಕೆ ಸಚಿವರು ಸದನದಲ್ಲಿ ಇಲ್ಲ. ಮಾನ್ಯ ಸಭಾನಾಯಕರು ಇದ್ದಾರೆ. ಮಾನ್ಯ ಸಭಾನಾಯಕರೇ, ತಾವು ಉತ್ತರವನ್ನು ಕೊಡುತ್ತೀರಾ? ಇದಕ್ಕೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರ ಬಂದಿರುವುದರಿಂದ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟು ಇದನ್ನು ಮುಗಿಸಬಹುದು ಅಲ್ಲವೇ?

ಶ್ರೀ ಎಸ್.ಎನ್.ಬೋಸರಾಜು (ಸಭಾನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಂದಿದ್ದರು. Speaker ರವರು ಸಭೆ ಕರೆದಿದ್ದಾರೆ. ಹಾಗಾಗಿ, ಅಲ್ಲಿಗೆ ಹೋಗಿದ್ದಾರೆ. ಹಾಗಾಗಿ, ಇದಕ್ಕೆ ನಾಳೆ ಉತ್ತರ ಕೊಡಿಸುತ್ತೇನೆ.

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರಾದ ಕೆ.ಪ್ರತಾಪ್‌ಸಿಂಹ ನಾಯಕ್‌ರವರೇ, ತಾವು ಬಹಳ ಉತ್ತಮವಾದ ವಿಷಯವನ್ನು ತೆಗೆದುಕೊಂಡು ಬಂದಿದ್ದೀರಿ. ತಮಗೆ ಅವಕಾಶ ಸಿಕ್ಕಿದೆ. ಸಚಿವರು ಎಲ್ಲರೂ ಇದ್ದಾರೆ. ತಾವು ಇದನ್ನು ಮುಂದಕ್ಕೆ ಹಾಕಿಕೊಡಿ ಎಂದರೆ, ನಾವು ಹಾಕಿಕೊಡುತ್ತೇವೆ. ತಾವು ಅವಕಾಶ ವಂಚಿತರಾಗಬೇಡಿ

ಶ್ರೀ ಕೆ. ಪ್ರತಾಪ್‌ಸಿಂಹ ನಾಯಕ್:- ಮಾನ್ಯ ಸಭಾಪತಿಯವರೇ, ಇಲ್ಲ. ನಾನು ಮುಂದಕ್ಕೆ ಹಾಕಿ ಎಂದು ಹೇಳುವುದಿಲ್ಲ. ಈಗ ನನಗೆ ಅದು ಅಭ್ಯಾಸವಾಗಿದೆ. ಅವಕಾಶ ಸಿಕ್ಕಿದಾಗ ಮಾತನಾಡಬೇಕು ಎಂದು ಬಂದಿದ್ದೇನೆ.

ವೈಸ್ ಛೇರ್ಮನ್‌ರವರು:- ಮಾನ್ಯ ಸದಸ್ಯರಾದ ಕೆ.ಪ್ರತಾಪ್‌ಸಿಂಹ ನಾಯಕ್‌ರವರೇ, ತಮ್ಮ ಚಿತ್ತ. ಮುಂದುವರೆಸುತ್ತೀರಾ?

ಶ್ರೀ ಕೆ. ಪ್ರತಾಪ್‌ಸಿಂಹ ನಾಯಕ್:- ಮಾನ್ಯ ಸಭಾಪತಿಯವರೇ, ತಮಗೂ ಇದರಲ್ಲಿ ವಿಶೇಷವಾಗಿ ಆಸಕ್ತಿ ಇರುವುದು ಸಂತೋಷ. ನಾನು ಅಡಿಕೆ ಬೆಳೆಗಾರ ಅಲ್ಲ.

(ಮುಂದು..)

(654) 12-08-2025/4.40/ಎಂವಿ-ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳು.

ವೈಸ್ ಛೇರ್ಮನ್‌ರವರು:- ಮಾನ್ಯ ಸಭಾನಾಯಕರೆ, ತೋಟಗಾರಿಕೆ ಸಚಿವರು ಇದ್ದಾರೆಯೇ?

ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ:- ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಸಚಿವರು ಒಂದೇ ಮೀಟಿಂಗ್‌ನಲ್ಲಿ ಇದ್ದೆವು. ಅವರು ಮೀಟಿಂಗ್ ಮುಗಿಸಿಕೊಂಡು ಬಂದಿದ್ದಾರೆ. ಆದುದರಿಂದ, ನಾನು ಮಾತನಾಡುತ್ತೇನೆ.

ವೈಸ್ ಛೇರ್ಮನ್‌ರವರು:- ತಾವು ಮಾನ್ಯ ಸಚಿವರು ಬರುವವರೆಗೆ wait ಮಾಡುತ್ತೇನೆಂದರೆ, ನಾನು ನಿಯಮ 68ರ ಮೇರೆಗೆ ಇರುವಂತಹ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಸದನಕ್ಕೆ ತೋಟಗಾರಿಕೆ ಸಚಿವರಾದ ಶ್ರೀ ಮಲ್ಲಿಕಾರ್ಜುನ್ ರವರನ್ನು ಕರೆಯಿರಿ.

ಶ್ರೀ ಸಿ.ಟಿ.ರವಿ (ವಿಧಾನ ಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಮಾನ್ಯ ತೋಟಗಾರಿಕೆ ಸಚಿವರು ಬರಲಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈಸ್ ಛೇರ್ಮನ್‌ರವರು:– ನಾನು ಮಾನ್ಯ ಸದಸ್ಯರಿಗೆ ಅದನ್ನೇ ಹೇಳಿದ್ದು.

ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ನಿಯಮ 72ಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ನಿನ್ನೆಯ ದಿವಸ ಮತ್ತು ಇವತ್ತು ಸಹ ಬಂದಿಲ್ಲ.

ವೈಸ್ ಛೇರ್ಮನ್‌ರವರು:– ಅದು ಯಾವುದು?

ಶ್ರೀ ಡಿ.ಎಸ್.ಅರುಣ್:– ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿನ ಮೊದಲನೆಯ ವಿಷಯವಾಗಿದ್ದು, ಅದು ನನಗೆ ಮತ್ತು ಶ್ರೀ ಮಂಜುನಾಥ್ ಭಂಡಾರಿಯವರಿಗೆ ಸಂಬಂಧಿಸಿದ್ದಾಗಿದೆ.

ವೈಸ್ ಛೇರ್ಮನ್‌ರವರು:– ಮಾನ್ಯ ಮಂಜುನಾಥ್ ಭಂಡಾರಿಯವರು ಆಗ ಸದನದಲ್ಲಿ ಇರಲಿಲ್ಲ. ಅವರು ಈಗ ಸದನಕ್ಕೆ ಬಂದಿದ್ದಾರೆ.

ಶ್ರೀ ಡಿ.ಎಸ್.ಅರುಣ್:– ಮಾನ್ಯ ಸಭಾಪತಿಯವರೇ, ಇದು ಇಬ್ಬರಿಗೂ ಸಹ ಸಂಬಂಧಪಟ್ಟಿದೆ.

ವೈಸ್ ಛೇರ್ಮನ್‌ರವರು:– ಮಾನ್ಯ ಸಲೀಂ ಅಹಮದ್‌ರವರೆ, ಮಾನ್ಯ ಮಂತ್ರಿಗಳು ಸದನಕ್ಕೆ ಬರುವಂತೆ ಹೇಳಬೇಕು. ಅವರು present ಇದ್ದಾರೆ.

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಂದ ಮೇಲೆ ಇದನ್ನು ತೆಗೆದುಕೊಳ್ಳೋಣ.

ವೈಸ್ ಛೇರ್ಮನ್‌ರವರು:– ಆಯಿತು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

07. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ

ವಿಷಯ:- ಬೆಂಗಳೂರಿನ ಕಾಡುಗೋಡಿ ಪ್ಲಾಂಟೇಷನ್ ಪ್ರದೇಶದಲ್ಲಿರುವ ಕೃಷಿ ಭೂಮಿಯನ್ನು ಅರಣ್ಯ ಭೂಮಿಯೆಂದು ಗುರುತಿಸಿರುವ ಕುರಿತು.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಳ್ಳಿ ಹೋಬಳಿ, ಕಾಡುಗೋಡಿ, ದಿಣ್ಣೂರು ಗ್ರಾಮದ ಸರ್ವೆ ನಂ.1ರಲ್ಲಿ ವಾಸವಾಗಿರುವ ದಲಿತ ಮತ್ತು ಹಿಂದುಳಿದ ವರ್ಗಗಳ ಜನರನ್ನು ಏಕಾಏಕಿ ಒಕ್ಕಲೆಬ್ಬಿಸುತ್ತಿರುವ ವಿಚಾರ ಕುರಿತು ನಾನು ಚರ್ಚೆಗೆ ಅವಕಾಶವನ್ನು ಕೇಳಿದ್ದೆ. ಇಲ್ಲಿನ ವಿಷಯ ಏನೆಂದರೆ, ಇದು ಬೆಂಗಳೂರು ಪೂರ್ವ ತಾಲ್ಲೂಕು, ಬಿದರಳ್ಳಿ ಹೋಬಳಿ, ಕಾಡುಗೋಡಿ, ಸರ್ವೆ ನಂ.1, ಇದನ್ನು ದಿಣ್ಣೂರು ಎಂದು ಕರೆಯುತ್ತಾರೆ. ಈ ದಿಣ್ಣೂರು ಗ್ರಾಮ ಇರಲೇ ಇಲ್ಲ. 1950ಕ್ಕಿಂತ ಮೊದಲು ಹಿಂದೆ ಅರಣ್ಯ ಭೂಮಿಯಾಗಿತ್ತು. ಅದು ಒಂದು ಕಡೆ ಇದೆ, ಮತ್ತೊಂದು ಕಡೆ ಇಲ್ಲ.

ವೈಸ್ ಛೇರ್ಮನ್‌ರವರು:- ಮಾನ್ಯ ಸಲೀಂ ಅಹಮದ್‌ರವರೆ, ಮಾನಿಟರ್ ಸರಿಯಿಲ್ಲ. ಇಲ್ಲಿ ಮಾನಿಟರ್ disturb ಮಾಡಿದರೆ ನಾವು ಏನು ಮಾಡುವುದು? ಮಾನಿಟರ್ ಎಲ್ಲರನ್ನು ಸಹ ನಿಯಂತ್ರಣದಲ್ಲಿ ಇಡಬೇಕು.

ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):- ಮಾನ್ಯ ಸಭಾಪತಿಯವರೇ, ನಾನು ಅವರಿಗೆ thanks ಹೇಳುತ್ತಿದ್ದೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, 1950ರಲ್ಲಿ ಒಟ್ಟು 711 ಎಕರೆಯ ಭೂಮಿ ಸರ್ಕಾರದ ಸುಪರ್ದಿಗೆ ಬರುತ್ತದೆ. ಆಗ 'ಕಾಡುಗೋಡಿ ಸಾಮೂಹಿಕ ವ್ಯವಸಾಯ ಸೇವಾ ಸಹಕಾರ ಸಂಘ' ಎಂದು ಸ್ಥಾಪನೆ ಮಾಡಿ ಸರ್ಕಾರದ ಮುಖಾಂತರವೇ ಈ ಭೂಮಿಯನ್ನು ಈ ಸಹಕಾರ ಸಂಘಕ್ಕೆ handover ಮಾಡಿ, ಅದಕ್ಕೆ ಸರ್ಕಾರವೇ ನಿಂತು ಎರಡು ಎಕರೆ, ಮೂರು ಎಕರೆ ಮತ್ತು ನಾಲ್ಕು ಎಕರೆ ಎಂದು ಹೀಗೆ ರೈತರಿಗೆ ಆ ಜಮೀನುಗಳನ್ನು ಹಂಚುತ್ತಾರೆ. ಅವರು ಈ ಜಮೀನುಗಳಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿರುತ್ತಾರೆ. ಅಲ್ಲಿ ದಲಿತ ಸಮುದಾಯಗಳೇ ಹೆಚ್ಚಿಗೆ ಇರತಕ್ಕಂಥದ್ದು. ಆ ದಿಣ್ಣೂರು ಎಂಬ ಗ್ರಾಮ ಇರುವುದಿಲ್ಲ. ಅದಕ್ಕೂ ಕೂಡ ಸುಮಾರು 20 ಎಕರೆ ಜಾಗ ಕೊಟ್ಟು, ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವತ್ತು ಅದು ದಿಣ್ಣೂರು ಗ್ರಾಮವಾಗಿ ನಿಂತಿದೆ. ಅಲ್ಲಿ ಇವತ್ತು ಹೆಚ್ಚು ಕಡಿಮೆ ಒಂದು ಸಾವಿರಕ್ಕೂ ಹೆಚ್ಚು ಮನೆಗಳು ಆಗಿವೆ. ಅಲ್ಲಿ ರೈತರ ಹೆಸರಿನಲ್ಲಿ ಪಟ್ಟಾ ಇದೆ, ಖಾತಾ ಇದೆ ಮತ್ತು ಪಹಣಿ ಇದೆ. ಈ ರೀತಿ ಎಲ್ಲಾ ರೀತಿಯ revenue records ಅನ್ನು ಹಲವರಿಗೆ ಕೊಟ್ಟಿದ್ದಾರೆ, ಇನ್ನು ಹಲವರಿಗೆ ಕೊಡಬೇಕಾಗಿದೆ. ಕಾಲಾನಂತರದಲ್ಲಿ ಆ ಜಮೀನುಗಳ ಮೌಲ್ಯ ಹೆಚ್ಚಾಯಿತು. ಇದು ITPL ನ ಮುಂಭಾಗದಲ್ಲಿ ಇರತಕ್ಕಂಥದ್ದು. ಇದು ತಮಗೆ ಚೆನ್ನಾಗಿ ಗೊತ್ತಿದೆ. ಇದನ್ನು ಅನೇಕರು ಬೇರೆ ಬೇರೆಯದಕ್ಕೆ ಪರಭಾರೆಯನ್ನು ಸಹ ಮಾಡಿದ್ದಾರೆ. KIADB ಯವರು ಈ ಜಮೀನುಗಳಿಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಟಿಫಿಕೇಶನ್ ಮಾಡಿ ಅವುಗಳನ್ನು acquire ಮಾಡಿಕೊಳ್ಳುತ್ತಾರೆ. ಇದು ಒಂದು ವೇಳೆ ಅರಣ್ಯ ಭೂಮಿಯಾಗಿದ್ದರೆ, ಅದಕ್ಕೆ ನೋಟಿಫಿಕೇಶನ್ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಆಗ ಅದು ಅರಣ್ಯ ಎಂದು ಇರುವುದೇ ಇಲ್ಲ. ಏಕೆಂದರೆ, ಅದು ರೈತರ ಕಬ್ಜದಲ್ಲಿ ಇರುತ್ತದೆ. ಅದಕ್ಕೆ ನೋಟಿಫಿಕೇಶನ್ ಆಗಿ, 41 ಮತ್ತು 61 ಆಗಿ 1985ರಲ್ಲಿ ರೈತರಿಗೇ 30,000/- ರೂಪಾಯಿಗಳ ಪರಿಹಾರವನ್ನು ಕೊಡುತ್ತಾರೆ. ಅಲ್ಲಿ KIADB ಯವರು ಸೈಟ್‌ಗಳನ್ನು ಮಾಡಿ, ಅದು ಈಗಾಗಲೇ ಹಂಚಿಕೆಯಾಗಿದೆ. ಅಲ್ಲಿಗೆ ಎಲ್ಲಾ ಕಾರ್ಖಾನೆಗಳು ಬಂದುಬಿಟ್ಟಿವೆ. ಅದರಲ್ಲಿ ಇನ್ನುಳಿದಿರುವ ಜಾಗದಲ್ಲಿ ಇಲಾಖೆಯವರೆ ಹೇಳುವ ಪ್ರಕಾರ ನಾನು ತೋರಿಸುತ್ತಿರುವುದು ಸರ್ಕಾರದ record. ಇದರಲ್ಲಿ ದಕ್ಷಿಣ ರೈಲ್ವೆಗೆ 222.22 ಎಕರೆ, Concord India Private Limited ಗೆ 78 ಎಕರೆ, Sam Engineering ಗೆ 28 ಎಕರೆ, BPL ಗೆ 24 ಎಕರೆ ಇತರೆ 23 ಘಟಕಗಳು ಹಾಗೂ ರಸ್ತೆ ಮತ್ತು ಇತರೇ ಸೌಲಭ್ಯಗಳಿಗೆ 68 ಎಕರೆ. ಈ ರೀತಿ 438 ಎಕರೆಗಳನ್ನು ಇದರಿಂದ ಉಪಯೋಗ ಮಾಡಲಾಗಿದೆ ಎಂದು ಸರ್ಕಾರದ ಆದೇಶದಲ್ಲಿಯೇ ಇದೆ. ಈಗ ಇರತಕ್ಕಂಥದ್ದು ಏನೆಂದರೆ, ಅರಣ್ಯ ಇಲಾಖೆಯವರು ಅದು ಅರಣ್ಯ ಭೂಮಿ ಎಂದು ಹೇಳುತ್ತಿದ್ದಾರೆ. ಆದರೆ, ಇಷ್ಟು ಭೂಮಿಯನ್ನು ಕೊಟ್ಟುಬಿಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ, ಈಗ ಅಲ್ಲಿ ಪರಿಶೀಲನೆ ಮಾಡಲಾಗಿ, ಅರಣ್ಯ ಇಲಾಖೆಗೆ 60 ಎಕರೆ ಉಳಿದಿದೆ. ಈಗ ಅಲ್ಲಿ ಅರಣ್ಯ ಇದೆ. ಈ ಭೂಮಿಯಲ್ಲಿಯೇ KIADB ಯವರಿಗೆ 153 ಎಕರೆ ಹೋಗಿದೆ. ರೈಲ್ವೆ ಇಲಾಖೆಗೆ 228 ಎಕರೆ ಎಂದು ಇದೆ. ದೇವಸ್ಥಾನಕ್ಕೆ 2 ಎಕರೆ 32 ಗುಂಟೆ ಎಂದು ಇದೆ. ಇಂದಿರಾ ಕ್ಯಾಂಟೀನ್‌ಗೆ 15 ಗುಂಟೆ ಎಂದು ಇದೆ. ದಿಣ್ಣೂರು ಕಾಲೋನಿಗೆ 19.17 ಅಂದರೆ ಸುಮಾರು 20 ಎಕರೆಯನ್ನು ಅದಕ್ಕೆ ಕೊಡಲಾಗಿದೆ. ರಸ್ತೆಗಳಿಗೆ 13 ಎಕರೆಯನ್ನು ತೆಗೆದು ಇಡಲಾಗಿದೆ. ಸ್ಮಶಾನಕ್ಕೆ 2 ಎಕರೆ 19 ಗುಂಟೆ ನೀಡಲಾಗಿದೆ. ಬಡಾವಣೆ ಮಾಡುವುದಕ್ಕೆ ಅಂದರೆ, ಆ ಗ್ರಾಮಕ್ಕೆ 32 ಎಕರೆ 8 ಗುಂಟೆಯನ್ನು ನೀಡಲಾಗಿದೆ. ಪೋಲೀಸ್ ಠಾಣೆಗೆ 4½ ಎಕರೆ ನೀಡಲಾಗಿದೆ. ಆಮೇಲೆ ಕೃಷಿ ಮತ್ತು ಖಾಲಿ ಇರತಕ್ಕಂಥದ್ದು ಕೇವಲ 225 ಎಕರೆಗಳು ಮಾತ್ರ. ಇದರಲ್ಲಿ ಮೆಟ್ರೋಗೆ 45 ಎಕರೆ ಕೊಡಲಾಗಿದೆ. ಆದರೆ, ಹೇಳುವುದು ಇದು ಅರಣ್ಯ ಭೂಮಿ ಎಂದು. ಆದರೆ, ಇದರ ಪ್ರಕಾರ ಅರಣ್ಯ ಇಲಾಖೆಯವರೇ ಹೇಳುವಂತೆ ನಾನು ಕೋರ್ಟ್ ಆದೇಶವನ್ನು ಓದುತ್ತೇನೆ. ಇದು 2012ರಲ್ಲಿ ಆಗಿರುವುದು. It reads as follows: -

> "Writ Appeal No.4205/2012, filed by Concord being aggrieved by the alternative plea being kept open for consideration in an appropriate case, in the facts and circumstances of the case and relief given by the learned Single Judge, we hold that it is unnecessary to go into the said question. It is also relevant to observe here that it is a well settled proposition of law that one cannot take advantage of one's own wrong. Therefore, the State

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Government is precluded from claiming that the land in question is forest land, having issued notifications under the provision of KIAD Act and handing over possession to KIADB. The action initiated by the officials of the Forest Department and the State, having been held to be bad in law..."

ಹೀಗೆಂದು ಕೋರ್ಟ್‌ನವರೇ ಹೇಳುತ್ತಾರೆ. ಇದನ್ನು ರಾಜ್ಯದವರು ಮಾಡಿದ್ದರೂ ಕೂಡ ಅಥವಾ ಅರಣ್ಯ ಇಲಾಖೆಯವರು ಕೂಡ ಮಾಡಿದ್ದರೆ...

ವೈಸ್ ಛೇರ್ಮನ್‌ರವರು:- ಈಗ ತಮ್ಮ ಪ್ರಕಾರ ಒಕ್ಕಲೆಬ್ಬಿಸಿರುವ ಜಾಗ ಕೂಡ ಅದೇ ಸರ್ವೆ ನಂಬರ್ ಆಗಿದೆಯೇ?

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಹೌದು, Survey No.1, 711 acres of total extent. ಇದನ್ನು ಕೋರ್ಟ್ ಹೇಳಿರುವಂಥದ್ದು. ಈಗ ಸದ್ಯಕ್ಕೆ ಕೋರ್ಟ್‌ನಲ್ಲಿ ಯಾರ್ಯಾರು ತೊಂದರೆಗೆ ಒಳಗಾಗಿದ್ದಾರೆ ಅವರೆಲ್ಲರೂ ಸಹ ಕೋರ್ಟ್‌ಗೆ ಹೋಗಿದ್ದಾರೆ. ನಾನು ಒಂದು ಪ್ರಕರಣದ ಬಗ್ಗೆ ಮಾತ್ರ ಹೇಳುತ್ತೇನೆ. ಈ petition ಆಗಿರುವುದು ದಿನಾಂಕ 24.06.2025ರಂದು ಅಂದರೆ, ಕಳೆದ ತಿಂಗಳು ಆಗಿರುವುದು. ಇದು ಒಟ್ಟಾರೆ ಏನು ಇರುವುದು ಎಂದರೆ, "No built structure will be demolished." ಇದಕ್ಕೆ stay ಯನ್ನು ಸಹ ಕೊಟ್ಟಿದ್ದಾರೆ. ಮತ್ತೆ ಈ ರೀತಿ ಮಾಡಬಾರದು ಎಂದು ಸಹ ಹೇಳಿದ್ದಾರೆ. ಇದು ಒಂದು ಕೇಸ್. ಮತ್ತೊಂದರಲ್ಲೂ ಸಹ ಅದನ್ನೇ ಹೇಳಿದ್ದಾರೆ.

(ಮುಂದು)

(655) 12.08.2025 04.50 LL-AK (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ಮುಂದು):-

ಈ ರೀತಿ ಎಲ್ಲರದ್ದೂ ಇದೆ.

ವೈಸ್ ಛೇರ್ಮನ್:- ಹಾಗಾದರೆ, ಈಗ ಏನಾಗಿದೆ?

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಅದು ಏತಕ್ಕೆ ಆಗಿದೆಯೆಂದರೆ, ಅಲ್ಲಿ ಇವರೆಲ್ಲರೂ ಕೂಡ ಆ ಹೊಲಗಳಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಇದು ಅತ್ಯಂತ ದುಬಾರಿ ಬೆಲೆ ಬಾಳುವಂತಹ ಜಮೀನು ಆಗಿರುವುದರಿಂದ, ಈಗ ಹಲವರ ಕಣ್ಣು ಆ ಜಮೀನಿನ ಬೀಳುವಂಥದ್ದು ಸಹಜವಾಗಿರುತ್ತದೆ. ಇದು ಅರಣ್ಯ ಇಲಾಖೆಗೆ ಸೇರಿದಂತಹ ಜಮೀನಾಗಿದ್ದರೆ, ಈ ಜಮೀನಿನಲ್ಲಿ ಬಹಳಷ್ಟು ಇಲಾಖೆಗಳಿಗೆ ಜಾಗ ನೀಡಲಾಗಿರುತ್ತದೆ. ಅದನ್ನು ಈಗ ವಾಪಸ್ಸು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಎಲ್ಲದಕ್ಕಿಂತಲೂ ಮಿಗಿಲಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ಅಲ್ಲಿ ಅರಣ್ಯ ಇಲಾಖೆ ಪ್ರವೇಶ ಮಾಡಿರುವ ಕಾರಣ ಏನು ಎನ್ನುವುದನ್ನು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪೂನಾದಲ್ಲಿ ಒಂದು ಕೇಸ್ ಆಗುತ್ತದೆ. ಅಲ್ಲಿ ಸುಮಾರು 12 ಹೆಕ್ಟೇರ್ ಅರಣ್ಯ ಇಲಾಖೆಗೆ ಸೇರಿದಂತಹ ಜಮೀನಿನಲ್ಲಿ ಸರ್ಕಾರಕ್ಕೆ ಒಂದಷ್ಟು ಜಮೀನನ್ನು ಕೊಟ್ಟು, ಸರ್ಕಾರದ ಕಡೆಯಿಂದ ಬೇರೆ ಖಾಸಗಿ ವ್ಯಕ್ತಿಗಳಿಗೆ ಕೊಟ್ಟಿರುತ್ತಾರೆ. ಈ ವಿಷಯದ ಬಗ್ಗೆ ಅಲ್ಲಿನ ಸಾರ್ವಜನಿಕರಾದ ಶ್ರೀ ಟಿ.ಎನ್. ಗೋದಾವರ್ಮನ್ ತಿರುಮಲ್‌ಪಾದ್ ಎಂಬುವವರು ಒಂದು ಕೇಸ್ ದಾಖಲಿಸುತ್ತಾರೆ. ಏಕೆಂದರೆ, ಈ ವಿಚಾರದಲ್ಲಿ ಸರ್ಕಾರ ಮಾಡಿರುವುದು ತಪ್ಪು. ಇದು ಮೊದಲು ಅರಣ್ಯ ಭೂಮಿಯಾಗಿರುತ್ತದೆ. ಅದರಂತೆ, 'once it is a forest, it is always a forest' ಎಂಬುದು ಅವರ ವಾದವಾಗಿರುತ್ತದೆ. ಅದಾದ ನಂತರ, ಆ ಪ್ರಕರಣ ಮಾನ್ಯ ಸುಪ್ರೀಂ ಕೋರ್ಟ್‌ಗೆ ಹೋಗುತ್ತದೆ. ಮಾನ್ಯ ಸುಪ್ರೀಂ ಕೋರ್ಟ್ ಈ ಪ್ರಕರಣದ ಕೊನೆಯಲ್ಲಿ ಒಂದು ಆದೇಶ ಕೊಡುತ್ತದೆ. ಅದೇನೆಂದರೆ, ಸದರಿ ಅರಣ್ಯ ಭೂಮಿಯನ್ನು ಯಾವ ಉದ್ದೇಶಕ್ಕೆ ನೀಡಲಾಗಿದೆ, ಆ ಉದ್ದೇಶ ಈಡೇರಿರುವುದಿಲ್ಲ. ಆದರೆ, ಆ ಜಮೀನನ್ನು ಅವರು ಭೂ ಪರಿವರ್ತನೆ ಮಾಡಿ, ಬೇರೆ ಕಾರಣಕ್ಕೆ ಮಾರಾಟ ಮಾಡಿರುತ್ತಾರೆ. ಆದುದರಿಂದ, ಇದು ಊರ್ಜಿತ ಅಲ್ಲ ಎನ್ನುವ ಒಂದು ಆದೇಶ ನೀಡುತ್ತದೆ.

VICE CHAIRMAN: Purpose of land should be served.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಮಾನ್ಯ ಸುಪ್ರೀಂ ಕೋರ್ಟ್ ಜನರಲ್ ಆಗಿ ಒಂದು ಮಾತನ್ನು ಹೇಳುತ್ತದೆ. ಅದೇನೆಂದರೆ,

> "The State Governments and the Union Territories are also directed to take steps to take back the possession of the land from the persons/institutions in possession of such lands and handover the same to the Forest Department."

ಇದು ಜನರಲ್ ಆಗಿರುತ್ತದೆ. ಇದು ಒಂದು ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ. ಬದಲಾಗಿ, ಇದು ಇಡೀ ದೇಶಕ್ಕೆ ಸಂಬಂಧಪಟ್ಟಂತೆ, ಆದೇಶವಾಗಿರುತ್ತದೆ. ಅದರಂತೆ, ಈ ಪ್ರಕರಣವನ್ನು ಹಿಡಿದುಕೊಂಡು ಅರಣ್ಯ ಇಲಾಖೆಯವರು ಅರಣ್ಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ಅರಣ್ಯ ಭೂಮಿಯನ್ನು ವಾಪಸ್ಸು ನೀಡಬೇಕೆಂದು ಹೇಳುತ್ತಿರುವುದು ಸರಿಯಿದೆ. ಅದರ ಬಗ್ಗೆ ತಕರಾರು ಮಾಡುವುದಿಲ್ಲ. ಆದರೆ, ನಮ್ಮ ರಾಜ್ಯದ ಯಲಹಂಕ ಬಳಿ ಬಿ.ಎಸ್.ಎಫ್. ಸಂಸ್ಥೆ ಇದೆ. ಅದಕ್ಕೂ ಸಹ ನೋಟಿಸ್ ಕೊಟ್ಟಿದ್ದಾರೆ. ಅಂದರೆ, ಬಿ.ಎಸ್.ಎಫ್.ನವರು ಇರುವಂತಹ ಜಾಗವೆಲ್ಲವೂ ಸಹ ಅರಣ್ಯ ಇಲಾಖೆಗೆ ಸೇರಿದಂತಹ ಜಾಗವಾಗಿರುತ್ತದೆ. ಆದುದರಿಂದ, ಆ ಜಾಗವನ್ನು ಅರಣ್ಯ ಇಲಾಖೆಗೆ ವಾಪಸ್ಸು ನೀಡಬೇಕು. ಹೌದು, ಸರಿ ಇದೆ. ಅದರಂತೆ, ಆ ಜಾಗವನ್ನು ಅರಣ್ಯ ಇಲಾಖೆಯವರು ತೆಗೆದುಕೊಳ್ಳಲಿ. ಅದೇ ರೀತಿ, ಹೆಚ್.ಎಂ.ಟಿ. ಗೆ ಸೇರಿದಂತಹ ಅನೇಕ ಜಾಗಗಳನ್ನು ಸರ್ಕಾರ ವಾಪಸ್ಸು ತೆಗೆದುಕೊಂಡಿರುತ್ತದೆ. ಅದರ ಪಕ್ಕದಲ್ಲಿ ಸುಮಾರು ೫೦೦ ಎಕರೆ ಜಮೀನು ಡಿಫೆನ್ಸ್ ಲ್ಯಾಂಡ್ ಇದೆ. ಅದೆಲ್ಲವೂ ಸಹ ಅರಣ್ಯ ಇಲಾಖೆಗೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇರಿದಂತಹ ಜಾಗವಾಗಿರುತ್ತದೆ. ಮೊದಲು ಆ ಜಾಗವನ್ನು ಬಿ.ಎಸ್.ಎಫ್.ನವರು ಸರ್ಕಾರದಿಂದ ಪಡೆದು acquire ಮಾಡಿಕೊಂಡಿರುತ್ತಾರೆ.

ವೈಸ್ ಛೇರ್ಮನ್:- ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಎಲ್ಲಾ ವಿಚಾರಗಳನ್ನು ತಾವು ಪ್ರಾರಂಭದಲ್ಲಿಯೇ ಹೇಳಿರುತ್ತೀರಿ. ಮಾನ್ಯ ಅರಣ್ಯ ಸಚಿವರು ಸಹ ಅದನ್ನೆಲ್ಲಾ ಕೇಳಿಸಿಕೊಂಡಿರುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಇದರಲ್ಲಿ ಬಹಳ ಗೊಂದಲವಿದೆ. ಅದರಿಂದಾಗಿ, ಇದು ಅವರಿಗೂ ಸ್ವಲ್ಪ ಅರ್ಥವಾಗಬೇಕು ಮತ್ತು ಸದನಕ್ಕೂ ಅರ್ಥವಾಗಬೇಕು ಹಾಗೂ ಇದು ಇತ್ಯರ್ಥವಾಗಬೇಕು. ಇದು ನನ್ನ ಪ್ರಶ್ನೆ. ಅದರಂತೆ, ಡಿಫೆನ್ಸ್‌ನವರು acquire ಮಾಡಿಕೊಂಡಿರುವಂತಹ ಅರಣ್ಯ ಭೂಮಿಯನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅಲ್ಲದೇ, ಮಾನ್ಯ ಸುಪ್ರೀಂ ಕೋರ್ಟ್‌ನ ಆದೇಶದಲ್ಲಿ, ಇಲ್ಲಿಯವರೆಗೆ ಮಾತ್ರ ಸರ್ಕಾರ ತೀರ್ಮಾನ ತೆಗೆದುಕೊಂಡಿರುತ್ತದೆ. ಆದರೆ, ಅದರ ಮುಂದೆ ಇನ್ನೂ ಆದೇಶ ಇದೆ. ಅದೇನೆಂದರೆ,

> "In case, it is found that taking back the possession of the land would not be in the larger public interest, the State Governments/Union Territories should recover the cost of the said land from the persons/institutions to whom they were allotted and use the said amount for the purpose of development of forests; and
>
> We further direct the Chief Secretaries of all the States and the Administrators of all the Union Territories to constitute Special Teams to ensure that all such transfers take place within a period of one year from today."

ಇದು ಮುಂದಿನ ಆದೇಶವಾಗಿರುತ್ತದೆ. ಆದರೆ, ನಾನು ಕೇಳುತ್ತಿರುವುದೇನೆಂದರೆ,...

VICE CHAIRMAN: You are explaining the Pune incident. ಇದರಲ್ಲಿ ಯಾವ ಜಮೀನನ್ನು forthwith occupy ಮಾಡಿದ್ದಾರೆಂದು ಹೇಳುತ್ತಿದ್ದಾರಲ್ಲವೇ, ಅದರ ಬಗ್ಗೆ ಯಾರಿಗಾದರೂ ನೋಟಿಸ್ ಕೊಟ್ಟಿದ್ದಾರೆಯೇ? ಅದರ ಬಗ್ಗೆ ಬೆಳಕು ಚೆಲ್ಲಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಹೌದು. ಮಾನ್ಯ ಸುಪ್ರೀಂ ಕೋರ್ಟ್‌ನ ಆದೇಶದಲ್ಲಿ ಮೊದಲನೆ ಪ್ಯಾರಾ ಏನಿದೆ, ಅದು ಸರಿಯಿದೆ. ಅದರ ಪ್ರಕಾರ ಸರ್ಕಾರ ಎಲ್ಲಾ ಅರಣ್ಯ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುವುದು ಸರಿಯಿದೆ. **(ಗೊಂದಲ)** ಆದರೆ, ಸದರಿ ಆದೇಶದ ಮುಂದಿನ ಪ್ಯಾರಾದಲ್ಲಿ ಏನಿದೆಯೆಂದರೆ, ಅರಣ್ಯ ಇಲಾಖೆಗೆ ಸೇರಿದಂತಹ ಜಾಗದಲ್ಲಿ ಏನಾದರೂ ಅಭಿವೃದ್ಧಿಯಾಗಿದ್ದರೆ, if you cannot take back the land, ಅದರ ಬದಲಾಗಿ, ಅವರಿಂದ ಸ್ವಲ್ಪ ಹಣವನ್ನು ಕಲೆಕ್ಟ್ ಮಾಡಿ, ಬೇರೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆಯಲ್ಲಿ ಅರಣ್ಯ ಅಭಿವೃದ್ಧಿ ಮಾಡಿ ಎನ್ನುವುದು ಸದರಿ ಆದೇಶದಲ್ಲಿ ಇದೆ. ಇದನ್ನು ಸರ್ಕಾರ ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಈಗ ನಾನು ಕೇಳುತ್ತಿರುವುದೇನೆಂದರೆ, ನಮ್ಮ ರಾಜ್ಯದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಆದೇಶವಾಗಿರುತ್ತದೆ. ಇದು ಜನರಲ್ ಆದೇಶವಾಗಿರುತ್ತದೆ. ಇದು ಪೂನಾ ಪ್ರಕರಣ ಆದರೂ ಸಹ, ಇದು ಇಡೀ ದೇಶಕ್ಕೆ ಅನ್ವಯಿಸುವಂತಹ ಆದೇಶವಾಗಿರುತ್ತದೆ. ಈ ಆದೇಶವನ್ನು ಎಲ್ಲರೂ ಪಾಲನೆ ಮಾಡಬೇಕೆಂದು ಇದೆ. ಯೂನಿಯನ್ ಟೆರಿಟೊರಿಗಳು ಸಹ ಈ ಆದೇಶವನ್ನು ಪಾಲನೆ ಮಾಡಬೇಕೆಂದು ಇದೆ. ಆ ಕಾರಣದಿಂದ ನಾನು ಹೇಳುವುದೇನೆಂದರೆ, ಸರ್ಕಾರ ಎಲ್ಲಾ ಅರಣ್ಯ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳಲಿ. ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ. ಬಡವರ ಜಮೀನನ್ನು ಬಿಟ್ಟುಬಿಡಿ ಎಂದು ನಾನು ಹೇಳುವುದಿಲ್ಲ. ಆದರೆ, ನಾನು ಹೇಳುತ್ತಿರುವುದೇನೆಂದರೆ, ಅಭಿವೃದ್ಧಿಯಾಗಿರುವಂತಹ ಜಮೀನು; it is a town now. It is not an urban or...

ವೈಸ್ ಛೇರ್ಮನ್:- ಈಗ ಅಲ್ಲಿ ಅರಣ್ಯ ಬೆಳೆಸುವುದಕ್ಕೆ ಆಗುವುದಿಲ್ಲ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಈಗ ಅಲ್ಲಿ ಅರಣ್ಯ ಇರುವುದಿಲ್ಲ. ಅಲ್ಲಿ ಅರಣ್ಯ ಜಮೀನು ಎಂದು ಸುಮಾರು 60 ಎಕರೆ ಜಮೀನು ಇದೆ. ಆ ಅರಣ್ಯ ಪ್ರದೇಶಕ್ಕೆ ನಾನು ಕಳೆದ ಶನಿವಾರ ಭೇಟಿ ನೀಡಿ ಪರಿಶೀಲಿಸಿ ಬಂದಿರುತ್ತೇನೆ. ಅಲ್ಲಿ ಅರಣ್ಯದೊಳಗೆ ಇರುವಂತಹ ಜಮೀನಿನಲ್ಲಿ ಕೆಲವರು ಮರಗಳನ್ನು ಕಡಿಯುತ್ತಿದ್ದಾರೆ. ಏಕೆಂದರೆ, ಆ ಅರಣ್ಯ ಇಲಾಖೆಯಲ್ಲಿ ಎಂಬೆಸ್ಸಿ ಡೆವಲಪರ್‌ಗೆ ಸುಮಾರು 4 ಎಕರೆ ಜಮೀನನ್ನು ಕೊಟ್ಟಿರುತ್ತಾರೆ. ಹಾಗಾಗಿ, ಅವರು ಅಲ್ಲಿ ಮರಗಳನ್ನು ಕಡಿಯುತ್ತಿದ್ದಾರೆ. ಅದು ಅರಣ್ಯ ಪ್ರದೇಶದ ಒಳಗಡೆ ಜಮೀನು ಮಂಜೂರು ಮಾಡುತ್ತಾರೆ? ಎರಡನೆಯದಾಗಿ, ಬಿಪಿಎಲ್ ಸಂಸ್ಥೆಗೆ ಸೇರಿದಂತಹ ದೊಡ್ಡ ಕಾಂಪ್ಲೆಕ್ಸ್ ಬಂದಿರುತ್ತದೆ. ಅಲ್ಲಿ ಎಲ್ಲಾ ಕಾಂಪ್ಲೆಕ್ಸ್‌ಗಳು ಕಡಿಮೆ ಎಂದರೆ ಸುಮಾರು ರೂ.300/- ಕೋಟಿ, ರೂ.400/- ಕೋಟಿ, ರೂ.500/- ಕೋಟಿ ಇನ್‌ವೆಸ್ಟ್‌ಮೆಂಟ್‌ಗಳಲ್ಲಿ ದೊಡ್ಡ ಕಾಂಪ್ಲೆಕ್ಸ್ ಬಂದಿರುತ್ತವೆ. ಅಂದ ಮೇಲೆ ನಾವು ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. It is in a centre place. ಈ ಜಾಗ ಅರಣ್ಯ ಪ್ರದೇಶದಲ್ಲಿದ್ದರೆ, ಮೆಟ್ರೋ ಸಂಸ್ಥೆಗೆ ಹೇಗೆ 45 ಎಕರೆ ಜಮೀನು ಮಂಜೂರು ಮಾಡಿರುತ್ತಾರೆ? ಅದೇ ರೀತಿ, ಪೊಲೀಸ್ ಠಾಣೆ ಕಟ್ಟಡ ಕಟ್ಟಲು ಹೇಗೆ ಜಮೀನು ಮಂಜೂರು ಮಾಡಿರುತ್ತಾರೆ? ಆ ಜಾಗವನ್ನು ಸರ್ಕಾರವೇ ಕೊಟ್ಟಿರುವುದಲ್ಲವೇ?

VICE CHAIRMAN: Civic amenities ಗೆ ಕೊಡುವಾಗ they can consider.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:- ಮಾನ್ಯ ಸಭಾಪತಿಯವರೇ, ಆದರೆ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಲ್ಲವೇ? ಆದರೆ, ಆ ತೀರ್ಮಾನವಾಗಿರುವುದಿಲ್ಲ. ಬದಲಾಗಿ, ಅರಣ್ಯ ಭೂಮಿಯನ್ನು ತೆಗೆದುಕೊಂಡಿರುತ್ತಾರೆ. ಆ ನಂತರ, ಕೆಐಎಡಿಬಿ ಯವರಿಗೂ ಸಹ ಜಮೀನು ಮಂಜೂರು ಮಾಡಿರುತ್ತಾರೆ. ಕೆಐಎಡಿಬಿಯವರು ಪುಕ್ಕಟೆಯಾಗಿ ಜಮೀನು ತೆಗೆದುಕೊಂಡಿರುವುದಿಲ್ಲ. ಅವರು ರೈತರಿಗೆ ಪರಿಹಾರ ಹಣ ನೀಡಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಮೀನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಅದರಂತೆ, ರೈತರಿಗೆ ಜಮೀನು ಪರಿಹಾರ ನೀಡಿದರೆ ಅರ್ಥ ಏನು? These properties belong to farmers. ರೈತರಿಗೆ ಜಮೀನು ಪರಿಹಾರ ಹಣ ಕೊಟ್ಟಿದ್ದಾರೆ, ಅದನ್ನು ಅವರು ತೆಗೆದುಕೊಂಡಿರುತ್ತಾರೆ. ಆದರೆ, ಅದರಲ್ಲಿ ಇನ್ನು ಕೆಲವು ರೈತರು ಉಳಿದಿರುತ್ತಾರೆ. Now, the question is only about 123 or 124 acres of land. ಅಲ್ಲಿಯೂ ಕೂಡ ಸ್ಟ್ರಕ್ಚರ್‌ಗಳು ಬಂದಿರುತ್ತವೆ. ಆದರೆ, ಇತ್ತೀಚೆಗೆ ಅರಣ್ಯ ಇಲಾಖೆಯ ಡಿಎ.ಫ್.ಓ., ಬೆಂಗಳೂರು ದಕ್ಷಿಣ ಜಿಲ್ಲೆಯವರು ಹೋಗಿ ಎಲ್ಲವನ್ನು demolish ಮಾಡಿರುತ್ತಾರೆ. ಜೊತೆಗೆ, ಅದೆಲ್ಲದಕ್ಕೂ ಮಾನ್ಯ ನ್ಯಾಯಾಲಯದಿಂದ ತಡೆಯಾಜ್ಞೆ ಇರುತ್ತದೆ. ಅಲ್ಲಿನ ಬಡ ಜನರು ತೆರವು ಕಾರ್ಯಾಚರಣೆಗೆ ಅಡ್ಡ ನಿಂತು ಮಾತನಾಡಿದರೆ, ಅರಣ್ಯ ಇಲಾಖೆಯವರು ಒಂದು ಮಾತನ್ನು ಹೇಳುವುದೇನೆಂದರೆ, "ನೀವು ಬೇಕಾದರೆ ನಮ್ಮ ಮೇಲೆ ನ್ಯಾಯಾಂಗ ನಿಂದನೆ ಹಾಕಿ. ನಮಗೆ ಸರ್ಕಾರ ಟಾರ್ಗೆಟ್ ಕೊಟ್ಟಿದೆ. ಆ ಟಾರ್ಗೆಟ್ ಪ್ರಕಾರ ನಾವು ಈ ಕೆಲಸವನ್ನು ಮಾಡಲೇಬೇಕು" ಎಂದು ಹೇಳುತ್ತಾರೆ. **(ಗೊಂದಲ)** ನಾನು ಮಾನ್ಯ ಸಚಿವರಿಗೆ ತಿಳಿಸುವುದೇನೆಂದರೆ, ಅರಣ್ಯ ಇಲಾಖೆಯಲ್ಲಿ ಶ್ರೀ ರವಿಶಂಕರ್ ಎಂಬ ಒಬ್ಬ ಆಫೀಸರ್ ಇದ್ದಾರೆ. ಅವರಿಗೆ ಬೆಂಗಳೂರಿನಿಂದ ಹೊರಗೆ ಹೋಗಿ ಕೆಲಸ ಮಾಡುವುದಕ್ಕೆ ಇಷ್ಟವಿಲ್ಲ. ಆ ಕಾರಣಕ್ಕೆ ಸರ್ಕಾರಕ್ಕೆ ಏನೆಲ್ಲಾ misguide ಮಾಡಬಹುದೋ ಅದನ್ನೆಲ್ಲಾ ಮಾಡಿಕೊಂಡು ಇಲ್ಲಿ ಕುಳಿತಿರುತ್ತಾರೆ. ಎರಡನೆಯದಾಗಿ, ಕೆಎಟ ಆದೇಶದಲ್ಲಿ, "ಅವರು ಆ ಹುದ್ದೆಗೆ ಇನ್ನು ಸೀನಿಯಾರಿಟಿ ಇಲ್ಲ. ಅವರನ್ನು ಇಲ್ಲಿಂದ ತೆಗೆಯಿರಿ" ಎಂದು ಹೇಳಿದರೂ ಸಹ, ಅದೇಕೆ ಎಂದು ಗೊತ್ತಿಲ್ಲ. ಸರ್ಕಾರ ಮಾತ್ರ ಅವರನ್ನು ಬಿಟ್ಟು ಏನನ್ನು ಮಾಡುವುದಿಲ್ಲ.

VICE CHAIRMAN: Contempt proceedings move ಮಾಡಿ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಇಲ್ಲಿ ಇರುವಂತಹ ಬಡಜನರಲ್ಲಿ ಒಬ್ಬರಿಗಾದರೂ ಸರ್ಕಾರದಿಂದ ನೋಟಿಸ್ ಕೊಡಲಾಗಿದೆಯೇ? ಆದರೆ, ಆ ಬಡವರ ಮನೆಗಳನ್ನೆಲ್ಲಾ demolish ಮಾಡಿರುತ್ತಾರೆ. ಕಳೆದ 5 ವರ್ಷಗಳಿಂದ ಇಲ್ಲಿಯವರೆಗೂ ಪ್ರತಿದಿನ ಅಲ್ಲಿ ಪ್ರೊಟೆಸ್ಟ್ ನಡೆಯುತ್ತಲೇ ಇದೆ. ಆದರೆ, ಪ್ರೊಟೆಸ್ಟ್ ಮಾಡುವವರನ್ನು ಅಲ್ಲಿಂದ ಎತ್ತಂಗಡಿ ಮಾಡಿದ್ದಾರೆ. ಸುಮಾರು 3,000 ಜನ 4,000 ಜನರು ಪ್ರೊಟೆಸ್ಟ್ ಮಾಡುವಾಗಲೂ ಸಹ ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ. ಒಟ್ಟಾರೆಯಾಗಿ ಆ ಗ್ರಾಮದಲ್ಲಿರುವವರೆಲ್ಲರೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದಂತಹ ಜನರಾಗಿರುತ್ತಾರೆ. ಜೊತೆಗೆ, ಆ ಗ್ರಾಮ ಕೂಡ ಸರ್ಕಾರಿ ಗ್ರಾಮವಾಗಿರುತ್ತದೆ. ಅಂದರೆ, ಸರ್ಕಾರವೇ ಈ 711 ಎಕರೆ ಜಮೀನಿನಲ್ಲಿ ನಿವೇಶನಗಳನ್ನು ವಿಂಗಡಿಸಿ ಕೊಟ್ಟಿರುವಂತಹ ಗ್ರಾಮವಾಗಿರುತ್ತದೆ. ಹಾಗಾದರೆ, ಈಗ ಆ ಗ್ರಾಮವನ್ನು ಏನು ಮಾಡುತ್ತೀರಿ? ಅರಣ್ಯ ಇಲಾಖೆಯ ಆಕ್ಟ್ ಪ್ರಕಾರ, ಎಲ್ಲಾ ಅರಣ್ಯ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದರೆ, ಆ ಗ್ರಾಮವನ್ನು ಎತ್ತಂಗಡಿ ಮಾಡಬೇಕು, ಮನೆಗಳನ್ನು ತೆರವುಗೊಳಿಸಬೇಕು, ಮೆಟ್ರೋ ಕೆಲಸವನ್ನು ತೆರವುಗೊಳಿಸಬೇಕು, ಕೆಐಎಡಿಬಿ ಯವರು ಸ್ವಾಧೀನಪಡಿಸಿಕೊಂಡಿರುವ ಜಮೀನು ವಾಪಸ್ಸು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳಬೇಕು. ಜೊತೆಗೆ, ರೈಲ್ವೇಯವರನ್ನು ಸಹ ತೆಗೆದು ಹಾಕಬೇಕು. ಇವರೆಲ್ಲರನ್ನೂ ತೆಗೆಯುವುದಕ್ಕೆ ಸಾಧ್ಯವಿದೆಯೇ?

(ಮುಂದು)

(656) 12.08.2025 5.00 ವೈಎಲ್-ಆರ್ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):-

ಜೊತೆಗೆ ಪ್ರೈವೆಟ್ ಆಗಿ ಇದ್ದಂತಹವರ ಹತ್ತಿರ ಭೂಮಿ ತೆಗೆದುಕೊಂಡಿದ್ದಾರೆ. Suri Nain ಎನ್ನುವಂಥ ಕಾರ್ಖಾನೆ ಇದೆ.

ವೈಸ್ ಛೇರ್ಮನ್:- ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ಪ್ರಾರ್ಥನೆ ಏನೆಂಬುದನ್ನು ಮೊದಲು ಹೇಳಿ. ಮಾನ್ಯ ಸಚಿವರಿಂದ ಉತ್ತರ ಬಂದ ಮೇಲೆ ತಮಗೆ ಮತ್ತೆ ಮಾತನಾಡಲು ಅವಕಾಶ ಕಲ್ಪಿಸಲಾಗುತ್ತದೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ನನ್ನ ಪ್ರಾರ್ಥನೆ ಒಂದೇ. ಆದ್ದರಿಂದ ಇವರು ಯಾರನ್ನು ತೆಗೆಯುವುದಕ್ಕೆ ಆಗುವುದಿಲ್ಲವೆಂದರೆ, ಸದರಿ ಆದೇಶದ ಪ್ರಕಾರ ಅವರಿಂದ ಸ್ವಲ್ಪ ಹಣ ವಸೂಲಿ ಮಾಡಿ, ಬೇರೆ ಕಡೆ ಜಾಗ ಕೊಟ್ಟು, ಅರಣ್ಯ ಬೆಳೆಸುವಂಥ ಕೆಲಸ ಮಾಡಬಹುದು. ಇಂತಹ ಕಾನೂನು ಬಂದ ಮೇಲೆ ಇಡೀ ದೇಶದಲ್ಲಿ ಅಥವಾ ರಾಜ್ಯದಲ್ಲಿ ಎಲ್ಲೆಲ್ಲಿ ಭೂಮಿ ಇವೆ, ಅವೆಲ್ಲವನ್ನೂ ವಾಪಸ್ಸು ಕೊಡಿ ಎಂದು ಕೇಳಲೇಬೇಕು. ಆದರೆ, ಇದನ್ನು ಏತಕ್ಕೆ ಜಾರಿಗೆ ತರುವುದಿಲ್ಲ? ಖಾಲಿ ಇರುವ ಜಾಗವೆಲ್ಲವನ್ನೂ ತೆಗೆದುಕೊಳ್ಳಿ. ಪಟ್ಟಣದೊಳಗೆ ಇರುವಂಥ ಭೂಮಿಯಾಗಿದ್ದು, ಒಂದು ಎಕರೆ ಜಾಗ ಸುಮಾರು ರೂ.10 ಕೋಟಿಗಳಷ್ಟು ಬೆಲೆ ಬಾಳುತ್ತದೆ. ITPL... ಏನು ದರ ಇದೆ ಎಂಬುದನ್ನು ನೋಡಿದರೆ, ತಮಗೆ ಅಂದಾಜು ಎಷ್ಟೆಂಬುದು ಗೊತ್ತಾಗುತ್ತದೆ. ಆದರೆ, ಶ್ರೀಮಂತರಿಗೆ ಭೂಮಿ ಕೊಟ್ಟು ಅವರನ್ನು ಉದ್ಧಾರ ಮಾಡಿ, ಬಡವರನ್ನು ಎಲ್ಲಿಗೆ ಕಳುಹಿಸಬೇಕೆಂದು ತೀರ್ಮಾನ ಮಾಡಿದ್ದಾರೆ? ಕೊನೇಪಕ್ಷ ಸರ್ಕಾರದವರು ಬೇರೆ ಕಡೆ ಎಲ್ಲಿಯೋ ಭೂಮಿ ಕೊಡುತ್ತೇವೆ ಎನ್ನುವಂಥ ತೀರ್ಮಾನ ಮಾಡಲಿ, ನಮ್ಮ ಅಭ್ಯಂತರವೇನಿಲ್ಲ. ಇಲ್ಲವೆಂದರೆ, ಈಗ ಏನು ಮಾಡಿದ್ದಾರೆ, ಅದಕ್ಕೆ ಈ ರೀತಿ ಇರಬೇಕೆಂಬ ಕಾನೂನು ತರಲಿ. ಅದನ್ನು ಬಿಟ್ಟು ಏಕಾಏಕಿಯಾಗಿ ಅಲ್ಲಿರತಕ್ಕಂಥ ಮನೆಗಳು, ಎಲ್ಲವನ್ನೂ ತೆರವುಗೊಳಿಸಿ, ಗಿಡ ನೆಡುವಂಥ ಕೆಲಸ ಮಾಡುತ್ತಿದ್ದಾರೆ. ಒಂದು ವೇಳೆ ಅವರೇನಾದರೂ ಬೇರೆಯದ್ದಕ್ಕೆ ಮಾರಾಟ ಮಾಡಿ, ರೂ.200 ಕೋಟಿ, ರೂ.300 ಕೋಟಿಗಳಷ್ಟು ಬೆಲೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾಳುವಂಥ ದೊಡ್ಡ ದೊಡ್ಡ ಬಿಲ್ಡಿಂಗ್ ನಿರ್ಮಾಣವಾಗಿದ್ದರೆ, ಅವರನ್ನು ಎತ್ತಂಗಡಿ ಮಾಡಿಸುತ್ತಿದ್ದರೆ? ಕೆಲವರಿಗೆ ಆ ರೀತಿ ಆಗಿರುವುದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಪೋಲೀಸ್ ಠಾಣೆ, ಮೆಟ್ರೊ ಸ್ಟೇಷನ್, ರೈಲ್ವೆ, ಕೆ.ಐ.ಎ.ಡಿ.ಬಿ. ರವರು ಭೂಮಿಯನ್ನು ಖರೀದಿಸಿ, ಇಂಡಸ್ಟ್ರಿಯಲ್ ಎಲ್ಲವೂ ಬಂದಿದ್ದು, ಆ ಭೂಮಿಗಳೆಲ್ಲವನ್ನೂ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಈ ಎಲ್ಲಾ ಭೂಮಿಯನ್ನು ತಾವು ತೆಗೆದುಕೊಳ್ಳಲು ಆಗುವುದಿಲ್ಲವೆಂದರೆ, ಸರ್ಕಾರದವರು ಏನು ಮಾಡಬೇಕೆಂದರೆ ಅವರಿಂದ ಹಣವನ್ನು ವಸೂಲಿ ಮಾಡಬೇಕು. ಬೇಕಾದರೆ ಅದೇ ಕೆಲಸವನ್ನು ಆ ರೈತರಿಗೂ ಮಾಡಲಿ. ಈ ರೈತರಿಗೆ ಏನು ಶಿಕ್ಷೆಯಾಗುತ್ತದೆ, ಅದೇ ಶಿಕ್ಷೆಯನ್ನು ಈಗಾಗಲೇ ಪೋಲೀಸ್ ಠಾಣೆ, ಮೆಟ್ರೊ ಸ್ಟೇಷನ್, ರೈಲ್ವೆ, ಕೆ.ಐ.ಎ.ಡಿ.ಬಿ. ರವರು ಭೂಮಿಯನ್ನು ಖರೀದಿಸಿ, ಇಂಡಸ್ಟ್ರಿಯಲ್ ಎಲ್ಲವೂ ಬಂದಿದೆ ಅವರಿಗೂ ಅನ್ವಯಿಸಬೇಕು. ಇಲ್ಲವೆಂದರೆ, ಎಲ್ಲವನ್ನೂ ತೆಗೆದುಕೊಳ್ಳುವುದಾದರೆ, ಈಗಾಗಲೇ ನಿರ್ಮಾಣಗೊಂಡಿರುವಂಥ ಭೂಮಿಗಳೆಲ್ಲವನ್ನೂ ತೆಗೆದುಕೊಳ್ಳಲಿ ನಮ್ಮ ಅಭ್ಯಂತರವೇನಿಲ್ಲ. This is my prayer.

ಶ್ರೀ ಈಶ್ವರ ಬಿ.ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಾಡುಗೋಡಿ ಪ್ಲಾಂಟೇಶನ್ ಸರ್ವೆ ನಂ.1 (711 ಎಕರೆ) ಪ್ರದೇಶವನ್ನು,... ಅಂದಿನ ಮೈಸೂರು ಸರ್ಕಾರ...

ವೈಸ್ ಛೇರ್ಮನ್:- ಮಾನ್ಯ ಸಚಿವರೇ, 711 ಎಂಬ ನಂಬರೇ ಸರಿಯಿಲ್ಲ ಬಿಡಿ.

ಶ್ರೀ ಈಶ್ವರ ಬಿ.ಖಂಡ್ರೆ:- ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಹೌದು 711 ಎಂಬ ನಂಬರೇ ಸರಿಯಿಲ್ಲ. ಅದಕ್ಕಾಗಿಯೇ ವಾದ-ವಿವಾದಗಳೆಲ್ಲವೂ ನಡೆಯುತ್ತಿದೆ. ಅದಕ್ಕಾಗಿಯೇ ಗೊಂದಲ ಸೃಷ್ಟಿಯಾಗಿದೆ. ಮಾನ್ಯ ಎಂ.ಬಿ.ಪಾಟೀಲ್‌ರವರು ಸಹ ಈಗ ತಾನೇ ನನಗೆ ಒಂದು ಹೊಸ ವಿಚಾರವನ್ನು ಹೇಳಿದರು. ಅದು ಹಳೆಯ ವಿಚಾರವೇ ಇರಬಹುದು. ಆದರೆ, ನನಗೆ ಈಗ ಅದರ ಬಗ್ಗೆ ಹೇಳಿದರು. ನನಗೆ ಅದರ ಮಾಹಿತಿ ಇಲ್ಲ. ನಂಬರ್ ಸರಿಯಿಲ್ಲ, ಗೊಂದಲ ಇದೆ ಎನ್ನುವಂಥ ಮಾತನ್ನು ಹೇಳಿದ್ದು, ನನಗೂ ಸಹ ಗೊತ್ತಿಲ್ಲ. ಏಕೆಂದರೆ, ನಾವು ನಂಬರ್ ಮೇಲೆ ನಂಬಿಕೆಯನ್ನಿಟ್ಟುಕೊಂಡಿಲ್ಲ.

ಅಂದಿನ ಘನ ಮೈಸೂರು ಸರ್ಕಾರವು ಗೆಜೆಟ್ ಅಧಿಸೂಚನೆ ಸಂಖ್ಯೆ: 10407-ಎಫ್‌ಬಿಎಫ್-153-95, ದಿನಾಂಕ: 29 ಮೇ 1896 ರಂತೆ ಸರ್ಕಾರಿ ಪ್ಲಾಂಟೇಶನ್ ಹಾಗೂ ಅಧಿಸೂಚನೆ ಸಂಖ್ಯೆ: 422-ಎಫ್‌ಬಿಎಫ್-

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

15-1900, ದಿನಾಂಕ 07ನೇ ಜನವರಿ 1901 ರಂತೆ 'ರಾಜ್ಯ ಅರಣ್ಯ' ಎಂದು ಘೋಷಿಸಿರುತ್ತದೆ. ಇದು ಮೈಸೂರು ಗೆಜೆಟ್ ಪ್ರತಿಯಾಗಿದ್ದು, ಇದರ ವಿವರವನ್ನು ವಿರೋಧ ಪಕ್ಷದ ನಾಯಕರಿಗೆ ಒದಗಿಸಲು ತಿಳಿಸುತ್ತೇನೆ.

ವೈಸ್ ಛೇರ್ಮನ್:- ಮಾನ್ಯ ಸಚಿವರೇ, ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ dispute ಇಲ್ಲ.

ಶ್ರೀ ಈಶ್ವರ ಬಿ.ಖಂಡ್ರೆ:- ಮಾನ್ಯ ಸಭಾಪತಿಯವರೇ, ಈ ಆದೇಶದಲ್ಲಿ ಏನೇನು ಆಗಿದೆ ಎಂಬುದರ ಮಾಹಿತಿ ಸಂಪೂರ್ಣವಾಗಿ ಗೊತ್ತಾದರೆ ಅವರಿಗೂ ಸರಿಯಾಗಿ ಅರ್ಥವಾಗುತ್ತದೆ. ಹಾಗೆಯೇ 1953 ರಲ್ಲಿ 572.06 ಎಕರೆ ಪ್ರದೇಶವನ್ನು temporary cultivation ಕಾಡುಗೋಡಿ ಸಾಮೂಹಿಕ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಜಂಟಿ ಸಹಕಾರ ಕೃಷಿಗೆ ತಾತ್ಕಾಲಿಕವಾಗಿ ನೀಡಲಾಗಿತ್ತು. ಸದರಿ ನೀಡಲಾದ ಜಮೀನಿನ ಯಾವುದೇ ಹಕ್ಕಾಗಲೀ ಅಥವಾ ಮಾಲೀಕತ್ವ ಆಗಲೀ ಆ ಸಂಘಕ್ಕೆ ಅಥವಾ ಅದರ ಸದಸ್ಯರಿಗೆ ಅಂದಿನ ದಿವಸ ನೀಡಲಾಗಿಲ್ಲ. ಮುಂದುವರೆದು, ಸದರಿ ಕಾಡುಗೋಡಿ ಸಾಮೂಹಿಕ ವ್ಯವಸಾಯ ಸೇವಾ ಸಹಕಾರ ಸಂಘದಿಂದ ಇದರ ಮೇಲೆ ದೂರು ಬರುತ್ತದೆ. ಅದೇನೆಂದರೆ, ಸರಿಯಾಗಿ ಕಾರ್ಯನಿರ್ವಹಿಸದೇ ಇದ್ದುದರಿಂದ ಹಾಗೂ ಸದರಿ ಸಂಘದ ಪದಾಧಿಕಾರಿಗಳು, ದಾಖಲಾತಿಗಳು, ಲೆಕ್ಕ ಪರಿಶೋಧನಾ ವರದಿಗಳು, ಲಭ್ಯವಿಲ್ಲದ ಕಾರಣ ದಿನಾಂಕ 31.12.1983 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: DPC:73.CKA.74, ದಿನಾಂಕ 13.03.1974 ರಂತೆ Deputy Registrar of Co-Operative Societies, Bangalore ರವರು ಕಾಡುಗೋಡಿ ಸಾಮೂಹಿಕ ವ್ಯವಸಾಯ ಸೇವಾ ಸಹಕಾರ ಸಂಘವನ್ನು ರದ್ದುಗೊಳಿಸಿ ಎಂದು ಆದೇಶಿಸಿದ್ದು, Liquidation ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಆದೇಶಿಸಿರುತ್ತಾರೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 94ಎ, 94ಬಿ ಮತ್ತು 94ಸಿ ರಂತೆ ಬೆಂಗಳೂರು ನಗರದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಅದರ ಸುತ್ತಮುತ್ತ 18 ಕಿ.ಮೀ. ವ್ಯಾಪ್ತಿಯಲ್ಲಿ regularization of unauthorized occupation ಹಾಗೂ construction of dwelling house in occupied land ಗೆ ಸಂಬಂಧಿಸಿದಂತೆ, ಭೂ ಮಂಜೂರಾತಿ ಮಾಡಲು ಅವಕಾಶವಿರುವುದಿಲ್ಲ.

ಕಾಡುಗೋಡಿ ಸಾಮೂಹಿಕ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಸುಮಾರು 201 ಸದಸ್ಯರಿರುತ್ತಾರೆ. ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯ ಬೆಂಗಳೂರಿನಲ್ಲಿ ದಾಖಲಿಸಿದ ಕೇಸ್ ನಂ.ಎಲ್ಎನ್‌ಡಿ (ಎಸ್)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಆರ್.237(1) ರಿಂದ (201)/1990-91, ದಿನಾಂಕ 29 ಸೆಪ್ಟೆಂಬರ್ 2006 ರಂತೆ ಒಟ್ಟು 572 ಎಕರೆ ಪ್ರದೇಶವನ್ನು ಸರ್ಕಾರದ ಪ್ರದೇಶವೆಂದು ಆದೇಶಿಸಿದ್ದು, ಈ ಎಲ್ಲಾ ಕಂದಾಯ ದಾಖಲಾತಿಗಳಲ್ಲಿ ಆರ್.ಟಿ.ಸಿ. ಇತ್ಯಾದಿಗಳನ್ನು ನಮೂದಿಸಿದ್ದು, ಆ ಸಂಘದಲ್ಲಿ ಯಾರು ಪ್ರತಿನಿಧಿಗಳಾಗಿರುತ್ತಾರೆ ಆ ಪ್ರತಿನಿಧಿಗಳ ಹೆಸರುಗಳನ್ನು ರದ್ದುಪಡಿಸಿ, ಇವತ್ತು ಅವರೆಲ್ಲರ ವಿವರವನ್ನು ತೆಗೆದುಹಾಕಿ, 2006 ರಲ್ಲಿಯೇ 'ಸರ್ಕಾರ' ಎಂದು ನಮೂದಿಸಿ ಆದೇಶಿಸಿರುತ್ತಾರೆ. ಈ ಆದೇಶದಲ್ಲಿ ಸಂಘದ ಯಾವುದೇ ವ್ಯಕ್ತಿಗಳಿಗೆ ***"ಯಾವುದೇ ಸಾಗುವಳಿ ಚೀಟಿಯಾಗಲೀ ಅಥವಾ Grant Certificate ಆಗಲೀ ಇಲ್ಲದಿರುವುದರಿಂದ, ಇವರುಗಳಿಗೆ ಯಾವುದೇ ರೀತಿಯ ಮಾಲೀಕತ್ವದ ದಾಖಲಾತಿ ಇರುವುದಿಲ್ಲವೆಂದು ಹಾಗೂ ಎಲ್ಲಾ ಪಹಣಿಗಳು ಅಸಿಂಧುವೆಂದು"*** ಆದೇಶಿಸಿರುತ್ತಾರೆ.

ಮುಂದುವರೆದು, ವಿಶೇಷ ಜಿಲ್ಲಾಧಿಕಾರಿಗಳವರ ಆದೇಶದ ದಿನಾಂಕ 29.09.2006 ರ ವಿರುದ್ಧ ಸಂಘದ ಸದಸ್ಯರು ಕೆ.ಎ.ಟಿ. ನಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಸದರಿ ಕೆ.ಎ.ಟಿ. ಕೇಸ್ ನಂ.821/2012, ದಿನಾಂಕ: 29.09.2012 ರಂತೆ ವಿಶೇಷ ಜಿಲ್ಲಾಧಿಕಾರಿಗಳ ಆದೇಶವನ್ನು ಎತ್ತಿ ಹಿಡಿದಿರುತ್ತದೆ. ನಂತರ ಸಂಘದವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 1045/2013 ರಂತೆ ಕೆಎಟಿ ಆದೇಶದ ವಿರುದ್ಧ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 25.11.2015 ರಂದು ವಿಶೇಷ ಜಿಲ್ಲಾಧಿಕಾರಿಗಳ ಆದೇಶವನ್ನು ಎತ್ತಿ ಹಿಡಿದಿರುತ್ತದೆ ಹಾಗೂ ಸಂಘದವರ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿ ಈ ಕೆಳಗಿನಂತೆ ಆದೇಶಿಸಿರುತ್ತದೆ. ಅದರಲ್ಲಿ ಈ ಮುಂದಿನ ರೀತಿ ಹೇಳಿರುತ್ತಾರೆ;

> **" XXXXX .....**
>
> *i since the land was not granted either to KSVSSS (ಕಾಡುಗೊಡಿ ಸಮೂಹಿಕ ವ್ಯವಸಾಯ ಸೇವಾ ಸಹಕಾರ ಸಂಘ) or Petitioners, the only permissible conclusion is that, the petitioners are in unauthorized occupation of revenue bearing lands, if they have put up construction of buildings on such revenue lands are disentitled to any relief in equity, since they are violators of rule of law. Eviction of un-authorized occupation of land belonging to the state ....*
>
> ***XXXX.***
>
> *19.* ***XXXX .....***

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

conclusion that the petitioners are unauthorized occupants. Deputy Commissioner was fully justified in directing the Tahsildar to initiate action for eviction of petitioners from the revenue lands.

20. In the result, these petitions devoid of merit are dismissed."

ಎಂದು ಆದೇಶವಾಗಿರುತ್ತದೆ. 2013ರ ರಿಟ್ ಪಿಟಿಷನ್ನಿನ ಆದೇಶವು 2015ರಲ್ಲಿ ಆಗುತ್ತದೆ.

6. W.P.1045/2013ರ ಆದೇಶವನ್ನು ಯಾವುದೇ ವ್ಯಕ್ತಿಗಳು ಈವರೆವಿಗೂ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಕಾರಣ ಈ ಆದೇಶವು ಅಂತಿಮತೆಯನ್ನು ತಲುಪಿರುತ್ತದೆ. ಹಾಗೂ ಸದರಿ ಆದೇಶದಂತೆ ಕಾಡುಗೋಡಿ ಪ್ಲಾಂಟೇಷನ್ ಸರ್ವೆ ನಂ.01ರ ಪಹಣಿಯ ಕಾಲಂ–11ರಲ್ಲಿ "lands were not granted either to KSVSSS or petitioners" ಎಂದು ನಮೂದಾಗಿರುತ್ತದೆ.

(ಮುಂದು)

(657) 12.08.2025/5.10/ಎಸ್‌ಕೆ–ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

ಶ್ರೀ ಈಶ್ವರ್ ಖಂಡ್ರೆ (ಮುಂದು):–

ಕಾಡುಗೋಡಿನ ಪ್ಲಾಂಟೇಷನ್ ಸರ್ವೆ ನಂಬರ್ 1 ರ ಪಹಣಿಯಲ್ಲಿ ಕಾಲಂ ನಂಬರ್ 3 ರಲ್ಲಿ ಒಟ್ಟು 711 ಎಕರೆ ಇದ್ದು, ಕಾಲಂ–09ರಲ್ಲಿ "ಕರ್ನಾಟಕ ಅರಣ್ಯ ಇಲಾಖೆ" ಎಂದು ಎಂ.ಆರ್.ನಂ. ಹೆಚ್ 1/15–16 ರಂತೆ 711 ಎಕರೆ ಎಂದು ನಮೂದಾಗಿರುತ್ತದೆ. ಇದು ಇಂದಿಗೂ ಮುಂದುವರೆದಂತಹ ಕಂದಾಯ ದಾಖಲಾತಿಯಾಗಿರುತ್ತದೆ. ಹಾಗೂ ಇಂದಿಗೂ ಕಾಡುಗೋಡಿ ಕಾಯ್ದಿಟ್ಟ ಅರಣ್ಯ ಪ್ರದೇಶವನ್ನು ಸೆಕ್ಷನ್–28 ರ ಕರ್ನಾಟಕ ಅರಣ್ಯ ಕಾಯ್ದೆ–1963ರ ಅಡಿಯಲ್ಲಿ ಯಾವುದೇ ಅಧಿಸೂಚನೆಯನ್ನು ಹೊರಡಿಸಿ ಅರಣ್ಯವಲ್ಲವೆಂದು ಘೋಷಿಸಿರುವುದಿಲ್ಲ.

ಕಾಡುಗೋಡಿ ಸರ್ವೆ ನಂ.1 ರಲ್ಲಿ ಅನಧಿಕೃತ ಒತ್ತುವರಿಯನ್ನು ಪ್ರಶ್ನಿಸಿ 20008 ರ ಸಾಲಿನಲ್ಲಿ ಅರಣ್ಯ ಇಲಾಖೆ ವತಿಯಿಂದ Concord India Private Limited ಸಂಸ್ಥೆಯ ವಿರುದ್ಧ ಒತ್ತುವರಿಗಾಗಿ ನೋಟಿಸ್‌ನ್ನು ಜಾರಿ ಮಾಡುತ್ತೇವೆ. ಈ ನೋಟಿಸ್‌ನ ವಿರುದ್ಧ ಸದರಿ ಸಂಸ್ಥೆಯ ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ 2008 ರಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಅದರಲ್ಲಿ ಮೂವತ್ತೇಳು ಕಂಪನಿಗಳು ಸೇರಿಕೊಂಡು ವ್ಯಾಜ್ಯ ನಡೆಯುತ್ತದೆ. ಮಾನ್ಯ ನ್ಯಾಯಾಲಯವು ದಿನಾಂಕ 25.05.2012 ರಂದು ನಮ್ಮ ಇಲಾಖೆಯ ವಿರುದ್ಧ ಆದೇಶ ಹೊರಡಿಸುತ್ತಾ, ಈ ಪ್ರಕರಣದಲ್ಲಿ ಕೈಗಾರಿಕಾ ಪ್ರದೇಶಕ್ಕೆ ಸಂಬಂಧಿಸಿದಂತೆ, ಅರಣ್ಯ ಇಲಾಖೆಯ ವಾದವನ್ನು ನಿರಾಕರಿಸಿ, ವಾದಿಗಳ ಪರವಾಗಿ ಆದೇಶವನ್ನು ಹೊರಡಿಸಿರುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದರಿ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಏತಕ್ಕೆ ಹೀಗೆ ಮಾಡಿದೆ ಎಂದರೆ, ಕಾಡುಗೋಡಿ ಪ್ಲಾಂಟೇಷನ್ ಸರ್ವೆ ನಂ.1 ಸ್ವಾಧೀನತೆಯನ್ನು ವಿಶೇಷ ಕಾಯ್ದೆ ಎಂದು ಹೇಳಿ, ಕೆ.ಐ.ಎ.ಡಿ.ಬಿ. ಅವರು ಇದಕ್ಕೆ ಭೂಸ್ವಾಧೀನ ಪಡಿಸಿಕೊಂಡು General Act ಎಂದು ನಿರ್ಣಯಿಸಿ, ಕಾಡಿಗೋಡಿ ಪ್ಲಾಂಟೇಷನ್‌ನ್ನು 449.28 ಎಕರೆ ವಿಸ್ತೀರ್ಣವನ್ನು ಅರ್ಜಿದಾರರ ಪರವಾಗಿ ಆದೇಶವನ್ನು ಹೊರಡಿಸಿರುತ್ತದೆ.

ಮುಂದುವರೆದು, 711 ಎಕರೆ ಪ್ರದೇಶದ ಪೈಕಿ ಉಳಿದ 262.12 ಎಕರೆ ಪ್ರದೇಶವು ಇಂದಿಗೂ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿರುತ್ತದೆ. ಮುಂದುವರೆದು, ಕೇಂದ್ರ ಸರ್ಕಾರದ ಆದೇಶ ಅಂದರೆ ನಾವು ಯಾವುದೇ ಅರಣ್ಯ ಜಮೀನು ಇತ್ತು ಎಂದರೆ ನಾವು ಅದನ್ನು ಯಾರಿಗೂ ಮಾರಾಟ ಮಾಡುವುದಕ್ಕಾಗುವುದಿಲ್ಲ, ಗ್ರ್ಯಾಂಟ್ ಮಾಡುವುದಕ್ಕೆ ಬರುವುದಿಲ್ಲ. ಅರಣ್ಯವಲ್ಲದ ಯಾವುದೇ ಅನ್ಯ ಕಾರ್ಯಗಳಿಗೆ ಉಪಯೋಗ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ಬೇರೆಯವರಿಗೆ ಹೇಗೆ ಕೊಟ್ಟಿದ್ದೀರಿ ಎಂದು ಗೌರವಾನ್ವಿತ ಪ್ರತಿ ಪಕ್ಷದ ನಾಯಕರು ಕೇಳಿದರು. ಕಾನೂನುಬದ್ಧವಾಗಿ ಯಾವಾಗ ನಮಗೆ ಅರಣ್ಯ ಯಾವುದಕ್ಕೆ ತೀರುವಳಿಗೆ ಬರುತ್ತದೆ. ಅವರು ನಮಗೆ ಪರ್ಯಾಯ ಅರಣ್ಯ ಭೂಮಿಯನ್ನು ಕೊಟ್ಟು, ಅವರು compensatory afforestation ಹಣ ಕಟ್ಟಿ NPV (Net Present Value) charges ಕಟ್ಟಿದ ಮೇಲೆ ಸ್ಟೇಜ್-1 ಸ್ಟೇಜ್-2 ಅನ್ನಾಗಿ

ವೈಸ್ ಛೇರ್ಮನ್:- ಮಾನ್ಯ ಸಚಿವರೇ, ತಾವು ಒಂದು ಪಾಯಿಂಟ್‌ನ್ನು ಕ್ಲಿಯರ್ ಮಾಡಿ.

ಶ್ರೀ ಈಶ್ವರ್ ಖಂಡ್ರೆ:- ಮಾನ್ಯ ಸಭಾಪತಿಯವರೇ, ನಾನು ಪೂರ್ತಿಯಾಗಿ ಹೇಳುತ್ತೇನೆ.

ವೈಸ್ ಛೇರ್ಮನ್:- ಮಾನ್ಯ ಸಚಿವರೇ, ಒಂದು ನಿಮಿಷ. ಸುಮಾರು 522 ಎಕರೆ ಆ ಸೊಸೈಟಿಯಿಂದ ಸಂಪೂರ್ಣವಾಗಿ liquidation ಆದ ಮೇಲೆ ಆ 522 ಎಕರೆ ಅರಣ್ಯ ಇಲಾಖೆಗೆ ತೆಗೆದುಕೊಳ್ಳುತ್ತಿರಲ್ಲ, ಅದರೊಳಗೆ ಯಾರಾದರೂ aggrieved persons ಇದ್ದಾರೆಯೇ?

ಶ್ರೀ ಈಶ್ವರ್ ಖಂಡ್ರೆ:- ಮಾನ್ಯ ಸಭಾಪತಿಯವರೇ, ಆ 500 ಎಕರೆ ಅದು ಆಮೇಲೆ ಏನಾಗುತ್ತದೆ ಕೆ.ಐ.ಎ.ಡಿ.ಬಿ. ದವರು.

ವೈಸ್ ಛೇರ್ಮನ್:- ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿರುವುದೇನೆಂದರೆ, ಇದೆಲ್ಲಾ ಲ್ಯಾಂಡ್ ಈಗ ಎತ್ತಂಗಡಿ ಮಾಡಿದ್ದರಲ್ಲ,

ಶ್ರೀ ಈಶ್ವರ್ ಖಂಡ್ರೆ:- ಮಾನ್ಯ ಸಭಾಪತಿಯವರೇ, ಎತ್ತಂಗಡಿ ಅಂದರೆ ಅದು ಹಾಗೇ ಆಗಿಲ್ಲ. ಅದರ ಬಗ್ಗೆ ನಾನು ಹೇಳುತ್ತೇನೆ.

ವೈಸ್ ಛೇರ್ಮನ್:- ಮಾನ್ಯ ಸಚಿವರೇ, ಅದರೊಳಗೆ ಬರುತ್ತದೆ ಎಂದು ಕೇಳುತ್ತಿದ್ದಾರೆ.

ಶ್ರೀ ಈಶ್ವರ್ ಖಂಡ್ರೆ:-ಮಾನ್ಯ ಸಭಾಪತಿಯವರೇ, ತಾವು ಪೂರ್ತಿಯಾಗಿ ಕೇಳಿದ ಮೇಲೆ ತಮಗೂ ಕೂಡ ಅರ್ಥವಾಗುತ್ತದೆ. ಕೇಂದ್ರ ಸರ್ಕಾರದ ಆದೇಶ ಸಂಖ್ಯೆ 2023, ದಿನಾಂಕ:03.04.2024 ರಂತೆ, ಆರು ಎಕರೆ ಪ್ರದೇಶವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ., Bengaluru Water Supply and Sewerage Board

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ construction of Ground Level Reservoir (GLR) under Cauvery Water Supply Scheme (CWSS) Stage-V along Eastern Route CP-12 ಕಾಮಗಾರಿಗಾಗಿ ಅರಣ್ಯ (ಸಂರಕ್ಷಣಾ) ಕಾಯ್ದೆ, 1980 ರನ್ವಯ ಬಿಡುಗಡೆ ಮಾಡಿದ್ದೇವೆ. ಅದನ್ನು ಹೇಗೆ ಬಿಡುಗಡೆ ಮಾಡಿದ್ದೇವೆಂದರೆ, linear project ಗೆ ಅವರು ಅರಣ್ಯ ಇಲಾಖೆಗೆ ಅರ್ಜಿ ಹಾಕುತ್ತಾರೆ. ಆ ಇಲಾಖೆಯು ಉಪಯೋಗಿ ಸಂಸ್ಥೆ ನಮಗೆ ದುಡ್ಡು ಕಟ್ಟುತ್ತದೆ. ದುಡ್ಡು ಕಟ್ಟಿ ಈ ಏನೊಂದು ಎಕರೆಯನ್ನು ನಾವು ಕೊಡುತ್ತೇವೆ. ಅದಕ್ಕೆ ಪರ್ಯಾಯವಾಗಿ ಜಮೀನು ಕೊಡುತ್ತಾರೆ. ಜಮೀನು ಕೊಟ್ಟ ಮೇಲೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ. ಕೇಂದ್ರ ಸರ್ಕಾರ ಸ್ಟೇಜ್-1 ಮತ್ತು 2 ಮಾಡಿದ ಮೇಲೆ ಆ ಉಪಯೋಗಿ ಸಂಸ್ಥೆಗೆ ಅವರಿಗೆ ಹಸ್ತಾಂತರವಾಗುತ್ತದೆ. ಆ ರೀತಿ ಅರಣ್ಯ ಜಮೀನು ಎಂದು ನಮಗೆ ಕೇಳಿದರಲ್ಲ, ಇದು ಅರಣ್ಯ ಜಮೀನು ಎಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅವರು ನಮಗೆ ಅರ್ಜಿ ಹಾಕುತ್ತಾರೆ. ಅವರು ಅರ್ಜಿ ಹಾಕಿದ ಮೇಲೆ ಅರಣ್ಯ ಇಲಾಖೆಯವರು ಕೊಡುತ್ತಾರೆ.

ದಿನಾಂಕ;15.05.2014ರ ಸರ್ಕಾರದ ಆದೇಶ ಸಂಖ್ಯೆ ಪ್ರಕಾರ ಕಂದಾಯ ದಾಖಲಾತಿಗಳಲ್ಲಿ "ಅರಣ್ಯ" ಎಂದು ನಮೂದಿಸಿರುವ ಪ್ರದೇಶಗಳು ಅರಣ್ಯವಾಗಿರುತ್ತವೆ, Recorded Forest ವರ್ಗಕ್ಕೆ ಒಳಪಟ್ಟಿರುತ್ತದೆ. ಮುಂದುವರೆದು W.P. No. 4283/2013 ರಲ್ಲಿ KIADB ರವರ ವಶಪಡಿಸಿಕೊಂಡಿರುವ 449 ಎಕರೆ 28 ಗುಂಟೆ ಪ್ರದೇಶವನ್ನು ಸದರಿಯವರ ಪರವಾಗಿ ತೀರ್ಪನ್ನು ನೀಡಿದ್ದು, ಉಳಿದ ಪ್ರದೇಶಗಳ ದಾಖಲಾತಿಗಳು ಯಾರೊಂದಿಗೂ ಇಲ್ಲದಿರುವುದರಿಂದ ಇಂದಿಗೂ ಅದು Recorded Forest ವರ್ಗಕ್ಕೆ ಸೇರಿರುತ್ತದೆ.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು WRIT PETITION (c) NO.202 OF 1995 T.N. GODAVARMAN THIRUMALPAD VERSUS UNION OF INDIA & ORS. WITH WRIT PETITION (C) NO.301 OF 2008 ರಲ್ಲಿ ಮೊನ್ನೆ ತಾನೇ ಹೊಸ Chief Justice ಅವರು ಬಂದ ಮೇಲೆ ದಿನಾಂಕ 15.05.2025 ರಲ್ಲಿ ಅವರು ಒಂದು ಆದೇಶವನ್ನು ಕೊಟ್ಟಿದ್ದಾರೆ. ಆ ಅದೇಶದಲ್ಲಿ ಏನು ಹೇಳಿದೆ ಎಂದರೆ;

> *'It would thus be clear that after the 1980 FC Act was brought into effect, no State Government or any other authority, unless there is prior approval by the Central Government, could have directed any Reserved Forest or any portions thereof to cease to be under the status of "reserve" or any forest land or any portion thereof to be used for any non-forest purposes. Nor could it have*

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

assigned any forest land or any portion thereof, by way of lease or otherwise to any portion thereof, by way of lease or otherwise to any private person or to any authority, corporation, agency or any other organization."

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)

The said order further reads thus;

"It has been noticed that a vast stretch of the land which is notified as "Forest Land" is still in possession of the Revenue Department. Such a situation creates many complexities as is evident in the present matter. The Revenue Department, despite resistance from the Forest Department, allotted the land to private individuals/institutions for non-forestry purposes. This, in turn, reduced the vital green cover. We, therefore, find that it is necessary that a direction need to be issued to all the State Government and the Union Territories to hand over the possession of the land which are recorded as "Forest Land" and which are in possession of the Revenue Department in the Forest Department."

ರೆವಿನ್ಯೂ ಇಲಾಖೆಯಲ್ಲಿ ಇದ್ದರೂ ಸಹಿತ ಒಂದು ಬಾರಿ ಅರಣ್ಯ ಎಂದು ಹೇಳಿ ಇಲ್ಲಿಗೆ ಬಂತು ಎಂದರೆ, ರೆವಿನ್ಯೂ ಇಲಾಖೆಯವರು ಯಾರಿಗೂ ಈ ಜಮೀನು ಹಸ್ತಾಂತರ ಮಾಡುವ ಆಗಿಲ್ಲ ಅಥವಾ ಅರಣ್ಯತೇರ ಚಟುವಟಿಕೆಗಳಿಗೆ ಉಪಯೋಗ ಮಾಡುವಂತಿಲ್ಲ. ಅಂತಹ ಜಮೀನು ವಾಪಸ್ಸು ಅರಣ್ಯ ಇಲಾಖೆಯವರಿಗೆ ಕೊಡಬೇಕೆಂದು ಹೇಳಿ ಮೊನ್ನೆ ತಾನೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವಾಗಿದೆ.

ದಿನ್ನೂರು ಕಾಲೋನಿ ಮತ್ತು ಗೋಪಾಲಕೃಷ್ಣ ಬಡಾವಣೆ ಗ್ರಾಮಸ್ಥರು ಗುಲಜಾರ್ ಖಾನ್ ಬಡಾವಣೆಗಳಲ್ಲಿ ಇದೇ ರೀತಿ ಲ್ಯಾಂಡ್ ಹಿಂದೆಯೂ ಕೂಡ encroachments ಆಗಿತ್ತು. ಹಿಂದೆ ಯಾರೂ ಕೂಡ ಗಮನಹರಿಸಿಲ್ಲ. ಇವತ್ತು ಆ ಸಂದರ್ಭದಲ್ಲಿ ತಾವು ಹೇಳಿದ ಹಾಗೇ ಅಲ್ಲಿ ಸುಮಾರು ೫,೦೦೦ ಮನೆಗಳು ಬಂದಿವೆ. ಅಲ್ಲಿ ಯಾರೋ ಬಂದಿದ್ದಾರೆ. ಅದೆಲ್ಲವೂ real estate ಆಗಿದೆ. ಅದು real estate ಆಗಿ, ಅಲ್ಲಿ ಹೋಗಿ ನೋಡಿದಾಗ ಈಗ North Indians ಇದ್ದಾರೆ ಮತ್ತು ಬೇರೆ ಬೇರೆ ಜನರು ಕೂಡ ಇದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನ್ನೂರು ಕಾಲೋನಿ ಮತ್ತು ಗೋಪಾಲಕೃಷ್ಣ ಬಡಾವಣೆ ಗ್ರಾಮಸ್ಥರು ಹಾಗೂ ಪಟ್ಟಬದ್ಧ ಹಿತಾಸಕ್ತಿಗಳು ಹಾಗೂ ಅದೇ ಜನರಿಗೆ ಜನರಲ್ ಪವರ್ ಆಫ್ ಆಟಾರ್ನಿಯನ್ನು ಅನಧಿಕೃತವಾಗಿ ಕಾನೂನುಬಾಹಿರವಾಗಿ ಕಾಡುಗೋಡಿ ಪ್ಲಾಂಟೇಶನ್ ಸರ್ವೆ ನಂ.1ರ ಅರಣ್ಯ ಪ್ರದೇಶವನ್ನು ದಿನೇ ದಿನೇ ಮಾರಾಟ ಮಾಡುತ್ತಿದ್ದು, ಈ ಪ್ರದೇಶವನ್ನು ಯಾವುದೇ ಕೃಷಿ ಚಟುವಟಿಕೆಗಳಾಗಲೀ ಅಥವಾ ಜೀವನಾಧೀರತ ಚಟುವಟಿಕೆಗಳಾಗಲೀ ನಡೆಯುತ್ತಿರಲಿಲ್ಲ. ದಿನೇ ದಿನೇ ಅನಧಿಕೃತ ಚಟುವಟಿಕೆಗಳಾದ ವಾಹನ ನಿಲುಗಡೆ ಹಾಗೂ ಅನಧಿಕೃತ ಕಟ್ಟಡಗಳು ತಲೆ ಎತ್ತುತ್ತಿದ್ದು ಹಾಗೂ ತ್ಯಾಜ್ಯ ವಿಲೇವಾರಿ ಸ್ಥಳವಾಗಿದ್ದು, ಅಂಗಡಿ ಮುಗ್ಗಟ್ಟುಗಳು ಅನಧಿಕೃತವಾಗಿ ತಲೆ ಎತ್ತುತ್ತಿದ್ದು, ಅಕ್ರಮ ಭೂ-ವ್ಯವಹಾರಗಳು ನಡೆಯುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಅದರ ಬಗ್ಗೆ ತಾವು ಹೇಳಿದ್ದೀರಿ. ಈ ಎಲ್ಲವೂ ಕಾನೂನಾತ್ಮಕ ಕ್ರಮಗಳಾಗದೇ ಕರ್ನಾಟಕ ಅರಣ್ಯ ಕಾಯ್ದೆ 1963 Van (Sanrakshan Evam Samvardhan) Adhiniyam, 1980 & Van (Sanrakshan Evam Samvardhan) Rules 2023 ಉಲ್ಲಂಘನೆಯಾಗಿರುತ್ತದೆ.

ಗೌರವಾನ್ವಿತ ಪ್ರತಿಪಕ್ಷದ ನಾಯಕರಿಗೆ ಯಾರೋ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ.ಇನ್ನೂ ಕೆಲವು ದಿನಗಳಲ್ಲಿ ಪೂರ್ಣ ಪ್ರಮಾಣದ 120 ಎಕರೆಯಲ್ಲಿ ಯಾವುದೂ ಮನೆಗಳನ್ನು ತೆರವು ಮಾಡಿಲ್ಲ. ಯಾವುದೂ ಮನೆಗಳನ್ನು ಹೊಡೆದಿಲ್ಲ. ದಿನ್ನೂರು ಇರಬಹುದು ಅಥವಾ ಬೇರೆ ಕಡೆ ಇರಬಹುದು. Open land ಏನಿತ್ತು, ಆ ಲ್ಯಾಂಡ್ ಮೇಲೆ ಇವತ್ತು ಯಾರ ಲ್ಯಾಂಡ್ ಮಾಫಿಯಾ ಇತ್ತು. ಅವರ ಕಣ್ಣುಗಳು ಅದರ ಮೇಲೆ ಬಿದ್ದು, ಇವತ್ತು ಯಾವ ಮಟ್ಟಿಗೆ ಹೋಗಿತ್ತು ಎಂದರೆ, ಅಲ್ಲಿರುವ ಪೋಲೀಸ್ ಸ್ಟೇಷನ್‌ನಲ್ಲಿ ಪ್ರತಿ ದಿನ ಇದು ನನ್ನ ಲ್ಯಾಂಡ್ ಇದೆ, ಮತ್ತೊಬ್ಬ ಲ್ಯಾಂಡ್ ಇದೆ ಎಂದು power of attorney ತೆಗೆದುಕೊಂಡು ಕೇಸ್ ಹಾಕುತ್ತಿದ್ದರು. Actual land, ಅದು ಅರಣ್ಯ ಇಲಾಖೆಯದ್ದಾಗಿದೆ. ಈ ರೀತಿಯಾಗಿ ಏನಾಗುತ್ತಿತ್ತು ನಮಗೆ ಈ ಬಗ್ಗೆ ದಾಖಲೆ ಇದೆ. ಈ ಬಗ್ಗೆ ಪೋಲೀಸ್ ಇಲಾಖೆಯವರು ನಮ್ಮ ಇಲಾಖೆಗೆ ಒಂದು ಪತ್ರ ಬರೆಯುತ್ತಾರೆ. ಅರಣ್ಯ ಇಲಾಖೆಗೆ ಲಿಖಿತವಾಗಿ ಪತ್ರವನ್ನು ವಿವರಿಸುತ್ತಾರೆ.

(ಮುಂದು)

(658) 12.08.2025 5.20 ಟಿಸಿಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಈಶ್ವರ ಬಿ. ಖಂಡ್ರೆ (ಮುಂದು)

ವಿವರಿಸಿ ಏನು ಹೇಳುತ್ತಾರೆಂದರೆ, ಹೀಗಾಗಿ, ಈ ಅರಣ್ಯ ಪ್ರದೇಶವನ್ನು ಸಂರಕ್ಷಿಸುವ ಸಲುವಾಗಿ ನಿರ್ದಿಷ್ಟ ಕ್ರಮವನ್ನು ಕೈಗೊಳ್ಳುವ ಅಗತ್ಯತೆ ತೀವ್ರವಾಗಿದ್ದು ಕ್ರಮವಹಿಸುವುದು. ಇವತ್ತು ನೀವು ಮಾಡಿ ಎಂದು ಹೇಳಿದ್ದಾರೆ. ಈ ಬಗ್ಗೆ ಕಂದಾಯ ಇಲಾಖೆ, ಸ್ಥಳೀಯ ಸರ್ಕಾರೇತರ ಸಂಘಗಳು ಅರಣ್ಯ ಇಲಾಖೆಗೆ ಕ್ರಮವಹಿಸಲು ಒತ್ತಡ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇರಿದ ನಂತರ ಈ ಕುರಿತು ಕ್ರಮ ಜರುಗಿಸುವಂತೆ ನನ್ನ ಅಧ್ಯಕ್ಷತೆಯಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಒಂದು ಸಭೆ ಮಾಡಿ, ಸೂಚನೆ ಕೊಟ್ಟು 120 ಎಕರೆ ತೆರೆದ ಪ್ರದೇಶ ಏನಿತ್ತು, ಅದನ್ನು ಗುರುತಿಸಿ ಈ ಪ್ರದೇಶದಲ್ಲಿ ಯಾವುದೇ ಕಟ್ಟಡಗಳಾಗಲೀ, ವಾಸದ ಮನೆಗಳಾಗಲೀ ಅಥವಾ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗದೇ ಸದರಿ ಪ್ರದೇಶವನ್ನು ದಿನಾಂಕ 23.06.2025ರಂದು ಇಲಾಖಾ ವಶಕ್ಕೆ ಪಡೆದು ಅರಣ್ಯೀಕರಣಕ್ಕಾಗಿ ಸದರಿ ಅರಣ್ಯ ಪ್ರದೇಶದಲ್ಲಿ ಗಿಡ ನೆಡುವ ಕಾರ್ಯವನ್ನು ಪೂರ್ಣಗೊಳಿಸಿದ್ದು, ಸದರಿ ಪ್ರದೇಶವು ಒತ್ತುವರಿಯಾಗದಂತೆ ಸಂರಕ್ಷಿಸಲು ತಾತ್ಕಾಲಿಕ ತಡೆಗೋಡೆ ಹಾಗೂ ತಂತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ. ಇದರಿಂದ ಯಾವುದೇ ರೀತಿಯ ಸ್ಥಳೀಯ ನಿವಾಸಿಗಳನ್ನು ಒಕ್ಕಲೆಬ್ಬಿಸುವ ಪ್ರಶ್ನೆಯೇ ಬರುವುದಿಲ್ಲ. ಬೆಂಗಳೂರಿನಲ್ಲಿ ಭೂಮಿಗೆ ಬಂಗಾರದಂತಹ ಬೆಲೆ ಇದೆ. 1 ಎಕರೆಗೆ 50 ಕೋಟಿ ರೂಪಾಯಿ ಬೆಲೆ ಇದೆ. ಒಟ್ಟು 120 ಎಕರೆಗೆ ಸುಮಾರು 6,000 ಕೋಟಿ ರೂಪಾಯಿಗಳ ಮೌಲ್ಯದ ಭೂಮಿ ಇದೆ. ನಾವು ಅರಣ್ಯ ಇಲಾಖೆಯ original notification ನೋಡಿದಾಗ, ಇದು ಅರಣ್ಯ ಇಲಾಖೆಯ ಜಮೀನು ಇದೆ. ಅರಣ್ಯ ಇಲಾಖೆಯ ಜಮೀನನ್ನು ಮರು ವಶಪಡಿಸಿಕೊಳ್ಳುವಂಥ ಕೆಲಸ, ಪ್ರಕೃತಿ ಪರಿಸರ ಸಂರಕ್ಷಣೆ ಮಾಡುವಂಥದ್ದು, ಅರಣ್ಯ ಸಂರಕ್ಷಣೆ ಮಾಡುವಂಥದ್ದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಯಾವುದೇ ಸಮುದಾಯಕ್ಕಾಗಲೀ, ಯಾವುದೇ ಬಡವರಿಗಾಗಲೀ, ರೈತರಿಗಾಗಲೀ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಲೀ ಯಾರಿಗೂ ಅನ್ಯಾಯ ಮಾಡುವಂಥದ್ದಾಗಲೀ ಅಥವಾ ಯಾರನ್ನೂ ಒಕ್ಕಲೆಬ್ಬಿಸುವುದಾಗಲೀ ಮಾಡುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ ಎಂದು ನಾನು ಬಹಳ ಸ್ಪಷ್ಟವಾಗಿ ಗೌರವಾನ್ವಿತ ಸದನಕ್ಕೆ ಮಾಹಿತಿ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಅಲ್ಲಿ ಮನೆಗಳು ಇಲ್ಲವೆಂದು ಹೇಳಿರತಕ್ಕಂಥದ್ದು ತಪ್ಪು ಮಾಹಿತಿ. ನನಗೆ ಅದು ಹೊಸ ಏರಿಯಾ ಅಲ್ಲ. ನಾವೆಲ್ಲಾ ಅಲ್ಲಿಯೇ ಬೆಳೆದು ಬಂದಿರತಕ್ಕಂಥ ಜಾಗಗಳು. ಅಲ್ಲಿ ಮನೆಗಳು ಇವೆ, ಅವುಗಳನ್ನೆಲ್ಲಾ ಧ್ವಂಸ ಮಾಡಲಾಗಿದೆ. ಮಾನ್ಯ ಸಚಿವರಿಗೆ ಅನುಮಾನಗಳಿದ್ದರೆ ಸದನದಿಂದ ಒಂದು ಸಮಿತಿ ರಚನೆ ಮಾಡಿ ಕಳುಹಿಸಿ. ಅವರು ನೋಡಿಕೊಂಡು ಬಂದು ನಿಮಗೆ report ಕೊಡಲಿ, ನನಗೇನೂ ಅಭ್ಯಂತರವಿಲ್ಲ. ನೀವು ಏಕೆ ತೆಗೆದುಕೊಂಡಿರಿ ಎಂದು ನಾನು ಕೇಳುವುದಿಲ್ಲ. ಅಲ್ಲಿ ಒಟ್ಟು 711 ಎಕರೆ ಜಾಗ ಇದೆಯೆಂದು ನೀವೇ ಹೇಳಿದ್ದೀರಿ. 711 ಎಕರೆಯಲ್ಲಿ ನಿಮ್ಮ ಸ್ವಾಧೀನದಲ್ಲಿ ಎಷ್ಟು ಎಕರೆ ಜಾಗ ಇದೆ ಹೇಳಿ ನೋಡೋಣ? ಇದು ನನ್ನ ಪ್ರಶ್ನೆ. ಅಂದರೆ ಆ ಬಡ ರೈತರದ್ದು ಮಾತ್ರ ಬಂತೇ? ಪರಭಾರೆ ಆಗಿರುವುದನ್ನೆಲ್ಲಾ ನೀವು ಬಿಡಬೇಡಿ. ಮಾನ್ಯ ಸಚಿವರು ಅವರ ಹತ್ತಿರ ಯಾವ records ಇಲ್ಲವೆಂದು ಹೇಳಿದರು. ನೋಡಿ, ಅವರ ಹತ್ತಿರ ಇರುವ ಒಂದು records ತೋರಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಛಲವಾದಿ ಟಿ.ನಾರಾಯಣ ಸ್ವಾಮಿಯವರು, ಪಹಣಿ, ಪಟ್ಟಾ ರಸೀದಿ ಮತ್ತು tax ಕಟ್ಟಿರುವ ರಸೀದಿಯನ್ನು ಸದನಕ್ಕೆ ತೋರಿಸಿದರು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರ ಹೆಸರಿನಲ್ಲಿ ಪಹಣಿ ಇದೆ, ಪಟ್ಟಾ ರಸೀದಿ ಇದೆ, ಅವರ ಹೆಸರಿನಲ್ಲಿ tax ಕಟ್ಟಿರುವುದು ಇದೆ, ಎಲ್ಲಾ ರೆವಿನ್ಯೂ ದಾಖಲೆಗಳು ಅವರ ಹತ್ತಿರ ಇವೆ. ಆದರೆ 2005-06 ರಿಂದ ಈಚೆಗೆ ಈ ಪ್ರಶ್ನೆ ಬಂದಿರುವುದು. ಅದಕ್ಕಿಂತ ಮುಂಚೆ ಇದು ರೈತರ ಜಮೀನು. 1985ರಲ್ಲಿ ಕೆ.ಐ.ಎ.ಡಿ.ಬಿಗೆ notification ಆಗಿದೆ. notification ಆದಾಗ ಅರಣ್ಯ ಇಲಾಖೆ ಏನು ನಿದ್ದೆ ಮಾಡುತ್ತಿತ್ತೇ? ಕೆ.ಐ.ಎ.ಡಿ.ಬಿ ಒಂದು ಸರ್ಕಾರಿ ಸಂಸ್ಥೆ ಅಲ್ಲವೇ? ಅವರು notification ಮಾಡಿ ರೈತರಿಂದ ಜಮೀನು ತೆಗೆದುಕೊಂಡಿದ್ದಾರೆ. ಕೆ.ಐ.ಎ.ಡಿ.ಬಿ ಯವರು ಆ ರೈತರಿಗೆ ಕೂಡ compensation ಕೊಟ್ಟಿದ್ದಾರೆ. ಈಗ ನೀವು ಕೋರ್ಟಿನ ಆದೇಶದ ಪ್ರಕಾರ ಹೇಳುತ್ತೀರಿ. ಕೋರ್ಟಿನ ಆದೇಶದ ಪ್ರಕಾರ ಎಲ್ಲಾ Chief Secretaries ಗಳಿಗೆ ಆದೇಶ ಇದೆ. ನೀವು ಒಂದು ಸಮಿತಿ ರಚನೆ ಮಾಡಿ. ನೀವು ಅದನ್ನು ಪರಿಶೀಲನೆ ಮಾಡಿ ನಂತರ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದೆ. ಆದರೆ ಅರಣ್ಯ ಇಲಾಖೆ ಅಲ್ಲಿಗೆ ನೇರವಾಗಿ ಏಕೆ ಹೋಗುತ್ತದೆ? ನಿಮಗೆ ಏನಾದರೂ Chief Secretary ಯವರ ಆದೇಶ ಇದೆಯೇ? ಕೋರ್ಟಿನ ಆದೇಶ ಅಲ್ಲಿ ಬಂದಿತ್ತು. ಆ ಆದೇಶದ ಪ್ರತಿ ಇನ್ನೂ ಇಲ್ಲಿಗೆ ಬಂದಿರಲಿಲ್ಲ. ಈ ಆದೇಶದ ಪ್ರತಿಯನ್ನು ಆಮೇಲೆ ತರಿಸಿಕೊಂಡಿದ್ದೇನೆ. ನನ್ನ ಹತ್ತಿರ ಆದೇಶ ಇದೆ. ಈ ಆದೇಶ ಬಂದು ಸುಮಾರು 2 ತಿಂಗಳಾಯಿತು. ಇಲಾಖೆಯವರೇ ಹೋಗಿಬಿಟ್ಟರು. ಆದರೆ ಕೋರ್ಟ್‌ನಿಂದ Chief Secretary ಯವರಿಗೆ ಆದೇಶ ಇದೆ. ಅವರು special teams ಮಾಡಿ, ಅದನ್ನು ಪರಿಶೀಲನೆ ಮಾಡಬೇಕು. ಆ task force ನವರು ಹೋಗಿ ಅದನ್ನು ಪರಿಶೀಲನೆ ಮಾಡಿ ಹೇಳಿದ ನಂತರ ಅರಣ್ಯ ಇಲಾಖೆಯವರು ಹೋಗಬೇಕು. ಏಕಾಏಕಿ ನೀವೇ ನೇರವಾಗಿ ಏಕೆ ಹೋಗಿದ್ದೀರಿ? ನಿಮಗೆ ಏನಾದರೂ Chief Secretary ಯವರು ಆದೇಶ ಕೊಟ್ಟಿದ್ದಾರೆಯೇ? ಅವರಿಗೆ ಆದೇಶ ಇರುವುದು ಅಥವಾ ಅವರು ಏನಾದರೂ ನಿಮಗೆ ಆದೇಶ ಮಾಡಿದ್ದರೆ ಅದರ ಪ್ರತಿ ಕೊಡಿ. ಎರಡನೆಯದಾಗಿ, ನಾನು ಹೇಳುವುದೇನೆಂದರೆ, ನಿಮಗೆ ಏನಾದರೂ in the public interest ನೀವು ಅದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂಬ ಪರಿಸ್ಥಿತಿ ಇದ್ದರೆ, ಅಂಥದ್ದು ಈಗ ಅಲ್ಲಿ ಕೆ.ಐ.ಎ.ಡಿ.ಬಿ. ಫ್ಯಾಕ್ಟರಿಗಳಿವೆ ಅದಕ್ಕೆ ಬರುತ್ತದೆ. ನೀವು ಅದನ್ನು demolish ಮಾಡುವುದಕ್ಕೆ ಆಗುವುದಿಲ್ಲ. ಅದು ನನಗೆ ಗೊತ್ತು. ಪಕ್ಕದಲ್ಲಿ ಇನ್ನೂ ಬೇರೆ ಬೇರೆ private factories ಇವೆ. ಕೆ.ಐ.ಎ.ಡಿ.ಬಿ. ಗೆ ಕೊಡದೇ ಇರತಕ್ಕಂಥ ಹಲವಾರು ದೊಡ್ಡದೊಡ್ಡ factories ಬಂದಿವೆ, ಕೆಲವು ಆಫೀಸ್‌ಗಳು ಬಂದಿವೆ. ಅವುಗಳನ್ನು ಯಾವುದನ್ನೂ ನೀವು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಏಕೆಂದರೆ ಸುಪ್ರೀಂ ಕೋರ್ಟ್‌ನ ಆದೇಶಗಳಾಗಿವೆ. ಕೆ.ಐ.ಎ.ಡಿ.ಬಿ.ಯವರು notification through ತೆಗೆದುಕೊಂಡಿದ್ದಾರೆ. ಅದು illegal ಏನೂ ಅಲ್ಲ. ಇನ್ನೂ ಕೆಲವರು ಆ ರೈತರ ಹತ್ತಿರವೇ ಭೂಮಿ ಖರೀದಿ ಮಾಡಿದ್ದಾರೆ.

ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):- ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ. ಈಗ ಮಾನ್ಯ ಅರಣ್ಯ ಸಚಿವರು ಕೋರ್ಟ್ judgment ಎಲ್ಲಾ ಕೋಟ್ ಮಾಡಿ answer ಮಾಡಿದರು. ಕೆ.ಐ.ಎ.ಡಿ.ಬಿ. ವಿಶೇಷ ಅಧಿಸೂಚನೆ ಹೊರಡಿಸಿದೆ ಎಂದು ಹೇಳಿದಿರಿ. ಕೆ.ಐ.ಎ.ಡಿ.ಬಿ. ವಿಶೇಷ ಅಧಿಸೂಚನೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಡಿಸಿದ ಕಾರಣಕ್ಕೆ ಅರಣ್ಯ nature ಕಳೆದುಕೊಳ್ಳುವಂಥದ್ದಕ್ಕೆ ಈ ಮುಂಚೆ ಮೈಸೂರು ಅರಸರ ಕಾಲದಲ್ಲಿ ಒಂದು ಗೆಜೆಟ್ ನೋಟಿಫಿಕೇಷನ್ ಆಗಿತ್ತು. ಆ ಗೆಜೆಟ್ ನೋಟಿಫಿಕೇಷನ್ ರದ್ದಾಗುತ್ತದೆಯೇ? ಗೆಜೆಟ್ ನೋಟಿಫಿಕೇಷನ್ ರದ್ದಾಗದೆಯೇ ನೀವು ಹೇಗೆ ಅರಣ್ಯ ಇಲಾಖೆಯ ಜಾಗವನ್ನು ಇನ್ನೊಂದು ಇಲಾಖೆಗೆ ಕೊಡುವುದಕ್ಕೆ ಬರುತ್ತದೆ? ಆ ಮೂಲ ಗೆಜೆಟ್ ನೋಟಿಫಿಕೇಷನ್ ರದ್ದಾಗಿದೆಯೇ?

ಮಾನ್ಯ ಸಭಾಪತಿಯವರೇ, ಇಲ್ಲಿ ನನಗೆ ಅನಿಸುವುದೇನೆಂದರೆ, ಬಲಾಢ್ಯ ವ್ಯಕ್ತಿಗಳು ದೊಡ್ಡ ದೊಡ್ಡ ಲಾಯರ್‌ಗಳನ್ನು ಇಟ್ಟು ಕೋರ್ಟ್‌ಗೆ ಹೋಗಿ ಅವರ ಪರವಾಗಿ ಆದೇಶ ಮಾಡಿಸಿಕೊಂಡರು. ಆದರೆ ಬಡವರು ಏನು ಮಾಡಬೇಕು? ಈಗ ಅವರಿಗೆ fees ಕಟ್ಟುವ ತಾಕತ್ತು ಕೂಡ ಇಲ್ಲ. ಇದರೊಳಗೆ ನೀವು ಮಾನವೀಯ ಹಿನ್ನೆಲೆಯಲ್ಲಿ ನೋಡಬೇಕು. ನೀವು ಒಂದು ಕಡೆ ಕೆ.ಐ.ಎ.ಡಿ.ಬಿ. ವಿಶೇಷ ಅಧಿಸೂಚನೆ ಇದೆ ಎಂದು ಹೇಳಿದ್ದೀರಿ. ಏನಿದು ಈ ವಿಶೇಷ ಅಧಿಸೂಚನೆ? ಈ ಮುಂಚೆ ಗೆಜೆಟ್ ನೋಟಿಫಿಕೇಷನ್ ಆಗಿರುವುದು ರದ್ದಾಗಿದೆಯೆ? ಅದು ರದ್ದಾಗದೆಯೇ ನೀವು ಹೇಗೆ ಕೊಡುವುದಕ್ಕೆ ಬರುತ್ತದೆ. ಮಾನ್ಯ ಸಚಿವರು ದಯಮಾಡಿ ಇದರ ಬಗ್ಗೆ ಬೆಳಕು ಚೆಲ್ಲಬೇಕು.

ಶ್ರೀ ಈಶ್ವರ ಬಿ.ಖಂಡ್ರೆ, (ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ):- ಮಾನ್ಯ ಸಭಾಪತಿಯವರೇ, ಸರ್ವೋಚ್ಚ ನ್ಯಾಯಲಯದಲ್ಲಿ ಟಿ.ಎನ್.ಗೋಧಾವರ್ಮನ್ ತಿರ್ಮಲ್ಪಾಡ್ ಕೇಸ್‌ನಲ್ಲಿ 'Once a forest, always a forest' ಎಂದು ಹೇಳಲಾಗಿದೆ. ಗೆಜೆಟ್ ನೋಟಿಫಿಕೇಷನ್ ಸ್ವಾತಂತ್ರ್ಯ ಪೂರ್ವದಲ್ಲಿ 1896ರಲ್ಲಿ 1st Act ಅನ್ನು, 1901ರಲ್ಲಿ 'ಅರಣ್ಯ' ಎಂದು ಗೆಜೆಟ್ ನೋಟಿಫಿಕೇಷನ್ ಅಧಿಸೂಚನೆ ಆಗುತ್ತದೆ. ಅದಾದನಂತರ ಇರಬಹುದು, ಅರಣ್ಯ ಇಲಾಖೆ ಹಿಂದೆ ಬರುವಂತಹ ಸಂದರ್ಭದಲ್ಲಿ ಇವರು possession ಗೆ ತೆಗೆದುಕೊಂಡಿಲ್ಲ. ಅದು ಏನೇನು ಆಯಿತೋ ಗೊತ್ತಿಲ್ಲ. ಆ ಸಂದರ್ಭದಲ್ಲಿ ಕೆಲವರು ಒತ್ತುವರಿ ಮಾಡಿದ್ದಾರೆ. ಬೆಂಗಳೂರಿನಲ್ಲಿ ಹಲವಾರು ಎಕರೆ ಭೂಮಿ ಮತ್ತು ಇಡೀ ರಾಜ್ಯದಲ್ಲಿ ಎರಡೂವರೆ ಲಕ್ಷ ಎಕರೆ ಭೂಮಿ ಒತ್ತುವರಿಯಾಗಿದೆ. ಈ ಒತ್ತುವರಿ ತೆರವು ಕಾರ್ಯ ಕೂಡ ನಡೆಯುತ್ತಿದೆ. ಕೆಲವು ಕಡೆ third-party rights create ಆಗಿದೆ. Buildings ಬಂದಿದೆ ಮತ್ತೊಂದು ಬಂದಿದೆ ಮತ್ತು industries ಎಲ್ಲಾ ಬಂದಿದೆ. ಇದು ನಿರಂತರವಾಗಿ ನಡೆಯುತ್ತಿರತಕ್ಕಂಥ ಒಂದು ಪ್ರಕ್ರಿಯೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದನಂತರ zero tolerance towards forest encroachments. ನಾವು ಯಾವುದೇ encroachment ಮಾಡಿದ್ದರೆ, ಅದಕ್ಕೆ ಯಾವುದೇ ಒತ್ತಡ ಬಂದರೂ ನಾವು ಮಣಿಯುತ್ತಿಲ್ಲ. ಇವತ್ತಿನ ದಿವಸ ಈ ಭೂಮಿಯಲ್ಲಿ 69+120 ಈಗ ನಾವು ತೆಗೆದುಕೊಂಡಿದ್ದು plus 50. 69 ಎಕರೆಯಲ್ಲಿ ಇದೇ ಸರ್ವೇ ನಂಬರ್‌ನಲ್ಲಿ ಅರಣ್ಯ ಇಲಾಖೆಯ tree park ಇದೆ. ಒಂದು institution, ತರಬೇತಿ ಕೇಂದ್ರ ಇದೆ. ಇದರಲ್ಲೇ ನಾವು ಅರಣ್ಯ ತೆರವು forest clearance ಕಾನೂನು ಬದ್ಧವಾಗಿ ಮಾಡಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪರವಾನಿಗೆ ತೆಗೆದುಕೊಂಡು 50 ಎಕರೆ ಭೂಮಿಯನ್ನು ಬಿ.ಎಂ.ಆರ್.ಸಿ.ಎಲ್.ಗೆ ಕೊಡಲಾಗಿದೆ. ಇದಕ್ಕೆ ಮತ್ತೆ ಇನ್ನೂ 6 ಎಕರೆ ಭೂಮಿಯನ್ನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನು ಪ್ರಕಾರ ಕೊಡಲಾಗಿದೆ. ಈಗ ಮಾನ್ಯ ಸಿ.ಟಿ.ರವಿಯವರು ಏನು ಕೇಳುತ್ತಿದ್ದಾರೆಂದರೆ, ಕೆ.ಐ.ಎ.ಡಿ.ಬಿ ತೆಗೆದುಕೊಂಡಿದ್ದ ಭೂಮಿ ಇತ್ತು. ಆಗ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಕೊಡಲಾಗಿತ್ತು. ಅವರು ಅದನ್ನು ಇವತ್ತು liquidate ಮಾಡುತ್ತಾರೆ. Liquidate ಮಾಡಿದ ನಂತರ ಕೆ.ಐ.ಎ.ಡಿ.ಬಿಯವರು ಆಗ ಭೂಸ್ವಾಧೀನ ಮಾಡಿಕೊಳ್ಳಬೇಕೆಂದು ಭೂಸ್ವಾಧೀನ ಮಾಡಿಕೊಳ್ಳುತ್ತಾರೆ. ಅರಣ್ಯ ಇಲಾಖೆಯ ಗಮನಕ್ಕೆ ತಡವಾಗಿ ಬಂದ ನಂತರ, 2008ರಲ್ಲಿ ಅರಣ್ಯ ಇಲಾಖೆಯವರು ಕೆ.ಐ.ಎ.ಡಿ.ಬಿ.ಗೆ ಕೊಟ್ಟು distribution ಆಗಿ ಅಲ್ಲಿ ಕೈಗಾರಿಕೆಗಳು ಬಂದನಂತರ ಇದು ಅರಣ್ಯ ಇಲಾಖೆ ಜಮೀನಿದೆ. ಕೆ.ಐ.ಎ.ಡಿ.ಬಿ ಯವರು ಕಾನೂನು ಬಾಹಿರವಾಗಿ ಇದನ್ನು ಭೂಸ್ವಾಧೀನ ಮಾಡಿಕೊಂಡಿದ್ದಾರೆ. ಮತ್ತೆ 2008ರಲ್ಲಿ ಅದನ್ನು ಅರಣ್ಯ ಇಲಾಖೆಗೆ ಕೊಡಬೇಕೆಂದು ನಮ್ಮವರು ಹೈಕೋರ್ಟ್‌ಗೆ ಹಾಕುತ್ತಾರೆ. ಹೈಕೋರ್ಟ್‌ನವರು ಒಂದು ವಿಶೇಷ ಸರ್ಕಾರಿ ಆದೇಶ ಮಾಡುತ್ತಾರೆ. ಕಾಯ್ದೆ ಮಾಡಿ ತೆಗೆದುಕೊಳ್ಳಲಾಗಿದೆ ಎಂದು ಹೈಕೋರ್ಟ್ ಹಂತದಲ್ಲಿ ಅವರ ಪರವಾಗಿ ಆಗುತ್ತದೆ. ಹೈಕೋರ್ಟ್‌ನಲ್ಲಿ ಅವರ ಪರವಾಗಿ ಆದ ನಂತರ ಮತ್ತೆ ಸುಪ್ರೀಂ ಕೋರ್ಟ್‌ಗೆ ಹೋದಾಗ ಅವರ ಪರವಾಗಿ ಆದೇಶ ಆಗಲಿಲ್ಲ. ಈಗ ನಾವು ಅದಕ್ಕೆ ಒಂದು curative petition ಆಗಲಿ, ಮತ್ತೆ ಈಗಾಗಲೇ ಒಬ್ಬರು ಹೊಸ ಸಿ.ಜೆಯವರು ಬಂದು ಸಪ್ರೋಚ್ಚ ನ್ಯಾಯಾಲಯದಲ್ಲಿ ತೀರ್ಪನ್ನು ಕೊಟ್ಟಿದ್ದಾರೆ. ಆ ತೀರ್ಪಿನ ಪ್ರಕಾರ ಇವತ್ತಿನ ದಿವಸ ಅರಣ್ಯ ಎಂದು ಆದನಂತರ, ಸರ್ಕಾರಗಳು ಯಾವುದೇ ಇಲಾಖೆಗೆ ಜಮೀನು ಕೊಟ್ಟಿದ್ದರೂ ಕೂಡ ಪುನಃ ವಾಪಸ್ಸು ಅರಣ್ಯ ಇಲಾಖೆಗೆ ಕೊಡಬೇಕೆಂಬ ತೀರ್ಮಾನವನ್ನು ಕೊಟ್ಟಿದೆ.

(ಮುಂದು)

(659)12.8.2025/5.30/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಈಶ್ವರ್ ಖಂಡ್ರೆ (ಮುಂದು):-

ಆ ತೀರ್ಪಿನ ಬಗ್ಗೆ ನಾವು ಕಾನೂನು ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅರಣ್ಯ ಇಲಾಖೆಯ ಜಮೀನನ್ನು ನಾವು ಯಾರಿಗೂ ಗ್ರಾಂಟ್ ಕೊಡುವುದಕ್ಕೂ, ಮಾರಾಟ ಮಾಡುವುದಕ್ಕೂ, ಗಿಫ್ಟ್ ಕೊಡುವುದಕ್ಕೂ ಬರುವುದಿಲ್ಲ. ಯಾವುದೇ ರೀತಿಯಲ್ಲಿ ಅರಣ್ಯೇತರ ಚಟುವಟಿಕೆಗಳು forest clearance ಇಲ್ಲದೇ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಹಾಗಿದ್ದ ಮೇಲೆ 120 ಎಕರೆ ಮೀಸಲು ಅರಣ್ಯದಲ್ಲಿ ಹೈಟೆಕ್ ಕೈಗಾರಿಕಾ ಪ್ರದೇಶ ನಿರ್ಮಾಣಕ್ಕೆ ಪ್ರಸ್ತಾವ, ಅರಣ್ಯ ಕಾಯಿದೆ ಉಲ್ಲಂಘನೆ ಎಂದು ತಮ್ಮದೇ ಆದ ಹೇಳಿಕೆ ಇದೆ. ಇದು ಎಲ್ಲಿಂದ ಬಂತು? ಇದನ್ನು ತೀರ್ಮಾನ ತೆಗೆದುಕೊಂಡಿರುವುದು ಸರ್ಕಾರ. ಇದು ಮೊದಲಿನಿಂದಲೂ ಕೂಡ ರೈತರ ಕಬ್ಜದಲ್ಲಿತ್ತು. ಇದು ಇವರ ಗಮನಕ್ಕೆ ಬಂದಿರುವುದು ಅವರೇ ಹೇಳುವ ಪ್ರಕಾರ 2008ರಿಂದಾಚೆಗೆ. KIADB Acquisition Notification ಆಗಿರುವುದು 1985ರಲ್ಲಿ. ಆಗ ಅವರು ರೈತರಿಗೆ ಪರಿಹಾರವನ್ನೂ ಸಹ ಕೊಟ್ಟಿದ್ದಾರೆ. ಈಗ ಅಲ್ಲಿ ಕಾರ್ಖಾನೆಗಳು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿವೆ. Industrialisation ಆಗಿದೆ. ಈಗ ನೀವು ಒಂದು ಮಾತನ್ನು ಹೇಳಿದಿರಿ. "Once a forest, always a forest," ok I agree. ಅದನ್ನು ಎಲ್ಲರೂ ಅಗ್ರಿ ಮಾಡಬೇಕು. ನೀವು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ. Will you take back that KIADB and Railway land? ನೀವು ಯಾವ್ಯಾವುದಕ್ಕೆ ಕೊಟ್ಟಿದ್ದೀರಿ ಅವೆಲ್ಲವನ್ನೂ ವಾಪಸ್ ತೆಗೆದುಕೊಳ್ಳುವುದಕ್ಕಾಗುತ್ತದೆಯೇ?

ಶ್ರೀ ಎಂ.ಬಿ. ಪಾಟೀಲ (ಭಾರಿ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವರು):- ಮಾನ್ಯ ಸಭಾಪತಿಯವರೇ, ಅವರು ಕೆ.ಐ.ಎ.ಡಿ.ಬಿ. ಬಗ್ಗೆ ಹೇಳಿದರು. ಅದಕ್ಕೆ ಮಾನ್ಯ ಅರಣ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ನಾನು ಇಲ್ಲಿ intervene ಆಗುವುದಕ್ಕೆ ಬಯಸುವುದಿಲ್ಲ. ಈ ವಿಷಯ ಈಗಾಗಲೇ ಕಂದಾಯ ಇಲಾಖೆಯಿಂದ legal opinion ಗೆ ಹೋಗಿದೆ. ನನಗೆ ಸಂಪೂರ್ಣವಾದಂತಹ ಮಾಹಿತಿ ಇದೆ. ನಾನು ಅವರಿಗೂ ಸಹ share ಮಾಡಿದ್ದೇನೆ, ಅವರ ಜೊತೆಯೂ ನಾನು ಮಾತನಾಡುತ್ತೇನೆ. ಪ್ರಮುಖವಾಗಿ ಇದು ಕಂದಾಯ ಸಚಿವರಿಗೆ ಹೆಚ್ಚಿನ ಸಂಬಂಧ ಬರುತ್ತದೆ. ನಾವು ಮೂರು ಜನರು ಮಾತನಾಡಿ ಕೆ.ಐ.ಎ.ಡಿ.ಬಿ. ದು ಏನಿದೆ ಅವೆಲ್ಲವನ್ನೂ ಮಾಡುತ್ತೇವೆ. ಮಾನ್ಯ ರವಿಯವರು ಹೇಳಿದರು ಕೆ.ಐ.ಎ.ಡಿ.ಬಿ. Special Enactment ಮಾಡಿದ್ದಾರೆ ಎಂದು ಹೇಳಿದರು. ತದನಂತರ ಅದು ಹೈಕೋರ್ಟ್‌ಗೆ ಹೋಗಿದೆ. ಮುಂದೆ ಸುಪ್ರೀಂ ಕೋರ್ಟ್‌ಗೆ ಹೋಗಿದ್ದಾರೆ, ಸುಪ್ರೀಂ ಕೋರ್ಟ್‌ನಲ್ಲಿ ಅವರಂತೆ ತೀರ್ಮಾನವಾಗಿದೆ. ನಾನು factual position ಹೇಳುತ್ತೇನೆ. ಇವತ್ತಿನ ಸ್ಟೇಟಸ್ ಏನಿದೆ ಕಂದಾಯ ಸಚಿವರಿಂದ ಅಭಿಪ್ರಾಯಕ್ಕೆ ಇವತ್ತಿನ ದಿವಸ; ನಮ್ಮ ಬಜೆಟ್ ಘೋಷಣೆಯಲ್ಲಿ ಅವರು ಏನು quote ಮಾಡಿದರು, ಬಜೆಟ್‌ನಲ್ಲಿ Technology Innovation Park at Kadugodi ಎಂದು ಹೇಳಿದ್ದೇವೆ. *"We are into testing, design, innovation, research and development of semiconductors. Specifically, besides Technical Research Institute."* ಎಂದು ಹೇಳಿದ್ದೇವೆ. This was the Budgetary announcement of 2023-24. ಹಿಂದೆ ಎರಡು ಸಲ 1999 ಮತ್ತು 2002; ದಿನಾಂಕ 10.6.1999ರಲ್ಲಿ 123 ಎಕರೆಗೆ 3(1) Notification ಮಾಡಿದ್ದೇವೆ. I am just telling the factual position, and we don't have any differences between the Forest Minister, Revenue Minister and myself. We all will sit together and resolve it and more importantly a legal opinion has to be sought. Totally 204 acres has been notified for KIADB under section 3(1). ಘೋಷಣೆ ಮಾಡಿದ್ದೇವೆ. ಅದರಲ್ಲಿ 204ಎಕರೆಯಲ್ಲಿ ಸ್ಪಷ್ಟವಾಗಿರುವುದು 120 ಎಕರೆಗಳು. 120 ಎಕರೆಯನ್ನು ನಮಗೆ ಹಸ್ತಾಂತರ ಮಾಡಬೇಕೆಂದು ನಾವು Commerce and Industries Department and ಕೆ.ಐ.ಎ.ಡಿ.ಬಿ. ಇಂದ ಕಂದಾಯ ಇಲಾಖೆಯನ್ನು ಕೇಳಿಕೊಂಡಿದ್ದೇವೆ. ಕಂದಾಯ ಇಲಾಖೆಯವರು ಅರಣ್ಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯವರಿಗೂ ತಮ್ಮ ವಾದವನ್ನು ತಿಳಿಸಿದ್ದಾರೆ and he has sought a legal opinion. As far as KIADB stands ಇದು ಇಲ್ಲಿಗೆ ನಿಂತಿದೆ. I am telling the factual position.

ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ನಮಗಿರುವ ಗೊಂದಲವೇನೆಂದರೆ, ಇದರಲ್ಲಿ mother department ಯಾರು? ಕಂದಾಯ ಇಲಾಖೆಯವರೇ ಅಥವಾ ಅರಣ್ಯ ಇಲಾಖೆಯವರೇ? ಈ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾಗಿರುವ mother department ಯಾರು? Which department is supreme? ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಾದವರು ಯಾರು? Documents secure ಮಾಡುವಂತಹ ಅಥವಾ ಕಾಲಕಾಲಕ್ಕೆ ನೋಟಿಫಿಕೇಷನ್ ಹೊರಡಿಸಿದ mother department ಯಾವುದು? ಯಾರಾದರೂ ಇರಬೇಕಲ್ಲವೇ?

ಶ್ರೀ ಈಶ್ವರ್ ಖಂಡ್ರೆ (ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರು):- ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಪೂರ್ವದಲ್ಲಿ ಏನು ಅರಣ್ಯ ಎಂದು ಘೋಷಣೆಯಾಗಿದೆ, ಮೈಸೂರು ಮಹಾರಾಜರಿದ್ದಾಗ ಬ್ರಿಟಿಷರ ಕಾಲದಲ್ಲಿ ನೇರವಾಗಿ ಅರಣ್ಯ ಇಲಾಖೆಗೆ ಅರಣ್ಯ ಎಂದು ಮಾಡಿಕೊಟ್ಟಿದ್ದಾರೆ. ಅದು ಮೀಸಲು ಅರಣ್ಯ ಎಂದು ಆಗಿತ್ತು. ಸ್ವಾತಂತ್ರ್ಯಾನಂತರ ಏನು ಮೀಸಲು ಅರಣ್ಯ ಬ್ಲಾಕ್‌ಗಳಿದ್ದವು, classified ಮಾಡಿದ್ದು ಇತ್ತು ಕಿರು ಅರಣ್ಯ, ಬೇರೆ ಬೇರೆ ರೀತಿಯಲ್ಲಿ plantations, ಈ ರೀತಿಯಲ್ಲಿ ಇತ್ತು ಅದರಲ್ಲಿ ಸೆಕ್ಷನ್ 4 ಎಂದು ಮಾಡುತ್ತಾರೆ. ಸೆಕ್ಷನ್ 4 ಅಂದರೆ ಅರಣ್ಯದ ರೀತಿ ಎಲ್ಲೆಲ್ಲಿ ಮರಗಿಡಗಳು ಬೆಳೆಯುತ್ತವೆ, ಎಲ್ಲಿ ಸರ್ಕಾರಿ ಜಮೀನಿದೆ ಆ ಸರ್ಕಾರಿ ಜಮೀನುಗಳನ್ನೆಲ್ಲಾ ಸೇರಿಸಿ ಅದನ್ನು ಅರಣ್ಯ ಎಂದು ಮಾಡಬಹುದು ಎಂದು ಸೆಕ್ಷನ್ 4 ಮಾಡಿದ ನಂತರ ಕಂದಾಯ ಇಲಾಖೆಯ ಹೆಸರಿನಲ್ಲಿ ಜಮೀನಿದ್ದರೂ ಅದು ಅರಣ್ಯವೇ. ಅದಕ್ಕೆ ಒಂದು ಸಲ ಅರಣ್ಯ ಎಂದು ಅಧಿಸೂಚನೆಯಾದರೆ forever it will be forest. ಬರಬರುತ್ತಾ ಅರಣ್ಯ ಇಲಾಖೆಯು ಆರ್ಥಿಕ ಸಮಸ್ಯೆ ಇರಬಹುದು, ಆಯವ್ಯಯದಲ್ಲಿ ಅನುದಾನದ ಕೊರತೆ, ಇತ್ಯಾದಿ ಇರಬಹುದು ಕೆಲವೊಂದು ಜಮೀನುಗಳನ್ನು ಬೇರೆಯವರು ಒತ್ತುವರಿ ಮಾಡಿದ್ದು ಇದೆ. ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯವು ಒತ್ತುವರಿ ಮಾಡಿದ ಜಮೀನು ಅರಣ್ಯ ಎಂದಿದ್ದರೆ ಅದನ್ನು ಅರಣ್ಯ ಇಲಾಖೆಗೇ ಕೊಡಬೇಕೆಂದು ಕಾಲಕಾಲಕ್ಕೆ ತೀರ್ಪುಗಳನ್ನು ಕೊಟ್ಟಿವೆ. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯದ ಮುಖ್ಯನ್ಯಾಯಮೂರ್ತಿಗಳು ಬಹಳ ಮಹತ್ವವಾದಂತಹ ತೀರ್ಪನ್ನು ಕೊಟ್ಟಿದ್ದಾರೆ. ಅರಣ್ಯ ಎಂದು ನಮೂದಾಗಿರುವುದು ಯಾವುದಾದರೂ ಭೂಮಿ ಇದ್ದರೆ ಅದು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬಂದರೂ ಸಹ ಆ ಜಮೀನು ಬೇರೆ ಯಾವುದೇ ಕಾರ್ಪೊರೇಷನ್‌ಗಾಗಲೀ, ಬೇರೆ ಇಲಾಖೆಗಾಗಲೀ ಕೊಡುವಂತಹದ್ದಲ್ಲ, ಅದು ಅರಣ್ಯವೇ ಎಂದು ತಿಳಿಯಬೇಕು. ಅರಣ್ಯ ಕ್ಷೀಣಿಸುತ್ತಿದೆ, ಪ್ರಕೃತಿ, ಪರಿಸರ, ಅರಣ್ಯ ಸಂರಕ್ಷಣೆ ಮಾಡಬೇಕೆಂದು ತೀರ್ಮಾನ ಕೊಟ್ಟಿದ್ದಾರೆ. ಹಾಗೂ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಟಾಸ್ಕ್ ಫೋರ್ಸ್, ಎಸ್.ಐ.ಟಿ. ಮಾಡಬೇಕೆಂದು ಹೇಳಿದ್ದರಿಂದ ಇಡೀ ರಾಜ್ಯದಲ್ಲಿ ಅದನ್ನೂ ರಚನೆ ಮಾಡಿದ್ದೇವೆ. ಏನೇನು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕರಣಗಳಿವೆ ಅವೆಲ್ಲವನ್ನೂ ಪರಿಶೀಲನೆ ಮಾಡಿ ಸರ್ವೋಚ್ಚ ನ್ಯಾಯಾಲಯಕ್ಕೆ ವರದಿ ಕೊಟ್ಟು ಈ ಅರಣ್ಯಕ್ಕೆ ಜಮೀನು ಬರಬೇಕೆನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಹೀಗಾಗಿ ಮೊದಲಿನಿಂದಲೂ ಇದು ಅರಣ್ಯವಾಗಿದೆ ಎನ್ನುವುದು ನಮ್ಮ ಪ್ರತಿಪಾದನೆ. ಅದು ನಮ್ಮ ವ್ಯಾಪ್ತಿಯಲ್ಲಿ ಅಷ್ಟಿದೆ. ಬಾಕಿ ಅರಣ್ಯವನ್ನು ಮಾನ್ಯ ಸಚಿವರಾದ ಎಂ.ಬಿ. ಪಾಟೀಲರು ಈಗ ಈ ರೀತಿಯಲ್ಲಿ ಹಿಂದೆ ಪ್ರಸ್ತಾವನೆ ಬಂದಿತ್ತು ಎಂಬ ಮಾತನ್ನು ಹೇಳಿದ್ದಾರೆ. ಇರುವುದನ್ನು ತಮ್ಮ ಎದುರುಗಡೆ ಹೇಳುತ್ತಿದ್ದೇನೆ. ಅದಕ್ಕೆ ಇದು ಈಗಾಗಲೇ ನಮ್ಮ ವ್ಯಾಪ್ತಿಯಲ್ಲಿದೆ. ಮಾನ್ಯ ಪ್ರತಿಪಕ್ಷದ ನಾಯಕರು ಹಾಗಿದ್ದರೆ ಬಿ.ಎಂ.ಆರ್.ಸಿ.ಎಲ್.ಗೆ ಹೇಗೆ ಕೊಟ್ಟಿದ್ದೀರಿ ಎಂದು ಕೇಳಿದರು. ಬಿ.ಎಂ.ಆರ್.ಸಿ.ಎಲ್. ಗೆ ನಾವು ಅರಣ್ಯ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಕೊಟ್ಟಿದ್ದು, ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಪರವಾನಗಿ ತೆಗೆದುಕೊಂಡು 20, 30 ವರ್ಷ ಕೊಡುವುದಕ್ಕೆ ನಮಗೆ ಅವಕಾಶವಿದೆ. ಉದಾಹರಣೆಗೆ ಒಂದು ರಸ್ತೆ ಮಾಡಬೇಕಾಗಿದ್ದರೆ, ಈಗ ಮೈಸೂರು ಎಕ್ಸ್‌ಪ್ರೆಸ್ ಹೈವೇ ಮಾಡಿದ್ದೇವೆ. ಅದಕ್ಕೆ ಅರಣ್ಯದ ಜಮೀನನ್ನು ಕೊಟ್ಟಿದ್ದೇವೆ. ಅರಣ್ಯ ಜಮೀನಿಗೆ ಪರ್ಯಾಯವಾಗಿ ರಾಜ್ಯ ಸರ್ಕಾರ ಜಮೀನನ್ನು ಕೊಡುತ್ತದೆ. ಬೇರೆ ಯಾವುದಾದರೂ ಇದ್ದರೆ ನಮಗೆ ಜಮೀನು ಕೊಡುತ್ತಾರೆ. ಖಾಸಗಿಯಾಗಿ Compensatory Afforestation, ನಾವು ಎಷ್ಟು ಎಕರೆ ಕೊಡುತ್ತೇವೆ ಅಷ್ಟು ಎಕರೆ ಜಮೀನನ್ನು ಕೊಟ್ಟು ಅದರಲ್ಲಿ ಒಂದು ಹೆಕ್ಟೇರ್‌ಗೆ 9 ಲಕ್ಷ and odd ರೂಪಾಯಿಗಳು ಮರಗಿಡ ಬೆಳೆಸುವುದಕ್ಕೆ ಕೊಡುತ್ತಾರೆ. NPV (Net Present Value) charges ಅವರು ಕಟ್ಟುತ್ತಾರೆ. ಆ ಅರಣ್ಯ ಜಮೀನಿನ ಸಹಿತ ಷರತ್ತುಗಳಿಗೊಳಪಟ್ಟಿರುತ್ತದೆ ಮತ್ತು ಆ ಜಮೀನನ್ನು ನಾವು ಏನು ಲೀಸ್‌ಗೆ ಕೊಡುತ್ತೇವೆ, ಲೀಸ್ ಕೊಟ್ಟಂತಹ ಜಮೀನು ಮತ್ತೆ ಅರಣ್ಯಕ್ಕೆ ವಾಪಸ್ ಬರುತ್ತದೆ. ಪರ್ಯಾಯವಾಗಿ ಏನು ಜಮೀನನ್ನು ಕೊಡುತ್ತಾರೆ ಅದು ಯಾವಾಗಲೂ ಅರಣ್ಯ ಎಂತಲೇ ಇರುತ್ತದೆ forever. ಅದಕ್ಕೆ protected forest or reserve forest ಆದರೂ ಮಾಡುತ್ತೇವೆ. ಇದಕ್ಕೆ ಕಾಯಿದೆ ಮತ್ತು ಕಾನೂನಿದೆ. ಅಲ್ಲಿ ಇಲ್ಲಿ ಒತ್ತುವರಿಯಾಗಿ ಕೋರ್ಟ್‌ನಲ್ಲಿ ಸ್ಟೇ ಮತ್ತೊಂದು ಇದೆ. ಅರಣ್ಯ ಇಲಾಖೆ ನಿರಂತರವಾಗಿ ಹೋರಾಟ ಮಾಡುತ್ತಿದೆ, ಅರಣ್ಯವನ್ನು ನಿರಂತರವಾಗಿ ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದ್ದರಿಂದ ಯಾರೂ ಇದರ ಬಗ್ಗೆ ಗುಮಾನಿ ಪಡುವ ಅವಶ್ಯಕತೆ ಇಲ್ಲ. ಇದು ಯಾರ ಮನೆಗೂ ಹೋಗುತ್ತಿಲ್ಲ, ಈ ಜಮೀನು ಬೇರೆಲ್ಲೂ ಹೋಗುತ್ತಿಲ್ಲ. ಅರಣ್ಯ ಉಳಿಯುತ್ತದೆ ಅದಕ್ಕೆ ಎಲ್ಲರೂ ಸಹಕಾರ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ, ಮೊದಲ ಅಂಶವನ್ನು ಅವರು "Once a forest, always a forest," ಎಂದು ಒತ್ತಿ ಒತ್ತಿ ಹೇಳುತ್ತಿದ್ದಾರೆ. ನಾನು ಅದನ್ನು ಅಲ್ಲಗಳೆಯುವುದಿಲ್ಲ. ಇದು ಕೋರ್ಟ್ ಆದೇಶ ಕೂಡ ಆಗಿದೆ. ಅದಕ್ಕೆ ನಾವು ಕೂಡ ತಲೆಬಾಗಬೇಕು. ನಾನು ಅದನ್ನು ಪ್ರಶ್ನೆ ಮಾಡುವುದಿಲ್ಲ. 711 ಎಕರೆ ಪೈಕಿ ನಿಮ್ಮ ಕಡೆ ಉಳಿದಿರುವುದು 60 ಎಕರೆ ಅರಣ್ಯ ಭೂಮಿ ಮತ್ತು ನೀವು ಕಬ್ಜ ಮಾಡಿರುವುದಷ್ಟೇ ನಿಮ್ಮ ಹತ್ತಿರ ಇರುವುದು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(660) 12.08.2025 5.40 ಹೆಚ್‌ವಿ.ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ಮುಂದು):-

ಸನ್ಮಾನ್ಯ ಸಭಾಪತಿಯವರೇ, ನಾನು ಅಲ್ಲಿಗೆ ನಿನ್ನೆ ಅಲ್ಲ ಮೊನ್ನೆ ಶನಿವಾರ ಅಲ್ಲಿಗೆ ಹೋಗಿ ಬಂದಿದ್ದೇನೆ. ಅಲ್ಲಿ ಇನ್ನೂ ಬೇಕಾದಷ್ಟು ಕಾಮಗಾರಿಗಳು ನಡೆಯುತ್ತಲೇ ಇವೆ. ದೊಡ್ಡವರು ಈ ಕೆಲಸವನ್ನು ಮಾಡುತ್ತಿದ್ದಾರೆ. ಸರ್ಕಾರ ಅವರುಗಳನ್ನು ಮುಟ್ಟುವುದಕ್ಕೆ ಆಗುವುದಿಲ್ಲ; ಮುಟ್ಟಲ್ಲ. ಈ ರೀತಿಯಾದರೆ, ಬಡ ಜನರು ಎಲ್ಲಿಗೆ ಹೋಗಬೇಕು ಎನ್ನುವುದು ನನ್ನ ಪ್ರಶ್ನೆಯಾಗಿದೆ. 1982ರಲ್ಲಿ ಕೆ.ಐ.ಎ.ಡಿ.ಬಿ., ವತಿಯಿಂದ ನೋಟಿಫಿಕೇಶನ್ ಆದಾಗಲೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ರೆವಿನ್ಯೂ ದಾಖಲೆಗಳು ಇರಲಿಲ್ಲ. ಜಿಲ್ಲಾಧಿಕಾರಿಗಳು ಒಂದು ವರದಿ ಕೊಡುತ್ತಾರೆ. ಅದರಲ್ಲಿ " ಈ ಪ್ರಕರಣದಲ್ಲಿ ಹೈಕೋರ್ಟ್ ನೀಡಿರುವ ಆದೇಶದ ವಿರುದ್ಧ ಅರಣ್ಯ ಇಲಾಖೆಯು ದೂರು ಸಲ್ಲಿಸಿದಾಗ, ಪ್ರಕರಣಗಳು ದಾಖಲಾಗಿ, ವಿಚಾರಣೆ ನಡೆದು ವಜಾಗೊಂಡಿವೆ. ಈ ಆದೇಶದಲ್ಲಿ ಕಾಯ್ದಿಟ್ಟ ಅರಣ್ಯ ಜಮೀನಾಗಿರುವುದಿಲ್ಲ ಎಂದು ಉಲ್ಲೇಖ ಇರುವುದನ್ನು ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ಪ್ರಸ್ತಾಪಿಸಿರುತ್ತಾರೆ" ಎಂದು ಇದೆ. ಇದು ಜಿಲ್ಲಾಧಿಕಾರಿಗಳ ಆದೇಶವಾಗಿದೆ. ಮಾನ್ಯ ಅರಣ್ಯ ಸಚಿವರು ಒಂದು ಸ್ಟೈಡ್ ಹೇಳಿದ್ದಾರೆ. ಇಂತಹವು ಸುಮಾರು 26 ಪ್ರಕರಣಗಳು ಇವೆ. ಇದೇ ಜಮೀನುಗಳಿಗೆ ಸಂಬಂಧಪಟ್ಟಂತೆ ದಿನಾಂಕ:17.06.2025ರಂದು ಸ್ಟೇ ಕೊಟ್ಟಿದ್ದಾರೆ. ನಾನು ಆ ದಾಖಲೆಗಳನ್ನು ಅವರಿಗೆ ತೋರಿಸಿದ್ದೇನೆ. ಸುಮಾರು 3-4 ತಿಂಗಳ ಹಿಂದೆಯೇ ಈ ಆದೇಶ ಬಂದಿದೆ.

ನಾನು ಕೇಳಿದಂತಹ ಮತ್ತೊಂದು ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡಿಲ್ಲ. ಒಂದು ಬಾರಿ ಅರಣ್ಯ ಭೂಮಿಯನ್ನು ಜನೋಪಯೋಗಿ ಕಾರ್ಯಕ್ಕೆ ನೀಡಿದ ಮೇಲೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಅದು ಬಹಳಷ್ಟು ಅಭಿವೃದ್ಧಿ ಹೊಂದಿದೆ ಎನ್ನುವುದಾದರೆ, ಅವರಿಂದ ಹಣವನ್ನು ವಸೂಲಿ ಮಾಡಿ ಅರಣ್ಯವನ್ನು ಬೇರೆ ಕಡೆ ಬೆಳೆಸುವುದಕ್ಕೆ ಅವಕಾಶವಿದೆ ಎನ್ನುವ ಅಂಶ ಅದೇ ಆದೇಶದಲ್ಲಿದೆ. ಇದರ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಒಂದು ವಿಶೇಷ ತಂಡವನ್ನು ರಚನೆ ಮಾಡುತ್ತಾರೆ. ಅವರು ಹೋಗಿ ಅಲ್ಲಿ ಪರಿಶೀಲನೆ ಮಾಡಿ, ಆ ಪ್ರದೇಶ ಬಹಳಷ್ಟು ಅಭಿವೃದ್ಧಿ ಹೊಂದಿದೆಯೇ ಅಥವಾ ಏನಾಗಿದೆ ಎನ್ನುವುದರ ಬಗ್ಗೆ ಅವರು ವರದಿಯನ್ನು ಕೊಟ್ಟ ಮೇಲೆ ಅರಣ್ಯ ಇಲಾಖೆಯವರು ಅಲ್ಲಿಗೆ ಹೋಗಬೇಕಾಗಿದೆ. ಅರಣ್ಯ ಇಲಾಖೆಯವರು ಇಡೀ ರಾಜ್ಯದಲ್ಲಿ ಎಲ್ಲಿಯೂ ಹೋಗದೇ ದಿನ್ನೂರ್‌ಗೆ ಮಾತ್ರ ಬಂದಿದ್ದಾರೆ. ಅಲ್ಲಿರುವ ದಲಿತರು ಸರ್ಕಾರದವರನ್ನು ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ; ಅವರು ನಿಶಕ್ತರು, ಹಣವಂತರಲ್ಲ, ಕೋರ್ಟ್‌ಗೆ ಹೋಗುವುದಕ್ಕೆ ಆಗುವುದಿಲ್ಲ. ಶ್ರೀಮಂತರಾದರೇ ಕೋರ್ಟ್‌ಗೆ ಹೋಗಿ ಸ್ಟೇ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತರುತ್ತಾರೆ. ಇವರು ಸ್ಟೇ ತಂದರೂ ಸಹ ಇವರನ್ನು ತಡೆಯುವುದಕ್ಕೆ ಆಗುವುದಿಲ್ಲ. ಈ ಪ್ರಕರಣದಲ್ಲಿ ಸ್ಟೇ ಇದ್ದರೂ, ಇವರನ್ನು ತಡೆಯುವುದಕ್ಕೆ ಆಗಿದೆಯೇ? ಅಲ್ಲಿ ಇವರ ಫೋರ್ಸ್ ಯಾವ ರೀತಿಯಾಗಿತ್ತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದು ದಲಿತ ವಿರೋಧಿ ನೀತಿಯನ್ನು ಸೂಚಿಸುತ್ತದೆ. ಎಲ್ಲ ದಾಖಲೆಗಳು ಅವರ ಹತ್ತಿರವಿದ್ದರೂ ಸಹ ಇವರನ್ನು ತಡೆಯುವುದಕ್ಕೆ ಆಗಲಿಲ್ಲ. 2008ನೇ ಇಸವಿಯಲ್ಲಿ ಇವರು ಎಚ್ಚೆತ್ತುಕೊಂಡಿರುವುದು. ಆ ಪೂರ್ತಿ ಜಾಗ ಪರಿಶಿಷ್ಟ ಜಾತಿಯವರಿಗೆ ಸೇರಿರುವುದು ಎಂದು ನಾನು ಹೇಳುತ್ತಲೇ ಇದ್ದೇನೆ.

ಶ್ರೀ ಈಶ್ವರ ಖಂಡ್ರೆ:- ಸನ್ಮಾನ್ಯ ಸಭಾಪತಿಯವರೇ, ಸದನವನ್ನು ತಪ್ಪು ದಾರಿಗೆಳೆಯುವಂತಹ ಕೆಲಸವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡುತ್ತಿದ್ದಾರೆ. ಇದರಲ್ಲಿ ಯಾವುದೇ ಜಾತಿ, ಮತ ಪಂಥಗಳ ಪ್ರಶ್ನೆ ಬರುವುದಿಲ್ಲ. ಆ ಆಸ್ತಿಯನ್ನು ಯಾರ ಮನೆಗೂ ತೆಗೆದುಕೊಂಡು ಹೋಗುತ್ತಿಲ್ಲ. ಸುಮಾರು 7,000 ಎಕರೆ ಜಮೀನನ್ನು ತೆರವುಗೊಳಿಸಲಾಗಿದೆ. ಬೆಂಗಳೂರು ನಗರದಲ್ಲಿ ಸುಮಾರು 500 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ 17 ಎಕರೆ ಜಮೀನು ಒತ್ತುವರಿಯಾಗಿತ್ತು ಅದನ್ನು ಆರು ತಿಂಗಳು ಅಥವಾ ಒಂದು ವರ್ಷದ ಹಿಂದೆ ತೆರವುಗೊಳಿಸಿ ಅಲ್ಲಿ ನಾವು ಉದ್ಯಾನವನ್ನು ನಿರ್ಮಾಣ ಮಾಡಿದ್ದೇವೆ. ಇಲ್ಲಿಯವರೆಗೆ 120 ಎಕರೆ ಅಷ್ಟೇ ಅಲ್ಲ, ಇಡೀ ಬೆಂಗಳೂರು ನಗರದಲ್ಲಿ 250 ಎಕರೆ ಒತ್ತುವರಿ ಆಗಿರುವುದನ್ನು ನಾವು ತೆರವುಗೊಳಿಸಿದ್ದೇವೆ.

ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಈ ಆದೇಶ ಬಂದ ಮೇಲೆ ಪ್ರಥಮವಾಗಿ ತೆರವುಗೊಳಿಸಿರುವುದು ಇದನ್ನೇ.

ಶ್ರೀ ಈಶ್ವರ ಖಂಡ್ರೆ:- ಸನ್ಮಾನ್ಯ ಸಭಾಪತಿಯವರೇ, ಹೆಚ್.ಎಂ.ಟಿ., ಗೆ ಕೊಟ್ಟಂಥ 443 ಎಕರೆ ಪ್ರದೇಶದಲ್ಲಿ ಸುಮಾರು 160 ಎಕರೆ ಪ್ರದೇಶವನ್ನು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುವುದಕ್ಕೆ ಅವರು 330 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ರಿಯಲ್ ಎಸ್ಟೇಟ್ ಕಂಪನಿಗಳಿಗೆ ಮಾರಾಟ ಮಾಡಿದ್ದಾರೆ. ಇದನ್ನು ಅರಣ್ಯ ಇಲಾಖೆ ಮರು ವಶಕ್ಕೆ ಪಡೆದುಕೊಳ್ಳಲು ನಾನು ನಿರ್ದೇಶನವನ್ನು ನೀಡಿದ್ದೇನೆ.

ಶ್ರೀ ಛಲವಾದಿ ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಹೆಚ್.ಎಂ.ಟಿ., ಪಕ್ಕದಲ್ಲಿ ಇನ್ನೂ 500 ಎಕರೆ ಜಮೀನು ಇದೆ. ಅದನ್ನು ಇವರು ವಾಪಸ್ಸು ತೆಗೆದುಕೊಳ್ಳಲಿ.

ಶ್ರೀ ಈಶ್ವರ ಖಂಡ್ರೆ:- ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಈ ಬಗ್ಗೆ ಹೇಳಿದ್ದೇನೆ. ಆದರೂ ಮಾನ್ಯ ಸದಸ್ಯರು ಏತಕ್ಕೋಸ್ಕರ ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆನ್ನುವುದು ನನಗೆ ಗೊತ್ತಾಗುತ್ತಿಲ್ಲ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಯಾವುದರ ಬಗ್ಗೆ ಉಲ್ಲೇಖ ಮಾಡುತ್ತಿದ್ದಾರೆ ಅದನ್ನು ಅಂದರೆ, ಕಾಡುಗೋಡಿ ಸಾಮೂಹಿಕ ವ್ಯವಸಾಯ ಸೇವಾ ಸಹಕಾರ ಸಂಘವನ್ನು ದ್ರವೀಕರಣಗೊಳಿಸಿ ಜಿಲ್ಲಾಧಿಕಾರಿಗಳು ಆದೇಶವನ್ನು ಹೊರಡಿಸಿದ್ದಾರೆ, ಅವರು ದ್ರವೀಕರಣಗೊಳಿಸಿದ ಮೇಲೆ ಇವರುಗಳು ಕೆ.ಎ.ಟಿ. ಗೆ ಹೋಗುತ್ತಾರೆ. ಕೆ.ಎ.ಟಿ.,ಯವರು ಜಿಲ್ಲಾಧಿಕಾರಿಗಳ ಆದೇಶವನ್ನು ಎತ್ತಿ ಹಿಡಿಯುತ್ತಾರೆ. ಕೆ.ಎ.ಟಿ., ಜಿಲ್ಲಾಧಿಕಾರಿಗಳ ಆದೇಶವನ್ನು ಎತ್ತಿಹಿಡಿದ ಮೇಲೆ ಇವರುಗಳು ಪುನಃ ಸುಪ್ರೀಂ ಕೋರ್ಟ್‌ಗೆ ಹೋಗುತ್ತಾರೆ. ಸುಪ್ರೀಂ ಕೋರ್ಟ್, ಯಾರು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಜಿದಾರರಿದ್ದಾರೆ ಅವರೆಲ್ಲರ ಅರ್ಜಿಗಳನ್ನು 2015ರಲ್ಲಿ ವಜಾಗೊಳಿಸುತ್ತದೆ. ಅರ್ಜಿ ವಜಾ ಆದ ಮೇಲೆ ಇವರಿಗೆ locus standi ಇಲ್ಲ. ಇವರಿಗೆ ಯಾವುದೇ ಸಾಗುವಳಿ ಚೀಟಿಯನ್ನು ಕೊಟ್ಟಿರುವುದಿಲ್ಲ. ಬೆಂಗಳೂರು ನಗರದಲ್ಲಿನ ಸುಮಾರು 18 ಎಕರೆ ವ್ಯಾಪ್ತಿಯೊಳಗೆ ಯಾರಿಗೂ ಗ್ರ್ಯಾಂಟ್ ಕೊಡುವುದಕ್ಕೆ ಬರುವುದಿಲ್ಲ. ಯಾರಿಗೂ ಭೂಮಿಯನ್ನು ಹಂಚಿಕೆ ಮಾಡುವುದಕ್ಕೆ ಬರುವುದಿಲ್ಲ. ಕಾನೂನುಬದ್ಧವಾಗಿ ಮತ್ತು ಕಾಯಿದೆಬದ್ಧವಾಗಿ ಯಾರ ಹೆಸರಿಗೂ ಈ ಭೂಮಿ ವರ್ಗಾವಣೆಯಾಗಿಲ್ಲ. ಇವತ್ತಿಗೂ ದಾಖಲೆಯಲ್ಲಿ ಅರಣ್ಯವೆಂದೇ ಇದೆ. ಇದರ ದಾಖಲೆಗಳನ್ನು ನಾನು ಅವರಿಗೆ ಕಳುಹಿಸಿಕೊಡುತ್ತೇನೆ. ಅವರ ಹತ್ತಿರ ಇರುವಂತಹ ದಾಖಲೆಗಳನ್ನು ನೀಡಲು ನಾನು ಅದರ ಬಗ್ಗೆ ತಜ್ಞರ ಅಭಿಪ್ರಾಯವನ್ನು ಪಡೆದುಕೊಳ್ಳುತ್ತೇನೆ. ಅವರ ಕಣ್ಣೆದುರಿಗೇ ಇರುವಂತಹ ಸಂಗತಿಗಳಿಗೆ ಅವರು ಸುಮ್ಮನೆ ಮೊಸಳೆ ಕಣ್ಣೀರು ಹಾಕುವುದು ಬೇಡವೆನ್ನುವುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ನಾವು ಮೊಸಳೆ ಕಣ್ಣೀರು ಹಾಕುತ್ತಿಲ್ಲ. ನಾವು ಶ್ರೀಮಂತರ ಪರವಾಗಿ ಮಾತನಾಡುತ್ತಿಲ್ಲ. ಬಡವರ ಪರವಾಗಿ ಹೋರಾಟ ಮಾಡುತ್ತಿದ್ದೇವೆ. ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಸರ್ಕಾರ ಒಂದು ಸದನ ಸಮಿತಿಯನ್ನು ರಚನೆ ಮಾಡಲಿ. ಬಡವರ ಪರವಾಗಿ ಹೋರಾಟ ಮಾಡುವುದಕ್ಕಾಗಿಯೇ ನಾವು ಇಲ್ಲಿರುವುದು. ರೈಲ್ವೆ ಅವರಿಗೆ ಕೊಟ್ಟಿರುವ ಲ್ಯಾಂಡ್ ಅನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳುತ್ತದೆಯೇ?

ಶ್ರೀ ಈಶ್ವರ ಖಂಡ್ರೆ:- ಸನ್ಮಾನ್ಯ ಸಭಾಪತಿಯವರೇ, ಅವರು ಇದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದು ಕಾಯಿದೆಯ ಪ್ರಶ್ನೆಯಾಗಿದೆ. ರೈಲ್ವೆಗೆ ಲ್ಯಾಂಡ್ ಅನ್ನು ಕಾನೂನುಬದ್ಧವಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಪರ್ಯಾಯವಾಗಿ ಜಮೀನು ಪಡೆದುಕೊಂಡಿದ್ದೇವೆ. ಅದಕ್ಕಾಗಿ ಈ ಜಮೀನನ್ನು ಕೊಟ್ಟಿದ್ದೇವೆ. ಆದರೆ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರ್.ಟಿ.ಸಿ., ಯಲ್ಲಿ "ಅರಣ್ಯ"ವೆಂದು ಇದೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಬರೆದುಕೊಂಡಿರಬಹುದು. ಇದು ಯಾವಾಗ ಆಗಿದೆ ಎನ್ನುವುದರ ದಿನಾಂಕವನ್ನು ಮಾನ್ಯ ಸಚಿವರು ತಿಳಿಸಬೇಕಾಗಿದೆ.

ಶ್ರೀ ಈಶ್ವರ ಖಂಡ್ರೆ:- ಸನ್ಮಾನ್ಯ ಸಭಾಪತಿಯವರೇ, ಇಲ್ಲ... ಇಲ್ಲ. ಅವರಿಗೆ ಸಂಪೂರ್ಣವಾಗಿರುವ ಮಾಹಿತಿಯನ್ನು ನೀಡುತ್ತೇನೆ. ಯಾವ ದಿನಾಂಕ ಎನ್ನುವ ಮಾಹಿತಿಯನ್ನು ಸಹ ನೀಡುತ್ತೇನೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:- ಸನ್ಮಾನ್ಯ ಸಭಾಪತಿಯವರೇ, ದಿನಾಂಕವನ್ನು ಹೇಳುವುದಕ್ಕೆ ಅವರಿಂದ ಸಾಧ್ಯವಾಗುತ್ತಿಲ್ಲ. ಏಕೆಂದರೆ, ಅದನ್ನು ಅವರು ಇತ್ತೀಚೆಗೆ ಬರೆದುಕೊಂಡಿದ್ದಾರೆ. ಈ ವಿಚಾರ controversy ಆದ ಮೇಲೆ ಬರೆದುಕೊಂಡಿದ್ದಾರೆ. ಅದಕ್ಕೂ ಮುಂಚೆ ಪಹಣಿಯಲ್ಲಿ ರೈತರ ಹೆಸರುಗಳೇ ಇದೆ. ರೈತರ ಹೆಸರಿನ ಮೇಲಿರುವ ಪಹಣಿಗಳು ನನ್ನ ಬಳಿ ಇದೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಈಶ್ವರ ಖಂಡ್ರೆ:– ಸನ್ಮಾನ್ಯ ಸಭಾಪತಿಯವರೇ, ದಿನಾಂಕ:06.02.2016ರಲ್ಲಿ ಪಹಣಿಯಲ್ಲಿ "ಅರಣ್ಯ ಭೂಮಿ" ಎಂದು ಇದೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಸನ್ಮಾನ್ಯ ಸಭಾಪತಿಯವರೇ, 2008ರ ನಂತರ ಈ ರೀತಿ ಬರುತ್ತಿದೆಯೇ ಹೊರತು ಅದಕ್ಕೂ ಮುಂಚಿನ ದಾಖಲೆಗಳು ಇವರ ಹತ್ತಿರ ಇಲ್ಲ. ಈ ಜಮೀನು ರೈತರಿಗೆ ಸೇರಿದ್ದಾಗಿದೆ. ಹಿಂದೆ ಗೆಜೆಟ್‌ನಲ್ಲಿ ಇತ್ತು ಎನ್ನುವ ಕಾರಣಕ್ಕಾಗಿ ಈಗ ಹುಡುಕಿಕೊಂಡು ಬರುತ್ತಿದ್ದಾರೆ. ಅದಕ್ಕೂ ಮುಂಚೆ ಇವರು ನಿದ್ದೆ ಮಾಡುತ್ತಿದ್ದರೇ? ಕಡಲೇಪುರಿ ತಿನ್ನುತ್ತಿದ್ದರೇ? ಇವತ್ತು ಹೇಗೆ ಅರಣ್ಯ ಭೂಮಿಯಾಗಿದೆ?

ಶ್ರೀ ಈಶ್ವರ ಖಂಡ್ರೆ:– ಸನ್ಮಾನ್ಯ ಸಭಾಪತಿಯವರೇ, 1901 ರಲ್ಲಿ ಗೆಜೆಟ್ ನೋಟಿಫಿಕೇಶನ್‌ನಲ್ಲಿ ಸುಮಾರು 711 ಎಕರೆಯನ್ನು ಅರಣ್ಯ ಭೂಮಿ ಎಂದು ಅಧಿಸೂಚನೆ ಹೊರಡಿಸಿರುವ ಪ್ರತಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತಿದ್ದೇನೆ. ಅದನ್ನು ಅವರು ನೋಡಬೇಕು.

ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):– ಸನ್ಮಾನ್ಯ ಸಭಾಪತಿಯವರೇ, ಈ ಜಮೀನಿಗೆ ಮಾತೃ ಇಲಾಖೆ ಯಾರು ಎಂದು ಕೇಳಿದ್ದೆ. ಒಂದು ಕಡೆ ಕಂದಾಯ ಇಲಾಖೆಯವರು ರೈತರಿಗೆ ಈ ಭೂಮಿಯನ್ನು ಮಂಜೂರು ಮಾಡಿದೆ. ಇವರು ಹಳೆ ಗೆಜೆಟ್ ನೋಟಿಫಿಕೇಶನ್ ಇಟ್ಟುಕೊಂಡು ಆ ಜಾಗ ನಮ್ಮದು ಎಂದು ಕ್ಲೈಮ್ ಮಾಡಿದ್ದಾರೆ. ಈ ಕಾರಣಕ್ಕಾಗಿಯೇ ನಾನು ಮಾತೃ ಇಲಾಖೆ ಯಾರು ಎನ್ನುವ ಪ್ರಶ್ನೆಯನ್ನು ಕೇಳಿದ್ದೆ. ಕಂದಾಯ ಇಲಾಖೆ ಅವರುಗಳಿಗೆ ಭೂಮಿಯನ್ನು ಮಂಜೂರು ಮಾಡಿದ ಮೇಲೆ ಅವರು ಸಾಗುವಳಿ ಮಾಡುತ್ತಾರೆ, ಮನೆ ಕಟ್ಟಿಕೊಳ್ಳುತ್ತಾರೆ, ತೋಟ ಮಾಡುತ್ತಾರೆ ಮತ್ತು ವ್ಯವಸಾಯೇತರ ಉದ್ದೇಶಕ್ಕೂ ಬಳಕೆ ಮಾಡಿಕೊಳ್ಳುತ್ತಾರೆ. ಈಗ ಇವರು ಒಂದು ಗೆಜೆಟ್ ನೋಟಿಫಿಕೇಶನ್ ಇಟ್ಟುಕೊಂಡು ಆ ಜಾಗ ನಮ್ಮದು ಎಂದು ಅರಣ್ಯ ಇಲಾಖೆಯವರು ಹೇಳುತ್ತಿದ್ದಾರೆ. ಮಾನ್ಯ ಸಚಿವರು ತಮ್ಮ ವಾದವನ್ನು ಆಧಾರಸಹಿತವಾಗಿ ಮಂಡಿಸಿದ್ದಾರೆ. ಹಾಗಾದರೆ ಈ ಜಾಗಕ್ಕೆ ಮಾತೃ ಇಲಾಖೆ ಯಾರು? ಕಂದಾಯ ಇಲಾಖೆ ಸರ್ಕಾರ ಅಲ್ಲವೇ? ಕಂದಾಯ ಇಲಾಖೆಯವರು ಈ ಜಾಗವನ್ನು ರೈತರಿಗೆ ಅಧಿಕೃತವಾಗಿ ಮಂಜೂರು ಮಾಡಿದೆ. ಮಂಜೂರು ಮಾಡದಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ, ಅರಣ್ಯ ಇಲಾಖೆಗೆ ಕೊಟ್ಟಿಲ್ಲ. ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡಿದೆ.

ಶ್ರೀ ಈಶ್ವರ ಖಂಡ್ರೆ:– ಸನ್ಮಾನ್ಯ ಸಭಾಪತಿಯವರೇ, ಒಂದು ಸಾರಿ ಅರಣ್ಯ ಪ್ರದೇಶವೆಂದು ಘೋಷಣೆ ಮಾಡಿ ಅಧಿಸೂಚನೆ ಹೊರಡಿಸಿದ ಮೇಲೆ ಕಂದಾಯ ಇಲಾಖೆಯವರು ಸೆಕ್ಷನ್ 94 ಸಿಸಿ ಅಡಿಯಲ್ಲಿ ಮಂಜೂರು ಮಾಡಿದಂತಹ ಉದಾಹರಣೆಗಳು ಇವೆ. ಅದರ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿ ಕೇಸ್ ನಡೆಯುತ್ತಿವೆ. ಸರ್ವೋಚ್ಚ ನ್ಯಾಯಾಲಯ ಬಹಳ ಸ್ಪಷ್ಟವಾಗಿ ಹೇಳಿದೆ.

ಶ್ರೀ ಸಿ.ಟಿ.ರವಿ:– ಸನ್ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಇನ್ನು ಮುಗಿಸಿಲ್ಲ.

ಶ್ರೀ ಈಶ್ವರ ಖಂಡ್ರೆ:– ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದನ್ನು ಅವರು ಪೂರ್ತಿಯಾಗಿ ಕೇಳಿಸಿಕೊಳ್ಳಬೇಕು. ಯಾವುದು ಅವರಿಗೆ ಗೊತ್ತಿಲ್ಲ, ಅದನ್ನು ನಾನು ಹೇಳುತ್ತೇನೆ. ಅವರು ತಿಳಿದುಕೊಳ್ಳಲಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂದಾಯ ಇಲಾಖೆ ಆ ರೀತಿಯಲ್ಲಿ ಗ್ರ್ಯಾಂಟ್ ಕೊಟ್ಟಿದ್ದರೆ ಅದನ್ನು ಅಕ್ರಮವೆಂದು ಪರಿಗಣಿಸಲಾಗುತ್ತದೆ. ಅಂತಹ ಕಂದಾಯ ಇಲಾಖೆಯ ಅಧಿಕಾರಿಗಳ ಮೇಲೆ forest offence case ಹಾಕಬೇಕೆಂದು ಇದೆ. ನಾನು ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡ ಮೇಲೆ ಬೆಂಗಳೂರು ನಗರದಲ್ಲಿ ಅಂತಹ ಇಬ್ಬರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಅರಣ್ಯ ಭೂಮಿ ಎಂದು ಬಂದ ಮೇಲೂ ಕಂದಾಯ ಇಲಾಖೆಗೆ ಜಮೀನು ವರ್ಗಾವಣೆ ಮಾಡಿ ಬೇರೆಯವರಿಗೆ ಗ್ರ್ಯಾಂಟ್ ಕೊಟ್ಟಿರುವುದರಿಂದ ಇವರುಗಳು ಅಪರಾಧದಲ್ಲಿ ಭಾಗಿಗಳಾಗಿದ್ದಾರೆಂದು ಒಬ್ಬರು ತಹಸೀಲ್ದಾರ್ ಮತ್ತು ಇಬ್ಬರು ಎ.ಸಿ.,ಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದೆ.

(ಮುಂದು)

(661) 12.8.2025 5.50 ಪಿಕೆ:ಬಿಎನ್ಎಸ್

ಶ್ರೀ ಈಶ್ವರ್ ಖಂಡ್ರೆ(ಮುಂದು)

ಒಬ್ಬರನ್ನು ಸಸ್ಪೆಂಡ್ ಮಾಡಿದ್ದೇವೆ. ಇಂತಹ ಅನೇಕ ಪ್ರಕರಣಗಳು ನಡೆಯುತ್ತಿವೆ. ಮಾಹಿತಿಯ ಕೊರೆತೆಯಿಂದ ಇರಬಹುದು ಅಥವಾ ಅಂದಿನ ದಿನಮಾನಗಳಲ್ಲಿ ಸರ್ವೆ ಮಾಡುವುದರಲ್ಲಿ ತೊಂದರೆ ಆಗಿರಬಹುದು. ಈಗ ಜಂಟಿ ಸಮೀಕ್ಷೆ ಮಾಡುವಂಥದ್ದು ನಡೆಯುತ್ತಿದೆ. ಅರಣ್ಯದ ಜಾಗ ಎಂದು ಆಗುವುದಕ್ಕೆ ಮುಂಚಿತವಾಗಿ ಕಂದಾಯ ಇಲಾಖೆಯವರು ಗ್ರ್ಯಾಂಟ್ ಕೊಟ್ಟಿದ್ದರೆ ಅದನ್ನು ಕೊಡಬಹುದು. ಆದರೆ ಅರಣ್ಯದ ಜಾಗ ಎಂದಾದ ಮೇಲೆ, ಅದನ್ನು ಯಾರೇ ಗ್ರ್ಯಾಂಟ್ ಕೊಟ್ಟರೂ, ಯಾರಿಗೆ ಹೋದರೂ ಅದು ಅರಣ್ಯ ಇಲಾಖೆಯ ಜಾಗವೆಂದೇ ಉಳಿಯಬೇಕು ಎಂದು ಕೇಂದ್ರ ಸರ್ಕಾರ ಮತ್ತು ಕಂದಾಯ ಇಲಾಖೆ ಆದೇಶವನ್ನು ಕೊಟ್ಟಿದ್ದು ಇದೆ; ತೀರ್ಪು ಕೊಟ್ಟಿದ್ದು ಇದೆ. ಇದು ಈ ನೆಲದ ಕಾನೂನಾಗಿದೆ; ಕಾಯ್ದೆಯಾಗಿದೆ.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಗಳೆ, ಸೆಕ್ಷನ್ 4 ಎಂದರೆ ಅದು ಗೆಜೆಟ್ ಎಂದಾಗುತ್ತದೆಯೇ? ಸೆಕ್ಷನ್ 4 ಅಡಿಯಲ್ಲಿನ ನೋಟಿಫಿಕೇಷನ್ ಎನ್ನುವುದು ಗೆಜೆಟ್ ಆಗುತ್ತದೆಯೇ? ನಮ್ಮ ಊರುಗಳಲ್ಲಿ, ಅರಣ್ಯ ಬೆಳೆಸಿ ವಾಪಸ್ಸು ಕೊಡುತ್ತೇವೆ ಎಂದು ಗುತ್ತಿಗೆಗೆ ತೆಗೆದುಕೊಂಡಿದ್ದಾರೆ. ಅರಣ್ಯ ಬೆಳಸಿ ಅದನ್ನು ಗ್ರಾಮದ ಉಪಯೋಗಕ್ಕೆ ಕೊಡಬೇಕು ಎಂದು ಸ್ಪಷ್ಟವಾಗಿ ಇದೆ. ಆದರೆ ನೀವು ಈಗ, ಸೆಕ್ಷನ್ 4 ಆಗಿದೆ; ಇದು ನಮ್ಮದು ಎಂದು ಹೇಳುತ್ತಿದ್ದೀರಿ. ಸೆಕ್ಷನ್ 4 ಎಂದರೆ ಅದು ಗೆಜೆಟ್ ನೋಟಿಫಿಕೇಷನ್ ಆಗುತ್ತದೆಯೇ? ಅದು ಫೈನಲ್ ನೋಟಿಫಿಕೇಷನ್ ಆಗುತ್ತದೆಯೇ? ಹಾಗಾದರೆ ಇದು one sided ಆಗಿದೆಯೇ? ನೀವು ಹೇಳಿದ್ದು ಮಾತ್ರ ಕಾಯಿದೆಯೇ? ಕಾಯಿದೆ ಮಾಡುವುದಕ್ಕೆ ಈ ಸದನ ಇದೆ. ನಿರ್ದಿಷ್ಟವಾಗಿ ಈ ಕೇಸ್‌ನಲ್ಲಿ ಸಾವಿರಾರು ಜನ ಬಡವರು ಇದ್ದಾರೆ. ನೀವು ಮಾನವೀಯ ಹಿನ್ನೆಲೆಯಲ್ಲಿ ಪರಿಗಣಿಸಿ. ಹೇಗೆ ಬಿಡಬ್ಲ್ಯೂಎಸ್ಎಸ್‌ಬಿಯವರು ಬದಲಿ ಜಮೀನು ಕೊಟ್ಟಿದ್ದಕ್ಕೆ ನೀವು ನಿಮ್ಮ ಜಾಗವನ್ನು ಬಿಟ್ಟುಕೊಟ್ಟರೋ, ಹೇಗೆ ಕೆಐಎಡಿಬಿಗೆ ಬಿಟ್ಟು ಕೊಡುವ ಚಿಂತನೆಯಲ್ಲಿದ್ದೀರೋ ಹಾಗೆಯೇ ಈ ಬಡವರಿಗೂ ಸಹ ಬಿಟ್ಟು ಕೊಡುವ ಚಿಂತನೆ ನಡೆಸಿ. ಕಂದಾಯ ಇಲಾಖೆ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತತ್ಸಮವಾದ ಜಮೀನನ್ನು ಅರಣ್ಯ ಇಲಾಖೆಗೆ ಕೊಡಲಿ. ಅರಣ್ಯ ಬೆಳೆಸುವುದಕ್ಕೆ ಅವರಿಂದ ಇಂತಿಷ್ಟು ಶುಲ್ಕ ಎಂದು ತೆಗೆದುಕೊಳ್ಳಿ. ಬಡವರನ್ನು ಅಲ್ಲಯೇ ಉಳಿಸಿ. ಏಕೆಂದರೆ ನೇಚರ್ ಫಾರೆಸ್ಟ್ ಇಲ್ಲ. ನೇಚರ್ ಫಾರೆಸ್ಟ್ ಇದ್ದಾಗ ಕಣ್ಣು ಮುಚ್ಚಿಕೊಂಡಿರಿ. ಇವತ್ತಲ್ಲಿ ಬಡವರು ಮನೆ ಕಟ್ಟಿಕೊಂಡಿದ್ದಾರೆ, ಈಗ ಅದು ನಮ್ಮದು ಎಂದು ಕ್ಲೇಮ್ ಮಾಡುತ್ತಿದ್ದೀರಿ. ಅವರನ್ನು ಬೀದಿಗೆ ತಳ್ಳುವುದು ಮಾನವೀಯತೆಯೇ? ಈ ಸದನ ಇರುವುದು ಏತಕ್ಕೆ? ಮಾನವೀಯತೆಯ ಹಿನ್ನೆಲೆಯಲ್ಲಿ ಕೆಲಸ ಮಾಡಬೇಕು ಅಲ್ಲವೇ? ಅಲ್ಲಿ ಯಾರು ಬಡವರಿದ್ದಾರೋ ಅವರ ಸಮೀಕ್ಷೆ ನಡೆಸಿ. ಪರ್ಯಾಯ ಜಾಗವನ್ನು ಅರಣ್ಯ ಇಲಾಖೆ ಕ್ಲೇಮ್ ಮಾಡಲಿ. ನೇಚರ್ ಫಾರೆಸ್ಟ್ ಇದ್ದಾಗ ಇಲಾಖೆಯವರು ಏಕೆ ಸುಮ್ಮನಿದ್ದರು? ಸೆಕ್ಷನ್ 4 ಗೆಜೆಟ್ ನೋಟಿಫಿಕೇಷನ್ ಅಲ್ಲ. ಅದು ಗೆಜೆಟ್ ನೋಟಿಫಿಕೇಷನ್ ಎಂದು ನೀವು ಹೇಗೆ ಕ್ಲೇಮ್ ಮಾಡುತ್ತೀರಿ? ಇದು ಅರಣ್ಯ ಇಲಾಖೆಯ ಜಾಗವೆಂದು ಹೇಗೆ ಅಧಿಕಾರಯುತವಾಗಿ ಕ್ಲೇಮ್ ಮಾಡುತ್ತೀರೋ ಅದೇರೀತಿ ಕಂದಾಯ ಇಲಾಖೆಯ ಜಜಾಗವನ್ನು ನಮ್ಮದು ಎಂದು ಹೇಳುತ್ತಿದ್ದೀರಿ. ಅರಣ್ಯ ಇಲಾಖೆ ಭಸ್ಮಾಸುರ ಅಲ್ಲ. ಕಾಲಿಟ್ಟಿದ್ದೆಲ್ಲ ನಮ್ಮದೇ ಎಂದು ನೀವು ಹೇಳುವುದಕ್ಕೆ ಆಗುವುದಿಲ್ಲ. ಜನರ ಪಾಲಿಗೆ ಭಸ್ಮಾಸುರ ಆಗಬೇಡಿ. ನಾನು ವ್ಯಕ್ತಿಗತವಾಗಿ ಏನನ್ನೂ ಹೇಳುತ್ತಿಲ್ಲ. ಅರಣ್ಯವನ್ನು ಅವಲಂಬಿಸಿ ಸಾವಿರಾರು ವರ್ಷಗಳಿಂದ ಜನ ಬದುಕಿದ್ದಾರೆ. ಕಾಯಿದೆ ಇಲ್ಲದೇ ಇದ್ದಾಗಲೂ ಬದುಕಿದ್ದಾರೆ.

(ಗೊಂದಲ)

ಶ್ರೀ ಈಶ್ವರ್ ಖಂಡ್ರೆ:– ಮಾನ್ಯ ಸಭಾಪತಿಗಳೆ, ಜಾಗತಿಕ ತಾಪಮಾನದಿಂದ ಜಗತ್ತು ತತ್ತರಿಸಿ ಹೋಗುತ್ತಿದೆ. ನೀವು ನೆಪವೊಡ್ಡಿ ಸೆಕ್ಷನ್ 4 ಅನ್ನು ತಂದು ವಿಷಯಾಂತರ ಮಾಡುತ್ತಿದ್ದೀರಿ. ಇಡೀ ಮನುಕುಲ ಧ್ವಂಸವಾಗುವಂತಹ ಹೇಳಿಕೆಗಳನ್ನು ಕೊಡುತ್ತಿದ್ದೀರಿ. ಮಾನ್ಯ ಸಭಾಪತಿಗಳೆ, ಸೆಕ್ಷನ್ 4 ಮಾನ್ಯ ಸದಸ್ಯರ ಜಿಲ್ಲೆಗೆ ಸಂಬಂಧಪಟ್ಟದ್ದಾಗಿದೆ.

ಶ್ರೀ ಸಿ.ಟಿ.ರವಿ:– ಕಂದಾಯ ಇಲಾಖೆ ಮಂಜೂರು ಮಾಡಿರುವ ಜಮೀನು ನಮ್ಮದು ಎಂದು ಹೇಗೆ ಹೇಳುತ್ತಿದ್ದೀರಿ? ನಿಮಗೆ ಯಾರು ಸ್ಪೆಷಲ್ ಪವರ್ ಕೊಟ್ಟಿದ್ದಾರೆ?

(ಗೊಂದಲ)

ಶ್ರೀ ಈಶ್ವರ್ ಖಂಡ್ರೆ:– ಮಾನ್ಯ ಸಭಾಪತಿಗಳೆ, ಇವತ್ತು ಎಲ್ಲವೂ ಸಂವಿಧಾನದ ಪ್ರಕಾರ ನಡೆಯುತ್ತದೆ. ರಾಜ್ಯದ ಕಾನೂನು ಇದೆ, ಕೇಂದ್ರದ ಕಾನೂನು ಇದೆ, ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಿವೆ. ಸೆಕ್ಷನ್ 4 ಕೇವಲ ರಾಜ್ಯಕ್ಕೆ ಸಂಬಂಧಪಟ್ಟದ್ದಲ್ಲ ಅದು ಕೇಂದ್ರಕ್ಕೂ ಸಂಬಂಧಪಡುತ್ತದೆ. ಶರಾವತಿಯಲ್ಲಿ 10 ಸಾವಿರ ಜನ ರೈತರು ಇವತ್ತು ಟೆನೆಂಟ್ ಆಗಿದ್ದಾರೆ. 60ರ ದಶಕದಲ್ಲಿ ಪ್ರಪ್ರಥಮವಾಗಿ ನಮಗೆ ಬೆಳಕು ಕೊಟ್ಟಿರುವಂಥದ್ದು. ಅವರಿಗೆ 10 ಸಾವಿರ ಎಕರೆ ಜಾಗವನ್ನು ಶಿವಮೊಗ್ಗದಲ್ಲಿ ಕೊಟ್ಟಿದ್ದರೂ ರೈಟ್ಸ್ ಕೊಟ್ಟಿರಲಿಲ್ಲ. ಹಿಂದಿನ ನಮ್ಮ ಸರ್ಕಾರ ಅವರಿಗೆ ರೈಟ್ಸ್ ನೀಡಿತು. ನಂತರ ಯಾರೋ ಒಬ್ಬರು ಪಿ.ಐ.ಎಲ್. ಹಾಕಿದರು ಎಂದು ಹೈಕೋರ್ಟ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಒಡೆದು ಹಾಕಿತು. ಹೈಕೋರ್ಟ್ ಒಡೆದು ಹಾಕಿದ್ದನ್ನು ಸುಪ್ರೀಂ ಕೋರ್ಟ್ ಒಡೆದು ಹಾಕಿತು. ನಂತರ ನಾವು ಹಿಂದಿನ ಅಧಿವೇಶನದಲ್ಲಿ ಒಂದು ರೆಸಲ್ಯೂಷನ್ ಮಾಡಿದೆವು. ಅದರಲ್ಲಿ Forest Rights Act ನಲ್ಲಿ ಇವತ್ತೇನು ಬುಡಕಟ್ಟು ಸಮುದಾಯದವರು ಅಲ್ಲಿ 25 ವರ್ಷ ಇದ್ದುದು ದಾಖಲೆ ಇದ್ದರೆ ಅವರಿಗೆ ರೈಟ್ಸ್ ಕೊಡಬೇಕು ಎಂದಿದೆ. ಬೇರೆ ಸಮುದಾಯ ಇದ್ದರೆ 75 ವರ್ಷ/ಮೂರು ತಲೆಮಾರು ಅಲ್ಲಿರಬೇಕು ಎಂದಿದೆ. ಈ ಕಾಯಿದೆಯನ್ನು ತಿದ್ದುಪಡಿ ಮಾಡಿ ಎಂದು ರೆಸಲ್ಯೂಷನ್ ಮಾಡಿದೆವು. ಹಾಗಾದರೆ ನೀವು ಕೇಂದ್ರ ಸರ್ಕಾರದ ಬಳಿ ಹೋಗಿ ಇದನ್ನು ತಿದ್ದುಪಡಿ ಮಾಡಿಸಿಕೊಂಡು ಬನ್ನಿ. ಏಕೆ ಇದುವರೆಗೂ ತಿದ್ದುಪಡಿ ಮಾಡಿಕೊಂಡು ಬರಲಿಲ್ಲ? ಇದನ್ನು ಕೇವಲ ನಾವು ಮಾಡಿದರೆ ಆಗುತ್ತದೆಯೇ? ಇದು ಮತ್ತೆ ಕೇಂದ್ರಕ್ಕೆ ಹೋಗುತ್ತದೆ. ಸೆಕ್ಷನ್ 4 ನಲ್ಲಿ ಗೆಜೆಟ್ ನೋಟಿಫಿಕೇಷನ್ ಆಗಿದೆ. Forest Settlement Officer ಇದ್ದಾನೆ. ಇದು 50 ವರ್ಷದಿಂದ ಹಾಗೆಯೇ ನಡೆಯುತ್ತಿದೆ. ಇದು ಇತ್ಯರ್ಥ ಆಗಬೇಕು ಎನ್ನುವ ಪ್ರಯತ್ನ ಮಾಡುತ್ತಿದ್ದೇವೆ. ಅದು ಕೇವಲ ನಮ್ಮ ಕೈಯಲ್ಲಿ ಇದೆಯೇ?

(ಗೊಂದಲ)

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಗಳೆ, ಇವರು ಬಡವರ ಮೇಲೆ ಪೌರುಷ ತೋರಿಸುತ್ತಿದ್ದಾರೆ. ಅವರ ಮೇಲೆ ನಿಮ್ಮ ಪೌರುಷ ತೋರಿಸಬೇಡಿ.

(ಗೊಂದಲ)

ಶ್ರೀ ಈಶ್ವರ ಖಂಡ್ರೆ:– ನಾನು ಹೇಳುತ್ತಿರವುದನ್ನು ಮೊದಲು ಕೇಳಿ. ಸುಳ್ಳು ಹೇಳುವುದೇ ನಿಮ್ಮ ಚಾಳಿ ಆಗಿಬಿಟ್ಟಿದೆ. **(ಗೊಂದಲ)** ಈ ನೆಲದ ಕಾನೂನನ್ನು ಬದಲಾವಣೆ ಮಾಡಬೇಕಾಗುತ್ತದೆ. ನೀವು ಕೇಂದ್ರಕ್ಕೆ ಹೋಗಿ ಸೂಕ್ತ ತಿದ್ದುಪಡಿ ಮಾಡಿಸಿಕೊಂಡು ಬನ್ನಿ. ನೀವು ಸುಪ್ರೀಂ ಕೋರ್ಟ್‌ಗೆ ಹೋದರೆ ಅವರು ಹೇಗೆ ತಪರಾಕಿ ಹಾಕುತ್ತಾರೆ ಎನ್ನುವುದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಕೆ.ಎಸ್.ನವೀನ್:– ಅದು ನಿಮ್ಮ ಜವಾಬ್ದಾರಿಯಾಗಿದೆ.

ಶ್ರೀ ಈಶ್ವರ್ ಖಂಡ್ರೆ:– ಮಾನ್ಯ ಸಭಾಪತಿಗಳೆ, ಇವರು ಇಲ್ಲಿ ಕುಳಿತುಕೊಂಡು ಮಾತನಾಡುತ್ತಾರೆ. ಇರುವ ಕಾನೂನು–ಕಾಯಿದೆಯನ್ನು ಬದಲಾವಣೆ ಮಾಡಿಕೊಂಡು ಬನ್ನಿ. ನಾವು ಅದಕ್ಕೆ ಸಪೋರ್ಟ್ ಮಾಡುತ್ತೇವೆ. ನಾವು ವಿಧಾನಸಭೆಯಲ್ಲಿ ರೆಸಲ್ಯೂಷನ್ ಪಾಸ್ ಮಾಡಿದ್ದೇವೆ.

(ಗೊಂದಲ)

ಶ್ರೀ ಸುನೀಲ್ ವಲ್ಯಾಪುರ್:– ಮಾನ್ಯ ಸಭಾಪತಿಯವರೇ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸದನ ಸಮಿತಿಯನ್ನು ರಚನೆ ಮಾಡಿ.

ಶ್ರೀ ಸಿ.ಟಿ.ರವಿ:– ನಿಮ್ಮ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಕೆ.ಎಸ್. ನವೀನ್:– ನೀವು 60 ವರ್ಷ ಅಧಿಕಾರದಲ್ಲಿದ್ದು . . ..

ಶ್ರೀ ಈಶ್ವರ್ ಖಂಡ್ರೆ:– ನೀವು ಕೇಂದ್ರದಲ್ಲಿ 11 ವರ್ಷದಿಂದೇನು ಘನಂದಾರಿ ಕೆಲಸ ಮಾಡಿದ್ದೀರಿ?

(ಗೊಂದಲ)

ಸಭಾಪತಿಯವರು:– ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ಸಿ.ಟಿ.ರವಿ:– ನಿಮ್ಮ ಪೌರುಷ ಬಡವರ ಮೇಲೆ ತೋರಿಸಬೇಡಿ. ಮಾನ್ಯ ಸಭಾಪತಿಗಳೆ, ಒಂದು ಸದನ ಸಮಿತಿ ಮಾಡಲಿ. ಬಡವರ ಮೇಲೆ, ದಲಿತರ ಮೇಲೆ ಪೌರುಷ ತೋರಿಸುವುದಕ್ಕೆ ಹೋಗಬೇಡಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಗಳೆ, ಇದು 125 ವರ್ಷಗಳ ಗೆಜೆಟ್ ಆಗಿದೆ. ಆವತ್ತಿನಿಂದ ಇವರಿಗೆ ಸದರಿ ಜಾಗ ಅರಣ್ಯ ಇಲಾಖೆಯದ್ದೆಂದು ಗೊತ್ತಿರಲಿಲ್ಲವೇ? 2008ರವರೆಗೂ ಅರಣ್ಯ ಇಲಾಖೆಯವರು ಏನು ಮಾಡುತ್ತಿದ್ದರು? ಆ ಜಾಗವನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಕೊಟ್ಟು, ಅವರು ಅದನ್ನು ಬಡವರಿಗೆ ಹಂಚಿಕೆ ಮಾಡಿಯಾಗಿದೆ. ಅವರು ಆ ಜಾಗದಲ್ಲಿ ವ್ಯವಸಾಯ ಮಾಡಿಕೊಂಡು ಬದುಕುತ್ತಿದ್ದಾರೆ. ಅಲ್ಲೊಂದು ಗ್ರಾಮ ಸೃಷ್ಟಿಯಾಯಿತು, ಒಂದು ಪೋಲೀಸ್ ಸ್ಟೇಷನ್ ಕೂಡ ಸೃಷ್ಟಿಯಾಯಿತು. ಈಗ ಎಲ್ಲವೂ ಆಗಿದೆ. ನೀವು, "once a forest always a forest." ಎಂದು ಹೇಳಿದಿರಿ. ತೆಗೆದುಕೊಳ್ಳಿ, ನಾವೇನು ಬೇಡ ಎಂದು ಹೇಳುತ್ತಿಲ್ಲ. ಇದೇನು ಆದೇಶ ಬಂತೋ, ಈ ಆದೇಶದ ಮೊದಲನೆ ಪ್ಯಾರಾದ ಬಗ್ಗೆ ತುಂಬಾ ತಲೆ ಕೆಡಿಸಿಕೊಂಡಿದ್ದೀರಿ. ಆದರೆ ಎರಡನೆಯ ಪ್ಯಾರಾದಲ್ಲಿ ಏನಿದೆ ಎಂದರೆ, ನೀವು ಅದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದರೆ, ಜನರಿಂದ ಅಮೌಂಟ್ ಕಲೆಕ್ಟ್ ಮಾಡಿಕೊಂಡು ಬೇರೆ ಕಡೆ ಅರಣ್ಯ ಅಭಿವೃದ್ಧಿ ಮಾಡಿ ಎಂದು ಹೇಳಿದೆ. ಇದರ ಬಗ್ಗೆ ನೀವು ಮಾತನಾಡುತ್ತಿಲ್ಲ. ನೀವು ಏನು ಹೇಳುತ್ತಿದ್ದೀರಿ ಎಂದರೆ, ನಾವು ಬಿಡಬ್ಲ್ಯೂಎಸ್‌ಎಸ್‌ಬಿ ಗೆ ಕೊಟ್ಟೆವು, ಅವರು ಪರ್ಯಾಯ ಜಾಗವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೀರಿ. ಆದರೆ ಈ ಬಡವರು ಕೊಡುತ್ತಾರೆಯೇ? ಅವರಿಗೆ ಸರಿಯಾಗಿ ತಿನ್ನುವುದಕ್ಕೂ ಇಲ್ಲ. ನಿಮಗೆ ಎಲ್ಲಿಂದ ಜಾಗ ಕೊಡುತ್ತಾರೆ? ಅಲ್ಪಸ್ವಲ್ಪ ಹಣ ಕೊಡಿ ಎಂದು ಹೇಳಿ, ಅವರಿಂದ ಸಂಗ್ರಹ ಮಾಡಿ ಬೇರೆ ಕಡೆ ಅಭಿವೃದ್ಧಿ ಮಾಡಬಹುದು. ದೊಡ್ಡ ದೊಡ್ಡ ಇಲಾಖೆಗಳವರು ಬೇರೆ ಕಡೆ ಅರಣ್ಯ ಅಭಿವೃದ್ಧಿಗೆಂದು ಜಾಗ ಕೊಡುತ್ತಾರೆ ಎಂದು ಹೇಳುತ್ತೀರಿ. ಇದರ ಉದ್ದೇಶವೂ ಕೂಡ ಅದೇ ಆಗಿದೆ. ಬಡವರ ಜಾಗವನ್ನು ಕಿತ್ತುಕೊಂಡು, ಬೇಲಿ ಹಾಕಿ ಕಬ್ಜಾ ಮಾಡಿ ಕುಳಿತುಕೊಂಡಿದ್ದೀರಿ. ಯಾವರೀತಿ ನೀವು ಮೆಟ್ರೋ ಯೋಜನೆಗೆ ಜಾಗ ಕೊಟ್ಟಿದ್ದಿರೋ, ಕೈಗಾರಿಕೆಗಳಿಗೆ ಜಾಗ ಕೊಟ್ಟಿದ್ದೀರೋ ಅದೇರೀತಿ ದೊಡ್ಡ ದೊಡ್ಡ ವ್ಯಕ್ತಿಗಳು ಬರುತ್ತಾರೆ. ಅವರಿಗೆ ನೀವು ಕೊಡುತ್ತೀರಿ. ಇಲ್ಲಿ ಒಂದು ಎಕರೆ ಜಾಗಕ್ಕೆ ರೂ. 50 ಕೋಟಿ ಬೆಲೆ ಬಾಳುತ್ತದೆ ಎಂದು ಹೇಳಿದಿರಿ. ನಾನು ಆಗಲೇ, ರೂ. 10 ಕೋಟಿ ಬೆಲೆ ಇರಬಹುದು ಎಂದು ಕಡಿಮೆ ಮೊತ್ತ ಹೇಳಿಬಿಟ್ಟೆ. ಇಲ್ಲಿ ಒಂದು ಎಕರೆ ಜಾಗ 50 ಕೋಟಿ ಬೆಲೆ ಬಾಳುತ್ತದೆ ಎನ್ನುವ ಉದ್ದೇಶದಿಂದ ಈ ರೀತಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೀರಾ? 120 ಎಕರೆ ಅರಣ್ಯ ಪ್ರದೇಶದಲ್ಲಿ ಹೈಟೆಕ್ ಕೈಗಾರಿಕಾ ಪ್ರದೇಶ ನಿರ್ಮಾಣ ಮಾಡುತ್ತೇವೆ ಎಂದು ಹೇಳಿದ್ದೀರಿ. ಇದು ಸರ್ಕಾರದ ತೀರ್ಮಾನವಾಗಿದೆ. ಅದು ಇದೇ ಜಾಗವಾಗಿದೆ. ಆಗ ಆ ಜಾಗ ಅರಣ್ಯ ಇಲಾಖೆಯವರದ್ದಾಗದೇ ಕಂದಾಯ ಇಲಾಖೆಯವರದ್ದಾಗುತ್ತದೆಯೇ? ಹೀಗೆ ಮಾಡುವುದಾದರೆ ಇದರ ಪಕ್ಕದಲ್ಲಿರುವ ಎಲ್ಲಾ ಜಾಗಗಳನ್ನು ನೀವು ವಾಪಸ್ಸು ತೆಗೆದುಕೊಳ್ಳಬೇಕು. "Once a forest always a forest" ಎಂದು ಹೇಳಿದ ಮೇಲೆ ಅಲ್ಲೇಕೆ ಕೈಗಾರಿಕೆಗಳನ್ನು ಹಾಗೆಯೇ ಬಿಡುತ್ತೀರಿ? ನಿಮಗೆ ತಾಕತ್ತಿದ್ದರೆ ಅವುಗಳನ್ನು ವಾಪಸ್ಸು ತೆಗೆದುಕೊಂಡು ನಂತರ ಈ ಜಾಗವನ್ನು ತೆಗೆದುಕೊಳ್ಳಿ. ಎಲ್ಲರಿಗೂ ಒಂದೇ ನ್ಯಾಯ ಮಾಡಿ. ಆ ಜಾಗಕ್ಕೆ ಬದಲಾಗಿ ಬೇರೆಯದ್ದು ಕೊಡುವುದಕ್ಕೆ ಬಡವರ ಹತ್ತಿರ ಏನೂ ಇಲ್ಲ. ಹೀಗಿರುವಾಗ ಅವರು ನಿಮಗೆ ಏನು ಕೊಡುತ್ತಾರೆ? ನಾವು ಬಡವರ, ನಿರ್ಗತಿಕರ ಪರವಾಗಿ ಮಾತನಾಡುತ್ತಿದ್ದೇವೆ. ನಾವು ಕೈಗಾರಿಕೆಗಳ ಪರವಾಗಿ ಮಾತನಾಡುತ್ತಿಲ್ಲ.

(ಮುಂದು)

(662) 12-8-2025 6.00 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):-

ನೀವು ಅವರಿಗೇನು ನ್ಯಾಯ ಕೊಡುತ್ತೀರೋ ಅದೇ ನ್ಯಾಯವನ್ನು ಇವರಿಗೆ ಕೊಡಿ ಎಂದು ನಾವು ಕೇಳುತ್ತಿದ್ದೇವೆ. ನೀವು ಅವರ ಜಮೀನನ್ನು ತೆಗೆದುಕೊಳ್ಳುತ್ತೀರಾ, ತೆಗೆದುಕೊಳ್ಳಿ. ಆಗ ಇದನ್ನು ತೆಗೆದುಕೊಳ್ಳಿ. ಇಲ್ಲವೆಂದರೆ, ಸರ್ಕಾರ ತೀರ್ಮಾನಕ್ಕೆ ಬರಲಿ. ಅವರಿಗೆ ಎಲ್ಲಾದರೂ ಪರ್ಯಾಯ ವ್ಯವಸ್ಥೆಯನ್ನಾದರೂ ಮಾಡಬೇಕು. ನೀವು ಅವರನ್ನು ಕಳ್ಳರನ್ನಾಗಿ ಮಾಡುತ್ತಿದ್ದೀರಿ. ಅವರಿಗೆ ಸಂಬಂಧವೇ ಇಲ್ಲ, ಅಂದರೆ ಅವರು ಅಲ್ಲಿ ಇಷ್ಟು ದಿವಸ ವ್ಯವಸಾಯ ಮಾಡಲಿಲ್ಲವೇ? ಸರ್ಕಾರ ಅವರಿಗೆ ಎಲ್ಲಾ ದಾಖಲೆಗಳನ್ನು ಕೊಟ್ಟಿಲ್ಲವೇ? ದಾಖಲೆಗಳೇ ಇಲ್ಲ ಎಂದು ಹೇಳುತ್ತೀರಿ, ಇವರ ದಾಖಲೆಗಳನ್ನು ನೀವು ಮರೆಮಾಚಿ 2015-16ರ ಮೇಲೆ ನಿಮ್ಮ ದಾಖಲೆಗಳು ಸೃಷ್ಟಿಯಾಗಿವೆ. ಅವರು 70 ವರ್ಷಗಳಿಂದ ಇದ್ದಾರೆ. ನೀವು ಈಗ ಐದಾರು ವರ್ಷಗಳಲ್ಲಿ ನಿಮ್ಮ ದಾಖಲೆಗಳನ್ನು ಸೃಷ್ಟಿ ಮಾಡಿ ಅವರನ್ನು ನೀವು ಒಕ್ಕಲೆಬ್ಬಿಸಿದ್ದೀರಿ. ಸಚಿವರು, ನಾವೆಲ್ಲಾ ಅಲ್ಪಕಾಲಕ್ಕೆ ಇಲ್ಲಿ ಇರುತ್ತೇವೆ, ಹೋಗುತ್ತೇವೆ. ಸಮಾಜ ಯಾವತ್ತೂ ಇರುತ್ತದೆ. ಈ ರಾಜ್ಯ ಯಾವತ್ತೂ ಇರುತ್ತದೆ. ಒಬ್ಬರಿಗೊಂದು ಒಬ್ಬರಿಗೊಂದು ಆಗಬಾರದು. ಇವತ್ತು ಕೋರ್ಟ್ ಏನು ಹೇಳಿದೆ ಆ ಕಾನೂನು ಪ್ರಕಾರವೇ ಮಾಡಿ. ಪರ್ಯಾಯ ಜಮೀನು ಕೊಟ್ಟವರಿಗೆ ನೀವು ಕೊಡಿ ಎಂದು ಅದರಲ್ಲಿ ಹೇಳಲಿಲ್ಲ. ಸ್ಪೆಷಲ್ ಟೀಮ್ ಮಾಡಿ ಮುಖ್ಯ ಕಾರ್ಯದರ್ಶಿಯವರು ಪರಿಶೀಲನೆ ಮಾಡಿ ಆಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ಮುಖ್ಯ ಕಾರ್ಯದರ್ಶಿಯವರು ಮಾಡಿದ್ದಾರೆಯೇ? ಸ್ಪೆಷಲ್ ಟೀಮ್ ಆಗಿದೆಯೇ? ನಿಮಗೆ ಆದೇಶ ಕೊಟ್ಟವರು ಯಾರು? ಕೋರ್ಟ್‌ನಿಂದ ಆದೇಶ ಬಂದಿರಬಹುದು, ಕೋರ್ಟ್‌ನಿಂದ ಆದೇಶ ಬಂದ ಕೂಡಲೇ ಕಾಯ್ದೆ ಮಾಡುವುದಕ್ಕೆ ನೀವೇನು ಪ್ರತ್ಯೇಕ ಸರ್ಕಾರವಲ್ಲ. ಆದೇಶ ಪಾಲನೆ ಮಾಡಬೇಕು, ಯಾರು ಆದೇಶ ಪಾಲನೆ ಮಾಡಬೇಕು? ಮುಖ್ಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯದರ್ಶಿಯವರು ಸ್ಪೆಷಲ್ ಟೀಮ್ ಮಾಡಿದ ಮೇಲೆ ಮಾಡಬೇಕಾಗಿತ್ತು. ಆದೇಶ ಎಲ್ಲಿದೆ ಕೊಡಿ, ಸದನದ ಮುಂದೆ ಇಡಿ. ಇಲ್ಲದಿದ್ದರೆ ಎಲ್ಲರಿಗೂ ಅನ್ವಯವಾಗುವ ಕಾನೂನು ಅವರಿಗೂ ಅನ್ವಯ ಆಗಬೇಕು. ನೀವು ಕೆ.ಐ.ಎ.ಡಿ.ಬಿ. ಯವರಿಗೆ ಕೊಟ್ಟಿರುವ ಜಮೀನುಗಳು, "Once a forest, always a forest," ಅಲ್ಲವೇ? ಅದನ್ನು ತೆಗೆದುಕೊಳ್ಳಿ. ಅದನ್ನು ಅರಣ್ಯ ಜಮೀನುಗಳಾಗಿ ಮಾಡಿ. ಇಲ್ಲಿ ೫೦೦ ಎಕರೆ ಡಿಫೆನ್ಸ್‌ನವರದ್ದು ಜಾಗವಿದೆ. ನೀವು HMT (Hindustan Machine Tools) ಯವರದ್ದು ಕಬ್ಜ ಮಾಡಿದ್ದೀರಲ್ಲಾ ಅದರ ಪಕ್ಕದಲ್ಲೇ ಇದೆ. ಡಿಫೆನ್ಸ್ ಲ್ಯಾಂಡ್ ಅಲ್ಲೊಂದು ಇಲ್ಲೊಂದು ಬಿಲ್ಡಿಂಗ್ ಇದೆ. ಅವೆಲ್ಲಾ ೫೦೦ ಎಕರೆ ಇದೆ. ಅದನ್ನು ಅರಣ್ಯ ಜಮೀನು ಎಂದು ತೆಗೆದುಕೊಳ್ಳಿ. BSF (Border Security Force) ಯವರದ್ದು ಯಲಹಂಕ ರಸ್ತೆಯಲ್ಲಿದೆ. ಅದು ಕೂಡ ಅರಣ್ಯ ಜಮೀನು ಆಗಿದೆ. ಮೊನ್ನೆ ನೋಟಿಸ್ ಕೊಟ್ಟಿದ್ದೀರಿ ಎಂದು ಗೊತ್ತಾಗಿದೆ, ಅದನ್ನು ತೆಗೆದುಕೊಳ್ಳಿ. ಎಲ್ಲಾ ಜಮೀನು ತೆಗೆದುಕೊಳ್ಳಿ ನಮ್ಮದೇನು ಅಭ್ಯಂತರವಿಲ್ಲ. ಅರಣ್ಯ ರಕ್ಷಣೆ ಮಾಡಿ, ಆದರೆ ಜನರು ಬದುಕಬೇಕಲ್ಲವೇ? ನಿಮಗೆ ನಾವು ಬೆಂಬಲ ಕೊಡುತ್ತೇವೆ. ಆದರೆ, ಇಲ್ಲಿಯೂ ಅದನ್ನೇ ಮಾಡಿ. ನಾಳೆ ನೀವು ಅಲ್ಲಿರುವ ಫ್ಯಾಕ್ಟರಿಗಳನ್ನೆಲ್ಲಾ ಡೆಮಾಲಿಷ್ ಮಾಡಬೇಕು. ಆ ಜಾಗಗಳಲ್ಲಿ ಅರಣ್ಯ ಜಮೀನು ಇಲ್ಲ, ನೇಚರ್ ಫಾರೆಸ್ಟ್ ಯಾವತ್ತೂ ಇಲ್ಲ. ಅದು ನಿಮಗೆ ಹೇಗೆ ಅರಣ್ಯವಾಗುತ್ತದೆ? ನಿಮ್ಮದೇ ಅರಣ್ಯ ಪಕ್ಕದಲ್ಲಿ ಇದೆ. ಅಲ್ಲಿ ಮರಗಳೇ ಇಲ್ಲ, ಈಗ ಗಿಡ ನೆಡುತ್ತಿದ್ದಾರೆ. ಈ ರೈತರ ಜಮೀನಿನಲ್ಲೂ ಈಗ ಗಿಡ ನೆಡುತ್ತಿದ್ದಾರೆ. ಈಗ ಅಲ್ಲಿ ಅರಣ್ಯವನ್ನು ಮಾಡುತ್ತಿದ್ದೀರಿ. ಇಷ್ಟು ದಿನದಿಂದ ನೀವು ಏಕೆ ಅರಣ್ಯ ಮಾಡಲಿಲ್ಲ? ನೀವು ಅರಣ್ಯ ಮಾಡಿ, ನಮದೇನೂ ಅಭ್ಯಂತರವಿಲ್ಲ. ನೀವು ಫ್ಯಾಕ್ಟರಿಗಾಗಿ, ರೈಲ್ವೆ ಮಾರ್ಗಕ್ಕಾಗಿ ತೆಗೆದುಕೊಂಡಿದ್ದೀರಿ, ಅವರದ್ದು ತೆಗೆದುಕೊಳ್ಳಿ. ಆಮೇಲೆ ನಾವು ಸರ್ಕಾರದ ಜೊತೆ ಹೋರಾಟ ಮಾಡುತ್ತೇವೆ. ನಾವು ಮುಖ್ಯಮಂತ್ರಿಯವರನ್ನು ಕೇಳುತ್ತೇವೆ. ಆ ಬಡವರಿಗೆ ಎಲ್ಲಾದರೂ ನೆಲೆ ಕಾಣಿಸಿ. ಎಲ್ಲಾದರೂ ಅವರಿಗೆ ಜಾಗ ಕೊಡಿ ಎಂದು ನಾವು ಕೇಳುತ್ತೇವೆ. ನಮಗೇನೂ ಚಿಂತೆ ಇಲ್ಲ. ಆದರೆ, ಜಮೀನಿಗೆ ಬೆಲೆ ಬಂದಿದೆ, ಅದರಿಂದಾಗಿ ನಾವು ಯಾರಿಗೋ ೩೦ ವರ್ಷಕ್ಕೆ ಲೀಸ್‌ಗೆ ಕೊಟ್ಟುಬಿಟ್ಟರೆ ಅವರಿಗೆ ಪರ್ಯಾಯವಾಗಿ 2-3 ಲಕ್ಷ ರೂಪಾಯಿ ಬೆಲೆ ಬಾಳುವಂತಹ ಜಮೀನನ್ನು ಕೊಡುತ್ತಾರೆ. ಅಲ್ಲಿ ನಾವು ಅರಣ್ಯ ಮಾಡುತ್ತೇವೆ, ಇದನ್ನು ಮಾತ್ರ ನಾವು ಲೀಸ್ ಗೆ ಕೊಡುತ್ತೇವೆ, ಇದು ನಿಮ್ಮ ಪ್ರಶ್ನೆಯಾಗಿದೆ. ಇದೇ ರೀತಿ ಇದೆ ಎಂಬುದು ನನಗೂ ಗೊತ್ತಿದೆ. ಇಲ್ಲಿ ಹೆಚ್ಚು ಬೆಲೆ ಬಾಳುವಂತಹ ಜಮೀನುಗಳನ್ನು ತೆಗೆದುಕೊಳ್ಳಬೇಕು, ಲೀಸ್‌ಗೆ ಕೊಡಬೇಕು, ಅಲ್ಲೆಲ್ಲೋ ಪರ್ಯಾಯವಾಗಿ 2-3 ಲಕ್ಷ ರೂಪಾಯಿ ಬೆಲೆ ಬಾಳುವಂತಹ ಜಮೀನನ್ನು ಅವರು ಕೊಡುತ್ತಾರೆ. ಕಾನೂನು ಪ್ರಕಾರ ಅದು ಸರಿ ಹೋಗುತ್ತದೆ. ಅದಾದ ಮೇಲೆ ನಾವು ಮಜಾ ಮಾಡಬಹುದು ಎಂದು ತಿಳಿದುಕೊಂಡಿದ್ದಾರೆ. ಬಡವರ ನೆಲದಲ್ಲಿ ಮಜಾ ಮಾಡುವುದಕ್ಕೆ ಹೋಗಬೇಡಿ. ಈ ದೇಶದಲ್ಲಿ ಏನೆಲ್ಲಾ ಮಾಡಿದವರು ಉಳಿದಿಲ್ಲ. ಬಡವರ ಜಮೀನಿಗೆ ಕೈ ಹಾಕಬೇಡಿ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಈಶ್ವರ ಖಂಡ್ರೆ:- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅದೇ ವಿಚಾರವನ್ನು ಪುನರುಚ್ಚರಿಸುತ್ತಿದ್ದಾರೆ. ಈಗಾಗಲೇ ಅವರೆಲ್ಲಾ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇವೆ. ನಾನು ಅರಣ್ಯ ಇಲಾಖೆಯ ಸಚಿವನಾಗಿ ಇವತ್ತು ಮೇಲ್ಮನೆಯ ಸದನದಲ್ಲಿ ಹೇಳುತ್ತಿದ್ದೇನೆ. ಇವತ್ತು ಪ್ರಕೃತಿ, ಪರಿಸರ, ಅರಣ್ಯ ಸಂರಕ್ಷಣೆ ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಹಿಂದಿನಿಂದ ಸ್ವಾತಂತ್ರ್ಯ ಪೂರ್ವದಲ್ಲಿ 125 ವರ್ಷಗಳಿಂದ ಸತತವಾಗಿ ನಡೆಯುತ್ತಿದೆ. ಇದು ನಿರಂತರವಾಗಿ ನಡೆಯುವಂತಹ ಪ್ರಕ್ರಿಯೆ ಆಗಿದೆ. ಈ ಪ್ರಕ್ರಿಯೆಯಲ್ಲಿ ಅಲ್ಲಿ ಏಕೆ ಗಿಡ ನೀವು ಹಾಕಿಲ್ಲ, ಇಲ್ಲಿ ಏಕೆ ಗಿಡ ಹಾಕಿಲ್ಲ ಎಂದು ಅವರು ಕೇಳುತ್ತಿದ್ದಾರೆ. ಯಾವಾಗ ಎಷ್ಟು ಆರ್ಥಿಕವಾಗಿ ಸರ್ಕಾರ ಸಬಲವಾಗಿರುತ್ತದೆ, ಆ ಸಂದರ್ಭದಲ್ಲಿ ಎಷ್ಟು ಅನುದಾನ ಲಭ್ಯವಿರುತ್ತದೆ, ಲಭ್ಯತೆಯ ಆಧಾರದ ಮೇಲೆ ಮರ, ಗಿಡ, ತಂತಿ ಬೇಲಿ ಹಾಕುತ್ತಾರೆ. ಈ ನೆಲದ ಕಾನೂನು ಎಲ್ಲರಿಗೂ ಒಂದೇ ಇದೆ. ಈ ಕಾನೂನಿನಲ್ಲಿ ಇವರಿಗೊಂದು ಕಾನೂನು, ಅವರಿಗೊಂದು ಕಾನೂನು ಎನ್ನುವ ಪ್ರಶ್ನೆಯೇ ಇಲ್ಲ.

ಈಗ ಅರಣ್ಯ ಜಮೀನು linear projects ಗಳಾದ ರಸ್ತೆ ಅಥವಾ ಚರಂಡಿ, ರಾಷ್ಟ್ರೀಯ ಹೆದ್ದಾರಿ, ಕೆ.ಇ.ಬಿ. ಲೈನ್, transmission lines ಇವೆಲ್ಲಾ ಹಾಕುವುದಕ್ಕೆ ಕೇಂದ್ರ ಸರ್ಕಾರದಲ್ಲಿ ಕಾಯ್ದೆ ಮಾಡಿದ್ದಾರೆ. ಆ ಕಾಯ್ದೆಗೆ ಅನುಗುಣವಾಗಿ ಅರಣ್ಯ ಇಲಾಖೆಯ ಕ್ಲಿಯರೆನ್ಸ್‌ಗೆ ಸ್ಟೇಜ್-1 ಕ್ಕೆ ಬರುತ್ತದೆ. ಸ್ಟೇಜ್-1 ಕ್ಕೆ ಬಂದು ತಾತ್ಕಾಲಿಕವಾಗಿ ಲೀಸ್ ಎಂದು ಕೊಟ್ಟು ಮತ್ತೆ ಅದು ಅರಣ್ಯ ಇಲಾಖೆಯ ಹೆಸರಿನಲ್ಲಿಯೇ ಇರುತ್ತದೆ. ಪರ್ಮನೆಂಟ್ ಆಗಿ ಬೇರೆಯವರ ಹೆಸರಿಗೆ ಹೋಗುವುದಿಲ್ಲ. ಅಲ್ಲಿ ಕೊಡುತ್ತಾರೆ, ಇಲ್ಲಿ ಕೊಡುತ್ತಾರೆ ಎಂದು ಅವರು ಹೇಳುತ್ತಿದ್ದಾರೆ. ಅಲ್ಲಿ, ಇಲ್ಲಿ ಕೊಡುವಂತಹ ಪ್ರಶ್ನೆ ಇಲ್ಲ. ನಾನು ಮೇಲ್ಮನೆಯ ಸದನದಲ್ಲಿ ನಿಂತು ಹೇಳುತ್ತಿದ್ದೇನೆ. ಅವರದ್ದು ಇದೆ, ಇವರದ್ದು ಇದೆ ಎನ್ನುವುದು ಇಲ್ಲ. ನಾನು ಇವತ್ತು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನಾನು ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಯಾವುದೇ ಬಡವರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮನೆಯನ್ನು ತೆರವು ಮಾಡಿಲ್ಲ. ದಿಣ್ಣೂರಿನಲ್ಲಿ ಮನೆ ಯಥಾಸ್ಥಿತಿಯಲ್ಲಿದೆ. ಇವತ್ತು ಮತ್ತೊಂದು ಬಡಾವಣೆಯಲ್ಲಿ ಮಾಡಿದ್ದಾರೆ, ಆ ಮನೆಯೂ ಯಥಾಸ್ಥಿತಿಯಲ್ಲಿದೆ. ಅಕ್ರಮವಾಗಿ ಕೈಗಾರಿಕೆಗಳು ಬರುವಂತಹ ಸಂದರ್ಭದಲ್ಲಿ ಪೊಲೀಸರೇ ಖುದ್ದಾಗಿ ನಮಗೆ ಪತ್ರವನ್ನು ಬರೆಯುತ್ತಾರೆ. ದಿನಾ ಒಬ್ಬರು ಬಂದು ಕೇಸ್ ಅನ್ನು ಕೊಡುತ್ತಿದ್ದಾರೆ. Power of Attorney ತೆಗೆದುಕೊಂಡಿದ್ದಾರೆ. ಹಾವಳಿ ಜಾಸ್ತಿಯಾಗಿದೆ. ಯಾರ ಜಮೀನು ಇದೆ, ಯಾರ ಹೆಸರಿನಲ್ಲಿ ಇದೆ ಎಂಬುದು ಯಾರಿಗೂ ಗೊತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇವತ್ತು ಅವರು BMRCL (Bangalore Metro Rail Corporation Limited) ಎಂದು ಹೇಳುತ್ತಿದ್ದಾರೆ. ಇದಕ್ಕಾಗಿ ಕೇಂದ್ರ ಸರ್ಕಾರದ the Forest (Conservation) Act ಇದೆ. ಇವತ್ತು ಕಾಯ್ದೆ ಅಡಿಯಲ್ಲಿ ನಾವು ಅವರಿಗೆ ಕೊಟ್ಟಿದ್ದೇವೆ. ಅದನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆ ರೀತಿಯಲ್ಲಿ ಇವತ್ತು ಡಿಫೆನ್ಸ್‌ಗೆ ಕೊಟ್ಟಿರುವುದನ್ನು ಅವರು ಎಫ್.ಸಿ. (Forest Clearance) ಮಾಡಿ ಕೊಡುತ್ತೇವೆ ಎನ್ನುವಂಥದ್ದು ನಡೆಯುತ್ತಿದೆ. ಹೌದು, ಅವರಿಗೆ ನಾವು ನೋಟಿಸ್ ಕೊಟ್ಟಿದ್ದೇವೆ. ಏರ್‌ಫೋರ್ಸ್, ಎಚ್.ಎಂ.ಟಿ.ನವರಿಗೂ ನಾನು ಬಂದ ಮೇಲೆ ನೋಟಿಸ್ ಕೊಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ್ಯಾವುದೋ ಅರಣ್ಯ ಇಲಾಖೆಯ ಬೆಲೆ ಬಾಳುವಂತಹ ಜಮೀನು ಇದೆ, ಅದು ಯಾವುದೇ ಇರಲಿ, ನಾವು ಈಗ ನೋಟಿಸ್ ಕೊಟ್ಟ ಮೇಲೆ ಮತ್ತೆ ಯಾರಿಗಾದರೂ ಮಾರಾಟ ಮಾಡುವುದಕ್ಕಾಗುತ್ತದೆಯೇ? ಅದರ ಪ್ರಶ್ನೆಯೇ ಬರುವುದಿಲ್ಲ. ಇದನ್ನು ಮಾರಾಟ ಮಾಡುವುದಕ್ಕೂ ಬರುವುದಿಲ್ಲ, ಗ್ರಾಂಟ್ ಮಾಡುವುದಕ್ಕೂ ಬರುವುದಿಲ್ಲ, ಗಿಫ್ಟ್ ಮಾಡುವುದಕ್ಕೂ ಬರುವುದಿಲ್ಲ, ಮತ್ತೊಂದು ಯಾವುದೇ ಕೆಲಸ ಕಾರ್ಯಕ್ಕೆ ಬರುವುದಿಲ್ಲ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಲೀಸ್‌ಗೆ ಕೊಡಬಹುದು ಎಂದು ತಾವೇ ಹೇಳಿದ್ದೀರಿ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೇ, ಲೀಸ್ ಯಾವುದಕ್ಕೆ ಎಂದರೆ linear projects ಗೆ. ರಸ್ತೆ ಮಾಡುವುದಕ್ಕೆ,... ಆ ರೀತಿಯೂ ಮಾಡುವುದಕ್ಕೆ ಬರುವುದಿಲ್ಲ. ಅಭಿವೃದ್ಧಿಗೆ ಬಿಟ್ಟರೆ ಬೇರೆ ಯಾವುದನ್ನೂ ಮಾಡುವ ಹಾಗಿಲ್ಲ. ಯಾವುದಾದರೂ ಮಂದಿರ ಮಾಡುತ್ತೇವೆಂದರೆ ಅದಕ್ಕೆ ಅರಣ್ಯ ಭೂಮಿಯನ್ನು ಕೊಡುವುದಕ್ಕೆ ಬರುವುದಿಲ್ಲ. ನಾನು ಸುಮ್ಮನೆ ಉದಾಹರಣೆಗಾಗಿ ಹೇಳುತ್ತಿದ್ದೇನೆ. ಬಹಳಷ್ಟು ಪ್ರಸ್ತಾವನೆಗಳು ಬಂದಿದ್ದವು. ಆ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದಾಗ ತಿರಸ್ಕಾರ ಮಾಡಿ ಕಳುಹಿಸಿದ್ದಾರೆ. ನಾವು ಬಹಳ ಪಾರದರ್ಶಕವಾಗಿ ಸ್ವಚ್ಛ ಮನಸ್ಸಿನಿಂದ ಮಾಡಿದ್ದೇವೆ. ಇದರಿಂದ ಯಾರಿಗಾದರೂ ಹಾನಿ ಆಗಬೇಕು, ಮತ್ತೊಂದು ಆಗಬೇಕೆನ್ನುವ ದುರುದ್ದೇಶವಿಲ್ಲ. ಈ ರಾಜ್ಯದ ಅರಣ್ಯ ಸಂಪತ್ತನ್ನು ಉಳಿಸಬೇಕೆಂದು ಪ್ರಾಮಾಣಿಕತೆಯಿಂದ ಈ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ನನ್ನ ಮಾಹಿತಿ ಪ್ರಕಾರ ಆ ಜಮೀನಿನಲ್ಲಿ ಯಾರು ಉಳುಮೆಯೂ ಮಾಡಿಲ್ಲ, ಯಾವ ಬೆಳೆಯೂ ಬೆಳೆದಿಲ್ಲ, ಯಾವ ಮನೆಯೂ ಇಲ್ಲ. ಇವತ್ತು ತಂತ್ರಜ್ಞಾನ ಬಹಳ ಮುಂದುವರೆದಿದೆ. ಬೇಕಾದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೋಗಿ ಇಂಥಿಂಥವರ ಮನೆ ಇತ್ತು, ಇವರು ತೆರವು ಮಾಡಿದ್ದಾರೆ, ಮನೆಗಳನ್ನು ಧ್ವಂಸ ಮಾಡಿದ್ದಾರೆ, ನೆಲಸಮ ಮಾಡಿದ್ದಾರೆ ಎನ್ನುವಂತಹ ಪುರಾವೆಗಳೇನಾದರೂ ಇದ್ದರೆ ಕೊಡಿ. ನಾನು ಖುದ್ದಾಗಿ ಹೋಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ಮಾಡಿ ಪರಿಶೀಲನೆ ಮಾಡಲಿ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಇದರಲ್ಲಿ ಹಾನಿ ಮಾಡಬೇಕು ಎನ್ನುವ ಪ್ರಶ್ನೆ ಇಲ್ಲ.

ಶ್ರೀ ಕೇಶವ ಪ್ರಸಾದ್ ಎಸ್.(ವಿಧಾನಸಭಾ ಕ್ಷೇತ್ರ):– ಮಾನ್ಯ ಸಭಾಪತಿಯವರೇ, "Once a forest, always a forest," ಎಂದು ಸುಪ್ರೀಂ ಕೋರ್ಟ್ ಕೊಟ್ಟಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ನಾವು ಬೆಂಗಳೂರು ಮಹಾನಗರವನ್ನು ತೆಗೆದುಕೊಂಡಾಗ ಬೆಂಗಳೂರು ಮಹಾನಗರ ಬೆಳೆಯುತ್ತಿದೆ ಎಂದಾಗ ಬೆಂಗಳೂರಿನಲ್ಲಿ ೩೦೦ ಕ್ಕಿಂತ ಹೆಚ್ಚಿನ ಕೆರೆಗಳು ಇತ್ತು. ಈಗ ಧರ್ಮಾಂಬುದಿ ಕೆರೆ ಬಸ್ ಸ್ಟ್ಯಾಂಡ್ ಆಗಿದೆ. ಕೋರಮಂಗಲದಲ್ಲಿರುವ ಸ್ಟೇಡಿಯಂ ಕೆರೆಯ ಜಾಗವಾಗಿದೆ. Lower Palace Orchards ಕೂಡ ಕೆರೆ ಜಾಗವಾಗಿದೆ. NGT (National Green Tribunal) ಗೆ ವ್ಯಾಜ್ಯ ಹೋದಾಗ ಅದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿದಾಗ, ಈಗ ಕೆರೆ ಎನ್ನುವಂತಹ ಯಾವುದೇ ರೀತಿಯ ಒಂದು ಕುರುಹು ಇಲ್ಲ, ಅದೆಲ್ಲಾ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಯವಾಗಿದೆ. ಹಾಗಾಗಿ ಇದೇನು ಮಾಡುವುದಕ್ಕಾಗುವುದಿಲ್ಲ ಎಂದು ತೀರ್ಪನ್ನು NGT ಕೊಡುವುದಾದರೆ ಇಲ್ಲೂ ನಾವು ಏಕೆ curative petition ಹಾಕಿಕೊಳ್ಳಲಿಲ್ಲ?

(ಮುಂದು)

(663) 12/08/2025 6:10 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)

ಶ್ರೀ ಎಸ್.ಕೇಶವ ಪ್ರಸಾದ್ (ಮುಂದು):-

ಇಲ್ಲಿ ನಾವು ಒಂದು ಕ್ಯೂರೇಟಿವ್ ಅರ್ಜಿ (curative petition) ಯನ್ನು ಏಕೆ ಸಲ್ಲಿಸಲಿಲ್ಲ? ಬಹಳಷ್ಟು ಜನಕ್ಕೆ ಅಂದರೆ ಎಸ್.ಸಿ., ಎಸ್.ಟಿ. ಮತ್ತು ಒ.ಬಿ.ಸಿ. ಸಮುದಾಯ ಹಾಗೂ ಬಡ ವರ್ಗದವರಿಗೆ ತೊಂದರೆಯಾಗುತ್ತಿದೆ ಎಂದು ಸರ್ಕಾರಕ್ಕೆ ಗೊತ್ತಾದಾಗ ಸರ್ಕಾರವು ಒಂದು ಕ್ಯೂರೇಟಿವ್ ಅರ್ಜಿಯನ್ನು ಹಾಕಿಕೊಳ್ಳಬಹುದಾಗಿತ್ತು. ಇದರ ವಿಚಾರಣೆಯನ್ನು ಮುಖ್ಯ ನ್ಯಾಯಾಧೀಶರು ನಡೆಸಿ, ಅವರೇ ಆದೇಶವನ್ನೂ ಸಹ ನೀಡಬಹುದಾಗಿತ್ತು. ಈ ರೀತಿಯಾದ ಅರ್ಜಿಯನ್ನು ಸಲ್ಲಿಕೆ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶವಿತ್ತು. ಸರ್ಕಾರವು ನ್ಯಾಯಾಲಯಕ್ಕೆ ಹೋಗಿ, ತನಗೆ ಇರುವ ಸಮಸ್ಯೆಯ ಬಗ್ಗೆ ಪರಿಹಾರವನ್ನು ಕೇಳಿ ಪಡೆದುಕೊಳ್ಳಬಹುದಾಗಿತ್ತು. ವಿರೋಧ ಪಕ್ಷದ ನಾಯಕರು ಹೇಳುತ್ತಿರುವಂತೆ, ಬೇರೆ ಕಡೆಗೆ ಜಮೀನು ಸಿಗಬಹುದು ಎನ್ನುವುದಾದರೆ, ಸರ್ಕಾರವೇ ಬೇರೆ ಕಡೆಗೆ ಜಾಗವನ್ನು ನೀಡಿ, ಅವರುಗಳನ್ನು ಅಲ್ಲಿಯೇ ಉಳಿಸಿಕೊಳ್ಳುವಂತಹ ಪ್ರಯತ್ನ ಮಾಡಬಹುದಲ್ಲವೇ? ಇನ್ನುಳಿದ ಜಾಗವನ್ನು ಉಳಿಸಿ, ಎಲ್ಲ ಮನೆಗಳು ಈಗಾಗಲೇ ಆಗಿವೆಯೋ, ಅವುಗಳನ್ನು ಹಾಗೆಯೇ ಸಂರಕ್ಷಣೆ ಮಾಡುವ ಕೆಲಸವನ್ನು ಸರ್ಕಾರ ಮಾಡಬಹುದಾಗಿತ್ತಲ್ಲವೇ? ಅಲ್ಲಿರುವ ಜನರನ್ನೆಲ್ಲಾ ಒಕ್ಕಲೆಬ್ಬಿಸಿ, ಆ ಜಾಗವನ್ನು ಅರಣ್ಯವನ್ನಾಗಿ ಮಾಡುತ್ತೇವೆ ಎಂಬ ಜಿದ್ದು ಸರ್ಕಾರಕ್ಕೆ ಏಕೆ ಇದೆ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಈಗ ಸಚಿವರು ಮಾತನಾಡಿದ ರೀತಿಯನ್ನು ನೋಡಿದರೆ, ನಾಳೆಯ ದಿನ ಯಾವುದಾದರೊಂದು ಒಳ್ಳೆಯ ಕಾರ್ಯಕ್ಕೆ ಅದನ್ನು ಉಪಯೋಗಿಸುತ್ತೇವೆ ಎಂದರೆ ಹೇಗೆ? ಅವರುಗಳನ್ನು ಒಕ್ಕಲೆಬ್ಬಿಸಿದ ನಂತರ ಆ ಜಾಗವನ್ನು ಸರ್ಕಾರವು ಬಳಸಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬಹುದಲ್ಲವೇ? ಆಗಲಾದರೂ ಅಲ್ಲಿ ಜಾಗ ಇದ್ದೇ ಇರುತ್ತದೆಯಲ್ಲವೇ? ಒಂದು ಬಾರಿ ಅವರನ್ನು ಒಕ್ಕಲೆಬ್ಬಿಸಿದ ನಂತರ ಆ ಜಾಗವನ್ನು ನಾವು ಯಾವುದಕ್ಕೂ ಉಪಯೋಗಿಸುವುದೇ ಇಲ್ಲ ಎಂಬುದಾಗಿ ಸರ್ಕಾರವು ಹೇಳುವುದಕ್ಕಾಗುತ್ತದೆಯ? ಗಡಿ ಭದ್ರತಾ ಪಡೆ (Border Security Force), ಸೇನೆ (Army) ಮತ್ತು ಬಿ.ಎಂ.ಆರ್.ಸಿ.ಎಲ್. (Bangalore Metro Rail Corporation Limited) ಸಂಸ್ಥೆಗಳಿಗೆ ಸರ್ಕಾರವು ಯಾವ ರೀತಿಯಾಗಿ ಜಮೀನು ನೀಡಿದೆಯೋ, ಆ ರೀತಿಯಾಗಿ ಎಲ್ಲರಿಗೂ ಸಹ ಜಾಗ ನೀಡಬಹುದು. ಅಲ್ಲಿ ವಿದ್ಯುತ್ ಲೈನ್‌ಗಳನ್ನು ಹಾಕಲಾಗುತ್ತದೆ ಎಂದು ಜಾಗ ನೀಡಬೇಕಾಗುತ್ತದೆ. ಇದು ಕೇಂದ್ರದ ಕಾನೂನು ಆಗಿದೆ. ಇದನ್ನು ಯಾರೂ ಸಹ ತಡೆಯುವುದಕ್ಕಾಗುವುದಿಲ್ಲ. ಇದೇ ರೀತಿಯಾಗಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದೊಂದು ದಿನ ಮತ್ತೊಂದು ಯೋಜನೆ ಬರುತ್ತದೆ ಎಂದು, ಅಲ್ಲಿರುವವರನ್ನೆಲ್ಲಾ ಒಕ್ಕಲೆಬ್ಬಿಸಿದ ಮೇಲೆ ಅದನ್ನು ತಡೆಯುವುದಕ್ಕಾಗುವುದಿಲ್ಲ ಎನ್ನುವ ಖಾತ್ರಿ ಏನು? ಈ ಕಾರಣಕ್ಕಾಗಿ ನಾನು ಹೇಳುತ್ತಿದ್ದೇನೆ. ದಯಮಾಡಿ, ಸರ್ಕಾರವು ಇದರಲ್ಲಿ ಆದ್ಯತೆಯ ಮೇರೆಗೆ ವಿಷಯವನ್ನು ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಸರ್ವೋಚ್ಚ ನ್ಯಾಯಾಲಯದಲ್ಲಿ ಕ್ಯೂರೇಟಿವ್ ಅರ್ಜಿಯನ್ನು ಸರ್ಕಾರವು ಸಲ್ಲಿಸಬೇಕು. ಅಲ್ಲಿರುವ ಜನರಿಗೆ ಪರ್ಯಾಯ ಜಾಗವನ್ನು ಕೊಡುವ ನಿಟ್ಟಿನಲ್ಲಿ ಬೇರೆ ಜಾಗವನ್ನು ತೆಗೆದುಕೊಂಡು ಅಲ್ಲಿ ಅರಣ್ಯಾಭಿವೃದ್ಧಿಯನ್ನು ಮಾಡುತ್ತೇವೆ ಎಂಬ ನಿಲುವನ್ನು ಸರ್ಕಾರವು ಕೈಬಿಡಬೇಕೆಂದು ನಾನು ಆಗ್ರಹ ಮಾಡುತ್ತೇನೆ.

ಸಭಾಪತಿಯವರು:– ಸಚಿವರೇ, ಸದಸ್ಯರುಗಳು ಹೇಳಿರುವ ಅಂಶಗಳನ್ನೆಲ್ಲಾ ನೋಟ್ ಮಾಡಿಕೊಂಡು, ಮತ್ತೊಮ್ಮೆ ಇದರ ಬಗ್ಗೆ ವಿಚಾರ ಮಾಡಿ, ಅಂತಿಮ ತೀರ್ಮಾನಕ್ಕೆ ಬನ್ನಿ.

ಶ್ರೀ ಈಶ್ವರ ಖಂಡ್ರೆ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):– ಮಾನ್ಯ ಸಭಾಪತಿಯವರೆ, ನಾನು ಮತ್ತೊಮ್ಮೆ ಬಹಳ ಸ್ಪಷ್ಟವಾಗಿ ಪುನರುಚ್ಚರಿಸುತ್ತಿದ್ದೇನೆ. ಯಾವುದೇ ಬಡವರ ಮನೆಯನ್ನು ತೆರವುಗೊಳಿಸಿಲ್ಲ ಹಾಗೂ ಆ ರೀತಿಯಾಗಿ ಮಾಡುವುದೂ ಸಹ ಇಲ್ಲ. ಈ ಅಂಶವು ಅವರ ಗಮನದಲ್ಲಿರಲಿ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಪತಿಯವರೆ, ಅಲ್ಲಿ ಈ ರೀತಿಯಾಗಿ ಆಗಿದೆ. 711 ಎಕರೆ ಪ್ರದೇಶವನ್ನು ಸರ್ಕಾರವು ಪೂರ್ತಿಯಾಗಿ ತೆಗೆದಿಟ್ಟುಕೊಳ್ಳುವುದು ಎಂದರೆ, ಅದಕ್ಕೆ ನನ್ನ ಅಭ್ಯಂತರವೇ ಇಲ್ಲ. ಇದನ್ನೂ ಸಹ ಸರ್ಕಾರವು ತೆಗೆದಿಟ್ಟುಕೊಳ್ಳಲಿ. 711 ಎಕರೆ ಪ್ರದೇಶದಲ್ಲಿಯೇ ಇವರು ಇದ್ದಾರೆ. ಅಷ್ಟೂ ಪ್ರದೇಶವನ್ನು ಸರ್ಕಾರವು ತೆಗೆದುಕೊಳ್ಳಲಿ. ಆಗ ನಾನು ಅವರ ಪರವಾಗಿಯೂ ಸಹ ಹೋರಾಟ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, ಕಾನೂನನ್ನು ಸರ್ಕಾರವು ಎತ್ತಿ ಹಿಡಿದಿದೆ ಎಂದು ನಾನು ಅವರನ್ನು ಅಭಿನಂದಿಸುತ್ತೇನೆ. ಅದನ್ನು ಬಿಟ್ಟು, ಅವರ ತೀರ್ಮಾನದಂತೆ ಆ ಜಾಗವನ್ನು ರೈಲ್ವೆ ಇಲಾಖೆಯವರಿಗೆ ನೀಡಿದ್ದೇವೆ; ವಿಶೇಷ ತೀರ್ಮಾನದಂತೆ ಕೆ.ಐ.ಎ.ಡಿ.ಬಿ. ಸಂಸ್ಥೆಗೆ ನೀಡಿದ್ದೇವೆ ಎಂದು ಹೇಳಿದರೆ, ಇವು ಯಾವ ರೀತಿಯ ತೀರ್ಮಾನಗಳಾಗಿವೆ. ಪರಿಸ್ಥಿತಿ ಹೀಗೆ ಇದ್ದರೆ, ಸರ್ಕಾರವು ಬಡವರ ಪರವಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಅಲ್ಲಿರುವ ಪ್ರದೇಶವೆಲ್ಲಾ ಅಭಿವೃದ್ಧಿಗೊಂಡಿವೆ; ಹೀಗಾಗಿ ಅವುಗಳನ್ನೆಲ್ಲಾ ಉಳಿಸಿಕೊಡುತ್ತೇವೆ ಎಂದು ಸರ್ಕಾರವು ಹೇಳುವುದಾದರೆ.., ಅಲ್ಲಿ ಸಣ್ಣ ಪುಟ್ಟ ಮನೆಗಳು ಇವೆ. ಹೀಗಾಗಿ ಸರ್ಕಾರವು ಅವುಗಳನ್ನೆಲ್ಲಾ ಒಡೆದು ಹಾಕಿದರೆ ಹೇಗೆ? ಇಲ್ಲವೆಂದಾದರೆ ಅವರುಗಳು ಏಕೆ ಈ ರೀತಿಯಾಗಿ ಹೇಳುತ್ತಿದ್ದರು? ಒಂದು ವೇಳೆ ಈ ವಿಷಯವು ಅವರಿಗೆ ಸಂಬಂಧಿಸಿಲ್ಲವೆಂದಾದರೆ, ಅವರುಗಳು ಏಕೆ ಬರುತ್ತಾರೆ? ಅವರ ಬಳಿ ದಾಖಲೆಗಳಿವೆ. ಒಂದು ವೇಳೆ, ಅವರ ಬಳಿ ಈ ರೀತಿಯ ದಾಖಲೆಗಳು ಇಲ್ಲವೆಂದಾದರೆ, ಸರ್ಕಾರವು ಅವರನ್ನೆಲ್ಲಾ ಒಕ್ಕಲೆಬ್ಬಿಸಿ ಕಳುಹಿಸಿಬಿಡಲಿ. ಆದರೆ, ಅವರ ಬಳಿ ದಾಖಲೆಗಳಿವೆ. ಆದರೆ, ಸರ್ಕಾರವು ದಾಖಲೆಗಳಿಲ್ಲ ಎಂಬುದಾಗಿ ಹೇಳುತ್ತಿದೆ. ಆದರೆ, ಸರ್ಕಾರದ ದಾಖಲೆಗಳು 2015 ರಲ್ಲಿ ಸೃಷ್ಟಿಯಾಗಿವೆ. ಕೇವಲ 10-13 ವರ್ಷಗಳಿಂದ ಈ ರೀತಿಯ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಾಖಲೆಗಳು ಸೃಷ್ಟಿಯಾಗುತ್ತಿವೆ. ಆದರೆ, ಅದಕ್ಕೂ ಮುಂಚಿನಿಂದಲೂ ಈ ದಾಖಲೆಗಳು ಅವರ ಬಳ ಇವೆ. ಸರ್ಕಾರ ಇದಕ್ಕೆ ಏನು ಹೇಳುತ್ತದೆ? ಸಚಿವರು ಹೃದಯದಿಂದ ಮಾತನಾಡಬೇಕು.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರ ಬಳ ಯಾವ ಯಾವ ದಾಖಲೆಗಳಿವೆಯೋ, ಅವುಗಳನ್ನು ನಮಗೆ ನೀಡಲಿ. ನಾನು ಹೇಳುವುದನ್ನು ಅವರು ಕೇಳಲಿ. ನಾನು ಈಗಾಗಲೇ ಹೇಳಿದಂತೆ, ಅಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ ಏನಿತ್ತೋ, ಅದು ಈ ಹಿಂದೆನೇ ಮುಚ್ಚಿಹೋಗಿದೆ. ಅದು ಮುಚ್ಚಿಹೋದ ನಂತರ, ಯಾರ್ಯಾರು ಸಂಘದ ಸದಸ್ಯರಾಗಿದ್ದರೋ, ಅವರುಗಳೆಲ್ಲಾ ಕೆ.ಎ.ಟಿ.ಗೆ ಮೇಲ್ಮನವಿಯನ್ನು ಸಲ್ಲಿಸಿದರು. ಇದರ ವಿಚಾರಣೆ ನಡೆಸಿದ ಕೆ.ಎ.ಟಿ. ಇವರುಗಳು ಸಲ್ಲಿಸಿದ ಮೇಲ್ಮನವಿಯನ್ನು ವಜಾಗೊಳಿಸುತ್ತದೆ. ನಂತರದಲ್ಲಿ ಅವರುಗಳು ಉಚ್ಚ ನ್ಯಾಯಾಲಯದ ಮೋರೆ ಹೋಗುತ್ತಾರೆ. ಅಲ್ಲಿಯೂ ಸಹ ಅವರ ಮೇಲ್ಮನವಿಯು ವಜಾಗೊಳ್ಳುತ್ತದೆ. ಇವತ್ತಿನ ದಿವಸ ಕಾನೂನಿನ್ವಯ, ಬೆಂಗಳೂರು ನಗರದ ಸುತ್ತಮುತ್ತ 18 ಕಿಲೋ ಮೀಟರ್ ವ್ಯಾಪ್ತಿಯವರೆಗೆ ಯಾರಿಗೂ ಜಮೀನು ಮಂಜೂರಾತಿ ಮಾಡುವುದಕ್ಕೆ ಅವಕಾಶವಿಲ್ಲ. ಈ ರೀತಿಯಾಗಿ ಇರುವ ಎಲ್ಲಾ ಕಾಯ್ದೆಗಳನ್ನು ನಾನು ಸದನದ ಮುಂದೆ ಮಂಡಿಸಿದ್ದೇನೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ ….,

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಬೇಕು. ಅವರು ತಮ್ಮ ಬಳ ದಾಖಲೆ ಇದೆ ಎಂದು ಹೇಳುತ್ತಿದ್ದಾರೆ; ಹೀಗಾಗಿ ಅವುಗಳನ್ನು ನನಗೆ ನೀಡಲಿ; ಅವುಗಳನ್ನು ನಾನು ಅಡ್ವೊಕೇಟ್ ಜನರಲ್ ಹಾಗೂ ಕಾನೂನು ತಜ್ಞರಿಗೆ ಕಳುಹಿಸಿ ಕೊಡುತ್ತೇನೆ. ಇವರುಗಳಿಂದ ವರದಿ ಬಂದ ನಂತರ, ಅದನ್ನು ಸದನಕ್ಕೆ ಒಪ್ಪಿಸುತ್ತೇನೆ.

ಸಭಾಪತಿಯವರು:– ಸರಿ ಹಾಗೆಯೇ ಮಾಡಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ನಾನು ಹೇಳುವುದೇನೆಂದರೆ, ಬೆಂಗಳೂರು ನಗರದ ಸುತ್ತಮುತ್ತಲಿನ 18 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಯಾರಿಗೂ ಸಹ ಜಮೀನು ಮಂಜೂರು ಮಾಡಬಾರದು ಎಂಬ ಕಾನೂನನ್ನು ಜಾರಿಗೆ ತಂದಿದ್ದಾರೆ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:– ಮಾನ್ಯ ಸಭಾಪತಿಯವರೆ, ಈ ವಿಷಯದ ಬಗ್ಗೆ ಸದನ ಸಮಿತಿ ರಚನೆಯಾಗಲಿ.

ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):– ಮಾನ್ಯ ಸಭಾಪತಿಯವರೆ, ಸಚಿವರು ಹೇಳಿದ್ದನ್ನು ಪರಿಶೀಲನೆ ಮಾಡಲಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾದ ಪ್ರಕರಣವಾಗಿದೆ. ಇದು ಸರಿಯಾಗಿಲ್ಲ. **(ಗೊಂದಲ)** ಬೆಂಗಳೂರು ನಗರದ ಸುತ್ತಮುತ್ತಲಿನ 18 ಕಿಲೋ ಮೀಟರ್

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯಾಪ್ತಿಯಲ್ಲಿ ಯಾರಿಗೂ ಸಹ ಜಮೀನು ಮಂಜೂರು ಮಾಡಬಾರದು ಎಂಬ ಕಾನೂನನ್ನು ಮಾಡಿರುವುದು ಯಾವಾಗ? **(ಗೊಂದಲ)** ಇದು 75 ವರ್ಷಗಳ ವಿಷಯವಾಗಿದೆ. ಆದರೆ ಸಚಿವರು ಹೇಳುತ್ತಿರುವ ಬೆಂಗಳೂರು ನಗರದ 18 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಜಮೀನನ್ನು ಯಾರಿಗೂ ನೀಡಬಾರದು ಎಂಬ ಕಾನೂನು ಇತೀಚೆಗೆ ಬಂದಿದ್ದು, ಇದನ್ನು ಅದಕ್ಕೆ ಹೇಗೆ ಹೋಲಿಕೆ ಮಾಡುತ್ತಾರೆ?

(ಗೊಂದಲ)

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೆ, ಅರಣ್ಯ ಇಲಾಖೆಯ ಅನುಮೋದನೆ ಇದೆ ಎಂದು ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಈ ಕಾನೂನನ್ನು ಆ ಕಾನೂನಿಗೆ ಯಾವ ರೀತಿಯಾಗಿ ಹೋಲಿಕೆ ಮಾಡುತ್ತಾರೆ?

ಸಭಾಪತಿಯವರು:– ಅವರು ಏನು ಮಾಡಬೇಕೆಂದು ನೀವು ಹೇಳುತ್ತೀರಿ?

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೆ, ಸದನ ಸಮಿತಿ ರಚನೆ ಮಾಡಲಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಸದನ ಸಮಿತಿ ರಚನೆ ಮಾಡಲಿ.

(ಗೊಂದಲ)

ಸಭಾಪತಿಯವರು:– ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಇಲ್ಲವೆಂದಾದರೆ, ಎಲ್ಲವನ್ನೂ ಸರ್ಕಾರವು ತೆಗೆದುಕೊಳ್ಳಲಿ; ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಒಂದು ವೇಳೆ ಎಲ್ಲವನ್ನೂ ತೆಗೆದುಕೊಳ್ಳಲು ಆಗುವುದಿಲ್ಲವೆಂದಾದರೆ, ಅದನ್ನೂ ಸಹ ಮುಟ್ಟುವುದು ಬೇಡ. ಇದರಲ್ಲಿ ಬಡವರ ಪ್ರಶ್ನೆ ಇದೆ; ಹೀಗಾಗಿ ನಾನು ನಮಸ್ಕಾರ ಮಾಡುತ್ತೇನೆ. **(ಗೊಂದಲ)** ಅವರ ತಂದೆಯವರ ಕಾಲದಿಂದಲೂ ನಾವು ನೋಡಿದ್ದೇವೆ. ಅವರು ಬಡವರ ಪರವಾಗಿ ಇದ್ದವರು. ಆದರೆ, ಇವರು ಏಕೆ ಹೀಗೆ ಮಾಡುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ನಾನೂ ಏನೂ ಮಾಡುವುದಿಲ್ಲ.

(ಗೊಂದಲ)

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:– ಮಾನ್ಯ ಸಭಾಪತಿಯವರೆ, ಸದನ ಸಮಿತಿ ನೇಮಕ ಮಾಡಲಿ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ಆ ಜಾಗದಲ್ಲಿ ಒಂದು ಇಂಚಿನಷ್ಟು ಜಾಗವನ್ನು ಯಾರಿಗೂ ಕೊಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಹಾಗಿದ್ದರೆ, ಅದನ್ನು ಅವರಿಗೆ ಬಿಟ್ಟುಬಿಡಿ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ಅಲ್ಲಿರುವ ಯಾವುದೇ ಮನೆಯನ್ನು ತೆರವು ಮಾಡಿಲ್ಲ. ಯಾವುದೇ ಮನೆಯನ್ನು ನೆಲಸಮ ಮಾಡಿಲ್ಲ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಅದು ಯಾರದ್ದು ಇವೆಯೋ, ಅವರಿಗೆ ಕೊಟ್ಟುಬಿಡಿ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ಇಲ್ಲಿ ಕಾಯ್ದೆ ಮತ್ತು ಕಾನೂನು ಪ್ರಶ್ನೆ ಇದೆ. ಈ ನೆಲದ ಕಾನೂನು ಎಲ್ಲರಿಗೂ ಒಂದೇಯಾಗಿದೆ. ಬಿ.ಎಂ.ಆರ್.ಸಿ.ಎಲ್. ಸಂಸ್ಥೆಗೆ ಏಕೆ ಜಮೀನು ನೀಡಲಾಗಿದೆ ಎಂದು ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಕಾಯ್ದೆ ಕಾನೂನುಗಳಿವೆ.

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಅದು ಈಗಾಗಲೇ ಅಭಿವೃದ್ಧಿಗೊಂಡಿರುವುದರಿಂದ ಅಲ್ಲಿ ಯಾವುದೇ ಅರಣ್ಯ ಪ್ರದೇಶವಿಲ್ಲ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ಅದು ಕೇಂದ್ರ ಸರ್ಕಾರದ ಕಾಯ್ದೆಯಾಗಿರುವುದರಿಂದ ಅವರು ಕೇಂದ್ರಕ್ಕೆ ಹೋಗಿ ತಿದ್ದುಪಡಿಯನ್ನು ಮಾಡಿಸಬೇಕು.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಅಲ್ಲಿ ಅರಣ್ಯ ಪ್ರದೇಶವಿಲ್ಲ. ಒಂದು ವೇಳೆ ಅಲ್ಲಿ ಅರಣ್ಯ ಪ್ರದೇಶವಿದ್ದರೆ ನಾವೇ ಅದನ್ನು ಕೇಳುವುದಿಲ್ಲ. ಅಲ್ಲಿ ಕೇವಲ ಖಾಲಿ ಜಾಗ ಇದೆ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ಇದಕ್ಕೆ ಸಂಬಂಧಿತ ಕಾಯ್ದೆ ಕಾನೂನುಗಳು ಏನು ಹೇಳುತ್ತವೆಯೋ, ಅದನ್ನೆಲ್ಲಾ ಸದನದ ಮುಂದೆ ಇಟ್ಟಿದ್ದೇನೆ. ಅದಕ್ಕೆ ಹೊರತುಪಡಿಸಿ, ವಿರೋಧ ಪಕ್ಷದ ನಾಯಕರ ಹತ್ತಿರ ಏನು ದಾಖಲೆ ಇದೆ ಅದನ್ನು ಕೊಡಲಿ. ನಾನು ಅವುಗಳನ್ನು ಅಡ್ವೊಕೇಟ್ ಜನರಲ್ ಮತ್ತು ಕಾನೂನು ಇಲಾಖೆಗಳಿಗೆ ಕಳುಹಿಸಿ ಕೊಡುತ್ತೇನೆ. ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದುಕೊಂಡ ನಂತರ ಅದನ್ನು ಸದನಕ್ಕೆ ಒಪ್ಪಿಸಿ, ಅದರ ಪ್ರತಿಯನ್ನೂ ಸಹ ಅವರಿಗೆ ನೀಡುತ್ತೇನೆ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಅವರು ಅದನ್ನೆಲ್ಲಾ ತೆಗೆದುಕೊಂಡರೆ, ನನ್ನ ಪ್ರಶ್ನೆ ಏನೂ ಇಲ್ಲ. ಇದನ್ನು ತೆಗೆದುಕೊಂಡರೆ, ಅದನ್ನೂ ತೆಗೆದುಕೊಳ್ಳುತ್ತೇನೆ ಎಂದು ಸಚಿವರು ತಿಳಿಸಬೇಕು. ಒಂದು ವೇಳೆ ಇದನ್ನು ತೆಗೆದುಕೊಳ್ಳುವುದಕ್ಕಾಗಿಲ್ಲ ಎಂದರೆ, ಅದನ್ನೂ ತೆಗೆದುಕೊಳ್ಳುವುದಿಲ್ಲ ಎಂದಷ್ಟೇ ಸಚಿವರು ಹೇಳಿದರೆ ಸಾಕು; ನನಗೆ ಇನ್ನೇನೂ ಬೇಡ. 711 ಎಕರೆ ಪ್ರದೇಶ...

ಶ್ರೀ ಸಿ.ಟಿ.ರವಿ:– ಮಾನ್ಯ ಸಭಾಪತಿಯವರೆ, ಕಾನೂನು ಎಲ್ಲರಿಗೂ ಒಂದೇ ಆಗಿರುತ್ತದೆ. **(ಗೊಂದಲ)** ಸರ್ವೋಚ್ಚ ನ್ಯಾಯಾಲಯದ ಕಾನೂನು ಕೇವಲ ಬಡವರಿಗೆ ಮಾತ್ರನೇನಾ?

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ಅವರು ಹೇಳುವುದಕ್ಕಿಂತಲೂ ಮುಂಚಿತವಾಗಿ ಈ 711 ಎಕರೆ ಪ್ರದೇಶದಲ್ಲಿ ಬಾಕಿ ಇರುವ ಕೆಲವು ಜಮೀನಿನ ಕುರಿತಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಬಗ್ಗೆ ಸಭೆಯನ್ನು ಮಾಡಿದ್ದೇನೆ. ಇದು ಸದಸ್ಯರ ಗಮನದಲ್ಲಿರಲಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ನೀವು ಅದನ್ನೂ ಸಹ ತೆಗೆದುಕೊಳ್ಳಿ.

ಶ್ರೀ ಈಶ್ವರ ಖಂಡ್ರೆ:– ಮಾನ್ಯ ಸಭಾಪತಿಯವರೆ, ಅದನ್ನೂ ವಾಪಸ್ಸು ಪಡೆದುಕೊಳ್ಳಬೇಕು ಎಂಬ ನಮ್ಮ ಹೋರಾಟ ಮುಂದುವರೆಯುತ್ತಿದೆ. ಇದೂ ಸಹ ಸದಸ್ಯರ ಗಮನದಲ್ಲಿರಲಿ.

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಒಂದು ವೇಳೆ ಅದನ್ನು ತೆಗೆದುಕೊಳ್ಳಲು ಆಗಲಿಲ್ಲವೆಂದಾದರೆ, ಸರ್ಕಾರ ಅದನ್ನೂ ಸಹ ಬಿಟ್ಟುಕೊಡುತ್ತದೆಯೇ?

(ಗೊಂದಲ)

ಶ್ರೀ ಸಿ.ಟಿ. ರವಿ:– ಮಾನ್ಯ ಸಭಾಪತಿಯವರೆ, ಇವರು bulldozer...

(ಗೊಂದಲ)

ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೆ, ಇದಕ್ಕೆ ಸಂಬಂಧಿತ ನಿಮ್ಮ ಪ್ರಯತ್ನ ನಡೆಯಲಿ. 711 ಎಕರೆಯನ್ನೂ ಸಹ ಸರ್ಕಾರವು ತೆಗೆದುಕೊಳ್ಳಲಿ. ಒಂದು ವೇಳೆ ಇದನ್ನು ತೆಗೆದುಕೊಳ್ಳಲು ಆಗಿಲ್ಲವೆಂದಾದರೆ, ಅದನ್ನೂ ಸಹ ಸರ್ಕಾರವು ಬಿಟ್ಟುಕೊಡಲಿ ಎಂಬ ಮಾತನ್ನು ನಮಗೆ ಕೊಡಲಿ.

ಸಭಾಪತಿಯವರು:– ಸದಸ್ಯರು ಹೇಳಿರುವ ಮಾಹಿತಿಗಳೆಲ್ಲವನ್ನೂ ಸಚಿವರು ತೆಗೆದುಕೊಳ್ಳಲಿ. ಮತ್ತೊಂದು ಬಾರಿ ವಿಚಾರಣೆ ಮಾಡಿ, ನಂತರದಲ್ಲಿ ಸದನಕ್ಕೆ ಮಾಹಿತಿಯನ್ನು ನೀಡಲಿ. ಈಗ ಸದನವನ್ನು ನಾಳೆ ಬೆಳಗ್ಗೆ 11:00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 19 ನಿಮಿಷಕ್ಕೆ ಮುಕ್ತಾಯಗೊಂಡು,
ಪುನಃ ದಿನಾಂಕ 13 ನೇ ಆಗಸ್ಟ್ ಮಾಹೆ 2025 ರ ಬುಧವಾರದಂದು
ಬೆಳಗ್ಗೆ 11:00 ಗಂಟೆಗೆ ಸೇರಲು ನಿಶ್ಚಯಿಸಿತು)